
# ಕ್ಲಾರಿಯೋನೆಟ್ ಮಾಂತ್ರಿಕ

(ಪಂಡಿತ್ ಡಾ॥ ನರಸಿಂಹಲು ವಡವಾಟಿಯವರ ಬದುಕು-ಸಾಧನೆ)

ಹರಿಕೃಷ್ಣ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸುವರ್ಣ ಕರ್ನಾಟಕ - ೨೦೦೬

# ಕ್ಲಾರಿಯೋನೆಟ್ ಮಾಂತ್ರಿಕ

(ಪಂಡಿತ್ ಡಾ|| ನರಸಿಂಹಲು ವಡವಾಟಿಯವರ ಬದುಕು-ಸಾಧನೆ)

ಹರಿಕೃಷ್ಣ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ದೂರವಾಣಿ : ೨೨೪೮ ೪೫೧೬

**CLARIYONET MAANTRIKA** : Life Story of Pandith Dr. Narasimhalu Vadavati;
Written by : Harikrishna

*Published by*
**Ashoka N. Chalavadi**
Administrative officer
Kannada Pustaka Pradhikara
Kannada Bhavana, J.C. Road
Bangaluru - 560 002.

Pages : xvi + 198
Price : **80/-**
First Edition : 2007
Copies : 1000
ISBN : 81-7713-209-1

© ಲೇಖಕರವು

ಪುಟಗಳು : xvi + ೧೯೮
ಬೆಲೆ : ರೂ. ೮೦/–
ಮೊದಲನೇ ಮುದ್ರಣ : ೨೦೦೭
ಪ್ರತಿಗಳು : ೧೦೦೦
ಕರಡು ತಿದ್ದಿದವರು : ಲೇಖಕರು

ಮುಖಪುಟ ವಿನ್ಯಾಸ : **ಮಂಜುನಾಥ್ ಎಸ್.**

*ಪ್ರಕಾಶಕರು :*
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೨೦

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗ್ಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ 2x2=4ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾ ಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿ ಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆ ಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯ ದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕ

ವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯ ದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗ ಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

> ಹಿಂದಣ ಅನಂತವನು ಮುಂದಣ ಅನಂತವನು
> ಒಂದು ದಿನ ಒಳಕೊಂಡಿತ್ತು ನೋಡಾ
> ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
> ಕಂಡು ಬಲ್ಲವರಾರಯ್ಯ

ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗ ವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತ ಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವ ಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆ ಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತ ವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗು ಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆ ಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ

ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿತ ವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ, ವಾಚನಾಭಿ ರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆ ಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯ ದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ರಣ ಧಗೆಯ ರಾಯಚೂರು ಜಿಲ್ಲೆಯ ವಡಿವಾಟಿ ಗ್ರಾಮ ಈ ಹೊತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದರೆ, ಅದಕ್ಕೆ ಕಾರಣ ನರಸಿಂಹಲು ವಡಿವಾಟಿಯವರು. ವಿದೇಶ ಮೂಲದ ಕ್ಲಾರಿಯೋನೆಟ್ ವಾದ್ಯವನ್ನು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಕ್ಕೆ ವಾಹಕವಾಗಿಸಿಕೊಂಡು ಜನಮನ್ನಣೆಗೆ ಪಾತ್ರವಾದ ಸಂಗೀತಗಾರರಾಗಿ ಬೆಳೆದ ವಡಿವಾಟಿಯವರದು ಒಂದು ಮಿತಿಯಲ್ಲಿ ಏಕಲವ್ಯ ಪ್ರತಿಭೆ. ಮತ್ತೊಂದು ವ್ಯಾಪ್ತಿಯಲ್ಲಿ ಅವರ ಗುರುಗಳು ಪಂಡಿತ ಸಿದ್ಧರಾಮ ಜಂಬಲದಿನ್ನಿಯವರು. ದೇಸೀ ಪ್ರತಿಭೆಯಿಂದ ಅಭಿಜಾತ ಮಾರ್ಗದಲ್ಲಿ ಕ್ರಮಿಸಲು ಇದು ಒಂದು ತೆರೆದ ಬಾಗಿಲು. ವಿನಯಶೀಲರೂ ಸದಾ ವಿದ್ಯಾರ್ಥಿಭಾವದಲ್ಲಿ ತಮ್ಮ

ಪ್ರತಿಭೆಯನ್ನು ಒರೆಹಚ್ಚಿಕೊಳ್ಳುತ್ತಾ ನಿತ್ಯಸಾಧಕ ಭಾವದಲ್ಲಿ ಬೆಳಗುತ್ತಿರುವವರು ವಡಿವಾಟಿಯವರು. ಇಂಥ ಯಾವುದೇ ಸಾಧಕರ ಜೀವನ ಒಲವಿನ ಹಾಸಿಗೆಯಲ್ಲ; ಅವಮಾನ ಅವಹೇಳನ ಅಸೂಯೆ ಕಡೆಗಣಿಕೆಗಳ ಹಳವಂಡದಲ್ಲಿ ಬಿದ್ದೆದ್ದು ಬೆಳೆದ ಆತ್ಮವಿಶ್ವಾಸದ ಮಹಾಯಾನ. ಹುಟ್ಟಿನ ಮೂಲದ ಅವಮಾನವನ್ನು ಆತ್ಮಪ್ರತ್ಯಯದ ಕವಚವಾಗಿಸಿಕೊಂಡು ತಮ್ಮ ಕಲಾ ಜೀವನದಲ್ಲಿ ಔನ್ನತ್ಯಕ್ಕೇರಿದ ವಡವಾಟಿಯವರ ಬದುಕು ಧೀಮಂತವಾದುದು. ಅದನ್ನು ಶ್ರೀ ಹರಿಕೃಷ್ಣ ಅವರು ತುಂಬಾ ಆಪ್ತ ಭಾವದಲ್ಲಿ ಈ ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ. ಪಂಡಿತ ನರಸಿಂಹಲು ವಡಿವಾಟಿ ಅವರಿಗೆ ಲೇಖಕ ಶ್ರೀ ಹರಿಕೃಷ್ಣ ಅವರಿಗೆ ಹಾಗೂ ವಡಿವಾಟಿಯವರ ಗಾನಸುಧೆಯನ್ನು ಅವರ ಬದುಕನ್ನು ಕುರಿತು ಎರಡು ಮಾತು ಬರೆದ ಪ್ರೊ ಜಿ.ಎಂ. ಶ್ರೀನಿವಾಸಯ್ಯನವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಎರಡು ಮಾತು

ಪ್ರಕೃತಿ ಮಾನವನಿಗೆ ಹಲವಾರು ವರಗಳನ್ನು ನೀಡಿ ಅವನ ಬದುಕನ್ನು ಸಾರ್ಥಕ ಮತ್ತು ಶ್ರೀಮಂತಗೊಳಿಸಿದೆ. ಅಂತಹ ಉತ್ಕೃಷ್ಟ ವರಗಳಲ್ಲಿ ಸಂಗೀತ ಕಲೆ ಬಹಳ ಮಹತ್ವದ್ದು. ಹರಿಯುವ ನದಿಯ ಜುಳುಜುಳು ನಿನಾದ, ಹಕ್ಕಿಪಕ್ಷಿಗಳ ಚಿಲಿಪಿಲಿ ಗಾನ, ಸುಯ್ಯನೆ ಬೀಸುವ ಗಾಳಿ, ಇವೆಲ್ಲದರಲ್ಲಿಯೂ ಸಂಗೀತದ ಮೂಲವನ್ನು ಗುರುತಿಸಬಹುದು. ಸಂಗೀತ ಕಲೆ ಸಾರ್ವತ್ರಿಕವಾದದ್ದು ಮತ್ತು ಸಮಸ್ತ ಜೀವಿಗಳಿಗೂ ಅತ್ಯಂತ ಪ್ರಿಯವಾದುದು. ನಾದ ಮಾದುರ್ಯಕ್ಕೆ, ಮಧುರ ಸಂಗೀತಕ್ಕೆ ಪರವಶರಾಗದವರು ಯಾರಿದ್ದಾರೆ? ಬಡವ ಬಲ್ಲಿದ, ಪಂಡಿತ ಪಾಮರ, ವಯಸ್ಕರು ಮಕ್ಕಳು ಎಲ್ಲರನ್ನೂ ಪ್ರಭಾವಿಸುವಂತದ್ದು ಸಂಗೀತ. ಕರ್ನಾಟಕ ಅಥವಾ ಹಿಂದೂಸ್ಥಾನಿ ಸಂಗೀತವಾಗಲೀ ಅದು ಜಗತ್ತಿನ ಮತ್ತು ಹೃದಯದ ಭಾಷೆ. ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಸಂಗೀತ ಕೇಳುಗರನ್ನು ಅಪೂರ್ವವಾದ ಆನಂದ ಲೋಕಕ್ಕೆ ಒಯ್ದು ಅವರಲ್ಲಿ ಸಾರ್ಥಕ ಭಾವನೆಯನ್ನು ಉಂಟುಮಾಡುವಂತದ್ದು. ಭಾರತೀಯ ಸಂದರ್ಭದಲ್ಲಿ ಮಾನವ, ಸಂಗೀತ ಕಲೆಯನ್ನು ತನ್ನ ನೈತಿಕ ಮತ್ತು ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಲು ಒಂದು ಪ್ರಮುಖ ಸಾಧನವನ್ನಾಗಿ ಬಳಸಿಕೊಂಡಿದ್ದಾನೆ. ವೈವಿಧ್ಯಮಯ ತಂತ್ರಜ್ಞಾನದ ಆವಿಷ್ಕಾರಗಳು, ಪ್ರಚಂಡ ಭೌತಿಕ ಸಾಧನೆಗಳ ನಡುವೆಯೂ ಅನೇಕ ಜಂಜಾಟಗಳಿಗೆ ಮತ್ತು ಒತ್ತಡಗಳಿಗೆ ಗುರಿಯಾಗಿರುವ ಇಂದಿನ ಮಾನವನಿಗೆ ಮಾನಸಿಕ ಸ್ವಾಸ್ಥ್ಯ ಮತ್ತು ನೆಮ್ಮದಿಯನ್ನು ನೀಡುವಲ್ಲಿ ಸಂಗೀತ ಪ್ರಮುಖ ಪಾತ್ರ ವಹಿಸುತ್ತದೆ.

ಇಂತಹ ಸಂಗೀತ ವಿದ್ಯೆ, ಸಿದ್ಧಿಸುವುದು ಕೆಲವೇ ಸಾಧಕರಿಗೆ ಮಾತ್ರ. ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ

ಪಂಡಿತ ನರಸಿಂಹಲು ವಡವಾಟಿಯವರು ಅಂತಹ ಸಾಧಕರಲ್ಲಿ ಒಬ್ಬರಾಗಿದ್ದಾರೆ. ತಮ್ಮ ಸಾಧನೆ ಪರಿಶ್ರಮದಿಂದಾಗಿ ವಿದೇಶಿ ವಾದ್ಯ ಕ್ಲಾರಿಯೋನೆಟ್ ನಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಸುಮಧುರವಾಗಿ ನುಡಿಸುವ ಕಲೆಯನ್ನು ಕರಗತಮಾಡಿಕೊಂಡಿದ್ದಾರೆ. ಪಂಡಿತ ನರಸಿಂಹಲು ವಡವಾಟಿಯವರು ರಾಯಚೂರಿನ ಬಳಿಯ ವಡವಾಟಿಯೆಂಬ ಹಳ್ಳಿಯಲ್ಲಿ ಸುಸಂಸ್ಕೃತ ಕುಟುಂಬವೊಂದರಲ್ಲಿ ಜನಿಸಿದರು. ಕೆಳಸ್ತರದ ಸಮುದಾಯದಿಂದ ಬಂದಿರುವ ಪಂಡಿತ ನರಸಿಂಹಲು ವಡವಾಟಿಯವರು ತಮ್ಮ ಸ್ವಸಾಮರ್ಥ್ಯ ಮತ್ತು ಸಾಧನೆಯಿಂದಾಗಿಯೇ ಅಪಾರವಾದ ಸಂಗೀತ ಪಾಂಡಿತ್ಯವನ್ನು ಗಳಿಸಿದ್ದಾರೆ. ಮನೆತನದ ಕಡು ಬಡತನ ಅವರಿಗೆ ಶಾಪವಾಗದೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿ ಅವರಲ್ಲಿ ಅಂತರ್ಗತವಾಗಿದ್ದ ಸಂಗೀತ ಕಲೆಯನ್ನು ಅರಳಿಸುವಲ್ಲಿ ಸಹಕಾರಿಯಾಯಿತು. ಅವರದ್ದು ಸಂಗೀತ ಮನೆತನ. ಅವರ ಅಜ್ಜ ಹೋಬಳಪ್ಪ ಶಹನಾಯಿ ವಾದಕರಾಗಿದ್ದರು. ತಂದೆ ಶ್ರೀ ಗುಡ್ಡಪ್ಪನವರು ತಬಲ ವಾದಕರಾಗಿದ್ದರು. ತಾಯಿ ರಂಗಮ್ಮ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕುಟುಂಬದಲ್ಲಿನ ಈ ತೆರನ ಸಂಗೀತ ವಾತಾವರಣ ಸಹಜವಾಗಿಯೇ ವಡವಾಟಿಯವರಲ್ಲಿ ಸಂಗೀತದ ಬಗೆಗಿನ ಆಸಕ್ತಿಯನ್ನು ಕೆರಳಿಸಿತು. ಹೆಸರಾಂತ ಹಿಂದೂಸ್ಥಾನಿ ಗಾಯಕರಾಗಿದ್ದ, ದಿವಂಗತ ಪಂಡಿತ ಸಿದ್ದರಾಮ ಜಂಬಲ ದಿನ್ನಿಯವರು, ವಡವಾಟಿಯವರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದ್ದು, ವಡವಾಟಿಯವರ ಬದುಕಿನ ದಿಕ್ಕನ್ನೇ ಸಂಪೂರ್ಣವಾಗಿ ಬದಲಾಯಿಸಿತು. ಅವರ ಯಮ ಸಾಧನೆ ಮತ್ತು ಗುರು ಪಂಡಿತ ಸಿದ್ದರಾಮ ಜಂಬಲ ದಿನ್ನಿಯವರ ಆಶೀರ್ವಾದ ವಡವಾಟಿಯವರನ್ನು ಒಬ್ಬ ಪ್ರಸಿದ್ಧ ಸಂಗೀತ ಕಲಾವಿದರನ್ನಾಗಿ ರೂಪಿಸಿತು. ನಂತರ ವಡವಾಟಿಯವರು ಪಂಡಿತ ಪಂಚಾಕ್ಷರಿ ಗವಾಯಿ ಹಾಗೂ ಪಂಡಿತ ಮಲ್ಲಿಕಾರ್ಜುನ ಮನ್‌ಸ್ಸೂರ್ ಅವರಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಅಭ್ಯಾಸ ಮಾಡಿದರು.

ವಿದೇಶಿ ವಾದ್ಯ ಕ್ಲಾರಿಯೋನೆಟ್‌ನಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಅಭ್ಯಸಿಸಿ ಆ ವಾದ್ಯಕ್ಕೆ ಒಂದು ಹೊಸ ಸ್ವರೂಪವನ್ನು ನೀಡುವಲ್ಲಿ ವಡವಾಟಿಯವರು ತುಂಬಾ ಯಶಸ್ಸು ಗಳಿಸಿದರು. ಆ ವಾದ್ಯದಲ್ಲಿ ವೈವಿಧ್ಯಮಯ ನಾದ ಮಾಧುರ್ಯವನ್ನು ಹೊಮ್ಮಿಸುವ ಮೂಲಕ ಸಂಗೀತಾಸಕ್ತರನ್ನು

ಮಂತ್ರಮುಗ್ಧಗೊಳಿಸಿದರು. ಕ್ಲಾರಿಯೋನೆಟ್ ವಾದ್ಯವನ್ನು ತನ್ಮಯತೆಯಿಂದ ನುಡಿಸುವಾಗ ಅದರಿಂದ ಹೊರಡುವ ರಾಗದ ತರಂಗಗಳು ಅಲೆಅಲೆಯಾಗಿ ಮೂಡಿ ಬರುತ್ತಿದ್ದುದು ಕೇಳುಗರನ್ನು ಅಲೌಕಿಕ ಆನಂದ ಲೋಕಕ್ಕೆ ಕರೆದೊಯ್ಯುತ್ತವೆ. ವಡವಾಟಿಯವರು ದೇಶ ವಿದೇಶಗಳಲ್ಲಿ ಕ್ಲಾರಿಯೋನೆಟ್ ವಾದನದ ರಸದೌತಣವನ್ನು ಸಹಸ್ರಾರು ಸಂಗೀತಾಸಕ್ತರಿಗೆ ಉಣ ಬಡಿಸಿದ್ದಾರೆ.

ವಡವಾಟಿಯವರ ವಿದ್ವತ್ ಮತ್ತು ಅವರ ಅಪೂರ್ವವಾದ ವಾದನ ಕಲೆ ಅವರಿಗೆ ಅನೇಕ ಗೌರವ ಮತ್ತು ಪ್ರಶಸ್ತಿಗಳನ್ನು ಗಳಿಸಿಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಸೂರಮಣಿ' ಪ್ರಶಸ್ತಿ, 'ಕರ್ನಾಟಕ ಕಲಾ ತಿಲಕ, ಭಾರತರತ್ನ ವಿಶ್ವೇಶ್ವರಯ್ಯ' ಪ್ರಶಸ್ತಿ, 'ಹಿಂದೂಸ್ಥಾನಿ ಕ್ಲಾರಿಯೋನೆಟ್ ಸಂಗೀತರತ್ನ', 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿ ಮುಂತಾದವುಗಳು. ದೇಶವಿದೇಶಗಳಲ್ಲಿ ಅನೇಕ ಕಛೇರಿಗಳನ್ನು ನಡೆಸಿ ಅಪಾರ ಖ್ಯಾತಿ ಗಳಿಸಿದ್ದಾರೆ. ತನಿ ಕಛೇರಿಗಳ ಜೊತೆಗೆ ಹೆಸರಾಂತ ಸಂಗೀತ ವಿದ್ವಾಂಸರಾದ ಸ್ಯಾಕ್ಸೋಫೋನ್ ವಾದಕ ಶ್ರೀ ಕದರಿ ಗೋಪಾಲನಾಥ್, ಕ್ಲಾರಿಯೋನೆಟ್ ವಿದ್ವಾಂಸ ಶ್ರೀ ಎ.ಕೆ.ಸಿ. ನಟರಾಜನ್, ವೀಣಾ ವಿದ್ವಾಂಸರಾದ ಡಾ॥ ಕಾರೇಕುಡಿ ಸುಬ್ರಮಣ್ಯಂ ಮತ್ತು ಅಮೇರಿಕಾದ ಕ್ಲಾರಿಯೋನೆಟ್ ವಾದಕ ವಿಲಿಯಂ ಪೋವೆಲ್ ಮುಂತಾದವರೊಡನೆ ಜುಗಲ್ ಬಂದಿ ಕಛೇರಿ ನಡೆಸಿ ಅಪಾರ ಮನ್ನಣೆ ಮತ್ತು ಕೀರ್ತಿಯನ್ನು ಗಳಿಸಿದ್ದಾರೆ. ರಾಯಚೂರು ಮತ್ತು ಬೆಂಗಳೂರಿನಲ್ಲಿ ಸಂಗೀತ ವಿದ್ಯಾಲಯಗಳನ್ನು ತೆರೆದು ನೂರಾರು ಶಿಷ್ಯರಿಗೆ ಸಂಗೀತ ಕಲೆಯನ್ನು ಬೋಧಿಸುವುದರ ಮೂಲಕ ಸಂಗೀತ ಕ್ಷೇತ್ರಕ್ಕೆ ವಡವಾಟಿಯವರು ತಮ್ಮ ಅಪೂರ್ವ ಕೊಡುಗೆಗಳನ್ನು ನೀಡುವಲ್ಲಿ ಹೆಚ್ಚು ಶ್ರಮಿಸುತ್ತಿದ್ದಾರೆ.

ವಡವಾಟಿಯವರು ಒಬ್ಬ ಅಭಿಜಾತ ಸಂಗೀತ ಕಲಾವಿದರಾಗಿ ಹೆಸರು ಮಾಡಿದ್ದರೂ, ತುಂಬಾ ಸರಳಜೀವಿ, ಸ್ನೇಹಮಯಿ ಮತ್ತು ನಿರ್ಗರ್ವಿಗಳಾಗಿ ಅಪಾರ ಸ್ನೇಹಿತರನ್ನು ಮತ್ತು ಶಿಷ್ಯವೃಂದವನ್ನು ಗಳಿಸಿದ್ದಾರೆ. ಅವರ ಉಸಿರೇ ಸಂಗೀತವಾಗಿದ್ದು ಅದನ್ನು ಹೆಚ್ಚು ಜೀವಂತಗೊಳಿಸಲು ದುಡಿಯುತ್ತಿದ್ದಾರೆ. ಪಂಡಿತ ನರಸಿಂಹಲು ವಡವಾಟಿಯವರು ಪ್ರಸಿದ್ಧ

ಕ್ಲಾರಿಯೋನೆಟ್ ವಾದಕರಷ್ಟೇ ಅಲ್ಲದೆ ವಚನ ಸಂಗೀತವನ್ನು ಸುಮಧುರ ವಾಗಿ ಹಾಡಬಲ್ಲರೂ ಸಹ. ಇಂತಹ ಸಂಗೀತ ವಿದ್ವಾಂಸರ ಆತ್ಮ ಚರಿತ್ರೆ ಸಂಗೀತಾಸಕ್ತರೆಲ್ಲರಿಗೂ ಪ್ರಮುಖವಾಗಿ ಕೆಳಸ್ತರ ಸಮುದಾಯದವರಿಗೆ ಬೋಧಕ ಪ್ರಧಾನವಾದುದು, ಆತ್ಮಸ್ಥೈರ್ಯವನ್ನು ನೀಡುವಂತದ್ದು ಹಾಗೂ ಒಂದು ಮಾರ್ಗದರ್ಶಿಯಂತಿದೆ. ತಮ್ಮ ವಿದ್ವತ್ ಮತ್ತು ಸಾಧನೆಯ ಮೂಲಕ ವಡವಾಟಿಯವರು ಸಂಗೀತ ಕ್ಷೇತ್ರವನ್ನು ಮತ್ತಷ್ಟು ಸಂಮೃದ್ಧ ಗೊಳಿಸಲೆಂಬುದು ನನ್ನಂತಹವನ ಶುಭ ಹಾರೈಕೆ.

**ಪ್ರೊ|| ಜಿ.ಎಂ. ಶ್ರೀನಿವಾಸಯ್ಯ**
**ತುಮಕೂರು**

# ಪಲ್ಲವಿ

ಹಿಂದುಸ್ತಾನಿ ಸಂಗೀತ ದಿಗಂತದಲ್ಲಿ ಅಸಂಖ್ಯಾತ ತಾರೆಗಳು ಮೂಡಿ ಬೆಳಕು ಚೆಲ್ಲಿವೆ. ದಕ್ಷಿಣ ಭಾರತವು ಮುಖ್ಯತಃ ಕರ್ನಾಟಕ ಸಂಗೀತ ಕ್ಷೇತ್ರವಾಗಿದ್ದರೂ ಉತ್ತರಾದಿ, ಅಂದರೆ ಹಿಂದುಸ್ತಾನಿ ಸಂಗೀತಕ್ಕೆ ಇಲ್ಲಿಯ, ಅದರಲ್ಲೂ -ವಿಶೇಷತಃ ಕರ್ನಾಟಕದ ಕೊಡುಗೆ ಮಹತ್ವಪೂರ್ಣ ಎನ್ನುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಮಲ್ಲಿಕಾರ್ಜುನ ಮನಸೂರರು, ಬಸವರಾಜ ರಾಜಗುರುಗಳು, ಸಿದ್ಧರಾಮ ಜಂಬಲದಿನ್ನಿಯವರು ಮುಂತಾದ ಕೀರ್ತಿಶೇಷರಲ್ಲದೆ ಈಗಲೂ ನಮ್ಮ ನಿಮ್ಮ ನಡುವೆ ಇರುವ ಪಂಡಿತ್ ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ನರಸಿಂಹಲು ವಡವಾಟಿ, ವಿನಾಯಕ ತೊರವಿ, ಮುಂತಾದ ಘಟಾನು ಘಟಿಗಳು ನಮಗೆಲ್ಲ ರಸಾನುಭವ ಮಾಡಿಸುತ್ತಿದ್ದಾರೆ. ಬಿಟ್ಟು ಹೋದ ಎಲ್ಲ ಹೆಸರುಗಳನ್ನೂ ನೆನಪು ಮಾಡಿಕೊಂಡು ದಾಖಲಿಸುತ್ತ ಹೋದಲ್ಲಿ ಅದೇ ಒಂದು ಡೈರೆಕ್ಟರಿಯಾಗಿ ನನ್ನ ಮೂಲ ಉದ್ದೇಶ್ಯಕ್ಕೆ ಧಕ್ಕೆ ಬಂದೀತು.

ಈಗ ನಾನು ವಾಚಕರ ಮುಂದೆ ಪ್ರಸ್ತುತಪಡಿಸುತ್ತಿರುವುದು ಪಂಡಿತ್ ನರಸಿಂಹಲು ವಡವಾಟಿಯವರ ಬದುಕಿನ ಬಗ್ಗೆ.

ನಮ್ಮಲ್ಲಿ ವಿಧವಿಧವಾದ ವಾದ್ಯಗಳನ್ನು ನುಡಿಸಬಲ್ಲ ಅಪ್ರತಿಮ ವಾದಕರಿದ್ದಾರೆ. ಸಿತಾರ್, ತಬಲಾ, ಸಾರಂಗಿ, ಸಂತೂರ್, ಬೀನ್, ಬಾನ್ಸುರೀ-- ಒಂದೊಂದರಲ್ಲೂ ಒಬ್ಬರಿಗಿಂತ ಒಬ್ಬರು ದಿಗ್ಗಜರುಗಳು. ಆದರೆ ಕ್ಲಾರಿಯೋನೆಟ್‌ನಂತಹ ಶುದ್ಧ ವಿದೇಶೀ, ಅದರಲ್ಲೂ ಪಾಶ್ಚಾತ್ಯ ಸಂಗೀತ ವಾದ್ಯದಿಂದ ಹಿಂದುಸ್ತಾನೀ ಸಂಗೀತದ ಸ್ವರಗಳನ್ನು ನವಿರಾಗಿ ಹೆಣೆಹೆಣೆದು ಅದ್ಭುತ ಲೋಕಕ್ಕೆ ತೂಗು ಸೇತುವೆ ನಿರ್ಮಿಸಬಲ್ಲ ಏಕೈಕ ಸಾಧಕರೆಂದರೆ ಪಂಡಿತ ನರಸಿಂಹಲು ವಡವಾಟಿಯವರು.

ಪಂಡಿತ ಸಿದ್ಧರಾಮ ಜಂಬಲದಿನ್ನಿಯವರಿಂದ ಗಾಯನದಲ್ಲಿ ಪರಿಣತಿ ಪಡೆದು ಅದನ್ನು ತಾನೇ ಸ್ವತಃ ಏಕಲವ್ಯನಂತೆ ಕ್ಲಾರಿಯೋನೆಟ್‌ನಲ್ಲಿ ಮುಡಿಸಿಕೊಂಡು ಶ್ರೀಯುತರು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿರುವರು. ಹಾಡಬೇಕೆಂದರೆ ಜೇನು ಹರಿಸಬಲ್ಲ ಕಂಠಸಿರಿ ಇದ್ದರೂ ಸಹ ಹಿಂದುಸ್ತಾನೀ ಸಂಗೀತ ಜಗತ್ತಿನಲ್ಲಿ ತಮ್ಮ ವಾದ್ಯವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದಾಗಿ ಇವರೆಂದೂ ಗಾಯಕರಾಗಿ ಹೆಚ್ಚಾಗಿ ಕಾರ್ಯಕ್ರಮ ನೀಡಲಿಲ್ಲ. ಅಂತಹ ಗಾಯನ ಕಾರ್ಯಕ್ರಮ ಗಳನ್ನು ತಮ್ಮ ಗುರು ಶ್ರೀ ಜಂಬಲದಿನ್ನಿಯವರು ಸಂಯೋಜಿಸಿದ ವಚನ ಗಾಯನ ಮತ್ತು ದಾಸ ಸಾಹಿತ್ಯಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದಲೇ ನೀಡುತ್ತಾ ಬಂದಿದ್ದಾರೆ.

ಆದರೆ ಇವರು ತಮ್ಮ ಶಿಷ್ಯರಿಗೆ ತಮ್ಮ ಗುರುಗಳಿಂದ ಕಲಿತ ಗಾಯನ ಶೈಲಿಯನ್ನು ಕಲಿಸಿ ಭವಿಷ್ಯದ ಗಾಯಕರನ್ನು ತಯಾರು ಮಾಡುತ್ತಿದ್ದಾರೆ.

ಇಂತಹ ಅನನ್ಯ ಸಾಧಕರೊಬ್ಬರು ಬದುಕಿನ ಹಾದಿಯಲ್ಲಿ ಮೂಡಿಸಿದ ಹೆಜ್ಜೆಗಳು ಮುಂದಿನ ತಲೆಮಾರಿನ ಜನರಿಗೆ ದಾರಿ ತೋರಿಸಬಲ್ಲ ಗುರುತುಗಳಾಗ ಬಲ್ಲವು. ಇಂಥವರ "ಬಯಾಗ್ರಫಿ" "ಬದುಕು ಹೇಗೋ" ಎಂದು ಕಂಗೆಡುವವರಿಗೆ ನಿಜಕ್ಕೂ ಒಂದು "ಅಭಯಾಗ್ರಫಿ"

ಅವರ ಬದುಕಿನ ಚಿತ್ರಣ ನಿಮ್ಮ ಮುಂದಿದೆ ಈಗ.

**– ಲೇಖಕ**

# ಪರಿವಿಡಿ


ಒಂದು ದಿನ ಒಳಕೊಂಡಿತ್ತು ನೋಡಾ iii

ಎರಡು ಮಾತು ix

ಪಲ್ಲವಿ xiii

ಚರಣ–1 : ಪುಟ್ಟ ಹೆಜ್ಜೆಗಳು ಮೂಡಿ... 3

ಚರಣ–2 : ಕಿಂದರಿ ಜೋಗಿಯ ಹಿಂದೆ 8

ಚರಣ–3 : ಪದ ಕುಸಿಯ ನೆಲವಿಹುದು....... 12

ಚರಣ–4 : ಕಂಪನಿ ನಾಟಕಗಳ ಕಂಪನಿಯಲ್ಲಿ 28

ಚರಣ–5 : ಗುರುವಿನ ಪಾದ ನನ್ನನೆ ನುಂಗಿತ್ತ ! 40

ಚರಣ–6 : "ಗುರುವಿನ ಗುಲಾಮನಾಗಿ" 47

ಚರಣ–7 : ಸುರಮಣಿ 60

ಚರಣ–8 : ಸ್ವರಯಾತ್ರೆ 69

ಚರಣ–9 : ಸಾಗರದಾಚೆಗೆ 81

ಚರಣ–10 : ಬೆಳ್ಳಿತೆರೆಯಲ್ಲಿ ಬೆಳ್ಳಿ ಮೂಡಿತು 96

ಚರಣ–11 : ಆಕಾಶವಾಣಿಯಲ್ಲಿ 107

ಚರಣ–12 : ಗೆಳತಿ ಕಾಣೆಯಾದಾಗ 111

ಚರಣ–13 : ಗುರುವಿಗಾಗಿ ಕಾಣಿಕೆ – ಒಂದು ಶಾಲೆ ಕಟ್ಟಿದ್ದು 122


ಚರಣ–14 : ಮನಸೂರ ಬುವಾರ ಸನ್ನಿಧಿ 134

ಚರಣ–15 : ಸಪ್ತಪದಿ ತುಳಿದ ಸಹಧರ್ಮಿಣಿ 138

ಚರಣ–16 : ಹಾದಿ ತೋರಿ ಹೋದವರು 142

ಚರಣ–17 : ಕೆಲವು ಮೆಲುಕುಗಳು 153

ಚರಣ–18 : – ಮರೇತೇನೆ ಇವರನ್ನು ! 159
ಚರಣ–19 : ಜಗ್ಗದೆ ನಡೆದಾಗ ಹಿಗ್ಗಿದ ಹಿರಿಯರು 172
ಚರಣ–20 : ನರಸಿಂಹಲು ಡಾಕ್ಟ್ರಾಗಿದ್ದು 175
ಚರಣ–21 : ಆಪ್ತರು, ಗೆಳೆಯರು 178
ಚರಣ–22 : ಉಪಸಂಹಾರ 181
ಪ್ರಶಸ್ತಿಗಳ ಪಟ್ಟಿ 184



ಗುರುಗಳಾದ ಶ್ರೀ ಸಿದ್ಧರಾಮ ಜಂಬಲದಿನ್ನಿಯವರು

ಚರಣ 1

# ಪುಟ್ಟ ಹೆಜ್ಜೆಗಳು ಮೂಡಿ...

**ಪಂ**ಡಿತ್ ನರಸಿಂಹಲು ವಡವಾಟಿಯವರು ರಾಯಚೂರು ಜಿಲ್ಲೆಯ ವಡವಾಟಿ ಎಂಬ ಕುಗ್ರಾಮದಲ್ಲಿ 21 ಜನವರಿ, 1942ರಲ್ಲಿ ಹುಟ್ಟಿದರು. ತಂದೆ ಬುಡ್ಡಪ್ಪನವರು ಅಲ್ಲಿಯ ಸುತ್ತಮುತ್ತಲೂ ಹೆಸರಾಂತ ತಬಲವಾದಕರು. ತಾಯಿ ರಂಗಮ್ಮ ಒಳ್ಳೆಯ ಗಾಯಕಿ. ಅಜ್ಜ ಚಿಕ್ಕ ಓಬಳಪ್ಪನವರು ಶಹನಾಯಿ ವಾದಕರು. ಆಗಿನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಹಿಂದೂಸ್ತಾನಿ ಶೈಲಿಯ ಸಂಗೀತ ಅಷ್ಟು ಚಾಲ್ತಿಯಲ್ಲಿರಲಿಲ್ಲ. ಅಲ್ಲಿಯೂ ಸಹ ಕರ್ನಾಟಕ ಸಂಗೀತವೇ ಹೆಚ್ಚು ರೂಢಿ. ಹೀಗಾಗಿ ನರಸಿಂಹನ ಮನೆಯಲ್ಲೂ ಸಹ ಕರ್ನಾಟಕ ಸಂಗೀತದ್ದೇ ನಾದ ತರಂಗ. ಆದರೆ ಸಂಗೀತ ಅವರ ವೃತ್ತಿಯಾಗಿರಲಿಲ್ಲ. ಅವರದ್ದು ರೈತ ಕುಟುಂಬ.

ಚಿಕ್ಕ ಓಬಳಪ್ಪನವರ ಅಣ್ಣ ದೊಡ್ಡ ಓಬಳಪ್ಪನವರು ಆಗಿನ ಕಾಲದ ದೊಡ್ಡ ಜಮೀನುದಾರರು ಮತ್ತು ಆಯುರ್ವೇದ ವೈದ್ಯರು. ಜೊತೆಗೆ ಸುತ್ತಮುತ್ತಲ ಹಳ್ಳಿಗರೊಂದಿಗೆ ಅವರು ಲೇವಾದೇವಿ ವ್ಯವಹಾರ ನಡೆಸುತ್ತಿದ್ದರು. ನಮ್ಮ ಸರಕಾರಗಳು ರಾಜಕಾರಣದ ಚದುರಂಗದಾಟದ ಒಂದು ನಡೆಯಾಗಿ ಉಪಯೋಗಿಸುತ್ತಿರುವ "ಗ್ರಾಮೀಣ ಸಾಲ ಮನ್ನಾ ಯೋಜನೆ"ಯನ್ನು ಯಾವ ಆಡಂಬರವಾಗಲಿ, ಪ್ರಚಾರವಾಗಲಿ ಇಲ್ಲದೆ ಸುಮಾರು 80-90 ವರ್ಷಗಳ ಹಿಂದೆಯೇ ಆಚರಣೆಗೆ ತಂದಿದ್ದ ಮಹನೀಯರು ದೊಡ್ಡ ಓಬಳಪ್ಪನವರು. ಋಣ ತೀರಿಸಲಾಗದೇ ಸಾಲಗಾರರು ಬಸವಳಿದು ಕಂಗೆಟ್ಟಾಗ ಈ ಸಜ್ಜನ ಕೇವಲ ಒಬ್ಬ ವ್ಯಕ್ತಿಯಾಗಿದ್ದು ಅವರೆಲ್ಲರ ಸಾಲಗಳನ್ನೂ ಸಾಮೂಹಿಕವಾಗಿ ಮನ್ನಾ ಮಾಡಿದ್ದೇ ಅಲ್ಲದೇ ಭದ್ರತೆಗಾಗಿ ತಮ್ಮಲ್ಲಿ ಇಟ್ಟುಕೊಂಡಿದ್ದ ಜಮೀನು ಹಕ್ಕುಪತ್ರಗಳನ್ನೆಲ್ಲ ಆಯಾ ಹಕ್ಕುದಾರರಿಗೆ ಹಿಂತಿರುಗಿಸಿದರು. ಒಟ್ಟು ಸಾಲದ ಮೊತ್ತ ಪ್ರಾಯಶಃ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು. 80-90 ವರ್ಷಗಳ

ಹಿಂದೆ ಆಣೆಗೆ ಇಪ್ಪತ್ತು ಸೇರು ಅಕ್ಕಿ ಸಿಗುತ್ತಿದ್ದ ಕಾಲ ಅದು. ಹೀಗಾಗಿ ಲಕ್ಷವೆಂದರೆ ಅಲಕ್ಷಿಸಿ ಮೂಗು ಮುರಿಯುವಂತಿರಲಿಲ್ಲ.

ವಡವಾಟಿ ಗ್ರಾಮದ ವೆಂಕಟರಮಣಸ್ವಾಮಿ ದೇವಸ್ಥಾನದ ಆಸ್ಥಾನ ಸಂಗೀತಗಾರರೆಂಬ ಗೌರವ ಈ ಕುಟುಂಬದ್ದು. ಆಗ ಹೈದರಾಬಾದ್ ನಿಜಾಮನ ಆಳ್ವಿಕೆಗೆ ರಾಯಚೂರು ಒಳಪಟ್ಟಿತ್ತು. ದೇವಸ್ಥಾನಗಳಂತಹ ಪೂಜಾ ಪ್ರಾರ್ಥನಾ ಸ್ಥಳಗಳಲ್ಲಿ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುವವರಿಗೆ ಆಗ ನಿಜಾಮ ರಿಂದ ಜೀವನೋಪಾಯಕ್ಕಾಗಿ ಜಮೀನುಗಳನ್ನು ಇನಾಂ ಎಂದು ಮಂಜೂರು ಮಾಡಲಾಗುತ್ತಿತ್ತು. ಆದರೆ ದೊಡ್ಡ ಓಬಳಪ್ಪನವರ ಕುಟುಂಬದವರು ತಮಗೆ ಅದರ ಅಗತ್ಯವಿಲ್ಲ– ಎಂದು ನಿರಾಕರಿಸಿದ್ದರು.

ನರಸಿಂಹನ ಮುತ್ತಜ್ಜನ ಬಗ್ಗೆ ಈ ಮನೆತನದಲ್ಲೊಂದು ಐತಿಹ್ಯವಿದೆ.

ವಡವಾಟಿಯ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಆಗ ಒಬ್ಬ ಸರ್ವಸಂಗಪರಿತ್ಯಾಗಿ ವಿಕ್ಷಿಪ್ತಸ್ವಭಾವದ ವ್ಯಕ್ತಿಯೊಬ್ಬರಿದ್ದರು. ಹೆಸರು ನರಸಪ್ಪ ಎಂದು. ಊರಿನವರೆಲ್ಲ ಅವರನ್ನು ಕರೆಯುತ್ತಿದ್ದುದು "ನರಸಪ್ಪಜ್ಜ" ಎಂದು – ಮಹಾ ದೈವಭಕ್ತರಿದ್ದರಂತೆ ಅವರು. ಜೊತೆಗೆ ಅವರಲ್ಲಿ ದೈವಿಕಶಕ್ತಿ ಇತ್ತು – ಎಂದು ಪ್ರತೀತಿ. ಒಮ್ಮೆ ಇವರಿದ್ದ ಪ್ರದೇಶದಿಂದಾಚೆ ಸಮೃದ್ಧವಾಗಿ ಕರಿಯ ಮೋಡಗಳು ಹರಡಿದ್ದು ಮಳೆ ಬರುತ್ತಿದ್ದರೂ ಇವರಿದ್ದಲ್ಲಿ ಮಳೆ ಬರುತ್ತಿರಲಿಲ್ಲವಂತೆ. ಬಹಳ ದಿನಗಳವರೆಗೆ ಇದು ಮುಂದುವರೆದಿದ್ದು ಹಳ್ಳಿಯ ಜನರು ಕಂಗೆಟ್ಟಿದ್ದರಂತೆ. ಅವರೆಲ್ಲ ಆಗ ನರಸಪ್ಪಜ್ಜನ ಬಳಿ ಬಂದು –

"ನರಸಪ್ಪಜ್ಜ, ಇಲ್ಲಿಂದ ಹದಿನೈದು ಮೈಲಿಗಳಾಚೆ ಆ ಊರಿನಲ್ಲಿ ಮಳೆ ಬರುತ್ತಿದೆ. ನಮ್ಮ ಕಡೆಗೆ ಯಾಕೆ ಅದು ಬರವಲ್ಲದು ? ಆ ಮಳೆ ಈ ಕಡೆಗೆ ಬರುವ ಹಾಗೇನಾದರೂ ಮಾಡಪ್ಪ ನರಸಪ್ಪಜ್ಜ !" –ಎಂದು ಕೇಳಿಕೊಂಡರಂತೆ. ನರಸಪ್ಪಜ್ಜ "ಹಾಂಗ ? ನಿಮ್ಮೂರಿಗೆ ಮಳೆ ಬೇಕೇನು? ಇಕಾ" – ಎಂದು ಹೇಳಿ ತನ್ನ ಹೆಗಲಮೇಲಿನ ವಸ್ತ್ರವನ್ನು ತೆಗೆದು ಆ ದಿಕ್ಕಿನಿಂದ ತಮ್ಮ ಹಳ್ಳಿಯ ದಿಕ್ಕಿಗೆ ಬೀಸಿ ಎಳೆದರಂತೆ. ಅದಾದ ಹದಿನೈದಿಪ್ಪತ್ತು ನಿಮಿಷಗಳಲ್ಲಿ ವಡವಾಟಿಯಲ್ಲಿ "ಧೋ" ಎಂದು ಮಳೆ ಸುರಿಯಿತಂತೆ.

ಈ ರೀತಿ ಅನೇಕ ದಂತಕಥೆಗಳು ಈ ನರಸಪ್ಪಜ್ಜನ ಬಗ್ಗೆ ಹರಡಿದ್ದವು.

ನರಸಿಂಹನ ಮುತ್ತಜ್ಜನಿಗೆ ನಲವತ್ತು ವರ್ಷ ವಯಸ್ಸು ಕಳೆದರೂ ಮಕ್ಕಳಾಗಿರಲಿಲ್ಲ. ಅವರು ಈ ನರಸಪ್ಪಜ್ಜನ ಬಳಿಗೆ ಬಂದು "ಏನು ನರಸಪ್ಪಜ್ಜ, ನನಗೆ ನಲವತ್ತಾತು! ಏನು, ನನ್ನಮನಿ ಫಲ ಕಾಣ್ತಾದನೋ ಇಲ್ಲೋ, ಹೇಳಪ್ಪಾ" ಎಂದು ಕೇಳಿಕೊಂಡರಂತೆ ನರಸಪ್ಪಜ್ಜ "ಏನಿಲ್ಲೋ ತಮ್ಮಾ, ಹಾಂಗೇನೂ ಇಲ್ಲಪ್ಪಾ, ಮಕ್ಕಳಾಗ್ತವೆ ನಿನಗೆ. ಆದರ ಒಂದು ಮಾತು ನೆನಪಿನ್ಯಾಗಿಡು. ವಂಶ ಪರಂಪರೆಯಿಂದ ಈ ದೇವಸ್ಥಾನದಾಗೆ ಸಂಗೀತಸೇವಾ ನಿನ್ನಮನಿ ಕಡೆಯಿಂದ ಆಗಬೇಕು. ಅದನ್ನ ಯಾವ ಕಾರಣಕ್ಕೂ ನಿಲ್ಲಿಸಬಾರದು" ಎಂದು ಹೇಳಿದರಂತೆ. ಆಮೇಲೆ ಮುತ್ತಜ್ಜನಿಗೆ ಎರಡು ಗಂಡು ಮಕ್ಕಳಾದುವಂತೆ. ಅಲ್ಲಿಂದ ಮುಂದೆ ಮೂರು ತಲೆಮಾರಿಗೆ ಎರಡೆರಡು ಗಂಡು ಮಕ್ಕಳು ಆಗಿವೆ.

– ಮುಖ್ಯ ಅದಲ್ಲ, ನರಸಿಂಹನ ಒಡಹುಟ್ಟಿದ್ದೂ ಸಹ ಒಬ್ಬನೇ. ಅಲ್ಲದೆ ಮುತ್ತಜ್ಜನ ಕಾಲದಿಂದಲೂ ಈಗಲೂ ವಡವಾಟಿ ವೆಂಕಟರಮಣಸ್ವಾಮಿ ದೇಗುಲದಲ್ಲಿ ಶ್ರಾವಣಮಾಸದಲ್ಲಿ ಸಂಗೀತ ಸೇವೆ ನಡೆಸಿಕೊಂಡು ಬಂದಿದ್ದಾರೆ ಈ ವಂಶಸ್ಥರು. ಈ ಸೇವೆ ನಿಸ್ವಾರ್ಥದಿಂದಿರಬೇಕೆಂಬ ಕಾರಣಕ್ಕೆ ಯಾವ ಇನಾಂ ಕೂಡ ಈ ಕುಟುಂಬ ಸ್ವೀಕರಿಸಲಿಲ್ಲ.

ಈ ಮೊದಲೇ ಹೇಳಿದಂತೆ ಉತ್ತರ ಕರ್ನಾಟಕದಲ್ಲಿ ಆಗೆಲ್ಲ ಕರ್ನಾಟಕ ಸಂಗೀತದ್ದೇ ಹೆಚ್ಚು ಪ್ರಭಾವವಿದ್ದದ್ದು. ಮನಸೂರರ ಪೂರ್ವಜರು, ರಾಜಗುರುರವರ ತಾಯಿ – ಇವರೆಲ್ಲ ಕರ್ನಾಟಕ ಸಂಗೀತ ಕಲಾವಿದರೇ. ಪಂಚಾಕ್ಷರೀ ಗವಾಯಿಯವರು ನೀಲಕಂಠಬುವಾರಿಂದ ಹಿಂದುಸ್ತಾನಿ ಸಂಗೀತವನ್ನು ಕಲಿತ ಮೇಲಿಂದ ಉತ್ತರ ಕರ್ನಾಟಕದಲ್ಲಿ 70–80 ವರ್ಷಗಳ ಹಿಂದೆ ಹಿಂದುಸ್ತಾನಿ ಸಂಗೀತದ ಪದಾರ್ಪಣವಾಯಿತು. ಅಲ್ಲಿಂದ ಮುಂದೆ ಸಾಕಷ್ಟು ಹಿಂದುಸ್ತಾನಿ ಸಂಗೀತದ ಗಾಯಕರು, ವಾದಕರು ಆಗಿ ಹೋದರು, ಈಗಲೂ ಇದ್ದಾರೆ. ಈ ಪ್ರಭಾವಕ್ಕೊಳಗಾಗಿಯೇ ನರಸಿಂಹನ ತಂದೆ ದೊಡ್ಡಬುಡ್ಡಪ್ಪನವರು ತಬಲಾ ವಾದನದಲ್ಲಿ ಪರಿಣತಿ ಪಡೆದಿದ್ದು.

ದೊಡ್ಡಬುಡ್ಡಪ್ಪನವರ ಮಕ್ಕಳು ಮೂವರು – ರಾಮಣ್ಣ, ಪಾರ್ವತಮ್ಮ ಮತ್ತು ನರಸಿಂಹ. ಕಡೆಯ ಸಂತಾನವಾದ ನರಸಿಂಹನು ಹುಟ್ಟಿದ ಒಂದು ವರ್ಷದಲ್ಲಿ ತಂದೆ ದೊಡ್ಡಬುಡ್ಡಪ್ಪನವರು ನಿಧನರಾದರು. ತಾಯಿ ರಂಗಮ್ಮನೂ ಸಹ ಹೆಚ್ಚುಕಾಲ ಬದುಕಲಿಲ್ಲ. ನರಸಿಂಹನಿಗೆ ಏಳು ವರ್ಷ ವಯಸ್ಸಾಗುವಾಗ ಹುಡುಗ ತಾಯಿಯನ್ನೂ ಕಳೆದುಕೊಂಡ. ಉಳಿದಿಬ್ಬರು ಸಾಕಷ್ಟು ದೊಡ್ಡವರಿದ್ದು

ನರಸಿಂಹ ತೀರಾ ಎಳೆಯವನಿದ್ದದ್ದರಿಂದ ಆತನ ಅಜ್ಜ-ಅಜ್ಜಿ ಆತನನ್ನು ತಾಯಿಯ ತವರಾದ ಮಟಮಾರಿಗೆ ಸೋದರ ಮಾವನ ಮನೆಯಲ್ಲಿರಲು ಕಳಿಸಿದರು.

ಮಾವನ ಮನೆಯಲ್ಲಿದ್ದು ಹುಡುಗ ಮೂರನೆಯ ತರಗತಿಯವರೆಗೆ ಓದಿದ. ಬಹಳ ಚುರುಕಾಗಿದ್ದ ನರಸಿಂಹನನ್ನು ಕಂಡರೆ ಅಯ್ಯನವರಾದ ಶರಭಯ್ಯನವರಿಗೆ ಬಹಳ ಮೆಚ್ಚುಗೆ. ತಾಯಿಯ ತಾಯಿ ಬಸಮ್ಮನಿಗೂ ಸಹ ಹುಡುಗ ಮುದ್ದು.

ಆದರೆ ಹುಡುಗನಿಗೆ ಸೋದರ ಮಾವನ ಮನೆಯಲ್ಲಿರಲು ಏಕೋ ಕಸಿವಿಸಿ, ಅಲ್ಲಿ ತಾನು ಪರಕೀಯ ಎನಿಸುತ್ತಿತ್ತು. ಕೊನೆಗೊಮ್ಮೆ ಅಲ್ಲಿರುವುದು ಅಸಹನೀಯ ವೆನ್ನಿಸಿದಾಗ ಹುಡುಗ ಆ ಮನೆ ಬಿಡಲು ನಿರ್ಧರಿಸಿದ. ಅಜ್ಜಿ ಬಸಮ್ಮನ ಪ್ರೀತಿಗೂ ಸಹ ಅವನ ನಿರ್ಧಾರವನ್ನು ಕದಲಿಸಲಾಗಲಿಲ್ಲ. ಆದರೆ ಹೇಗೆ ? ಮಟಮಾರಿಯಿಂದ ರಾಯಚೂರಿಗೆ ಬರಬೇಕು. ಅಲ್ಲಿಂದ ವಡವಾಟಿಗೆ. ಸಾಕಷ್ಟು ದೂರವೇ ಅದು. ಕೈಯಲ್ಲಿ ರೊಕ್ಕ ಇಲ್ಲವಲ್ಲ !

ಮರುದಿನ ಶಾಲೆಯ ಚೀಲವನ್ನು ಹೆಗಲಿಗೇರಿಸಿದ ಹುಡುಗ ಶಾಲೆಗೆ ಬಂದವನೇ ಅಯ್ಯನವರಿಗೆ ಏನೋ ಖರ್ಚಿಗೆ ಬೇಕೆಂದು ಮಾವನವರು ಕೇಳಿದ್ದಾರೆಂದು ಹೇಳಿ ಅವರಿಂದ ಎಂಟಾಣೆ ತೆಗೆದುಕೊಂಡ. ಚೀಲವನ್ನು ಶಾಲೆಯಲ್ಲಿ ಬಿಟ್ಟವನೇ ಅಲ್ಲಿಂದ ರಾಯಚೂರಿಗೆ ಹೋಗುವ ರೈಲು ಹತ್ತಿ ರಾಯಚೂರಿಗೆ ಬಂದ. ಅಲ್ಲಿಂದ ವಡವಾಟಿಗೆ ಹೆಚ್ಚು ಕಡಿಮೆ 8 ಮೈಲಿ ದೂರ ನಡೆದುಕೊಂಡು ಅಜ್ಜನ ಮನೆಗೆ ಬಂದ, ದಣಿದು ಕುಳಿತ. ಅಜ್ಜ-ಅಜ್ಜಿ ಏನು ಕೇಳಿದರೂ ಮಾತನಾಡಲಾರ. ತಾನು ಮರಳಿ ಮಟಮಾರಿಗೆ ಹೋಗಲಾರೆ ಎಂದಷ್ಟೇ ಒದರುತ್ತಿದ್ದ. ಕೊನೆಗೆ ಅಜ್ಜ ಅಜ್ಜಿಗೆ "ಮೊದಲು ಹುಡುಗ ಸ್ನಾನ ಮಾಡಿ ಊಟಮಾಡಿ ಬೆಚ್ಚಗೆ ಮಲಗಲಿ, ಆಮೇಲೆ ಉಳಿದ ಮಾತು, ಈಗೇನೂ ಬೇಡ" ಎಂದು ಆಣತಿ ಮಾಡಿದರು. ಉಂಡಮೇಲೆ ಹುಡುಗನಿಗೆ ಹಾದಿ ಸವೆಸಿದ ಆಯಾಸವೆಲ್ಲ ಒಮ್ಮೆಲೇ ಏರಿ ಬಂದಂತಾಗಿ ತಲೆಯನ್ನು ದಿಂಬಿಗೆ ಆನಿಸಿ ನಿದ್ದೆ ಹೋದ, ಎಲ್ಲ ದುಃಖ-ದುಮ್ಮಾನಗಳನ್ನೂ ಮರೆತು.

ಇತ್ತ ಸೋದರಮಾವ ಶಾಲೆಗೆ ಹೋದ ಹುಡುಗ ಮನೆಗೆ ಬಾರದುದಕ್ಕೆ ಚಿಂತಿತರಾದರು. ಊರೆಲ್ಲ ಹುಡುಕಿದರು. ಹುಡುಗನಿಗಾಗಿ ಶಾಲೆಯ ಅಯ್ಯನವರನ್ನು ಕೇಳಿದಾಗ ನರಸಿಂಹ ತಮ್ಮಿಂದ ಮಾವನಿಗೆ ಬೇಕೆಂದು ಹೇಳಿ ಎಂಟಾಣೆ ಸಾಲ ತೆಗೆದುಕೊಂಡ ಸಂಗತಿಯನ್ನು ತಿಳಿಸಿದರು.

ಮಾವನಿಗೆ ಖಾತ್ರಿಯಾಯಿತು- ಹುಡುಗ ಮನೆಬಿಟ್ಟು ಹೋಗಿದ್ದಾನೆ ಎಂದು. ಆದರೆ ಹೋದದ್ದಾದರೂ ಎಲ್ಲಿಗೆ ? ಹುಡುಗನ ಅಜ್ಜ-ಅಜ್ಜಿಗೆ ಜವಾಬು ಏನು ಕೊಡಬೇಕು ? ಅವರ ತಲೆಕೆಟ್ಟು ಕಿಲುಬೆದ್ದು ಹೋಯಿತು......

ಕೊನೆಗೆ, ಏನಾದರಾಗಲಿ ಎಂದು ಹುಡುಗನ ಅಜ್ಜ-ಅಜ್ಜಿಗೆ ಸುದ್ದಿ ಮುಟ್ಟಿಸಿದರು. ಅಲ್ಲಿಂದ ಜವಾಬು ಬಂದಿತು -- ಹುಡುಗ ಆರಾಮಾಗಿ ತಮ್ಮೊಡನಿದ್ದಾನೆ. ಮಟಮಾರಿಗಿನ್ನು ಅವನು ಬರುವುದಿಲ್ಲ ಎಂದು.

ಇಲ್ಲಿಗೆ ಮಟಮಾರಿಯ ಶಾಲೆ ಬಿಟ್ಟಲ್ಲಿಗೆ ಹುಡುಗನ ಶಾಲಾ ವ್ಯಾಸಂಗ ಮೂರನೇ ತರಗತಿಗೆ ಮುಕ್ತಾಯವಾಯಿತು. ವಡವಾಟಿಯೇನೂ ಅಂಥಾ ದೊಡ್ಡ ಅಕ್ಷರಸ್ಥರ ಊರೇನಲ್ಲ. ಓದು ಬರಹಕ್ಕೆ ಅಷ್ಟು ಪ್ರಾಮುಖ್ಯತೆಯಿರದ, ತೀರಾ ಹಿಂದುಳಿದವರ ಊರು. ಹೀಗಾಗಿ ನರಸಿಂಹನ ಶಾಲಾವ್ಯಾಸಂಗ ಮುಂದುವರಿಯಲಿಲ್ಲ. ಊಟ ಮಾಡುವುದು, ತಿರುಗಾಡುವುದು, ಆಟವಾಡುವುದು --ಇಷ್ಟರಲ್ಲೇ ನರಸಿಂಹನ ದಿನಗಳು ಉರುಳತೊಡಗಿದವು.

ಒಮ್ಮೆ ಅಜ್ಜ ಚಿಕ್ಕ ಓಬಳಪ್ಪನವರ ಪರಿಚಯಸ್ಥರೊಬ್ಬರು, ಅಂದರೆ ನರಸಿಂಹನ ಅಕ್ಕನ ಭಾವ ಚಿಕ್ಕಮಗಳೂರಿನಲ್ಲಿರುವ ತಮ್ಮ ಸಂಬಂಧಿಕರೊಬ್ಬರ ಮನೆಯಲ್ಲಿ ನರಸಿಂಹನನ್ನು ಬಿಡುವ ಸಲಹೆ ನೀಡಿದರು. ಆ ಸಂಬಂಧಿಕರು ಅಲ್ಲಿ ಒಂದು ಕಿರಾಣಿ ಅಂಗಡಿ ನಡೆಸುತ್ತಿದ್ದರು. ಹುಡುಗನನ್ನು ಚಿಕ್ಕಮಗಳೂರಿಗೆ ಕಳಿಸಲಾಯಿತು. ಅಲ್ಲಿ ಅವರ ಮನೆಯಲ್ಲಿ ನೀರುತುಂಬುವುದು, ಸಣ್ಣ-ಪುಟ್ಟ ಕೆಲಸಮಾಡುವುದು, ಅಂಗಡಿಯಲ್ಲಿ ಸಹಾಯ ಮಾಡುವುದು -- ಈ ರೀತಿ ಕೆಲಸ ಬೊಗಸೆಗಳನ್ನು ಮಾಡುತ್ತಾ ಅವರ ಮನೆಯಲ್ಲಿ ನರಸಿಂಹನು ಕಾಲ ಕಳೆಯತೊಡಗಿದನು.

❑

ಚ
ರ
ಣ
2

# ಕಿಂದರಿ ಜೋಗಿಯ ಹಿಂದೆ

ನರಸಿಂಹನಲ್ಲಿ ಇನ್ನೊಂದು ವೈಶಿಷ್ಟ್ಯವಿತ್ತು -- ಹಾಡುವುದು. ಅವ್ವನಿಂದ ಬಂದ ಬಳುವಳಿ ಅದು. ವಡವಾಟಿಯಲ್ಲಿ ದೇವಸ್ಥಾನದಲ್ಲಿ ಭಜನಾಮಂಡಳಿಯ ಕಾರ್ಯಕ್ರಮಗಳಿರುತ್ತಿದ್ದವು. ಅಲ್ಲಿ ಹುಡುಗ ಖಂಜರಿ (ಢಕ್ಕೆ) ಬಾರಿಸುತ್ತ ಉಚ್ಚಸ್ವರದಲ್ಲಿ ಸ್ಫುಟ ಉಚ್ಚಾರಣೆಯಿಂದ ಹಾಡುತ್ತಿದ್ದರೆ ಊರಿನವರೆಲ್ಲ ಬೆರಗಿನಿಂದ ಕಣ್ಣರಳಿಸಿ ನೋಡುತ್ತಿದ್ದರು. ಆಗಿನಿಂದಲೂ ಸಂಗೀತದ ಸಂಸ್ಕಾರ ಹುಡುಗನಲ್ಲಿ ನೆಲೆಯಾಗಿತ್ತು. ಈ ಮಾತು ಇಲ್ಲಿ ಹೇಳುವುದಕ್ಕೆ ಕಾರಣವಿದೆ.

ಆಗಿನ ಕಾಲದಲ್ಲಿ "ಸಿನಿಮಾ ಥೇಟ್ರು" ಗಳಲ್ಲಿ ಸಿನಿಮಾಗಳು ನಡೆಯುವ ಮೊದಲು ಪ್ರತಿದಿನ ಬೆಳಗಿನಿಂದ ಸಾಯಂಕಾಲದವರೆಗೂ ಸುತ್ತಮುತ್ತಲೂ ಪ್ರಚಾರ ಕಾರ್ಯ ನಡೆಯುತ್ತಿತ್ತು. ಪ್ರಚಾರದ ವೈಖರಿಯಾದರೂ ಎಂತಹುದು! ಟಾಂಗಾ ಗಾಡಿ ಇಲ್ಲವೆ ಎತ್ತಿನ ಕಮಾನು ಗಾಡಿಯಲ್ಲಿ ಪ್ರಚಾರಕರು, ವಾದ್ಯಗಾರರು, ಬ್ಯಾಂಡ್ ಸಮೇತ ಆಸೀನರಿರುತ್ತಿದ್ದರು. ಜೊತೆಯಲ್ಲಿ ಬಣ್ಣ-ಬಣ್ಣದ "ಹ್ಯಾಂಡ್ ಬಿಲ್ಲು"ಗಳು, ಆ ದಿನದ ಸಿನಿಮಾದ ಕಥೆಯ ಬಗ್ಗೆ, ಪಾತ್ರವರ್ಗದ ಬಗ್ಗೆ ಫೋಟೋ ಸಮೇತ ವಿವರವನ್ನೊಳಗೊಂಡ ಆ ಕರಪತ್ರಗಳನ್ನು ಗಾಡಿಯಿಂದ ಹೊರಗೆಸೆದಾಗ ಅದನ್ನು ಆಯ್ದುಕೊಳ್ಳಲು ನಾಮುಂದು ತಾಮುಂದು ಎಂದು ಮುಗಿ ಬೀಳುವ ಪೋಕರಿ ಹುಡುಗರು, ಸಿನಿಮಾದ ಬಗ್ಗೆ ಕೂಗಿ ಹೇಳಿದ ಶಬ್ದಗಳು ಊರಿಗೆಲ್ಲ ಕೇಳಲು ಅನುಕೂಲವಾಗುವಂತೆ ಒಂದು ಕಹಳೆ......ಆಹಾ! ವರ್ಣಿಸಲು ಅಸದಳ. ಬ್ಯಾಂಡು - ಬಾಜಾ ಜೊತೆಗೆ ಕ್ಲಾರಿಯೋನೆಟ್‌ವಾದಕರೊಬ್ಬರು ಸಿನಿಮಾ ಹಾಡುಗಳನ್ನು ಬಾರಿಸುತ್ತ ನಡೆದರೆ..... ಪರಿಣತ ವಾದಕನಾಗಿದ್ದರಂತೂ ಕೇಳಲೇ ಬೇಡಿ, ಕರ್ಣಾನಂದಕರ.

ಚಿಕ್ಕಮಗಳೂರಿನಲ್ಲೊಬ್ಬ ಅಂತಹ ಕ್ಲಾರಿಯೋನೆಟ್ ವಾದಕರಿದ್ದರು. ಸಿನಿಮಾ ಪ್ರಚಾರದ ಗಾಡಿಯಲ್ಲಿ ಕುಳಿತು ಅವರು ಪ್ರತಿದಿನ ಆಗಿನ ಕಾಲದ ಸುಪ್ರಸಿದ್ಧ ಹಿಂದೀ ಹಾಡುಗಳಾದ "ಖೋಯಾ ಖೋಯಾ ಚಾಂದ್" ನಂತಹ ಸ್ವರಗಳನ್ನು

ನುಡಿಸುತ್ತ ಇದ್ದರೆ ಆ ಗಾಡಿಯ ಹಿಂದೆ ನರಸಿಂಹ ಕಿಂದರಿ ಜೋಗಿಯ ಸೆಳೆತಕ್ಕೆ ಸಿಕ್ಕ ಬಾಲಕನಾಗುತ್ತಿದ್ದ. ಅವನಿಗಾಗ 12-13ವರ್ಷ ವಯಸ್ಸು. ಗಾಡಿಯನ್ನು ಹಿಂಬಾಲಿಸುತ್ತ ಹುಡುಗ ಅದು ಹೋದಲ್ಲೆಲ್ಲ ಹೋಗುತ್ತಿದ್ದ. ಒಂದೆರಡು-ಮೂರು ಮೈಲಿ ಹೋದನಂತರ ಆತ ವಾಪಸ್‌ಬರುತ್ತಿದ್ದ.

ಮನೆಯವರಿಗೆ ಭಯ....ಏನಪ್ಪ ಇದು! ವಡವಾಟಿಯಿಂದ ನಮ್ಮಲ್ಲಿಗೆ ನಮ್ಮ ಜವಾಬ್ದಾರಿಯಲ್ಲಿ ಬಿಡಲ್ಪಟ್ಟ ಈ ಹುಡುಗ ಹೀಗೆ ಮಾಡಿದರೆ ಹೇಗೆ ! ನಾಳೆ ಏನಾದರೂ ಅನಾಹುತ ಆದರೆ! ಹುಡುಗನಿಗೆ ಎಚ್ಚರಿಕೆ ನೀಡಿಯೂ ಆಯಿತು. ಆದರೆ ಹುಡುಗನದು ಪ್ರತಿದಿನ ಅದೇ ಹಾಡು-ಪಾಡು !

ಪ್ರತಿದಿನ ನಾಯ್ಡು ಬೀದಿಗೆ ಗಾಡಿ ಬಂದ ತಕ್ಷಣ ಈ ಹುಡುಗ ಮನೆಯಿಂದ ಹೊರಬಂದವನೇ ಗಾಡಿಯ ಹಿಂದೆಯೇ ಬರುತ್ತಾನಲ್ಲ ! ಯಾರಿವನು? ಎಲ್ಲಿಯವನು? ಹೀಗೆ ಯಾಕೆ ಬರುತ್ತಾನೆ?

ಗಾಡಿಯೊಳಗೆ ಕುಳಿತು ಸಿನಿಮಾ ಪದಗಳನ್ನು ನುಡಿಸುತ್ತಿದ್ದ ಕ್ಲಾರಿಯೋನೆಟ್ ವಾದಕನಿಗೆ ಅಚ್ಚರಿ. ದಿನವೂ ಈ ಜಟಕಾ ಗಾಡಿಯ ಹಿಂದೆ ಬರುವ ಈ ಹುಡುಗನ ಬಗ್ಗೆ ಕುತೂಹಲ. ಒಮ್ಮೆ ಹೀಗೆಯೇ ಗಾಡಿಯನ್ನು ಹಿಂಬಾಲಿಸಿ ಕೊಂಡು ಬಂದ ಹುಡುಗನನ್ನು ಮಾತಾಡಿಸಿದರು.

"ಏನಪ್ಪಾ ಎಲ್ಲಿಯಂವಾ ನೀನು?"

"ನಮ್ಮದು ರಾಯಚೂರು ಕಡೇರಿ."

"ರಾಯಚೂರಾ ? ಅಲ್ಲಿ ಎಲ್ಲಾತು ?"

"ಅಲ್ಲೇ ಹತ್ರದಾಗೆ ಒಂದು ಹಳ್ಳೀರಿ, ವಡವಾಟಿ ಅಂತ".

"ಅರೇ ! ವಡವಾಟಿಯಂವೇನು ? ಅಲ್ಲಿ ಯಾರ ಮನಿ ನಿನ್ದು?"

"ಓಬಳಪ್ಪ ಸಾವ್ಕಾರ್ರಂತ ಒಬ್ರಿದಾರ್ರೀ ಅಲ್ಲಿ. ಅವರ ಮನಿ"

ಸಾಹುಕಾರ್ ಓಬಳಪ್ಪನವರ ಹೆಸರು ಕೇಳಿದಾಕ್ಷಣ ಕ್ಲಾರಿಯೋನೆಟ್ ವಾದಕನ ನೆನಪು ಚಿಕ್ಕಮಗಳೂರಿನಿಂದ ವಡವಾಟಿಗೆ ಓಡಿತು.

ಅವರ ಹೆಸರು ನರಸಿಂಗಪ್ಪ ಎಂದು. ಅವರ ಊರು ರಾಯಚೂರಿನ ಬಳಿ ಮಕ್ತಲ್ ಎಂಬುದಾಗಿತ್ತು. ಊರಿನಲ್ಲಿ ಅವರಿಗೆ ಸರಿಯಾದ

ಆದಾಯವಿರಲಿಲ್ಲ. ತೀರಾ ಬಡತನದ ಬದುಕಾಗಿತ್ತು. ಸಂಸಾರ ನಿರ್ವಹಣೆ ತುಂಬಾ ಕಠಿಣವಾಗಿತ್ತು. ಹೀಗಾಗಿ ಅವರು ಊರು ಬಿಡಬೇಕೆಂದು ನಿರ್ಧರಿಸಿದವರೇ ಹಣದ ನೆರವಿಗಾಗಿ ಸಾಹುಕಾರ್ ಓಬಳಪ್ಪನವರ ಬಳಿ ಬಂದರು. ಸಾಹುಕಾರರು ಅವರ ಅಹವಾಲು ಕೇಳಿದವರು ತತ್‌ಕ್ಷಣ ತಮ್ಮ ಸಂದೂಕದಿಂದ ನೂರು ರೂಪಾಯಿ ತೆಗೆದುಕೊಟ್ಟರು. ಈಗಿನ ನೂರು ರೂಪಾಯಿಗೆ ಏನು ಬೆಲೆ ಇದ್ದೀತು ! ಆದರೆ ಅದು ಆಗಿನ ನೂರು ರೂಪಾಯಿ. ಈಗಿನ ಹತ್ತು ಸಾವಿರ ರೂಪಾಯಿಗಳಿಗೆ ಸಮ. ಆ ಹಣದ ನೆರವಿನಿಂದ ರಾಯಚೂರು ಬಿಟ್ಟ ನರಸಿಂಗಪ್ಪನವರು ಚಿಕ್ಕಮಗಳೂರಿಗೆ ಬಂದು ವಸತಿ ಹೂಡಿ ಹೀಗೆ ಸಿನಿಮಾ ಥಿಯೇಟರಿನಲ್ಲಿ ಹಾಡು ಬಾರಿಸುವ ಕಾಯಕ ಮಾಡಿ ಒಂದು ಸಂತೃಪ್ತ ಬದುಕು ನಡೆಸುತ್ತಿದ್ದರು. ಅಂತಹ ಸಾಹುಕಾರರ ಹೆಸರು ಕೇಳಿದಾಗ ಮೈಯಲ್ಲಿ ಮಿಂಚು ಹರಿಯದಿದ್ದೀತೇ! ಎರಡೂ ಕೈಗಳು ತಮ್ಮಷ್ಟಕ್ಕೆ ತಾವೇ ಮೇಲೇರಿ ಆ ಧರ್ಮಾತ್ಮನ ನೆನಪಿಗೆ ಕೃತಜ್ಞತೆ ಸಲ್ಲಿಸಲು ಒಂದಕ್ಕೊಂದು ಬೆಸೆದುಕೊಂಡವು. ನರಸಿಂಗಪ್ಪನವರು ಮುಗಿಲಿನ ಕಡೆ ಊರ್ಧ್ವಮುಖಿಯಾಗಿದ್ದರು. ಬಹುಶಃ ಅಲ್ಲಿ ಇವರ ಆಪದ್ಬಾಂಧವ ನಸುನಗುತ್ತ ಕುಳಿತಿದ್ದಂತೆ ಇವರಿಗೆ ಕಂಡಿರಬೇಕು.

ಮತ್ತೆ ಸ್ವಲ್ಪ ಹೊತ್ತಿಗೆ ವಾಸ್ತವಕ್ಕೆ ಮರಳಿದ ನರಸಿಂಗಪ್ಪ ಹುಡುನ ಕಡೆ ಗಮನ ಹರಿಸಿದರು.

"ನೀನು ಸಾಹುಕಾರ್ರಿಗೆ ಏನಾಗಬೇಕಪ್ಪ?"

"ಅವರು ನನಗೆ ತಾತ ಆಗಬೇಕ್ರಿ, ನಾನು ಅವರ ತಮ್ಮನ ಮಗನಾದ ದೊಡ್ಡಬುಡ್ಡಪ್ಪನವರ ಮಗಾರೀ !"

"ಹೌದೇನಪ್ಪ ! ನೀ ಸಾವ್ಕಾರ ಓಬಳಪ್ಪನೋರ ಮೊಮ್ಮಗ ಏನು? ಬಾಳ ಸಂತೋಷ ಆತಪ್ಪ ! ನನ್ನ ಸಂಕಟ ಕಾಲದಾಗೆ ದೇವ್ರ ಹಾಂಗೆ ಸಹಾಯಕ್ಕೆ ಬಂದಾವ್ರು ಅವ್ರು ! ಅಂತಾವ್ರ ಮೊಮ್ಮಗ ನೀನು. ಈಗಿಂಧೀಗಲೇ ನಿನ್ನನ್ನು ನನ್ನ ಮನಿಗೆ ಕರಕೊಂಡೇ ಹೋಗಾವ್ನು ನಾನು. ಆದ್ರ ಇಲ್ಲಿ ನಿನ್ನನ್ನು ಮನಿಯಾಗೆ ಇಟ್ಟುಕೊಂಡಾವ್ರು ಏನು ತಿಳ್‌ಕೊಂಡಾರು! ಹೆದರಿಕೊಂಡು ಬಿಟ್ಟರ ! ಬ್ಯಾಡ, ನಾಳೆಮತ್ತೆ ಬರ್ತೀನಲ್ಲ! ಆಗ ಭೇಟಿ ಆಗೋಣ. ಈಗ ನೀ ಮನೀಗೆ ಹೋಗಪ್ಪ".

–ಎಂದು ಹೇಳಿ ಹುಡುಗನನ್ನು ಮನೆಗೆ ಕಳಿಸಿದರು. ಮನೆಯಲ್ಲಿ ಎಂದಿನಂತೆ ಬೈಗಳ ಉಪಾಹಾರ.

* * * * *

ಸಂಜೆಯ ಹೊತ್ತಿಗೆ ಸಿನಿಮಾ ಥಿಯೇಟರಿನಿಂದ ಮಹಮದ್ ರಫಿಯವರು ಹಾಡಿದ

*ಖೋಯಾ ಖೋಯಾ ಚಾಂದ್*
*ಖಿಲಾ ಆಸಮಾ.......*
*ಆಂಖೋಂಸೆ ಸಾರೀ ರಾತ್ ಜಾಯೇಗೀ.....*
*ಹಂಕೋ ಭೀ ಕೈಸೇ ನೀಂದ್ ಆಯೇಗೀ......*

ಈ ಹಾಡಿನ ರಿಕಾರ್ಡು ಕೇಳಿ ಬರುತ್ತಿತ್ತು. ನರಸಿಂಹನ ಕಾಲುಗಳು ಥಿಯೇಟರಿನ ಕಡೆಗೆ ನಡೆಯಲು ಸನ್ನದ್ಧ. ಮನೆಯವರಿಗೆ ತಲೆನೋವು.

"ಏ ಕೋತಿ, ಎಲ್ಲಿಗೆ ಹೊಂಟಿಯೋ ! ಇಂವಾ ಎಂಥ ಹುಚ್ಚನಪ್ಪಾ! ಹಾಡು ಕೇಳಿದ ಕೂಡಲೇ ಹೊಂಟು ಬಿಡ್ತಾನಿಂವಾ ! ಎಂದು ಚಿಂತಿತರಾಗುತ್ತಿದ್ದರು. ಆದರೆ ಹುಡುಗನ ಹುಚ್ಚು ಮನಸ್ಸು ಕಾಲುಗಳನ್ನು ಆ ಕಡೆಗೇ ಎಳೆಯುತ್ತಿದ್ದವು.

ಸಂಗೀತದ ಗೀಳು ಎಂದರೆ ಇದೇ ಅಲ್ಲವೇ! ಮೊಳಕೆಯಲ್ಲಿಯೇ ಬೆಳೆಯುವ ಗುಣ ! ತಾನೂ ಹೀಗೆಯೇ ಒಬ್ಬ ಸಂಗೀತಗಾರನಾಗಬೇಕೆಂಬ ಹಿರಿಯಾಸೆ ನರಸಿಂಹನಲ್ಲಿ ಮೊಳೆಯುತ್ತಿತ್ತು.

ಹೀಗೆಯೇ ಒಂದೆರಡು ವರ್ಷ ಕಳೆದವು. ಚಿಕ್ಕಮಗಳೂರು ಹೇಳಿಕೇಳಿ ಮಲೆನಾಡು ಪ್ರದೇಶ. ಮಳೆಗಾಲ ಎಂದರೆ ಮುಸಲಧಾರೆ. ಹಗಲು-ರಾತ್ರಿ ಧೋ ಎಂಬ ಆಲಾಪದೊಂದಿಗೆ ವರುಣನ ನಿತ್ಯ ಬೈಠಕ್ಕು. ನರಸಿಂಹ ಬಂದದ್ದು ಸೂರ್ಯನ ಅನುಗ್ರಹ ಹೇರಳವಾಗಿರುವ ರಾಯಚೂರಿನಿಂದ. ಅಲ್ಲಿ ಬೆಳೆದ ಹುಡುಗನ ಮೈಗೆ ಮಲೆನಾಡಿನ ಮಳೆಗಾಲದ ವಾತಾವರಣವು ವಿಪರೀತ ಪ್ರಭಾವ ಬೀರುತ್ತಿತ್ತು. ಜ್ವರದ ಧಾಳಿ ಹೆಚ್ಚಿ ಆರೋಗ್ಯ ಕೆಡುತ್ತಿತ್ತು. ಕೆಲವೊಮ್ಮೆ ಹುಡುಗ ಮೈ ಬಿಸಿಯೇರಿ ಪ್ರಜ್ಞೆ ತಪ್ಪಿ ಮಲಗಿರುತ್ತಿದ್ದನು. ವೈದ್ಯರು ಹುಡುಗನನ್ನು ಪರೀಕ್ಷಿಸಿದರು.


"ಈ ಹುಡುಗನಿಗೆ ಇಲ್ಲಿಯ ಹವಾ ಒಗ್ಗುವುದಿಲ್ಲ. ದೇಹದ ಉಷ್ಣಾಂಶ ಒಂದು ಮಿತಿಯನ್ನು ಮೀರಿದರೆ ಅಪಾಯ. ಇವನನ್ನು ವಾಪಸ್ ಇವನ ಊರಿಗೇ ಕಳಿಸಿಬಿಡಿ" – ಎಂದು ಅವರು ಹುಡುಗನ ಆಶ್ರಯದಾತರಿಗೆ ಸಲಹೆ ನೀಡಿದರು. ಹುಡುಗ ಮರಳಿ ವಡವಾಟಿಗೆ ಬಂದನು.

❑

ಚರಣ 3

# ಪದ ಕುಸಿಯೆ ನೆಲವಿಹುದು......

ವಡವಾಟಿಗೆ ಮರಳಿದ ನರಸಿಂಹ ದೈಹಿಕವಾಗಿ ಮತ್ತು ಮಾನಸಿಕವಾಗಿ ಸ್ವಾಭಾವಿಕವಾಗಿಯೇ ಬೆಳೆದಿದ್ದ. ವಡವಾಟಿ ಎಂದರೆ ಒಂದು ಬಾವಿ. ಚಿಕ್ಕಮಗಳೂರಿನಂತಹ ವಿಶಾಲಸಾಗರದಲ್ಲಿ ಬಾಳಿದ ಮೀನಿಗೆ ಇಲ್ಲಿ ಏನೋ ಕಳೆದುಕೊಂಡ ಅನುಭವ. ಇದು ಒಂದು ಕುಗ್ರಾಮ. ಅನಕ್ಷರಸ್ಥರ ಊರು. ಒಂದು ಟೆಲಿಗ್ರಾಂ ಬಂದರೆ ಓದಿಸುವ ಮೊದಲೇ ಜನರಿಗೆ ತಲ್ಲಣ...... ಏನು ಸುದ್ದಿಯೋ ಏನೋ ಎಂಬ ಆತಂಕ. ಇಲ್ಲಿ ಚಿಕ್ಕಮಗಳೂರಿನಂತೆ ಬ್ಯಾಂಡ್ ಬಾರಿಸಿಕೊಂಡು ಸಿನಿಮಾ ಪ್ರಚಾರ ಮಾಡುವ ಗಾಡಿಯಾಗಲಿ, ರಫಿಯ ಮಧುರ ಸ್ವರದೊಂದಿಗೆ ತೇಲಿ ಬರುವ ಆ ಗಾಳಿಯಾಗಲಿ ಎಲ್ಲಿ ಇದ್ದೀತು !



ಹದಿನಾರರ ಹರೆಯದ
ಹುಡುಗ ನರಸಿಂಹ

ಹುಡುಗನ ಮನಸ್ಸು ಕೊರಗುತ್ತಿತ್ತು.
ಫಿರ್ ವೋಹೀ ಶಾಂ
ವಹೀ ಗ़ಂ, ವಹೀ ತನಹಾಯೀ ಹೈ.......

ಒಬ್ಬಂಟಿತನ ಕಾಡುತ್ತಿತ್ತು. ಮತ್ತೆ ಶಾಲೆಗಂತೂ ಸೇರಲಿಲ್ಲ. ವಡವಾಟಿಯಲ್ಲಿ ಶಾಲೆಯೂ ಇರಲಿಲ್ಲ. ಮನೆ ಬಿಟ್ಟರೆ ಹೊಲ, ಬಯಲು, ಅದೇ ಜನ, ಅದೇ ದನ-ಕರು-ಎಮ್ಮೆಗಳು. ಚಡಪಡಿಸುವ ಹೃದಯದ ಹುಡುಗನಿಗೆ ಸರಿಗಮದ ಗರಿಗೆದರಿ ಹಾರುವ ತವಕ. ತನ್ನ ಒಳತೋಟಿಗಳನ್ನು ಅಣ್ಣ ರಾಮಣ್ಣ ನೊಂದಿಗೆ ತೋಡಿಕೊಳ್ಳುತ್ತಿದ್ದ ಹುಡುಗ. ಆದರೆ ಅಣ್ಣನಿಗೆ ಪಾಪ, ಇದೆಲ್ಲ ಅರ್ಥವಾಗುತ್ತಿರಲಿಲ್ಲ.

ನರಸಿಂಹನಿಗೆ ಅಕ್ಷರ ಕಲಿಯುವ ಆಸೆ ಅಳಿದಿರಲಿಲ್ಲ. ವಡವಾಟಿಯಲ್ಲಿ ಶಾಲೆಯೂ ಇರಲಿಲ್ಲ. ವಡವಾಟಿಯಿಂದ ಬುತ್ತಿ ಕಟ್ಟಿಕೊಂಡು ರಾಯಚೂರಿಗೆ ಬರುತ್ತಿದ್ದ. ಅಲ್ಲಿ ಸಾಲಿ ಶಂಕರಯ್ಯ ಎಂಬೊಬ್ಬ ಅಯ್ನೋರ ಬಳಿ ಬಂದು ತನಗೆ ಅಕ್ಷರಾಭ್ಯಾಸ ಮಾಡಿಸಲು ಬೇಡುತ್ತಿದ್ದ. ಅವರಿಗೋ ಆಶ್ಚರ್ಯ -- ರಾಯಚೂರಿನ ಹುಡುಗರೇ ಅಕ್ಷರ ಅಂದರೆ ಅತ್ತತ್ತ ಓಡುವಾಗ ಈ ಹುಡುಗ ಎಂಟು ಮೈಲಿ ದೂರದ ಹಳ್ಳಿಯಿಂದ ಬುತ್ತಿ ಕಟ್ಟಿಕೊಂಡು ಬರುತ್ತಾನಲ್ಲಪ್ಪ! - ಎಂದು. ಒಂದಷ್ಟು ದಿನ ಹೀಗೇ ಅಕ್ಷರಾಭ್ಯಾಸ ಸಾಗಿತು. ಆದರೆ ಮತ್ತೆ ಅದು ತಪ್ಪಿ ಹೋಯಿತು. ಮತ್ತೆ ಅದೇ ಶೂನ್ಯಮಂಟಪ, ಹದಿನೈದರ ಹರೆಯ.

ಹುಡುಗನ ಮನಸ್ಸು ತಡೆಯದೆ ಕೊನೆಗೊಮ್ಮೆ ಆತ ಊರು ಬಿಡುವ ತೀರ್ಮಾನ ಕೈಗೊಂಡನು. ಅದೂ ಎಂದು ? ಮಣ್ಣೆತ್ತಿನ ಅಮಾವಾಸ್ಯೆಯ ದಿನ. ರಾಯಚೂರು ಕಡೆಯ ಜನರಿಗೆ ಮಣ್ಣೆತ್ತಿನ ಅಮಾವಾಸ್ಯೆಯಂದು ಯಾವುದೇ ಶುಭಕಾರ್ಯಕ್ಕೆ ತೊಡಗಲೂ ಹಿಂಜರಿಕೆ. ಅದು ಅವರ ನಂಬಿಕೆ. ಆದರೆ ನರಸಿಂಹ ಅಂದೇ ತನ್ನ ಜೈತ್ರಯಾತ್ರೆಗೆ ಹೊರಡುವ ನಿರ್ಧಾರ ಮಾಡಿದ್ದನು. ಅಂತೆಯೇ ಅಂದು ಬೆಳಿಗ್ಗೆ ಊರಿನ ಆಂಜನೇಯ ಸ್ವಾಮಿಯ ದರ್ಶನ ಮಾಡಿದ. ತನ್ನೊಬ್ಬ ಪರಿಚಯಸ್ಥರಿಗೆ ಮಾತ್ರ ತನ್ನ ನಿರ್ಧಾರ ತಿಳಿಸಿದ್ದನು.

ಅವರೂ ಸಹ ಅವನಿಗೆ ರಾಯಚೂರಿನಲ್ಲಿ ಒಂದು ವ್ಯವಸ್ಥೆ ಮಾಡುವ ಭರವಸೆ ನೀಡಿದರು. ನಾಗಪ್ಪ ಎಂದು ಅವರ ಹೆಸರು.

ಹುಡುಗ ಊರು ಬಿಟ್ಟು ಹೊರಟನು. ಹೊರಡುವಾಗ ತಾಯಿಯ ನೆನಪಾಗುತ್ತಿತ್ತು. ಆಕೆ ಸತ್ತ ಕ್ಷಣಗಳ ನೆನಪು ಕಾಡಿತ್ತು. ಮಗನ ಎದುರಿಗೇ ಆಕೆ ಕಣ್ಣುಮುಚ್ಚಿದ್ದರು.

* * * * *

ನರಸಿಂಹನಿಗೆ ಆಗ ಏಳೆಂಟು ವರ್ಷಗಳಷ್ಟೇ. ತಾಯಿಗೆ ಈತ ಒಬ್ಬನೇ ಹೊಟ್ಟೆಯಲ್ಲಿ ಹುಟ್ಟಿದ ಮಗ. ಎರಡನೆ ಮದುವೆ ಮಾಡಿಕೊಂಡಿದ್ದ ತಂದೆ ಹುಡುಗನಿಗೆ ಒಂದು ವರ್ಷ ಆಗುವ ಹೊತ್ತಿಗೆ ಯಾವುದೋ ಬೇನೆಗೆ ತುತ್ತಾಗಿ ವಿಧಿವಶರಾಗಿದ್ದರು. ತಾಯಿ ರಂಗಮ್ಮ ನರಸಿಂಹನೊಂದಿಗೆ ತನ್ನ ಸವತಿಯ ಮಕ್ಕಳಾದ ರಾಮಣ್ಣ ಮತ್ತು ಪಾರ್ವತಮ್ಮರನ್ನೂ ತನ್ನದೇ ಮಕ್ಕಳೆಂಬಂತೆ ಸಾಕಿದ್ದರು.

ಅಂದು ರಾತ್ರಿ ಮನೆಯಲ್ಲಿ ಎಲ್ಲರೂ ಮಲಗಿದ್ದರು. ಆಗಿನ ಕಾಲದಲ್ಲಿ ವಿದ್ಯುತ್ ಇರಲಿಲ್ಲ. ಎಣ್ಣೆ ಬುಡ್ಡಿ ಮಾತ್ರ. ಮಲಗುವಾಗ ಅದನ್ನು ಆರಿಸಿ ನಿದ್ರೆ ಹೋಗುತ್ತಿದ್ದರು ಎಲ್ಲರೂ.

ರಂಗಮ್ಮನವರಿಗೆ ನಿದ್ರೆಯ ನಡುವೆ ತಮ್ಮ ಕೈಗೆ ಏನೋ ಕಡಿದಂತಾಗಿ ಎಚ್ಚರವಾಯಿತು. ಕಡಿದ ಭಾಗವನ್ನು ತಿಕ್ಕಿಕೊಂಡಾಗ ಅಲ್ಲಿ ಏನೋ ಅಂಟುದ್ರವ ಬೆರಳಿಗೆ ಮೆತ್ತಿಕೊಂಡಂತಾಯಿತು. ಮನೆಯವರನ್ನು ಎಬ್ಬಿಸಿ ದೀಪ ಹಚ್ಚುವ ಹೊತ್ತಿಗೆ ಆಕೆಗೆ ಗಂಟಲು ಕಟ್ಟಿದಂತಾಗಿ ಮಾತು ಹೊರಡುವುದು ಪ್ರಯಾಸ ವೆನಿಸಲಾರಂಭಿಸಿತು.

ದೀಪ ಹಚ್ಚಿ, ಆ ಕಚ್ಚಿದ ಪ್ರಾಣಿ ಯಾವುದೆಂದು ಹುಡುಕಿದಾಗ ಅವರ ಹಾಸಿಗೆಯ ಬಳಿ ಅದು ಕಂಡಿತ್ತು. ಅದೊಂದು ಕಟ್ಟು ಹಾವು. ಅಂದರೆ ಕನ್ನಡಿ ಹಾವು. ತಾಯಿಗೆ ಮೈಯಲ್ಲಿ ನಂಜೇರಿತು. ಆಕೆಗೆ ಅರ್ಥವಾಗಿತ್ತು ತನ್ನ ಕೊನೆಯ ಕ್ಷಣಗಳಿವು –ಎಂದು. ಸಾಯುವ ಮೊದಲು ಹುಡುಗನನ್ನು ಮಡಿಲಿನಲ್ಲಿ ಕೂರಿಸಿಕೊಂಡು ಹಿರಿಯರ ಕೈಗಳಿಗೆ ಅವನನ್ನು ಒಪ್ಪಿಸಿದರು — ಇನ್ನು ಹುಡುಗನ ಬದುಕು ನಿಮ್ಮ ಕೈಲಿದೆ ಎಂದು. ಮುಂದೆ ಕೆಲವು ಕ್ಷಣಗಳಲ್ಲಿ ತಾಯಿ ಇರಲಿಲ್ಲ. ಮಗ ನೋಡುತ್ತಿದ್ದ – ತಾಯಿ ದೂರದೂರಿಗೆ ಸರಿದದ್ದನ್ನು.

* * * * *

ಅನಾಥ ಪ್ರಜ್ಞೆ ಕಾಡುತ್ತಿತ್ತು ಹುಡುಗನನ್ನು. "ದೇವರೇ ತಾಯಿಯನ್ನು ಕಳಕೊಂಡ ತಬ್ಬಲಿ ನಾನು. ಹೊರಟಿದ್ದೇನೆ. ಹೇಗೆ ನನಗೆ ದಾರಿ ತೋರಿಸು ತ್ತೀಯೋ – ನಿನಗೆ ಬಿಟ್ಟದ್ದು, ನೋಡಿಕೊಳ್ಳಪ್ಪಾ" ಎಂದು ಪರಮಾತ್ಮನನ್ನು ನೆನೆಯುತ್ತ ಸಾಗಿದ ಬಾಲಕ.

ದಾರಿಯಲ್ಲಿ ಸೈಕಲ್‌ನೊಂದಿಗೆ ನಿಂತಿದ್ದ ನಾಗಪ್ಪನವರೊಂದಿಗೆ ನರಸಿಂಹ ರಾಯಚೂರಿಗೆ ಬಂದ. ಅಲ್ಲಿ ನಾಗಪ್ಪನವರು ಹುಡುಗನನ್ನು ವೆಂಕಟಪ್ಪ ಎನ್ನುವವರ ಬಳಿ ಕರೆದುಕೊಂಡೊಯ್ದರು.

ವೆಂಕಟಪ್ಪ ರಾಯಚೂರಿನಲ್ಲಿ ಒಂದು ಬ್ಯಾಂಡ್‌ಸೆಟ್ ಇಟ್ಟುಕೊಂಡು ಬದುಕು ಮಾಡುತ್ತಿದ್ದರು. ಏನೋ, ಹೇಗೋ ಅವರ ಬದುಕು ಸಾಗುತ್ತಿತ್ತು. ಇಂಥವರ ಬಳಿ ಹುಡುಗನೊಂದಿಗೆ ನಾಗಪ್ಪನವರು ಬಂದರು.

"ಏನಪ್ಪಾ ನಾಗಪ್ಪ" ?

"ನೋಡಪ್ಪಾ ವೆಂಕಟಪ್ಪಾ, ಈ ಹುಡುಗ ನರಸಿಂಹ ಅಂತ, ವಡವಾಟಿ ಓಬಳಪ್ಪನವರ ಮೊಮ್ಮಗ, ದೊಡ್ಡಬುಡ್ಡಪ್ಪನ ಮಗ. ಊರಿನಲ್ಲಿ ಬಾಳೋದಕ್ಕೆ ಹುಡುಗನಿಗೆ ಮನಸ್ಸು ಒಲ್ಲೆ ಅನ್ತದೆ. ಸಂಗೀತದಲ್ಲಿ ಭಾಳ ಪ್ರೀತಿ ಅದೆ. ಅದಕ್ಕೆ ಇವನ್ನ ನಿನ್ನಲ್ಲಿ ಬಿಡಬೇಕಂತ ಕರಕೊಂಡು ಬಂದೀನಿ. ಏನಾರೆ ದಾರಿ ತೋರಿಸಪ್ಪ."

ವೆಂಕಟಪ್ಪನವರು ಹುಡುಗನನ್ನು ನೋಡಿದರು. ಹರೆಯದ ಹೊಸ್ತಿಲಿಗೆ ಕಾಲಿಡುತ್ತಿರುವ ಹದಿನೈದು ವಯಸ್ಸಿನ ತೆಳ್ಳಗಿನ ಕಾಯ. ಏನು ಕೆಲಸ ಮಾಡಿಯಾನು ! ಇವನೊಬ್ಬ ಪರಿವಾರದಲ್ಲಿ ಸೇರಿಕೊಂಡರೆ ದಾರಿ ಹೇಗೆ ?

"ಸರಿಯಪ್ಪಾ, ನೀನೇನೋ ಇಲ್ಲಿಗೆ ಕರಕೊಂಡು ಬಂದೆ. ಇರಲಿ ಅಂತಲೇ ಅನ್ನೋಣ. ಆದರೆ ಇವನ ಊಟ ಬಟ್ಟೆಯ ವ್ಯವಸ್ಥೆ ಏನು ? ಹಾಡು ಬಾರಿಸೋದೇನೋ ಕಲಿಸಿಯೇನು. ಆದರೆ ಅವನ ನಿತ್ಯದ ಬದುಕು ಹೇಗಪಾ ?"

"ನೋಡು ವೆಂಕಟಪ್ಪಾ, ಮನೆಯಾಗೆ ಇರಾಕವಲ್ಲೆ ಅಂತಂದು ಊರು ಬಿಟ್ಟು ಬಂದಾನೆ ಹುಡುಗಾ. ಅವರೇನೂ ನಿನಗೆ ಇವನ ಊಟ-ಬಟ್ಟೆಯ ಖರ್ಚು ಕೊಡಾಕೆ ವಲ್ರು, ಅವರನ್ನ ಕೇಳಿದರೆ ಮತ್ತೆ ಇವನನ್ನ ಊರಿಗೆ ಕರಕೊಂಡು ಹೋಗ್ತಾರೆ. ಆದರೆ ಹುಡುಗನಿಗೆ ಬದುಕೋದಕ್ಕ ತ್ರಾಸ ಆಗ್ತೈತಿ. ಒಂದು ಮಾಡು, ಒಂದು ಆರು ತಿಂಗಳು ಇವನನ್ನು ಸಾಕಿ ಬಿಟ್ಟರೆ ಸಾಕು. ಮನೆಯಾಗೇ ಏನಾದ್ರೂ ಕೆಲಸಮಾಡಿಕೊಂಡು ಊಟ ಹಾಕಿದ್ರೆ ಇಂವಾ ಮುಂದೆ ನಿನ್ನ ಋಣ ಇಟ್ಟು ಕೊಳ್ಳೋದಿಲ್ಲ. ಮತ್ತೆ ಭೌಳ ಬುದ್ಧಿವಂತ ಇದಾನೆ ಹುಡುಗ."

ನಿಜ, ನರಸಿಂಹ ಏಕಸಂಧಿಗ್ರಾಹಿ. ಒಮ್ಮೆ ಹೇಳಿದ್ದನ್ನು ಕೂಡಲೇ ಗ್ರಹಿಸಿ ಕಲಿಯ ಬಲ್ಲವನಾಗಿದ್ದ. ರಾಯಚೂರಿನ ಕಡೆ "ಹಲಗೆ ಕೋಲು ಹಾಕುವದು" ಎಂಬೊಂದು ವೃತ್ತಿಯಿದೆ. ನೇಯ್ಗೆಗೆ ಸಂಬಂಧಿಸಿದ್ದು. ವಡವಾಟಿಗೆ ಒಬ್ಬಾತ ಬಂದು ಹುಡುಗರಿಗೆ ಹಲಗೆ ಕೋಲು ಹಾಕುವ ತಂತ್ರ ಕಲಿಸುತ್ತಿದ್ದನು. ದಾರಗಳನ್ನು ಮೇಲಿಂದ ಕೆಳಗೆ ಇಳಿಬಿಟ್ಟು ಕೆಳಗೆ ಕಟ್ಟಿರುವ ಕೋಲುಗಳನ್ನು ಹಿಂದೆ-ಮುಂದೆ ಆಡಿಸುತ್ತಿದ್ದರೆ ಮೇಲೆ ದಾರಗಳು ಜಡೆಯಂತೆ ಹೆಣೆದುಕೊಳ್ಳುತ್ತವೆ. ಈ ತಂತ್ರ ಬೇರೆ ಯಾರಿಗೂ ಅರ್ಥವಾಗದ್ದು ಕಿರಿಯ ಹುಡುಗ ನರಸಿಂಹನಿಗೆ ಅರ್ಥವಾಗಿತ್ತು. ಅವನು ಉಳಿದವರಿಗೆ ಅರ್ಥಮಾಡಿಕೊಡಲು ಪ್ರಯತ್ನಿಸುತ್ತಿದ್ದ. ಕಲಿಸಬಂದ ಗುರು ಬೆರಗಾಗಿದ್ದ.

ಅಜ್ಜ ಶಹನಾಯಿ ಬಾರಿಸುವಾಗಲೂ ಅಷ್ಟೇ, ಹುಡುಗ ಚಂದದಿಂದ ಡೋಲು ಬಾರಿಸುತ್ತಿದ್ದ. ಎಂತಹ ಡೋಲು ! ಹುಡುಗನಿಗೆ ಅದನ್ನು ಎತ್ತಲಾಗುತ್ತಿರಲಿಲ್ಲ. ಆದರೂ ಎಂತಹ ಕೈಚಳಕ !

ಇದು ನಾಗಪ್ಪನವರಿಗೆ ಗೊತ್ತಿತ್ತು. ಆದ್ದರಿಂದಲೇ ಅವರಿಗೆ ನರಸಿಂಹನ ಬಗ್ಗೆ ಅಷ್ಟು ವಿಶ್ವಾಸ -- ಹುಡುಗ ಏನಾದರೂ ಮಾಡಿಯೇ ಮಾಡುತ್ತಾನೆಂದು.

ವೆಂಕಟಪ್ಪನವರು ಬಹಳ ವಿಚಾರಮಾಡಿ ಕೊನೆಗೆ "ಆತಪ್ಪಾ, ಇರಲಿ ಬಿಡು ಇಂವಾ ಇಲ್ಲೇ" ಅಂದರು. ನರಸಿಂಹನ ಹೋರಾಟದ ಬದುಕು ಹೀಗೆ ಶುರುವಾಯಿತು. ನಾಗಪ್ಪನವರು ಮರಳಿದರು.

* * * * *

ಮೊದಲೇ ಹೇಳಿದಂತೆ ಅಂದು ಮಣ್ಣೆತ್ತಿನ ಅಮವಾಸ್ಯೆ. ಆ ಭಾಗದಲ್ಲಿ ಅಂದು ಸಂಜೆಯಿಂದ ಮಧ್ಯರಾತ್ರಿವರೆಗೂ ಮಣ್ಣೆತ್ತಿನ ಮೆರವಣಿಗೆ ಮಾಡುತ್ತಾರೆ. ಮಣ್ಣೆತ್ತು ಅಂದರೆ ಮಣ್ಣಿನ ಎತ್ತು. ಬೆಂಗಳೂರಿನ ಕಡೆ ಕರಗ ಮಾಡುತ್ತಾರಲ್ಲ ಹಾಗೆ, ಮಣ್ಣೆತ್ತಿನ ಮೆರವಣಿಗೆ. ಮಣ್ಣಿನ ದೊಡ್ಡ ಎತ್ತಿನ ಮೂರ್ತಿಯನ್ನು ಮಾಡಿ ಡೊಳ್ಳು, ದಮಡಿ, ಬ್ಯಾಂಡುಗಳೊಂದಿಗೆ ನಮ್ಮ ಕಡೆ ಗಣಪತಿಯ ಮೆರವಣಿಗೆ ಮಾಡುವಂತೆ ಊರೆಲ್ಲ ಮೆರೆಸುತ್ತಾರೆ. ಅಂದೂ ಹಾಗೆಯೇ ವೆಂಕಟಪ್ಪನವರು ಬ್ಯಾಂಡು ಸಮೇತ ತಮ್ಮ ತಂಡದೊಂದಿಗೆ ಹೊರಟರು. "ನೀನೂ ಬಾರಪಾ" ಎಂದು ನರಸಿಂಹನನ್ನೂ ಕರೆದೊಯ್ದರು.

ಒಂದು ದೊಡ್ಡ ಡ್ರಂನ ಒಂದು ಬದಿಗೆ ನರಸಿಂಹ, ಇನ್ನೊಂದು ಬದಿಗೆ ಇನ್ನಾರೋ ಒಬ್ಬ. ಮೆರವಣಿಗೆ ಸಾಗಿದಂತೆ ಆ ಬದಿಯಲ್ಲಿ ಆಳು ಬದಲಾದರೂ

ಈ ಕಡೆ ನರಸಿಂಹನ ಪಾಳಿಗೆ ಕೊನೆ ಇಲ್ಲವೇ ಇಲ್ಲ. ಬೆಳಗಿನಿಂದ ಹೊಟ್ಟೆಗೇನೂ ಇಲ್ಲ ಹುಡುಗನಿಗೆ ! ಕೈಯಲ್ಲಿ ಒಂದು ದಮ್ಮಡಿಯೂ ಇಲ್ಲ. ಯಜಮಾನರೂ ಇವನ ಊಟ–ಉಪಚಾರದ ಬಗ್ಗೆ ವಿಚಾರಿಸಿರಲಿಲ್ಲ. ಜೊತೆಗೆ ಭಾರದ ಡ್ರಂ ಬೇರೆ. ಏನು ಪಾಡು ಬಡಪಾಯಿಯದು ! ಸಾಯಂಕಾಲ ಐದು ಘಂಟೆಯಿಂದ ನಡುರಾತ್ರಿಯವರೆಗೂ ಸತತವಾಗಿ ನಡೆದಿತ್ತು ದುಡಿತ, ಡ್ರಮ್ಮಿನ ಮೇಲೆ ಹಸಿದು ಬಸವಳಿದ ಕೈಲಿ ಹಿಡಿದ ಕೋಲಿನಿಂದ ಹೊಡೆತ!

ಮೆರವಣಿಗೆ ಮುಗಿದ ಮೇಲೆ ಊಟದ ವ್ಯವಸ್ಥೆ ಮಾಡಿದ್ದರು. ಆಗಷ್ಟೇ ಹುಡುಗನ ಜಠರಾಗ್ನಿಯನ್ನು ಶಮನಗೊಳಿಸಲು ಅನ್ನ ಬ್ರಹ್ಮನ ಸಾಕ್ಷಾತ್ಕಾರ. "ಕೆಟ್ಟ ಕರಿ" ಯಂದು ಶುಭಕಾರ್ಯದಲ್ಲಿ ತೊಡಗಿದ್ದಕ್ಕೆ ಹುಡುಗನಿಗಾದ ಅನುಭವವಿದು. ಇಡೀ ದಿನದ ತಪದ ಫಲ ನಡುರಾತ್ರಿ ಸಿಕ್ಕಿತ್ತು. ತೋಳುಗಳು ತತ್ತರಿಸಿದ್ದವು. ಹಸಿದ ತೋಳವಾಗಿದ್ದ ಹುಡುಗ. ಊಟದ ನಂತರ ಯಜಮಾನರ ಮನೆಯಲ್ಲಿ ನೆಲದ ಮೇಲೆ ಮಲಗಿದರೆ ಹಂಸತೂಲಿಕೆಯ ಸುಖ ನಿದ್ರೆ !

ಬದುಕು ಹೀಗೇ ಸಾಗಿತ್ತು. ಯಜಮಾನರ ಮನೆಯಲ್ಲಿ ಗೃಹಕೃತ್ಯದಲ್ಲಿ ನೆರವು, ಬಾಕಿ ಸಮಯದಲ್ಲಿ ಸಂಗೀತಾಭ್ಯಾಸ. ಮನೆಯಲ್ಲಿ ಹಳೆಯ ಕ್ಲಾರಿಯೋನೆಟ್ ಒಂದಿತ್ತು. ಅದರಲ್ಲಿ ಯಜಮಾನರ ಉಸ್ತುವಾರಿಯಲ್ಲಿ ಹಾಡುಗಳನ್ನು ನುಡಿಸುವದರಲ್ಲಿ ಕಲಿಕೆ ನಡೆದಿತ್ತು.

ಹುಡುಗನ ಸಧ್ಯದ ಗುರಿ ಒಂದೇ –– ತಾನು ಯಜಮಾನರ ಮನೆಯಲ್ಲಿ ದಂಡಕ್ಕಿರಬಾರದು. ತಾನೂ ಒಬ್ಬ ದುಡಿಯುವ ಸದಸ್ಯನಾಗಿ ಈ ಮನೆಗೆ ಹಣದ ನೆರವು ನೀಡುವಂತಾಗಬೇಕು–ಎಂಬುದು. ಅದು ಪೊಳ್ಳು ಅನಿಸಿಕೆ ಆಗಿರಲಿಲ್ಲ. ಕ್ಲಾರಿಯೋನೆಟ್‌ನಲ್ಲಿ ದಿನಕ್ಕೆ ಐದಾರು ತಾಸು ತಾಲೀಮು ಸಾಗುತ್ತಿತ್ತು. ಹುಡುಗನಲ್ಲಿ ಪ್ರಬಲವಾದೊಂದು ಇಚ್ಛಾಶಕ್ತಿಯಿತ್ತು. ಇನ್ನು ಮೂರು ತಿಂಗಳುಗಳಲ್ಲಿ ಈ ವಾದ್ಯ ತನಗೆ ಕರಗತವಾಗಬೇಕೆಂಬ ಹಠವಿತ್ತು.

ನರಸಿಂಹನ ಶರೀರವೇನೂ ಅಂಥ ಹೃಷ್ಟಪುಷ್ಟವೇನಿರಲಿಲ್ಲ. ತೀರಾ ಸೊಣಕಲನಲ್ಲದಿದ್ದರೂ ತೆಳ್ಳಗಿನ ಕಾಯ. ನೋಡಿದರೆ ಕಷ್ಟಪಟ್ಟು ತಡೆದುಕೊಳ್ಳಬಲ್ಲ ಇವ–ಅಂತೇನೂ ಅನ್ನಿಸುತ್ತಿರಲಿಲ್ಲ. ಆದರೆ ಆ "ಕರಿಕೊಳವಿ"ಯಲ್ಲಿ ತಾಲೀಮು ಮಾಡುವಷ್ಟು ಉಸಿರೆಲ್ಲಿಂದ ಬರುತ್ತಿತ್ತೊ.! ಆ ಕಸುವು ಎಲ್ಲಿತ್ತೋ! ಆ ನಾದ ದೇವತೆಗಷ್ಟೇ ಗೊತ್ತು. ಒಲೆ ಹೊತ್ತಿಸಲು ಊದುಗೊಳವಿ ಊದಿದರೇ

ಮೂರು–ನಾಲ್ಕು ಉಸಿರಿಗೆ ಸುಸ್ತು. ಹೊಗೆ ಸುತ್ತಿದ್ದರಂತೂ ಕೆಮ್ಮಿಗೇನೂ ಬರವಿಲ್ಲ. ಇಂಥಾದ್ದರಲ್ಲಿ ಪ್ರತಿದಿನ ಐದಾರು ತಾಸು ಕರಿಕೊಳವಿ ಊದಿ ತಾಳಿಕೊಳ್ಳುವುದೆಂದರೆ !

ಊಟಕ್ಕೆ ಖಾನಾವಳಿಗಳಿದ್ದವು. ಆಗಿನ ಕಾಲದಲ್ಲಿ ತಿಂಗಳಿಗೆ ಇಪ್ಪತ್ತೈದು ರೂಪಾಯಿ ನೀಡಿದರೆ ಎರಡು ಹೊತ್ತಿನ ಊಟ ಸಿಗುತ್ತಿತ್ತು. ಊಟ ಅಂದರೇನು ? – ಎರಡು ಬಿಳಿಯ ಜೋಳದ ರೊಟ್ಟಿ. ಅನ್ನ, ತರಕಾರಿಯ ಪಲ್ಯ, ಸಾರು.... ಸಾಕಲ್ಲವೇ ! ಹೀಗೊಂದು ಖಾನಾವಳಿಯಲ್ಲಿ ನರಸಿಂಹನ ಊಟ ತಿಂಗಳ ಪಾವತಿ ಲೆಕ್ಕದಲ್ಲಿ ನಡೆಯುತ್ತಿತ್ತು. ಬಹಳ ಸರಕಾರಿ ನೌಕರರು ಸಹ ಇದೇ ರೀತಿಯ ಖಾನಾವಳಿ ಸಂಬಂಧ ಹೊಂದಿದ್ದರು.

ಊಟವೇನೋ ಸರಿಯೇ, ಮತ್ತೆ ಮಲಗುವುದು!? "ಶಯ್ಯಾ ಭೂಮಿತಲಂ, ದಿಶ್ಯೋऽಪಿ ವಸನಂ...." ನೆಲವೇ ಹಾಸುಗೆ, ಅಂಬರವೇ ಹೊದಿಕೆ. ಯಜಮಾನರ ಮನೆಯ ಸೂರಿನಡಿ ಶಯನ–ಅನ್ನುವುದು ಬಿಟ್ಟರೆ ಇಲ್ಲಿ ಕೊಟ್ಟ ಹೋಲಿಕೆಯಲ್ಲೇನೂ ಅತಿಶಯವಿಲ್ಲ. ನರಸಿಂಹನಲ್ಲಿ ಇದ್ದ ಉಡುಪೆಂದರೆ ಒಂದು ಅಂಗಿ, ಒಂದು ಬನಿಯನ್ನು, ಒಂದು ಚಡ್ಡಿ, ಒಂದು ಅಂಡರ್‌ವೇರ್, ರಾತ್ರಿ ಮಲಗುವಾಗ ಅಂಗಿ–ಚಡ್ಡಿ ತೆಗೆದಿಟ್ಟು ಬನಿಯನ್ ಮತ್ತು ಒಳಚಡ್ಡಿಯಷ್ಟೇ ಧರಿಸಿದ ಹುಡುಗ ಬರಿಯ ನೆಲದ ಮೇಲೆ, ಯಾವ ಹೊದಿಕೆಯೂ ಇಲ್ಲದೆ ನಿದ್ದೆಗಿಳಿದು ಸಾಧನೆಯ ಕನಸುಕಾಣುತ್ತಿದ್ದನು. ಹೀಗೆ ಸತತ ಆರು ತಿಂಗಳ ಕಾಲ ನಡೆಯಿತು. ಹುಡುಗ ಕೊನೆಗೊಮ್ಮೆ ಯಜಮಾನರು ನರಸಿಂಹನ ಈ ಸ್ಥಿತಿ ನೋಡಿ ಮರುಗಿದವರು ಹೆಂಡತಿಗೆ ಹೇಳಿ ಒಂದು ಗೋಣಿ ತಾಟು ಕೊಡಿಸಿದರು. ಅಲ್ಲಿಂದ ಮುಂದೆ ಅದು ಅವನ ಸುಖದ ಸುಪ್ಪತ್ತಿಗೆಯಾಯಿತು.

* * * * *

ಮೂರು–ನಾಲ್ಕು ತಿಂಗಳುಗಳಲ್ಲಿ ನರಸಿಂಹ ಕೆಲವು ಹಿಂದೀ ಸಿನಿಮಾಗಳ ಜನಪ್ರಿಯ ಹಾಡುಗಳನ್ನು ನುಡಿಸುವುದರಲ್ಲಿ ನಿಷ್ಣಾತನಾದನು. ಬರೀ ಬಾರಿಸುವುದಷ್ಟೇ ಅಲ್ಲ, ಬಹಳ "ಚಂದವಾಗಿ", ಅಲ್ಲ "ಛಂದವಾಗಿ" ಆ ಹಾಡುಗಳನ್ನು ನುಡಿಸುತ್ತಿದ್ದನು. ಎಷ್ಟು "ಛಂದ" ಅಂದರೆ ಬ್ಯಾಂಡ್‌ಸೆಟ್‌ಗಾಗಿ ವೆಂಕಟಪ್ಪನವರಲ್ಲಿಗೆ ಬರುವ ಜನ "ನೋಡಪಾ, ಒಂದೈದು ಹತ್ತು ರೂಪಾಯಿ ಜಾಸ್ತಿ ಕೊಡುತ್ತೇವೆ, ಆದ್ರೆ ಕ್ಲಾರಿನೆಟ್ ಊದಾಕೆ ಆ ಹುಡುಗನನ್ನೇ ಕಳಿಸು" ಎಂದು ಕೇಳುತ್ತಿದ್ದರು.

ಒಂದು ವರ್ಷದೊಳಗೆ ನರಸಿಂಹನ ಸಾಧನೆ ಎಷ್ಟಿತ್ತೆಂದರೆ—ಬ್ಯಾಂಡ್‌ಸೆಟ್‌ನ ಉಳಿದ ಮಂದಿಗೆ ಪಾಠ ಹೇಳಿಕೊಡುವಷ್ಟಾದನು, ಹೇಳಿಕೊಡುತ್ತಿದ್ದನು ಕೂಡ. ಅವರಿಗೆಲ್ಲ "ಅಯ್ಯ"ನಾದನು ನರಸಿಂಹ. "ಅಯ್ಯ" ಎನ್ನುವುದು ಗುರುಸ್ಥಾನಕ್ಕೆ ಉಪಯೋಗಿಸುವ ಸಂಬೋಧನೆ.

ಬ್ಯಾಂಡ್‌ಸೆಟ್‌ನ ಕಲಾವಿದರೆಂದರೆ ವೃತ್ತಿಕಲಾವಿದರೆ. ಅದು ಅವರ ಬದುಕಿನ ದಾರಿಗಾಗಿ ಆರಿಸಿಕೊಂಡ ವೃತ್ತಿ. ಸಂಪಾದನೆಗಷ್ಟೇ ಅದರ ಹಂಗು. ಈ ವೃತ್ತಿ ಕಲಾವಿದರೋ ! ಅವರ ಹುಟ್ಟು ಮತ್ತು ಬೆಳೆದ ಪರಿಸರದಿಂದಾಗಿ ಸ್ವಭಾವತಃ "ಚಟೋಪಾಧ್ಯಾಯ"ರಾಗಿರುತ್ತಿದ್ದರು. ಬೀಡಿ ಸೇದುವುದು, ಕುಡಿತ, ಮತ್ತಿತರ ಕಲ್ಯಾಣಗುಣಗಳು ಅವರ ಸಂಗಾತಿಗಳು.

ಆದರೆ ನರಸಿಂಹ ಮಾತ್ರ ಈ ದುಶ್ಚಟಗಳಿಂದ ದೂರವಿರುತ್ತಿದ್ದನು–ತಾವರೆ ಎಲೆಯ ಮೇಲಿನ ನೀರಿನ ಹನಿಯಂತೆ. ಅವನ ಗುರಿ ಒಂದೇ – ತಾನೊಬ್ಬ "ದೊಡ್ಡಮನುಷ್ಯಾ" ಆಗಬೇಕೆಂಬುದು. ಆ ಮಹತ್ವಾಕಾಂಕ್ಷೆಯ ಮುಂದೆ ಬೇರೆಲ್ಲವೂ ತೃಣಸಮಾನವಾಗಿದ್ದವು ಅವನಿಗೆ. ಇದ್ದುದೊಂದೇ ಗುರಿ –– ಅರ್ಜುನನ ಕಣ್ಣಮುಂದಿನ ಬೊಂಬೆ ಹಕ್ಕಿಯ ಕಣ್ಣಿನಂತೆ – ಸಂಗೀತ ಸಾಧನೆ. ದಿನದ ಐದಾರು ತಾಸುಗಳ ಪರಿಶ್ರಮದ ಫಲ ಎದ್ದು ಕಾಣುತ್ತಿತ್ತು.

ಈ ಸ್ವಯಂ ದಂಡನೆಯ ಅಗತ್ಯ ನರಸಿಂಹನಿಗೆ ಇತ್ತೋ? ತಂದೆಯ ಕಡೆ ವಡವಾಟಿಯಲ್ಲಿ ಸಾಕಷ್ಟು ಭೂಮಿ ಕಾಣಿಗಳಿದ್ದವು. ಇತ್ತ ತಾಯಿಯ ತವರಾದ ಮಟಮಾರಿಯಲ್ಲೇನೂ ಕಡಮೆಯಿರಲಿಲ್ಲ. ಹುಡುಗ ಬೇಕಿದ್ದರೆ ಎರಡರಲ್ಲೊಂದು ಕಡೆಗೆ ಹೋಗಿ ಆರಾಮಾಗಿ ಇರಬಹುದಿತ್ತು. ಎರಡೂ ಕಡೆ ಸಂಗೀತದ ಸಂಸ್ಕೃತಿಯೂ ಇತ್ತು. ಉಣ್ಣಲು, ಉಡಲು, ಹೊದೆಯಲು ಯಾವ ಕೊರತೆಯು ಇರಲಿಲ್ಲ, ಮತ್ತಿನ್ನೇನು ?

ಆದರೆ ಇವೆಲ್ಲದರ ಮತ್ತು ನರಸಿಂಹನ ನಡುವೆ ಬಲವಾದ ಗೋಡೆಯೊಂದಿತ್ತು––ಅವನ ಸ್ವಾಭಿಮಾನ. "ಉಪವಾಸವಿದ್ದೇನು. ಹಂಗಿನ ಅನ್ನಬೇಡ" ಅನ್ನುವ, ತಾನು ದುಡಿದು ಗಳಿಸಿದ್ದರಲ್ಲೇ ತಿನ್ನಬೇಕೆಂಬ ಛಲ ಹಾಗೂ ಏನಾದರೂ ದೊಡ್ಡದಾಗಿ ಸಾಧಿಸಬೇಕೆಂಬ ಮಹದಾಸೆ, ಜೊತೆಗೆ ಆತ್ಮವಿಶ್ವಾಸ – ಮಾಡಿಯೇ ಮಾಡುತ್ತೇನೆಂಬ ನಂಬುಗೆ – ಎಲ್ಲವೂ ಸೇರಿ ಅವನನ್ನು ಕಷ್ಟದ ಬದುಕಿಗೆ ಒಗ್ಗಿಸಿ ಬಿಟ್ಟಿದವು.

ಅಲ್ಲದೆ ಇದರೊಂದಿಗೆ ಇನ್ನೊಂದು ಕಾರಣವಿತ್ತು. ತಾನು ಒಂದಲ್ಲ ಒಂದು ದಿನ ದೊಡ್ಡ ಕಲಾವಿದನಾಗುವುದು ಖಂಡಿತ. ಈಗೇನಾದರೂ ಯಾರ ಮುಂದಾದರೂ ಸಹಾಯಕ್ಕಾಗಿ ಕೈಯೊಡ್ಡಿದರೆ ಮುಂದೆ ? ಈ ಜನ "ನರಸಿಂಹನಿಗೆ ಏನೂ ಗತಿಯಿರದಿದ್ದಾಗ ಅವನಿಗೆ ನಾವು ಸಹಾಯ ಮಾಡಿದ್ದೇವೆ. ಅವನನ್ನು ಮುಂದೆ ತಂದದ್ದು ನಾವೇ" ಎಂದು ಹೇಳಿಕೊಂಡು ಓಡಾಡುವುದಿಲ್ಲವೇ? ಏಕೆ ಆ ಹಂಗು? ಬದುಕಿಡೀ ನರಳಿಸುವ ಆ ಋಣಭಾರ ತನಗೇಕೆ? ತಾನುಂಟು, ಮೂರುಲೋಕವುಂಟು–– ಅಲ್ಲವೇ ? ಹದಿಮೂರು–ಹದಿನಾಲ್ಕು ವರ್ಷ ವಯಸ್ಸು ಆಗ ನರಸಿಂಹನಿಗೆ. ಆ ವಯಸ್ಸಿಗೆ ಅದೆಷ್ಟು ತನ್ನತನ ಅವನಿಗೆ!

ಆ ವಯಸ್ಸಿಗೇ ಹುಡುಗ ತನ್ನ "ಕರಿಕೊಳವಿ"ಯಲ್ಲಿ ಆಗಿನ ಕಾಲದ – ಈಗಲೂ ತಮ್ಮ ಮಾಧುರ್ಯವನ್ನು ಕಳೆದುಕೊಳ್ಳದಿರುವ ಜನಪ್ರಿಯ ಹಾಡುಗಳನ್ನು ಜನ ತಲೆದೂಗಿ ಮೆಚ್ಚುವಂತೆ ನುಡಿಸುತ್ತಿದ್ದನು. ಪರಿಣಾಮ –ವೆಂಕಟಪ್ಪನವರಿಗೆ ಬರುವ ಸಂಭಾವನೆಯಲ್ಲಿ ಹುಡುಗನ ದುಡಿಮೆಯ ಪಾಲೂ ಇತ್ತು. ಒಂದು ವರ್ಷದ ಹಿಂದೆ ಅಂದುಕೊಂಡಿದ್ದನಲ್ಲ ಈ "ಕರಿ ಕೊಳವಿಯ ಎಳೇ ಹುಡುಗ" ಯಜಮಾನರ ಮನೆಗೆ ತನ್ನ ದುಡಿತದ –– ಪಾಲೂ ಸಲ್ಲಬೇಕು–ಎಂದು ಅದನ್ನು ಕಾರ್ಯರೂಪಕ್ಕೆ ತಂದ ತೃಪ್ತಿಯ ಅನುಭವವಾಗಿತ್ತು ನರಸಿಂಹನಿಗೆ. ಮೇಷ್ಟ್ರು ವೆಂಕಟಪ್ಪನವರಿಗೂ ಸಹ ಹುಡುಗನ ಸಾಧನೆಯ ಬಗ್ಗೆ ಅತೀವ ಮೆಚ್ಚುಗೆಯಾಗಿತ್ತು –– ಈ ಹುಡುಗ ಎಷ್ಟು ಬೇಗ ಸಾಧನೆಮಾಡಿ ಬಿಟ್ಟನಲ್ಲ! – ಎಂದು. ಬ್ಯಾಂಡ್‌ಸೆಟ್‌ನ ಉಳಿದ ಜೊತೆಗಾರರಿಗಂತೂ ನರಸಿಂಹನ ಬಗ್ಗೆ ಮಹಾಗೌರವ.

ರಾಯಚೂರು ಮತ್ತು ಸುತ್ತಮುತ್ತಲ ಕೆಲವು ಕ್ಲಾರಿಯೋನೆಟ್ ವಾದಕರು ನರಸಿಂಹನೊಡನೆ ಪೈಪೋಟಿ ಮಾಡುತ್ತಿದ್ದ ಸಂದರ್ಭಗಳೂ ಇದ್ದವು. ಈ ಕಿರಿಯ ಹುಡುಗನೆದುರು ಅವರು ಸೋತೂ ಬಿಡುತ್ತಿದ್ದರು.ಅಂಥವರಲ್ಲಿ ಒಬ್ಬರಂತೂ ಹಿರಿಯ ವಾದಕರು, ಅನುಭವವಿದ್ದವರು, ಚೆನ್ನಾಗಿ ನುಡಿಸುತ್ತಲೂ ಇದ್ದರು. "ಸಿಂಗನ ಮುಂದೆ ರಂಗನೆ !" ಎಂಬ ಭಾವದಿಂದ ಹುಡುಗನೊಂದಿಗೆ ಪೈಪೋಟಿ ಗಿಳಿದರೊಮ್ಮೆ. ಅವರು ಹಿರಿಯ ವಾದಕರು, ಇವನು ಹುರುಪಿನ ಹುಡುಗ...... ಕೇಳಬೇಕೇ! ರಂಗ–ಸಿಂಗರ ಸಂಗೀತ ಜುಗಲ ಬಂದಿಗೆ ರಂಗೇರಿ ಸುತ್ತಣ ವಾತಾವರಣವಿಡೀ ನಾದಮಯವಾಗಿತ್ತು. ಕೇಳುಗರೆಲ್ಲರೂ ಮಂತ್ರ ಮುಗ್ಧರಾಗಿದ್ದರು. ಆದರೆ ಕೊನೆಗೆ ಆ ಹಿರಿಯರು ಈ ಕಿರಿಯನ ಮುಂದೆ ಸೋಲೋಪ್ಪಲೇ ಬೇಕಾಯಿತು.

ಜನರ ಸ್ವಭಾವ ಗೊತ್ತಲ್ಲ ! ಸೋತವರನ್ನು ಹೀನಾಯವಾಗಿ ನೋಡುವುದು, ಗೆದ್ದವನನ್ನು ಹೊಗಳಿಕೆಯ ಗದ್ದುಗೆಯ ಮೇಲೆ ಕೂರಿಸಿ ಪಟ್ಟಾಭಿಷೇಕ ಮಾಡುವುದು – ಇದು ಸಾಮಾನ್ಯ. ಅದೂ ಅವರು ಸಾಧಾರಣ ಮಟ್ಟದ ಮನೋಭಾವದವರಿದ್ದು ಅನಕ್ಷರಸ್ಥರಾಗಿದ್ದರಂತೂ ಕೇಳುವುದೇ ಬೇಡ ! ನರಸಿಂಹನ ಜನಪ್ರಿಯತೆ ದಿನೇ–ದಿನೇ ಹೆಚ್ಚುತ್ತಿತ್ತು. ಹುಡುಗನಲ್ಲಿ ಹಮ್ಮು–ಬಿಮ್ಮು, ಗರ್ವಗಳು ಮನೆ ಮಾಡದೆ ಇದ್ದದ್ದೇ ಒಂದು ವಿಶೇಷ. ವಿನಯ ಹುಡುಗನನ್ನು, ಹುಡುಗ ವಿನಯವನ್ನು ಕಡೆಗಣಿಸಲಿಲ್ಲ.

ಹೀಗೇ ಒಂದೈದು ವರ್ಷಗಳು ಉರುಳಿದವು ಕೊನೆಗೊಮ್ಮೆ ನರಸಿಂಹನಿಗೆ ಮೇಷ್ತ್ರ ಬ್ಯಾಂಡ್‌ಸೆಟ್‌ನೊಂದಿಗಿನ ಸಂಬಂಧಕ್ಕೆ ವಿದಾಯ ಹೇಳುವ ಅನಿವಾರ್ಯ ಪ್ರಸಂಗ ಬಂತು. ನರಸಿಂಹನ ಸ್ವಾಭಿಮಾನಕ್ಕೆ ಕಿಚ್ಚು ಹೊತ್ತಿಸಿದ ಪ್ರಸಂಗವದು.

ಊರಿನಲ್ಲಿ ಜಾತ್ರೆಗೆ, ಮೆರವಣಿಗೆಗೆ, ಸಮಾರಂಭಗಳಿಗೆ ಮತ್ತಿತರ ವಿಶೇಷ ಸಂದರ್ಭಗಳಲ್ಲಿ ವೆಂಕಟಪ್ಪ ಮೇಷ್ಟರ ಬ್ಯಾಂಡ್‌ಸೆಟ್‌ಗೆ ಕರೆ ಇರುತ್ತಿತ್ತು. ನರಸಿಂಹ ನಿಪುಣ ವಾದ್ಯಗಾರನಾದ ಮೇಲೆ ಅವನೇ "ಲೀಡರು". ವೆಂಕಟಪ್ಪ ಮೇಷ್ಟ್ರಿಗೆ ಇದ್ದ ಹೊಣೆಯ ಹೆಚ್ಚಿನ ಭಾಗ ನರಸಿಂಹನೇ ಹೊತ್ತಿರುತ್ತಿದ್ದನು.

ಹೀಗೆ ಒಂದು ಮದುವೆಯ ಮೆರವಣಿಗೆಯಲ್ಲಿ ನರಸಿಂಹನ ನೇತೃತ್ವದಲ್ಲಿ ಬ್ಯಾಂಡ್‌ಸೆಟ್ ಊರಿನ ಬೀದಿಬೀದಿಗಳಲ್ಲಿ ನಡೆಯಿತು. ನಂತರ ಒಂದು ದೇವಸ್ಥಾನವನ್ನು ಮೆರವಣಿಗೆ ತಲುಪಿತು. ಅಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು. ಊಟಕ್ಕೆ ಉಳಿದವರೆಲ್ಲರೂ ದೇವಸ್ಥಾನದ ಒಳಗೆ ನಡೆದರು. ಮೆರವಣಿಗೆಯ ಪಾರುಪತ್ತೆಗಾರರು ಬ್ಯಾಂಡ್‌ಸೆಟ್‌ನವರಿಗೆ "ನೀವೂ ಸಹ ಇಲ್ಲೇ ಊಟ ಮಾಡಿಕೊಂಡು ಹೋಗಿ, ಎಲ್ಲರಿಗೂ ಊಟದ ಏರ್ಪಾಡಾಗಿದೆ" ಎಂದು ಅಪ್ಪಣೆ ಕೊಡಿಸಿದರು. ಸರಿ ಇವರೆಲ್ಲರೂ ಊಟಕ್ಕೆ ಸಿದ್ಧರಾದರು. ಬಡಿಸುವವರು ಎಲೆ ಹಾಕಿದರು.

ನರಸಿಂಹನಿಗೆ ಅವರು ತಮಗಾಗಿ ಎಲೆ ಹಾಕಿದ್ದ ಸ್ಥಳ ನೋಡಿ ಮೈಮೇಲೆ ಮುಳ್ಳುಗಳೆದ್ದವು. ಇಲ್ಲಿ ನಾವು ಉಣ್ಣಬೇಕೆ !

ದೇವಸ್ಥಾನಕ್ಕೆ ಬಂದ ಭಕ್ತಾದಿಗಳು ಒಳಗೆ ಪ್ರವೇಶಿಸುವ ಮುನ್ನ ತಮ್ಮ ಪಾದರಕ್ಷೆಗಳನ್ನು ಹೊರಗೆ ಬಿಡಲೇ ಬೇಕಲ್ಲವೇ ! ಹಾಗೆ ಎಲ್ಲರೂ ಪಾದರಕ್ಷೆಗಳನ್ನು ಒಂದು ಸ್ಥಳದಲ್ಲಿ ಬಿಟ್ಟಿದ್ದರು. ಬ್ಯಾಂಡ್‌ಸೆಟ್ ಕಲಾವಿದರಿಗಾಗಿ ಎಲೆ ಹಾಕಿದ್ದು

ಅದಕ್ಕೆ ತೀರಾ ಸನಿಹದಲ್ಲಿ ಅಂದರೆ ದೇವಸ್ಥಾನದ ಬಾಗಿಲ ಹೊರಗೆ. ಅವರ ಎಲೆಗಳ ಪಕ್ಕದಲ್ಲಿ ಭಕ್ತಾದಿಗಳ ಪಾದತ್ರಾಣಗಳು ! ನರಸಿಂಹನ ಅಭಿಮಾನ ಸಿಡಿದೆದ್ದಿತ್ತು.

ನರಸಿಂಹನೇನೂ ಊಟಕ್ಕೆ ಗತಿಯಿಲ್ಲದೆ ಊರು ಬಿಟ್ಟು ಬಂದವನಲ್ಲವಲ್ಲ ! ಚಿಕ್ಕಪ್ಪನೊಂದಿಗೋ, ಮಟಮಾರಿಯಲ್ಲಿ ಮಾವನೊಂದಿಗೋ ಇದ್ದು ಕೃಷಿಕಾರ್ಯದಲ್ಲಿ ಕೈಜೋಡಿಸುತ್ತೇನೆಂದಿದ್ದರೆ ಅವರೇನೂ ಬೇಡವೆನ್ನುತ್ತಿರಲಿಲ್ಲ. ಎರಡೂ ಕಡೆ ಸಂಗೀತವನ್ನೂ ಅಲ್ಲಿಯೇ ಹುಡುಗ ಕಲಿಯಬಹುದಿತ್ತು. ಹುಡುಗನ ಮಾವ ಈರಣ್ಣನವರಂತೂ ಸಾಕಷ್ಟು ಹೆಸರುಗಳಿಸಿದ್ದ ಶಹನಾಯಿ ವಾದಕರು. ಏನು ಕೊರತೆಯಿತ್ತು? ಆದರೆ ಹುಡುಗನಿಗೆ ಇದ್ದ ಅಶಾಂತ ಮನಸ್ಸು, ಏನೋ ಮಾಡಬೇಕೆಂಬ ತಹತಹ, ಅದಕ್ಕೆ ತಕ್ಕ ಹಾಗೆ ಅದಮ್ಯ ಛಲ – ಅವನನ್ನು ತನ್ನ ಮನೆಯವರ ಆಶ್ರಯದ ಛಾಯೆಯಿಂದ ಸಿಡಿದು ಶ್ರಮಸೂರ್ಯನ ತಾಪವನ್ನು ಸ್ವಇಚ್ಛೆಯಿಂದ ತಾಳಿಕೊಳ್ಳುವಂತೆ, ಬದುಕನ್ನು ಎದುರಿಸುವಂತೆ ಮಾಡಿದ್ದವು. ಇಂಥವನಿಗೆ ಈ ರೀತಿಯ ಅವಮಾನಕರ ಪ್ರಸಂಗವೇ !

ತನ್ನೊಂದಿಗೆ ಬಂದಿದ್ದ ಜೊತೆಗಾರರೊಂದಿಗೆ ಹುಡುಗ ಇದನ್ನು ಪ್ರಸ್ತಾಪಿಸಿದನು. ಆದರೆ ಉಳಿದವರಿಗೆ ಇದೆಲ್ಲ ಅರ್ಥವಾಗದ ವಿಷಯ. "ಕೆಲಸ ಮಾಡಿದ್ದೇವೆ, ಹಸಿವಾಗಿದೆ, ಊಟಕ್ಕೆ ಕರೆದಿದ್ದಾರೆ, ಎಲೆ ಹಾಕಿ ಬಡಿಸುತ್ತಿದ್ದಾರೆ. ಇನ್ನೇನಪ್ಪ ! ಊಟ ಮಾಡುವದಷ್ಟೇ ಅಲ್ಲವೇ. ಅದು ದೇವರಗುಡಿ ಒಳಗಾದರೇನು, ಚಪ್ಪಲಿಗಳನ್ನು ಬಿಡುವ ಸ್ಥಳವಾದರೇನು!" – ಎಂಬ ಮನೋಭಾವ. ಅಭಿಮಾನ – ಅವಮಾನಗಳು ಅವರ ನಿಘಂಟಿನಿಂದ ತೆಗೆದು ಹಾಕಲ್ಪಟ್ಟ ಶಬ್ದಗಳು. ನರಸಿಂಹನ ವಾದ ಅವರಿಗೆ ವಿಚಿತ್ರವೆನಿಸಿತ್ತು.

"ಈ ಚಪ್ಪಲಿಗಳೇನು ಮಾಡ್ತಾವೋ ನಮಗೆ ? ಸರಿಸಿಟ್ಟರಾತಪ್ಪಾ!" ಎಂದು ಅವರೆಲ್ಲ ಅಲ್ಲಿದ್ದ ಚಪ್ಪಲಿಗಳನ್ನು ಕಾಲಿನಿಂದ ಕೈಗಳಿಂದ ಬದಿಗೆ ಒಟ್ಟಿ ಸ್ಥಳ ಸರಿಮಾಡಿಕೊಂಡು ಸಾಲಾಗಿ ಕುಳಿತೇ ಬಿಟ್ಟರಲ್ಲ !

ನರಸಿಂಹನಿಗೆ ಮೈ ಉರಿಯಿತು. ಹದಿನೇಳು–ಹದಿನೆಂಟು ವಯಸ್ಸಿನ ಬಿಸಿರಕ್ತದ ಹುಡುಗ. "ಏನಪ್ಪ ಇವರೆಲ್ಲ! ಮಾನ ಅವಮಾನದ ಗೊಡವೀನೇ ಇಲ್ಲವಲ್ಲ! ಆದರೂ ಮನುಷ್ಯರ ಹಾಗೇ ಕಾಣುತ್ತಾರಲ್ಲ ! ಯಾವ ಜಾತಿಯ ಪ್ರಾಣಿಗಳಿವು !" ಎಂದು ಕಸಿವಿಸಿ ಅವನಿಗೆ. ಒಂದು ಕಡೆ ಸಿಟ್ಟು, ಒಂದು ಕಡೆ ದುಃಖ.

ಎಲೆ ಹಾಕಿದರು, ಬ್ಯಾಂಡಿನವರೆಲ್ಲ ಅವುಗಳ ಮುಂದೆ ಕುಳಿತೂ ಆಯಿತು, ನರಸಿಂಹನ ಹೊರತು ಉಳಿದವರೆಲ್ಲರೂ, ಎಲೆಯ ಮೇಲೆ ಪದಾರ್ಥಗಳೂ ಬಿದ್ದವು.

ಈ ಹುಡುಗನ ಧೈರ್ಯ ಎಂಥದ್ದಿದ್ದೀತು ! ಉಳಿದ ಕಲಾವಿದರು ಊಟಕ್ಕೆ ಯಾವ ಭಿಡೆಯೂ ಇಲ್ಲದೆ ಕುಳಿತದ್ದನ್ನು ನೋಡಿದವನಿಗೆ ಸಿಟ್ಟು ತಡೆಯಲಾಗಲಿಲ್ಲ. ತಾಳ್ಮೆಯ ಕಟ್ಟು ಕಿತ್ತುಹೋಯಿತು. ಆವೇಶ ಬಂದವನಂತೆ ನುಗ್ಗಿ ಇವನು ಅವರೆಲ್ಲರ ಎಲೆಗಳನ್ನು ಎಳೆದೆಳೆದು ಎಸೆದು, ಹಾಕಿದ ಪದಾರ್ಥಗಳನ್ನು ಚೆಲ್ಲಿ ಚೆಲ್ಲಾಪಿಲ್ಲಿ ಮಾಡಿಬಿಟ್ಟನು. ಇವನ "ಚೆಲ್ಲಾಟ"ವನ್ನು ಮದುವೆಯ ಪಾರುಪತ್ತೇಗಾರ ನೋಡಿದನು.

ಅವನು ಸಿಟ್ಟಿನಿಂದ ಹುಚ್ಚನಾದನು. ಏನು ಪೊಗರು ಈ ಹುಡುಗನಿಗೆ ! ಬಡಿಸಿದ ಪ್ರಸಾದ ಭಕ್ಷ್ಯಗಳನ್ನು ಹೀಗೆ ಎಳೆದಾಡುವುದೇ! ಏನಿವನ ಅಹಂಕಾರ..... ! ಕೈಯಿತ್ತಿ ಹೊಡೆಯಲು ಬಂದನು ಈ ಪೋರನಿಗೆ.

"ಏನೋ ಹುಡುಗಾ! ನೀನೂ ಉಣ್ಣೋದಿಲ್ಲ, ಉಣ್ಣೋರಿಗೂ ಉಣ್ಣಾಕ್ ಬಿಡವಲ್ಲಿ !"

ಹೊಡೆಯಬೇಕು, ಆದರೆ ಹೊಡೆಯಲಾಗಲಿಲ್ಲ. ಏಕೆಂದರೆ ಹುಡುಗ ಸಾತ್ವಿಕ ಧೀರ. ಅಳುಕಿಲ್ಲದ ಸ್ಥೈರ್ಯ. ತನ್ನ ನಂಬುಗೆ ಸರಿಯೆಂದಾದರೆ ಅದನ್ನುಳಿಸಿಕೊಳ್ಳುವುದರಲ್ಲಿ ಯಾವ ಹಿಂಜರಿಕೆಯೂ ಇಲ್ಲ. ತನ್ನ ಅನಿಸಿಕೆಗಿಂತ ಇನ್ನೊಬ್ಬರ ಅನಿಸಿಕೆ ಸರಿಯೆಂದಾದಲ್ಲಿ ಮಾತ್ರ ಇವನು ಬಾಗಿಯಾನು. ಹಾಗಿಲ್ಲವೆಂದರೆ ಸೆಟೆದು ನಿಲ್ಲುವ ಗಟ್ಟಿ ಮನಸ್ಸಿತ್ತು ನರಸಿಂಹನಿಗೆ.

"ನೋಡು, ನೀನೇನಾದರೂ ಕೈಯೆತ್ತಿ ನನ್ನ ಮೈ ಮುಟ್ಟಿದಲ್ಲಿ ನಾನು ಸುಮ್ಮನಿರೋದಿಲ್ಲ. ಚಪ್ಪಲಿ ಕೈಗೆತ್ತಿಕೊಂಡು ನಿನಗೆ ಬಾರಿಸುತ್ತೇನೆ. ನಿನ್ನಪ್ಪನ ಗಂಟು ಕೊಟ್ಟಿದ್ದೀಯಾ ನನಗೆ ಹೊಡೆಯಲಿಕ್ಕೆ?"

ಪಾರುಪತ್ತೇಗಾರನ ವಯಸ್ಸು ಐವತ್ತಿದ್ದೀತು. ನರಸಿಂಹ ಹರೆಯದ ಹುಡುಗ. ಅವನಿಗೆ ಇವನ ಮಾತು ಕೇಳು–ಕೇಳುತ್ತಾ ಸಿಟ್ಟು ಏರುತ್ತಿದೆ. ವಾದ್ಯದವರಿಗೋ ! ಈ ಜಗಳ ಎಂದು ಮುಗಿದೀತು, ತಾವು ಯಾವಾಗ ಹೊಟ್ಟೆಗೆ ಕೂಳು ತುಂಬಿಯೇವು – ಎಂಬ ಆತುರ.

"ಅಯ್ಯಾ ! ಇಷ್ಟು ಸಣ್ಣ ವಿಷಯಾ ಯಾಕ್ ದೊಡ್ಡು ಮಾಡತೀ? ಬಿಟ್ಟು ಬಿಡಪಾ ! ಸುಮ್ಮನ ಬಾ ಉಣ್ಣಾಕ!"

ಹುಡುಗ ಕೇಳಬೇಕಲ್ಲ !

ಇಡೀ ಚಕ್ರವ್ಯೂಹದೊಳಗೆ ನರಸಿಂಹನೊಬ್ಬನೇ ಅಭಿಮನ್ಯು. ಹತ್ತೂ ದಿಕ್ಕುಗಳಿಂದ ಬರುತ್ತಿದ್ದ ಪ್ರಹಾರಗಳನ್ನು ಏಕಾಂಗಿಯಾಗಿ ಎದುರಿಸುತ್ತಾ ಸೆಣಸುತ್ತಿದ್ದನು. ಮಾತು–ಪ್ರತಿಮಾತು, ಉತ್ತರ–ಪ್ರತ್ಯುತ್ತರ, ಧಾಳಿ–ಪ್ರತಿಧಾಳಿ!

ಇಷ್ಟೆಲ್ಲ ಆಗುತ್ತಿರುವಲ್ಲಿ ದೂರದಲ್ಲೊಬ್ಬರು ಹಿರಿಯರು ಕುಳಿತಿದ್ದರು. ಅವರು ಈ ಹಗರಣವನ್ನು ಗಮನಿಸುತ್ತಿದ್ದವರು ಕೊನೆಗೊಮ್ಮೆ ಎದ್ದು ಬಂದರು.

"ಏ ! ಸುಮ್ಮನಿರ್ರೋ ಎಲ್ಲರೂ... ನಾ ಮಾತಾಡ್ತೇನಿ ಈ ಹುಡುಗನ ಕೂಡ."

ಎಲ್ಲರೂ ಸುಮ್ಮನಾದರು.

ಹಿರಿಯರು ನರಸಿಂಹನ ಬಳಿಗೆ ಬಂದು ಅವನ ಹೆಗಲ ಮೇಲೆ ಕೈಹಾಕಿ ಸ್ನೇಹಪೂರ್ವಕವಾಗಿ ಕೇಳಿದರು.

"ಏನಪ್ಪಾ ತಮ್ಮ, ಯಾಕ್ ಹೀಂಗ ರೇಗಾಡ್ತಾ ಇದ್ದೀ ? ಏನು ನಿನ್ನ ಸಮಸ್ಯೆ ?"

"ನೋಡಿ ತಾತ, ಮದಿವಿ ಮೆರವಣಿಗ್ಯಾಗೆ ಊರು ತುಂಬಾ ಸುತ್ತಿ ಬ್ಯಾಂಡುಬಾಜಾ ಬಜಾಯಿಸಿಕೊಂಡು ದಣಿದು ಬಂದಾವ್ರು ನಾವು. ನಮಗೆ ಇಲ್ಲಿ, ಚಪ್ಪಲಿ ಇಡೂ ಸ್ಥಳದಾಗೆ ಊಟಕ್ಕೆ ಕೂರಿಸಿದ್ದಾರಲ್ಲ, ಇದು ನ್ಯಾಯನಾ ? ನೀವೇ ಹೇಳ್ರಿ."

"ಅಲ್ಲಪಾ, ಇದು ಖಂಡಿತಾ ನ್ಯಾಯ ಅಲ್ಲ."

ಹುಡುಗನಿಗೆ ನೈತಿಕ ಬಲ ಸಿಕ್ಕಂತಾಯಿತಲ್ಲ ! ಇಷ್ಟೆಲ್ಲ ಅಕ್ಷೋಹಿಣೀ ಸೈನ್ಯದ ಎದುರು ಏಕಾಂಗಿ ವೀರನಾಗಿ ಸೆಣಸುತ್ತಿರುವಾಗ ಮಹಾಶಕ್ತಿಯೊಂದು ಅವನ ಪರವಾಗಿ ನಿಂತರೆ ! ಹುರುಪು ಮತ್ತೆ ಕೂಡಿ ಬಾರದೆ ? ತಾನು ಹೇಳೋ ಮಾತು ಕೇಳುವವರೊಬ್ಬರು ಸಿಕ್ಕಾಗ ಅವರು ಹೇಳುವ ಮಾತು ಕೇಳಲೇನಡ್ಡಿ ? ನರಸಿಂಹ ಅವರ ಮುಂದಿನ ಮಾತು ಕೇಳಲು ನಿಂತನು.

"ಖಂಡಿತಾ ನ್ಯಾಯ ಅಲ್ಲಪಾ ಅದು. ಚಪ್ಪಲಿ ಇಡೋ ಜಾಗದಾಗೆ ನಿಮ್ಮನ್ನು ಕೂರಿಸಿ ಊಟಹಾಕೂದಂದರ ಅದು ಮಹಾ ತಪ್ಪು ಇವರದು. ಯಾರೂ ಮೆಚ್ಚೋ ಕೆಲಸಲ್ಲಿದು, ಆದರೆ–"

ಈ "ಆದರೆ" ಅನ್ನುವ ಶಬ್ದವೊಂದಿದೆಯಲ್ಲ ? ಅದಕ್ಕೆ ಇರುವ ತಾಕತ್ತು ಬಹುಶಃ ಬೇರೆ ಯಾವ ಶಬ್ದಕ್ಕೂ ಇರಲಾರದು. ಅದೊಂದು ಶಬ್ದ ಏನೆಲ್ಲ ಸಾಧಿಸೀತು. ಇಡೀ ಜನ ಸಮೂಹದ ಪದಗತಿಯನ್ನೇ ಬದಲಾಯಿಸೀತು. "ತಿರುವು" ಅನ್ನುತ್ತಾರಲ್ಲ ಅದಕ್ಕೆ ಈ ಶಬ್ದವೊಂದೇ ಕೈಮರವಾಗಬಲ್ಲದು. ಇಲ್ಲಿ ಆದದ್ದು ಅದೇ.

"ಆದರೆ ನೋಡುತಮ್ಮಾ, ನೀನೇನೋ ಇಲ್ಲಿ ಚಪ್ಪಲಿ ಇಡೋ ಜಾಗದ ಪಕ್ಕ ಕೂತು ಉಣ್ಣೋದಿಲ್ಲಾ ಅಂತೀ, ಆದರೆ ನಿನ್ನ ಜತೆಗೆ ಬಾರಿಸಿಕೊಂಡು ಬಂದಾರಲ್ಲ ಈ ಮಂದಿ, ಅವರು ಅಲ್ಲಿ ಉಣ್ಣಾಕೆ ತಯಾರಿದ್ದಾರಲ್ಲ, ಇದಕ್ಕೇನಂತಿ ?"

ಹುಡುಗ ಅವಾಕ್ಕಾದನು.

"ಈಗ ನೋಡು, ಅವರು ಅಲ್ಲಿ ಕುಂತು ಊಟ ಮಾಡಾಕ ತಯಾರಿದ್ದಾರೆ. ನೀನು ಏನು ಮಾಡಬೇಕು ? ನಿನ್ನ ಮುಂದೆ ಈಗ ಎರಡೇ ದಾರಿ ಇರೋದು. ಒಂದು – ಸುಮ್ಮನೆ ಇವರ ಜತೆ ಕುಳಿತು ಅಲ್ಲೇ ಊಟ ಮಾಡೋದು, ಇಲ್ಲಾ ಅಂದರೆ ಇವರ ಸಹವಾಸ ಬ್ಯಾಡ ಅಂತ ಬಿಟ್ಟು ಬಿಡೋದು. ಯಾಕೆಂದರೆ ಇವರ ಜತೆ ನೀನು ಇರಲೇಬೇಕೆಂದರೆ ನೀನು ಇವರ ಹಾಗೇ ಇರಲೇ ಬೇಕಾಗ್ತೈತಿ. ನೋಡು, ಯೋಚನೆ ಮಾಡು, ನನಗಂತೂ ನೀನು ಬ್ಯಾರೆ ರೀತೀನೇ ಕಾಣ್ತೀದೀ. ನಿನಗೆ ಹ್ಯಾಗನ್ನಿಸ್ತದೇ ನೋಡು."

ಹೌದಲ್ಲ ! ಈ ಹಿರಿಯರು ಎಂಥಾ ಪರಮ ಸತ್ಯ ಹೇಳಿದರಲ್ಲ! ತಾನು ಊಟ ಮಾಡದೇ ಇರುವುದೇನೋ ಸರಿಯೇ, ಬೇಕಿದ್ದರೆ ಉಂಡ, ಇಲ್ಲದಿದ್ದರೆ ಬಿಟ್ಟ! ಆದರೆ ತನ್ನ ಜತೆಗಾರರಿಗೆ "ಇಲ್ಲಿ ಉಣ್ಣಬೇಡ" ಅನ್ನುವ ಹಕ್ಕು ತನಗೇನಿದೆ ? ಅಲ್ಲದೆ ಈ ಸಮಸ್ಯೆ ಒಂದು ದಿನದ್ದಲ್ಲ – ಅಭಿಮಾನ ಹೀನ ಬದುಕನ್ನೇ ತಮ್ಮದಾಗಿಸಿ ಕೊಂಡ ಈ ಜನರೊಂದಿಗೆ ಬೆರೆತಿದ್ದರೆ ತಾನೂ ಅವರಂತೆಯೇ ಆಗಬೇಕಾದೀತಲ್ಲವೆ !

– "ನೋಡಪ್ಪಾ ನಿನ್ನ ಕೈಯಾಗ ಇರೋದೊಂದು ಬೀದಿವಾದ್ಯ. ಅವರು ಹಿಡಿದಿರೋದೂ ಅದೇ. ಅವರೆಲ್ಲ ಕೂರೋದೇ ಅಲ್ಲಿ. ಅದಕ ನೀನು ಇಲ್ಲೆಲ್ಲ ಹೀಂಗ ಗಲಾಟಿ ಮಾಡಬ್ಯಾಡ. ಈವತ್ತೇನೋ ನಾನಿದ್ದೆ, ಅಡ್ಡ ಬಂದೆ, ಆತು. ಇಲ್ಲಂದಿದ್ರ ನಿನ್ನ ಪಾಡೇನಾಗ್ತಿತ್ತು ? ಯಾರಾದ್ರೂ ತಲೆ ಕೆಟ್ಟಾಂವ ನಿನ್ನ ಮೂತಿಮ್ಯಾಲೆ ಬಾರಿಸಿಬಿಡಾಂವ. ನಾನೇ ನಿನ್ನ ಜಗಾದಾಗಿದ್ದಿದ್ರೆ ಇವರನ್ನ ಇಲ್ಲೇ ಉಣ್ಣಾಕ ಬಿಟ್ಟು ನಾ ಮನೀಗೆ ಹೋಗಿ ಅಲ್ಲಿ ಉಣ್ತಿದ್ದೆ. ನೀನು ಮಾಡಬೇಕಾದ್ದೂ ಅದೇ ನೋಡಪಾ ! ಇನ್ನು ನೀನು ಯೋಚನೆಮಾಡಿ ನಿನಗ ಹ್ಯಾಂಗನಿಸ್ತದೆ, ಹಾಂಗ ಮಾಡು."

ಮಾಗಿದ ತಿಳುವಳಿಕೆಯ ವೃದ್ಧರು ನುಡಿದ ನುಡಿಗಳವು.

*ನುಡಿದರೆ ಮುತ್ತಿನ ಹಾರದಂತಿರಬೇಕು.*
*ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.*
*ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.*
*ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು.*
*ನುಡಿಯೊಳಗಾಡಿ ನಡೆಯದಿದ್ದರೆ*
*ಎಂತೊಲಿವ ನಮ್ಮ ಕೂಡಲ ಸಂಗಮದೇವಾ ॥*

ನರಸಿಂಹ ತನ್ನ ಜತೆಯವರನ್ನು ಅಲ್ಲೇ ಬಿಟ್ಟು ಹಸಿದ ಹೊಟ್ಟೆಯಲ್ಲೇ ನೇರವಾಗಿ ಯಜಮಾನರ ಮನೆಗೆ ಬಂದು ಬಿಟ್ಟನು.

– "ಅಯ್ಯಾ, ನನಗೆ ಅಪ್ಪಣೆ ಕೊಡಿ, ನಾನು ಈ ಹೊತ್ತಿನಿಂದ ಇಲ್ಲಿಯ ಕೆಲಸ ಬಿಡ್ತಿದೀನಿ."

ವೆಂಕಟಪ್ಪನವರಿಗೆ "ಈ ಹುಡುಗ ಸೂಕ್ಷ್ಮ ಮನಸ್ಸಿನವ" ಅನ್ನುವದು ಗೊತ್ತಿತ್ತಲ್ಲವೇ ! "ಏನೋ ಆಗಿರಬೇಕು ಮದಿವಿ ಮನ್ಯಾಗೆ, ಹುಡುಗನ ಮನಸ್ಸಿಗೆ ನೋವಾಗಿದೆ. ಅದಕ ಹೀಂಗಾಡ್ತಾನೆ" ಎಂದು ಅವರು ಊಹಿಸಿದರು.

– "ಯಾಕೋ ನರಸಿಂಹ, ಏನಾಯಿತು ? ಅಂಥದ್ದೇನು ನಡೀತು? ಸರಿಯಾಗಿ ಪೂರ್ತಿ ಹೇಳಪಾ!"

ಹುಡುಗ ದೇವಸ್ಥಾನದಲ್ಲಿ ನಡೆದ ಸಂಗತಿಯನ್ನು ವಿವರವಾಗಿ ಹೇಳಿದನು. "ಹೀಂಗ?" ಎಂದು ಅವರು ನಕ್ಕರು. ಅವರಿಗೆ ಅದು ನಗುವ ವಿಷಯವೇ. ಏಕೆಂದರೆ ಬ್ಯಾಂಡ್‌ಸೆಟ್‌ನ ವಾದ್ಯಗಾರರು ಹಾಗೆ ಊಟ ಮಾಡಿಕೊಂಡು ಬರುವುದು ಅವರಿಗೆ ಹೊಸದೇನಲ್ಲ.

– "ಅಲ್ಲಪಾ, ನೀನ್ಯಾಕೆ ಇದಕ್ಕೆ ಅಷ್ಟು ಮನಸ್ಸು ಕೆಡಿಸಿಕೋಬೇಕು? ಆತು, ನಿನಗೆ ಅಲ್ಲಿ ಉಣ್ಣಾಕೆ ಮನಸ್ಸಿರಲಿಲ್ಲ, ಬಿಡು. ಸೀದಾ ಮನೀಗೆ ಬಂದು ಇಲ್ಲಿ ಊಟ ಮಾಡಬಹುದಲ್ಲ ! ಅಲ್ಲಿ ಉಣ್ಣಾಕೆ ಮನಸಿದ್ದವರು ಅಲ್ಲಿ ಉಣ್ಣಲಿ ಬಿಡು, ನೀನ್ಯಾಕೆ ಕಾಳಜಿ ಮಾಡ್ತೀ ? ನಾನಾಗಿದ್ದರೆ ಅವರನ್ನೆಲ್ಲ ಅಲ್ಲೇ ಬಿಟ್ಟು ಮನೇಗೆ ಬಂದು ಇಲ್ಲಿ ಉಣ್ತಿದ್ದೆ. ನೀನಿನ್ನೂ ಸಣ್ಣ ಹುಡುಗ. ನಿನಗೆ ಗೊತ್ತಾಗೋದಿಲ್ಲ ಇದೆಲ್ಲ. ಅಲ್ಲಿ ಸಿಟ್ಟು ಮಾಡಾಕ ಹೋಗಿ ಭಾಳ ತಪ್ಪು ಮಾಡಿದಿ. ಬಿಡು ಹೋಗಲಿ."

– "ಇಲ್ಲ ಅಯ್ಯ, ನಾನು ತೀರ್ಮಾನ ಮಾಡಿ ಬಿಟ್ಟಿದೀನಿ. ನನಗೆ ಈ ಬ್ಯಾಂಡ್‌ಸೆಟ್‌ನ ಕೆಲಸಾ ಸಾಕು. ನಾ ಬಿಡತೇನಿದನ್ನ."

– "ಆ ವಿಷಯಾ ಸದ್ಯಕ್ಕಿರಲಿ, ಈಗ ನೀನು ಒಳಗೆ ನಡಿ, ಊಟ ಮಾಡು"

ಆದರೆ ಹುಡುಗ ಊಟಕ್ಕೆ ಹೋಗಲಿಲ್ಲ. ತಾನು ಈ ಬ್ಯಾಂಡ್‌ಸೆಟ್ ಬಿಡುತ್ತೇನೆಂಬ ನಿರ್ಧಾರ ಮಾಡಿದ ಮೇಲೆ ತನಗೆ ಇಲ್ಲಿ ಊಟ ಮಾಡುವ ಹಕ್ಕು ಏನಿದೆ ? ಊಹುಂ, ಇಲ್ಲ!

ಆದಿನ ಮಧ್ಯಾಹ್ನ ನರಸಿಂಹ ಊಟ ಮಾಡಲೇ ಇಲ್ಲ.

ರಾತ್ರಿಯೂ ನರಸಿಂಹ ಊಟಕ್ಕೆ ಬಾರದ್ದು ನೋಡಿ ವೆಂಕಟಪ್ಪನವರ ಮಡದಿಗೆ ತಡೆಯಲಾಗಲಿಲ್ಲ. ಹುಡುಗನ ಬಗ್ಗೆ ತುಂಬಾ ಮಮತೆ ಆಕೆಗೆ.

– "ಬಾರೋ ನರಸಿಂಹ, ಹೀಂಗೆ ಹಠಾ ಹಿಡೀ ಬ್ಯಾಡ. ಹೀಂಗೆಲ್ಲ ಉಪವಾಸ ಇರಬಾರದಪ್ಪಾ ! ನೋಡು, ನೀನು ಊಟ ಮಾಡಲಿಲ್ಲಂದರ ಇಕಾ, ನಾನೂ ಊಟ ಮಾಡೋದಿಲ್ಲ."

ಆಕೆ ಅದನ್ನು ಬರೀಮಾತಿಗೆ ಅಂದಿದ್ದಲ್ಲ, ಹಾಗೆ ನಡೆದುಕೊಳ್ಳುವ ಗಟ್ಟಿ ಮನಸ್ಸೂ ಇತ್ತು. ಇದು ನರಸಿಂಹನಿಗೆ ತಿಳಿದೂ ಇತ್ತು. ಆ ತಾಯಿಯ ಪ್ರೀತಿಯ ಮಾತಿಗೆ ಕಟ್ಟು ಬಿದ್ದು ಅವನು ಊಟಕ್ಕೆ ಎದ್ದನು.

ಬ್ಯಾಂಡ್‌ಸೆಟ್ ಬಿಡುವ ಹುಡುಗನ ನಿರ್ಧಾರ ಮಾತ್ರ ಅಚಲವಾಗಿತ್ತು. ವೆಂಕಟಪ್ಪನವರ ಯಾವುದೇ ಸಮಜಾಯಿಷಿಯೂ ಅವನನ್ನು ಕದಲಿಸಲಾಗಲಿಲ್ಲ. ಅವರ ಮಡದಿಯ ಮಾತುಗಳಿಗೂ ನರಸಿಂಹ ತನ್ನ ನಿರ್ಧಾರವನ್ನು ಬದಲಿಸಲಿಲ್ಲ.

❑

ಚರಣ 4

# ಕಂಪನಿ ನಾಟಕಗಳ ಕಂಪನಿಯಲ್ಲಿ

"ಆಯ್ತಪ್ಪಾ ತಮ್ಮ, ನೀ ಇನ್ನ ನಮ್ಮ ಬ್ಯಾಂಡ್‌ಸೆಟ್‌ನಲ್ಲಿ ಕೆಲಸಾ ಮಾಡೋದಿಲ್ಲಂತೀ, ಬ್ಯಾಡಬಿಡು. ಆದರೆ ದುಡೀಲಿಲ್ಲ ಅಂದ್ರೆ ನನ್ನ ಮನೆಯಾಗೆ ಉಣ್ಣೋದಿಲ್ಲ ಅಂತನೂ ಅಂತೀಯ. ಹೀಂಗಂದ್ರೆ ಹ್ಯಾಂಗ?"

– ಎರಡು–ಮೂರು ದಿನಗಳು ಕಳೆದ ನಂತರ ವೆಂಕಟಪ್ಪ ಮಾಸ್ತರು ಹುಡುಗನ ಬಗ್ಗೆ ತೀವ್ರ ಕಾಳಜಿಯಿಂದ ಅವನನ್ನು ಕೇಳಿದರು. ಹುಡುಗ ಖಾನಾವಳಿಯಲ್ಲಿ ಉಣ್ಣುತ್ತಿದ್ದನು. ತನ್ನ ದುಡಿತ ಈ ಮನೆಗೆ ಅಲ್ಲವೆಂದ ಮೇಲೆ ಹೇಗೆ ಇಲ್ಲಿ ಊಟ ಮಾಡುವುದು ?

– "ಇಲ್ಲ ಅಯ್ಯಾ, ನಾನು ಬ್ಯಾರೆ ದಾರಿ ನೋಡ್ಕೋ ಬೇಕಂತಿದೀನಿ."

– "ಬ್ಯಾರೆ ದಾರಿ ಅಂದರೆ ಯಾವ ದಾರೀನೋ ತಮ್ಮಾ, ಮುಂದೆ ಏನು ಮಾಡಬೇಕಂತಿದೀ?"

"ಊರಾಗೆ ಸುತ್ಮುತ್ತ ನಾಟಕಗಳು ನಡೀತಾವಲ್ಲ ಅಯ್ಯ, ಅವಕ್ಕೆ ನಾನು ವಾದ್ಯ ನುಡಿಸ್ತೀನಿ, ಹೆಂಗೋ ನಡೀತದೆ".

"ಅಲ್ಲೋ, ಆತು, ನಾಟಕಗಳಿಗೆ ನೀ ವಾದ್ಯ ನುಡಿಸ್ತೀ, ದುಡ್ಡು ಸಿಕ್ಕೀತು. ಆದರೆ ವರ್ಷದಾಗೆ ಎಷ್ಟು ನಾಟಕಗಳು ಆಗ್ತಾವಪ್ಪ ? ಅದರಾಗೇ ಹೆಂಗೆ ಬದುಕು ಮಾಡ್ತೀಯೋ ?"

"ನೋಡೋಣ ಅಯ್ಯ, ಹೆಂಗೋ ಆಗ್ತದೆ."

ವೆಂಕಟಪ್ಪನವರಿಗೆ ಹಾಗೂ ಅವರ ಮಡದಿಗೆ ಖಚಿತವಾಯಿತು. ಈ ಹುಡುಗ ಮೊಂಡ, ಅವನು ತೀರ್ಮಾನ ಮಾಡಿದರೆ ಆಗೇ ಹೋಯಿತು– ಎಂದು.

"ಆಯ್ತು, ಹಾಂಗೇ ಮಾಡು, ಆದರೆ ನನ್ನ ಮನೆಯಾಗೆ ಊಟ ಮಾಡೋದು ಬಿಡಬೇಡ. ನಿನ್ನ ದಾರಿ ಸರಿ ಹೋಗೂತನಕನಾದರೂ ಇಲ್ಲಿ ಊಟ ಮಾಡ್ತಿರು. ನೀನೇನಾರ ಇಲ್ಲ ಅಂದ್ರೆ ನೋಡು, ನಾನೂ ಊಟ ಮಾಡೋದಿಲ್ಲ." – ಅಯ್ಯನವರ ಮಡದಿಯ ಮಮತೆಯ ಒತ್ತಾಯ.

"ಆಯ್ತು ಅಮ್ಮ, ಊಟ ಮಾಡ್ತೀನಿ. ಆದರೆ ಒಂದು ಕಂಡೀಷನ್ನು. ನಾನು ಇಲ್ಲಿ ಊಟಮಾಡುವದಕ್ಕೆ ನೀವು ದುಡ್ಡು ತಗೋಬೇಕು. ಹಾಂಗಿದ್ರೆ ಊಟ ಮಾಡ್ತೀನಿ." – ನರಸಿಂಹನೆಂದನು.

ಸರಿ, ತೀರ್ಮಾನವಂತೂ ಆಯಿತು. ಆದರೆ ಹುಡುಗ ಮುಂದೆ ತನ್ನ ಮುಂದಿನ ದಾರಿಗೆ ಅಣಿಯಾಗಬೇಕಲ್ಲ !

ಹಳ್ಳಿಗಳಲ್ಲಿ ನಾಟಕಗಳ ಪ್ರದರ್ಶನವಾಗುವ ಮೊದಲು ತಿಂಗಳುಗಟ್ಟಲೆ ತಾಲೀಮು ನಡೆಯುತ್ತಿತ್ತು. ಹಳ್ಳಿಯ ಜನಗಳೇ ಆಡುವ ನಾಟಕಗಳಲ್ಲವೇ? ಅವರ ದೈನಂದಿನ ಕೆಲಸಕಾರ್ಯಗಳು ಮುಗಿದು ರಾತ್ರಿಯ ಊಟ ಮುಗಿದ ನಂತರ ರಾತ್ರಿ ಹತ್ತು ಗಂಟೆಯ ತರುವಾಯ ನಾಟಕದ ಪ್ರಾಕ್ಟೀಸು ಶುರು. ನಾಟಕದ ಮಾಸ್ತರು – ಅಂದರೆ ಈಗಿನ ನಿರ್ದೇಶಕರು – ಬಂದು ಅವರಿಂದ ಪ್ರಾಕ್ಟೀಸು ನಡೆಸಲ್ಪಡಬೇಕು.

ನಾಟಕದ ಮಾಸ್ತರ ಅಂದರೆ ಹಾರ್ಮೋನಿಯಂ ಬಾರಿಸಲು ಬರಬೇಕು. ಹಳ್ಳಿಗಳಲ್ಲೆಲ್ಲಾ ಈ ಪೇಟೀ ಮಾಸ್ತರನಿಗೆ ನಾಲ್ಕೈದು ಹಾಡು ಬಾರಿಸಲು ಬಂದರೆ ಅವನು ಪಂಡಿತ. "ಹಳ್ಳಿ ಊರಿಗೆ ಹಚ್ಚಡದವನೇ ಗೌಡ" ಎಂದು ಹೇಳುತ್ತಾರಲ್ಲವೆ, ಹಾಗೆ.

ಅಸ್ಕಿಹಾಳ ಎಂಬುದೊಂದು ಹಳ್ಳಿ. ಅಲ್ಲಿ ನಾಟಕಗಳು ಸಾಧಾರಣವಾಗಿ ಹೆಚ್ಚು ಸಂಖ್ಯೆಯಲ್ಲಿ ಆಗುತ್ತಿದ್ದವು. ನರಸಿಂಹ ರಾತ್ರಿ ತನ್ನ ಸೈಕಲ್ ಮೇಲೇರಿ ತುಳಿದುಕೊಂಡು ಅಲ್ಲಿಗೆ ಹೋಗಿ ಅಲ್ಲಿಯ ನಾಟಕದ ಮಾಸ್ತರನ ಬಳಿ ಅವನೊಂದಿಗೆ ಕ್ಲಾರಿಯೋನೆಟ್ ತಾಲೀಮು ನಡೆಸುವ ಅವಕಾಶ ನೀಡಬೇಕೆಂದು ಕೇಳಿದನು.

"ಹೇ! ನಾಟಕಕ್ಕೆ ಬ್ಯಾಕ್‌ಗ್ರೌಂಡ್ ಕೊಡೊದೆಂದರೆ ಅದೇನು ಅಷ್ಟು ಸಲೀಸು ಅಂದುಕೊಂಡಿಯೇನು ? ಅದೇನೂ ಬ್ಯಾಂಡು ಬಾರಿಸಿಧಾಂಗಲ್ಲಪ್ಪ ! ನಾಟಕದಾಗೆ

ಸಂಗೀತ ಇರ್ತದೆ, ಗಾಯನ ಇರ್ತದೆ, ನಿನ್ನ ಸಿನಿಮಾ ಹಾಡಿನ ಹಾಂಗಲ್ಲ !" – ಮಾಸ್ತರನ ಹಾರಿಕೆಯ ಉತ್ತರ ಸಿದ್ಧವಾಗಿತ್ತು.

ಸಾಕಷ್ಟು ಮಾತು ಕತೆಗಳ ನಂತರವೂ ಮಾಸ್ತರ ಬಗ್ಗಲಿಲ್ಲ. ತಾಲೀಮು ನಡೆಯುವಲ್ಲಿ ಒಬ್ಬನು ಕುಳಿತಿದ್ದನು–ಇದನ್ನೆಲ್ಲ ಕೇಳುತ್ತಾ.

"ಅಲ್ಲಪಾ ಮಾಸ್ತರ, ಆ ಹುಡುಗ ಅಷ್ಟೊಂದು ಕೇಳಿಕೋತಾ ಇದಾನೆ. ಅವ ಏನು ನಿನ್ನ ಹತ್ತಿರ ದುಡ್ಡು ಕೇಳಿದನಾ, ಕಾಸು ಕೇಳಿದನಾ? ನಾಟಕಕ್ಕೆ ವಾದ್ಯ ಊದಲಾಕೆ ಅಪ್ಪಣೆ ಕೊಡೀ ಅಂತ ಕೇಳ್ತಾ ಇದಾನೆ, ಬಾರಿಸಲಿ ಬಿಡು, ಅದರಾಗೇನೈತಿ ?" ಎಂದು ಆ ಹಿರಿಯ ಸಲಹೆ ನೀಡಿದನು. ಊರಿನಲ್ಲಿ ಈ ಹಿರಿಯ ಸ್ವಲ್ಪ ತೂಕದ ಮಾತಿನ ವ್ಯಕ್ತಿ.

ಆಯಿತಲ್ಲ ! ಇನ್ನೇನು ? ಮಾಸ್ತರನಿಗೆ ಬೇರೆ ದಾರಿ ಇರಲಿಲ್ಲ. ಅವನು ಹಾಡು ಹೇಳುತ್ತಾ ಹಾರ್ಮೋನಿಯಂ ನುಡಿಸುತ್ತಾ ಹೋದಂತೆ. ನರಸಿಂಹ ತನ್ನ, ಕ್ಲಾರಿಯೋನೆಟ್ ಶೃತಿ ಮಾಡಿಕೊಂಡು ಅದರಂತೆಯೇ ಬಾರಿಸುತ್ತಾ ಹೋದನು.

ಮಾಸ್ತರನಿಗೆ ಅಚ್ಚರಿ. ಎಲ ಇವನ! ಏನು ಬರ್ತದೆ ಈ ಹುಡುಗನಿಗೆ ಅಂತ ಅಂದುಕೊಂಡರೆ, ಇವ ಏನು ಛಲೋ ಬಾರಿಸ್ತಾನ! "ಪರವಾಗಿಲ್ಲ ಹುಡುಗಾ, ಛಂದ ಬಾರಿಸ್ತೀ" ಎಂದು ಶಾಬಾಸ್‌ಗಿರಿ ಕೊಟ್ಟನು ಆ ಮಾಸ್ತರ.

ಹೀಗೆ ಪ್ರತಿದಿನ ರಾಯಚೂರಿನಿಂದ ಉಕ್ಕಿನ ಕುದುರೆಯ ಮೇಲೆ ಕುಳಿತು, ಬಗಲಿನಲ್ಲಿ ತನ್ನ ವಾದ್ಯದ ಚೀಲ ಹೊತ್ತು ಸವಾರಿ ಮಾಡುತ್ತ ಹುಡುಗ ಅಸ್ಕಿ ಹಾಳಕ್ಕೆ ರಾತ್ರಿ ಬರುವುದು, ಅಲ್ಲಿ ನಾಟಕ ತಂಡದೊಂದಿಗೆ ಹುಡುಗನ ಮತ್ತು ನಾಟಕ ಮಾಸ್ತರನ ಸಂಗೀತದ ಜುಗಲಬಂದಿ – ಹೀಗೆ ಸಾಗಿತು ಕಾಯಕ, ನಾಟಕದ ದಿನ ಸಮೀಪಿಸುವವರೆಗೂ – ನಾಟಕದ ದಿನವೂ ಬಂತು.

ಈ ಹೊತ್ತಿಗಾಗಲೇ ನರಸಿಂಹನಿಗೆ ಅರಿವಾಗಿತ್ತು – ಆ ಹಿರಿಯನ ಮಾತುಗಳನ್ನು ಯಾರೂ ತೆಗೆದು ಹಾಕುವಂತಿಲ್ಲ–ಎಂಬುದು. ಅದೇ ಹಿರಿಯನ ಮುಂದೆ ಹುಡುಗ ತನ್ನ ಮನವಿಯನ್ನು ಇಟ್ಟನು.

"ಯಜಮಾನರೆ ನಿಮ್ಮ ಈ ನಾಟಕದ ದಿನ ನನಗೆ ಕ್ಲಾರಿಯೋನೆಟ್‌ನಿಂದ ಬ್ಯಾಕ್‌ಗ್ರೌಂಡ್ ಸಂಗೀತ ಕೊಡಲಿಕ್ಕೆ ಅವಕಾಶ ಮಾಡಿಕೊಡ್ತೀರಾ ? ನೀವೇನೂ ನನಗೆ ಕೊಡೋದು ಬ್ಯಾಡ. ಹಂಗ ಬಾರಿಸ್ತೀನಿ."

ನಾಟಕದ ಮಾಸ್ತರನ ಬಳಿ ಇದೇ ಮನವಿಯನ್ನು ಇಟ್ಟಾಗ ಆತ ಅದನ್ನು ಪುರಸ್ಕರಿಸಿರಲಿಲ್ಲ. ನಾಟಕಕ್ಕೆ ಕ್ಲಾರಿಯೋನೆಟ್ ಬೇಡವೆಂದೂ ಅಲ್ಲ. ಆ ಮಾಸ್ತರನಿಗೆ ತನ್ನ ಕಡೆಯಿಂದೊಬ್ಬ ಬೇರೆ ವಾದಕನಿದ್ದನು. ಅವನನ್ನು ಕರೆತಂದರೆ ಅವನಿಗೆ ಸಿಗುವ ಸಂಭಾವನೆಯಲ್ಲಿ ಶೇಕಡಾವಾರು "ಕಮೀಷನ್" ಇವನಿಗೆ ಬರುತ್ತಿತ್ತು. ಅದಕ್ಕೀಗ ಖೋತಾ ಆಗಿಬಿಟ್ಟರೆ!

"ಆತಪ್ಪ ಅದಕ್ಕೇನು ಬಾರಿಸು. ಛಂದಬ್ಯಾರೆ ಬಾರಿಸ್ತೀ" ಹಿರಿಯನೆಂದನು.

"ಆದರೆ ಖಜಮಾನರೇ, ಮಾಸ್ತರರು ಬ್ಯಾಡಂತಾರೆ"

"ಏ! ಯಾವನಂವಾ ಬ್ಯಾಡನ್ನೋದು?" –ಹಿರಿಯರ ಹಳ್ಳಿಯ ಗತ್ತು ಮಾತನಾಡಿತ್ತು. – "ಲಾಸ್ಟ್ ಮಿನಿಟಿನಾಗೇನಾದರೂ ಅಂವಾ ಬ್ಯಾಡಂದ್ರ ನನಗ ಹೇಳು, ಒದ್ದು ಬಿಡ್ತೀನಂವಂಗೆ"

ನಾಟಕ ದಿನ ಬಂದಿತು, ನಾಟಕ ನಡೆಯಿತು. ಪ್ರದರ್ಶನದಲ್ಲಿ ಹಾಡು ಮತ್ತು ಹಾರ್ಮೋನಿಯಂ ಜೊತೆಗೆ ಕ್ಲಾರಿಯೋನೆಟ್‌ನ ಸಾಥ್ ನೀಡುವುದಂತೂ ಇದ್ದೇ ಇತ್ತು. ಪ್ರತಿ ದೃಶ್ಯದಿಂದ ದೃಶ್ಯಕ್ಕೆ ಮಧ್ಯೆ ಅಂತರವಿತ್ತಲ್ಲವೆ! ಆ ಮಧ್ಯಂತರಗಳಲ್ಲಿ ನರಸಿಂಹನ ಪ್ರತ್ಯೇಕ ವಾದನವೂ ಸೇರಿತು. ಶಾಸ್ತ್ರೀಯ ಸಂಗೀತದ ಅಲ್ಪಸ್ವಲ್ಪ ಅರಿವಿತ್ತಲ್ಲವೆ ! ಅದರ ಆಧಾರಿತವಾಗಿ ನುಡಿಸಿದ ವಾದನವು ನೋಡುಗರನ್ನು ವಿಶಿಷ್ಠ ಅನುಭವದ ಕಡೆಗೊಯ್ದಿತ್ತು. ನಾಟಕದ ಓಟ, ಭಾವಗಳ ಬದಲಾವಣೆಗಳು, ರಸಪರಿವರ್ತನೆ – ಎಲ್ಲದರ ಪರಿಚಯವೂ ಹುಡುಗನಿಗೆ ಇತ್ತಲ್ಲವೇ! ಆ ಅರಿವಿನಿಂದ ಸಂದರ್ಭಕ್ಕೆ ತಕ್ಕ ಹಾಗೆ ವಾದ್ಯ ನುಡಿಸುತ್ತಿದ್ದನು. ಹುಡುಗ. ಹಳ್ಳಿಯ ಜನರಿಗೆ ಅದ್ಭುತ ರಸಾನುಭವ. ಹುಡುಗನತ್ತ "ವಾಹ್! ಶಾಭಾಷ್"ಗಳ ವೃಷ್ಟಿ.

ಮಾರನೇ ಬೆಳಿಗ್ಗೆ ನಾಟಕ ಮುಗಿದ ನಂತರ ಪ್ರೇಕ್ಷಕರು ನಾಟಕದ ಬಗ್ಗೆ ಅಲ್ಲ ಮಾತನಾಡುತ್ತಿದ್ದದ್ದು, ಹುಡುಗನ ವಾದನದ ಬಗ್ಗೆ, ಮೋಡಿ ಮಾಡಿತ್ತು ಕ್ಲಾರಿಯೋನೆಟ್.

"ಪರವಾಗಿಲ್ಲ ಬಿಡಪ್ಪಾ! ಏನು ಬಾರಿಸಿದ್ನೋ ಆ ಹುಡುಗಾ! ಅಷ್ಟು ಛಂದ ಕೇಳತಿತ್ತು ಅಂವಾ ಬಾರಿಸೋದು! ಅಬಾಬಾಬಾ!"

ನರಸಿಂಹ ಆ ಹಳ್ಳಿಯಲ್ಲಿ "ಜಗತ್ಪ್ರಸಿದ್ಧನಾಗಿ" ಬಿಟ್ಟಿದ್ದನು. ಅವನ ಖುಷಿ ಕೇಳಬೇಕೆ! ಮನದಲ್ಲೊಂದು ರೀತಿಯ ಸಾರ್ಥಕ್ಯ ಭಾವ. ಮೊದಲಬಾರಿಗೆ ರೆಕ್ಕೆ ಬಡಿದು ಸಲೀಸಾಗಿ ಹಾರಿದ ಹಕ್ಕಿಯಾಗಿದ್ದ ಆತ.

"ಏನೂ ಕೊಡೋದು ಬ್ಯಾಡ" ಅಂತೇನೋ ಹೇಳಿದ್ದನು ನರಸಿಂಹ. ಆದರೆ ತಂಡದವರು ಬಿಡಬೇಕಲ್ಲ! ಹುಡುಗನ ಕೈಗೆ ಇಪ್ಪತ್ತೈದು ರೂಪಾಯಿ ಇಟ್ಟರು ಸ್ವತಂತ್ರವಾಗಿ ದುಡಿದು ಗಳಿಸಿದ ಹಣ ಅದು.

ಸೀದಾ ರಾಯಚೂರಿಗೆ ಮರಳಿದ ನರಸಿಂಹ ಅದನ್ನು "ತಾಯಿಯ" ಕೈಗೆ ಇಟ್ಟನು.

"ಇಟ್ಟುಕೊಳ್ಳೋ ನೀನು, ನನಗೆ ಬ್ಯಾಡಿದು" – ಹುಡುಗ ಹಣ ಕೊಡುತ್ತೇನೆಂದುದಕ್ಕೆ ಆಗಲಿ ಎಂದಿದ್ದರೂ ಆ ತಾಯಿಗೆ ಸಂಕೋಚ. ತಾನು ಹಾಕಿದ ಊಟಕ್ಕೆ ದುಡ್ಡು ತೆಗೆದುಕೊಳ್ಳುವುದೆ!

"ಇಲ್ಲಮ್ಮ ತಗೋಳ್ಳಿ, ನೀವು ತಗೊಳ್ಳಿಲ್ಲಂದರೆ ನಾನು ಈ ಮನೆಯಲ್ಲಿ ಊಟಾನೇ ಮಾಡೋದಿಲ್ಲ".

ಏನಂದಾರು ಅವರು!

ಹೀಗೆ ಸುರು ಹಚ್ಚಿದ ಹುಡುಗ ಅಂದಿನಿಂದ ಬೇರೆ ಬೇರೆ ಕಡೆ ನಾಟಕಗಳಿಗೆ ಕ್ಲಾರಿಯೋನೆಟ್ ವಾದಕನಾಗಿ ಹೋಗ ಹತ್ತಿದ. ಒಂದೊಂದಾಗಿ ನಾಟಕಗಳಿಗೆ ಸನ್ನಿವೇಶಕ್ಕನುಗುಣವಾಗಿ ನಾದ ಹೊಮ್ಮಿಸುವ ಕಲೆ ಅವನಿಗೆ ಕರಗತವಾಯಿತು. ಜೊತೆಗೆ ಒಂದು ಬಾರಿ ಕೇಳಿದ ಕೂಡಲೇ ಅರಿವಿಗೆ ಸೆಳೆದುಕೊಳ್ಳಬಲ್ಲವನಾಗಿದ್ದನು ಹುಡುಗ.

ಆಗಿನ ಕಾಲದಲ್ಲಿ ಬ್ಯಾಂಡ್‌ಸೆಟ್‌ನಲ್ಲಿ ಬಾರಿಸುವವರಿಗಿಂತ ನಾಟಕಗಳಿಗೆ ವಾದನ ನೀಡುವವರಿಗೆ ಗೌರವ ಹೆಚ್ಚು ಇತ್ತು. ಅವರನ್ನು ಮಾಸ್ತರರೆಂದೇ ಕರೆಯುತ್ತಿದ್ದರು. ನರಸಿಂಹ ಈಗ ನರಸಿಂಹಮಾಸ್ತರನಾಗಿದ್ದನು. ಹುಡುಗ ಮಾವನಿಗೆ ಈ ಸುದ್ದಿ ಮುಟ್ಟಿತು. ಅವರಿಗೋ! ಒಂದು ರೀತಿ ಅನಿರ್ವಚನೀಯ ಆನಂದ – ತನ್ನ ಸೋದರರಳಿಯ ಹೆಸರು ಗಳಿಸುತ್ತಿದ್ದದ್ದನ್ನು ಕಂಡು.

ಹುಡುಗನ ಸಂಗೀತದ ಹಸಿವು ಬೆಂಕಿಗೆ ತುಪ್ಪಸುರಿದಂತೆ ಹೆಚ್ಚಾಗುತ್ತಿತ್ತು. ಆದರೆ ಮಾವನಿಗೆ, ಹುಡುಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂಬ ಯೋಚನೆ ಬಂದಿತ್ತು. ಹದಿನೈದು ವರ್ಷದವನಿದ್ದಾಗ ವೆಂಕಟಪ್ಪನವರಲ್ಲಿಗೆ ಒಂದು ಸೇರಿದ ಹುಡುಗ ಈಗ ಇಪ್ಪತ್ತೆರಡು – ಇಪ್ಪತ್ತಮೂರು ವರ್ಷವಯಸ್ಸಿನವನಾಗಿದ್ದನು.

ಶಿವಮ್ಮ ಹುಟ್ಟುವಾಗ ಆಕೆಯ ತಾಯಿಯು ಹೆರಿಗೆ ಮತ್ತು ತಾಯ್ತನದ ಶುಶ್ರೂಷೆಯನ್ನು ಮಾಡಿದ್ದವರು ನರಸಿಂಹನ ತಾಯಿಯೇ. ಆಗ ಆಕೆ ತನ್ನಣ್ಣನಿಗೆ

ಹೇಳಿದ್ದರಂತೆ – "ನೋಡಪ್ಪಾ, ನಾನಿನ್ನು ಮತ್ತೆ ಮಟಮಾರಿಗೆ ಬರ್ತೀನೋ ಇಲ್ಲವೋ ಗೊತ್ತಿಲ್ಲ, ಆದರೆ ನನ್ನದೊಂದು ಆಸೆ ಇದೆ – ಈ ಮಗುವಿನ ಮದುವೆ ನನ್ನ ಮಗ ನರಸಿಂಹನ ಕೂಡೇ ಮಾಡಬೇಕು" ಅಂತ.

ಅದು ನೆನಪಿತ್ತಲ್ಲವೆ ಮಾವನವರಿಗೆ ! ಹುಡುಗನನ್ನು ಕೇಳಿದರು. ಹುಡುಗ ಒಪ್ಪಿದನು. ಆದರೆ ಅಲ್ಲಿಯೂ ಸ್ವಾಭಿಮಾನ ತನ್ನ ಹೆಡೆಯತ್ತಿತ್ತು. ಮುಂದೆಂದೋ ಒಂದು ದಿನ "ಅವನಿಗೇನಿತ್ತು? ನಾವೇ ಮುಂದೆ ನಿಂತು ಅವನಿಗೆ ಎಲ್ಲ ಕೊಟ್ಟು ಮದಿವಿ ಮಾಡಿದಿವಿ" ಎಂದು ಅನ್ನಬಾರದಲ್ಲ !

"ಆಗಲಿ ಮಾವ! ಆದರೆ ನನ್ನದೊಂದು ಶರತ್ತು. ನನ್ನ ಮದಿವಿ ವಡವಾಟಿಯಲ್ಲಿಯೇ ಆಗಬೇಕು. ಮದಿವೀಲಿ ನೀವೇನು ಕೊಡ್ತೀರಿ ಬಿಡ್ತೀರಿ ನಾನು ಕೇಳೋದಿಲ್ಲ. ಆದರೆ ನನ್ನ ಹಿರಿಯರೆಲ್ಲರ ಮದಿವೀನೂ ನಮ್ಮೂರಿನ ವೆಂಕಟರಮಣಸ್ವಾಮಿಯ ದೇವಸ್ಥಾನದಲ್ಲಿಯೇ ಆಗಿರೋದು. ನಾನೂ ಅಲ್ಲಿಯೇ ಮದಿವಿ ಮಾಡಿಕೊಳ್ಳಾವನು. ಹಾಂಗಿದ್ರೆ ಅಡ್ಡಿ ಇಲ್ಲ" – ಎಂದನು ಹುಡುಗ.

ಮಾವನವರಿಗೆ ಪೇಚಾಟ.

"ಅಲ್ಲೋ – ಅಲ್ಲೇನು ಮದುವಿ ಮಾಡಿಕೋತೀಯೋ? ನಿನ್ನ ಹತ್ತಿರ ದುಡ್ಡಿಲ್ಲ, ಕಾಸಿಲ್ಲ. ಬಂದ ಜನಕ್ಕ ಊಟ–ಉಪಚಾರ ಮಾಡಬೇಕಲ್ಲೋ ? ಮಟಮಾರ್‍ಯಾಗಾದ್ರೆ ನಾವು ಇದ್ದೀವಿ, ಎಲ್ಲ ಆಗ್ತದೆ. ನೀ ನೋಡಿದ್ರೆ ವಡವಾಟ್ಯಾಗೇ ಮದುವಿ ಆಗ ಬೇಕಂತ ಹಟಾ ಹಿಡಿದೀದಿ, ಹಿಂಗಾದ್ರೆ ಹ್ಯಾಂಗ?"

"ಅದೆಲ್ಲ ನನಗೆ ಗೊತ್ತಿಲ್ಲ. ಮದುವಿಗೆ ಬಂದ ಜನಕ್ಕೆ ಊಟ–ಉಪಚಾರ ಆಗ್ತದೋ ಇಲ್ಲೋ ! ನಾನಂತೂ ವಡವಾಟ್ಯಾಗೇ ಮದವಿ ಮಾಡಿಕೊಳ್ಳಾವನು."

ಇನ್ನೇನು ! ಒಪ್ಪದೆ ಬೇರೆ ದಾರಿ ಎಲ್ಲಿದೆ !

ನರಸಿಂಹ ವಡವಾಟಿಗೆ ಬಂದು ಅಣ್ಣನ ಕೈಗೆ ಒಂದುನೂರು ನೂರೈವತ್ತು ಕೊಟ್ಟು ಮನೆಗೆ ಸುಣ್ಣ–ಬಣ್ಣ, ತಳಿರುತೋರಣ, ಅಲಂಕಾರ ಮಾಡಿಸಲು ಹೇಳಿದನು.

ದೇವಸ್ಥಾನದಲ್ಲಿ ಸರಳವಾಗಿ ಮದುವೆ ನಡೆದೇ ಹೋಯಿತು.

ನರಸಿಂಹಲುರವರ ಸಂಸಾರ ಜೀವನ ಆರಂಭವಾಯಿತು. ಶಿವಮ್ಮನವರೊಂದಿಗೆ. "ನಾನು ಬಡವಿ, ಆತ ಬಡವ, ಒಲವೆ ನಮ್ಮ ಬದುಕು" –

ಬದುಕು ಸಾಗಿತು. ನರಸಿಂಹಲುರವರಿಗೆ ಹೇಗೂ ನಾಟಕಗಳಲ್ಲಿ ಸಂಗೀತ ನೀಡುವುದರಿಂದ ಹೇಗೂ ಸಂಪಾದನೆಯಾಗುತ್ತಿತ್ತಲ್ಲ ! ಹೇಗೋ ಶಾಕಾಯ ಬವಣಾಯ ಖರ್ಚು ತೂಗುತ್ತಿತ್ತು.

ಜನರಿಗೆ ನಾಟಕ ಎಂದರೆ ತುಂಬಾ ಆಸಕ್ತಿ ಇದ್ದರೂ ಅದರಲ್ಲಿ ಅಭಿನಯಿಸುವ ನಟಿಯರನ್ನೇನೂ ಗೌರವದಿಂದ ಕಾಣುತ್ತಿರಲಿಲ್ಲ. ಅವರನ್ನು ತೀರಾ ಕೀಳಾಗಿ ಕಾಣುತ್ತಿದ್ದ ಕಾಲವದು. ನಾಟಕ ತಂಡದ ಗಂಡಸರೂ ಸೇರಿದಂತೆ ಎಲ್ಲರೂ ಸ್ತ್ರೀಯರ ಬಗ್ಗೆ ತುಂಬಾ ಅಸಡ್ಡೆಯಿಂದ ವರ್ತಿಸುತ್ತಿದ್ದರು. ಬಹಳಷ್ಟು ನಟಿಯರಿಗೆ ಅಭಿನಯ ಅವರ ದಿನನಿತ್ಯದ ಊಟದ ಪ್ರಶ್ನೆಯಾಗಿತ್ತು. ಹಾಗಾಗಿ ಅವರು ತಮ್ಮ ಮನಸ್ಸಿಗೆ ವಿರೋಧವಾಗಿ ಅದನ್ನು ಸಹಿಸಿಕೊಳ್ಳಲೇಬೇಕಿತ್ತು. ಅಂತಹ ಅಭಾಗಿನಿಯರಿಗೆ ನರಸಿಂಹಲುರವರಂಥವರು ದೈವೀಕ ಪುರುಷರಂತೆ ಕಂಡಲ್ಲಿ ಅದು ದೊಡ್ಡದಲ್ಲ. ದೊಡ್ಡದು ಯಾವುದು ಗೊತ್ತೆ ? ನರಸಿಂಹಲುರಂಥವರು ಅಲ್ಲಿ ಇದ್ದದ್ದು. ನರಸಿಂಹಣ್ಣನವರು ಒಬ್ಬರು ನಮ್ಮನ್ನು ತುಂಬಾ ಮರ್ಯಾದೆ ಕೊಟ್ಟು ಮಾತನಾಡಿಸುವವರು ಎಂದು ಅವರೆಲ್ಲ ತಂತಮ್ಮ ಬದುಕಿನುದ್ದಕ್ಕೂ ನೆನಪಿಸಿಕೊಂಡು ಹೇಳುತ್ತಿದ್ದರಂತೆ.

ನರಸಿಂಹಲುರವರ ನಾಟಕದ ಬದುಕಿನಲ್ಲಿ ನೆನಪಿನಲ್ಲಿ ಉಳಿಯುವ ಘಟನೆಯೊಂದು ನಡೆದಿತ್ತು. ಅದನ್ನು ನೆನೆಸಿಕೊಂಡರೆ ಅವರಿಗೆ ಈಗಲೂ "ಅದು ನಿಜವಾಗಿಯೂ ನಡೆದದ್ದು ಹೌದೆ!" ಎಂದು ಅನ್ನಿಸುತ್ತದೆಯಂತೆ.

ರಾಯಚೂರಿನಿಂದ ಸಾಕಷ್ಟು ದೂರದ ಊರಿನ ಪಕ್ಕದಲ್ಲೊಂದು ಹಳ್ಳಿ. ಅಲ್ಲಿ ನರಸಿಂಹಲುರವರು ನಾಟಕಕ್ಕೆ ಸಂಗೀತ ನೀಡುವುದಿತ್ತು. ಪ್ರತಿದಿನವೂ ಅಲ್ಲಿಗೆ ಹೋಗಿ ತಾಲೀಮು ನಡೆಸುವ ಪರಿಪಾಟವಿತ್ತು.

ನಾಟಕದ ದಿನ ರಾಯಚೂರಿನಿಂದ ಬಸ್ಸಿನಲ್ಲಿ ಹೊರಟು ಕೊನೆಯ ನಿಲ್ದಾಣದಲ್ಲಿ ಇವರು ಇಳಿದರು. ಅಲ್ಲಿಂದ ಹಳ್ಳಿಯ ದಾರಿ. ಆಗಿನ ಕಾಲ, ಅಂದರೆ 1965–66ರ ಆಸುಪಾಸು –ಆಗ ಈಗಿನ ಹಾಗೆ ಹಳ್ಳಿಗಳಿಗೆ ಬಸ್‌ಸೇವೆ ಇರಲಿಲ್ಲ. ಇದು ಆಗ ಎಲ್ಲ ಹಳ್ಳಿಗಳಲ್ಲೂ ಇದ್ದ ಪರಿಸ್ಥಿತಿ. ನಾವು ಹೋಗುವ ಹಳ್ಳಿಯ ದಾರಿಯಲ್ಲಿ ಚಕ್ಕಡಿ ಗಾಡಿಗಳು ಸಿಕ್ಕಿದಲ್ಲಿ ಆ ಗಾಡಿಯವ ನಮ್ಮನ್ನೂ ಕೂರಿಸಿಕೊಂಡು ಹೋಗಲು ಒಪ್ಪಿದಲ್ಲಿ ಮಾತ್ರ ನಮಗೆ ಸುಖ ಪ್ರಯಾಣ, ಇಲ್ಲದಿದ್ದರೆ ಜೈ ವಿನೋಬಾಜಿ!.... ಪದ ಕುಸಿಯ ನೆಲವಿಹುದು! ಆ ನೆಲ ತಗ್ಗಿನಲ್ಲಿದ್ದು ಮುಗ್ಗರಿಸಿದ್ದರೂ ಸರಿ, ನಮ್ಮ ರಾಜಧಾನಿ ಬೆಂಗಳೂರಿನ ವೇಗ

ನಿರೋಧಕ –ಅಂದರೆ ಸ್ಪೀಡ್ ಬ್ರೇಕರ್‌ನಂತೆ ಏರಿದ್ದು ಎಡವಿದರೂ ಸರಿ ! ನೆಲ ನೆಲವೇ ಅಲ್ಲವೆ!.

ನಮ್ಮ ಕಥಾನಾಯಕನಿಗೆ ಅಂದಿನ ದಿನ ಭವಿಷ್ಯದಲ್ಲಿ ವಾಹನಯೋಗ ಇರಲಿಲ್ಲ. ಸಾಯಂಕಾಲ, ಹಳ್ಳಿಗೆ ಏಳೆಂಟು ಮೈಲಿದೂರು – ಅಂದರೆ ಈಗಿನ ದೂರಮಾನದ ಪ್ರಕಾರ ಹದಿಮೂರು–ಹದಿನಾಲ್ಕು ಕಿಲೋಮೀಟರ್–ಸೀದಾ ದಾರಿಯಲ್ಲಿ ನಡೆದರೆ ಮಾತ್ರ, ಅಲ್ಲಿಗೊಂದು ಕಾಲುದಾರಿಯಿತ್ತು –ಹತ್ತಿರದ ದಾರಿ. ಆದರೆ ನರಸಿಂಹಲುರವರಿಗೆ ಅದು ಹೊಸತು. ಅವರಿವರನ್ನು ಕೇಳಿಕೊಂಡು ಆ ದಾರಿಯಲ್ಲಿ ಸಾಗಿ ಒಂದು ಮೂರು–ನಾಲ್ಕು ಕಿಲೋಮೀಟರ್ ಸಾಗುವುದರೊಳಗೆ ತೇಜರಾಜ ಬೇಜಾರಾಗಿ ತನ್ನ ಮನೆಗೆ ಪಡುವಣ ಬಾಗಿಲಿಂದ ಹೊಕ್ಕು ಬಿಟ್ಟಿದ್ದ. ಮುಂದಿನ ದಾರಿ....... ಅಂದು ಹುಣ್ಣಿಮೆಯೋ, ಅಮಾವಾಸ್ಯೆಯೋ –ಆಗಂತೂ ಅವರಿಗೆ ಗೊತ್ತಿರಲಿಲ್ಲ. ಚಂದ್ರನಂತೂ ದರ್ಶನ ವಿತ್ತಿರಲಿಲ್ಲ. ಕತ್ತಲು–

ಹಾಗೂ ಹೀಗೂ ಸಾಗುತ್ತಾ, ಮುಳ್ಳು ಕಂಟಿಗಳ ಪೊದೆಗಳಿಗೆ ಮೈ ತಾಗುತ್ತಾ, ಆಯಾಸದಿಂದ ತೂಗುತ್ತಾ ನಡೆಯುತ್ತಿದ್ದ ನಮ್ಮ ಕಥಾನಾಯಕನ ಎದುರು ಇದ್ದಕ್ಕಿದ್ದಂತೆ ಇಬ್ಬರು ಧಡೂತಿಗಳು ಬಂದು ನಿಂತರು.

ಮನುಷ್ಯನ ಸ್ವಭಾವವನ್ನು ನೋಡಿ! ಸುತ್ತಲೂ ಏನೂ ಇಲ್ಲದಿದ್ದಾಗ, ಯಾರೂ ಇಲ್ಲದಿದ್ದಾಗ ಏನಾದರೂ ಭೂತ–ಪ್ರೇತವಿದ್ದೀತು! –ಎಂಬ ಭಯ. ಎದುರಿಗೆ ಕೊಲೆಗಡುಕ ಬಂದು ನಿಂತರೂ ಸಹ ಒಂದು ರೀತಿಯ ಧೈರ್ಯ.

ನರಸಿಂಹಲುರವರಿಗೆ ನಿರಾಳವಾಯಿತು. ಆದರೆ ಅದು ಬರಿಯ ಮೃಗಜಲ.

"ಏ, ಎನ್ನೈತಿ ನಿನ್ನ ಹತ್ತಿರ ? ತಗಿ ಎಲ್ಲಾ"

ಘಮ್ಮೆಂದು ಮೂಗಿಗೆ ಅಡರಿದ ಸುರಾ ಸುಗಂಧದೊಂದಿಗೆ ರಾಚಿದವು ಕಿವಿಗಳಿಗೆ ಶಬ್ದಶರಗಳು.

ಅವರು ಮತ್ತ ವಿಲಾಸಿಗಳು –– ಅವರಿಗೊಂದು ಕುರಿ ಸಿಕ್ಕಿತ್ತು ಎದುರಿಗೆ. ಅವರಿಗದು ಪ್ರಹಸನ. ಆದರೆ ನಮ್ಮ ಕಥಾ ನಾಯಕನಿಗೆ!?

"ನನ್ನ ಹತ್ತಿರ ಏನೂ ಇಲ್ಲಪ್ಪಾ!"

"ಏ ಸುಳ್ಳು ಹೇಳತೀ! ಅದೇನು ಕೈಯಾಗ ?"

ಕೈಯಲ್ಲಿದ್ದದು ವಾದ್ಯದ ಪೆಟ್ಟಿಗೆ.ಅದನ್ನವರು ತೆಗೆದು ತೋರಿಸಿದರು. ವಾದ್ಯ ಕೈಯಲ್ಲಿದ್ದರೇನು? ವಾದಕ್ಕೆಡೆಯುಂಟೆ! ಶಂಖವಾದ್ಯ ಊದೋಣವೆಂದರೆ ಸುತ್ತ-ಮುತ್ತ ಯಾವ ನರಪಿಳ್ಳೆಯೂ ಕಾಣುತ್ತಿಲ್ಲ. ಇವರೋ! ನೋಡಿದರೆ ಕಾಸಿಗಾಗಿ ಕೊಲೆ ಮಾಡಲೂ ಹೇಸುವ ಜನರಲ್ಲ! ಹೇಳಿಕೇಳಿ ನಮ್ಮ ಕಥಾನಾಯಕ ಒಬ್ಬ ಸಂಗೀತಗಾರನಷ್ಟೇ, "ವೀರಕೇಸರಿ" ಸಿನಿಮಾದ ನಾಯಕ ರಾಜಕುಮಾರನೆ!

ಪ್ರಶ್ನೆ ಕೇಳಿದವನು ಪಕ್ಕದವನಿಗೆ ಹೇಳಿದನು-

"ಏ, ಅದು ಕರೀ ಕೊಳವೀಲೇ!"

ಪಕ್ಕದವನು ಕೇಳಿದನು-

"ಈ ಕಡೀಗೆ ಎಲ್ಲಿಗೆ ಹೊಂಟಿ ?"

"ಮುಂದಿನೂರಾಗ ನಾಟಕಾ ಐತಪ್ಪಾ ಇವತ್ತು ರಾತ್ರಿ, ನಾನು ಅದಕ್ಕೆ ಹಾಡು ಬಾರಿಸಾಂವ. ರಾತ್ರ್ಯಾತು, ದಾರಿ ಕಾಣವಲ್ದು. ಆ ಹಳ್ಳೀತನಕಾ ನನ್ನನ್ನ ಮುಟ್ಟಿಸ್ತೀರಾ ?"

"ಅದೆಲ್ಲ ಆಗವಲ್ದು, ಬ್ಯಾರೆ ಏನೈತಿ ನಿನ್ನ ಹತ್ರಾ ?"

"ಏನೂ ಇಲ್ಲಪ್ಪಾ, ನಾಟಕ ಮುಗದಮ್ಯಾಲೇ ನನ್ನ ಕೈಯಾಗೆ ಕಾಸು ಬರಾದು. ಒಂದು ಕೆಲಸಾ ಮಾಡರಿ, ನನ್ನನ್ನ ಆ ಹಳ್ಳಿಗೆ ಮುಟ್ಟಿಸ್ರಿ. ನಾಟಕಾ ಮುಗಿಯೂ ತನಕಾ ನನ್ನ ಪಕ್ಕದಾಗ ಕೂರಿ. ಆ ಮ್ಯಾಲೆ ನನಗೆ ಅವರು ಏನು ಕಾಸುಕೊಡತಾರೋ ಅದಷ್ಟೂ ನೀವೇ ತಗೊಳ್ರಿ. ಆದರೆ ನನಗಂತೂ ಅಲ್ಲಿಗೆ ಜರೂರು ಹೋಗಬೇಕಾಗ್ಯೆತಿ."

"ಆಹಾ! ಭಾಳ ಛಲೋ ಹೇಳತೀಯಾ ನೀನು! ಅಲ್ಲಿಗೆ ನಿನ್ನನ್ನ ಕರೆದೊಯ್ದ ಮ್ಯಾಲೆ ಊರಾವರಿಗೆ ಹೇಳಿ ನಮ್ಮನ್ನ ಒಂದು ಗತಿಮುಟ್ಟಸಲಿಕ್ಕೇನು?"

"ಇಲ್ಲಪ್ಪಾ ಹಾಂಗ ಮಾಡೂದಿಲ್ಲ. ನನ್ನನ್ನ ನಂಬಿರಿ."

ಅವರಿಬ್ಬರೂ ಒಬ್ಬರನೊಬ್ಬರು ನೋಡಿಕೊಂಡರು. ಆ ಹೆಂಡದ ವಾಸನೆಯ ನಡುವೆಯೂ ನರಸಿಂಹಲುವಿನ ಪ್ರಾಮಾಣಿಕತೆಯ ವಾಸನೆ ನುಸುಳಿ ಬರುತ್ತಿತ್ತು. ಆಯಿತು, ನೋಡೇ ಬಿಡೋಣ!

ರಂಗೇರಿದ ಅಂಗರಕ್ಷಕರೊಂದಿಗೆ ಈ ನಮ್ಮ ಕಂಗಾಲು ಸಂಗೀತಗಾರ ಕೊನೆಗೂ ಹಳ್ಳಿಗೆ ತಲುಪಿದರು. ಊರವರಿಗೆ ಈತ ಬಂದಿದ್ದು ಉಸಿರು

ಬಂದಂತಾಯಿತು. ನಾಟಕ ಶುರುವಾಗಲು ಇನ್ನು ಒಂದೂವರೆ–ಎರಡು ತಾಸು ಸಮಯವಿತ್ತು. ರಾತ್ರಿ ಹನ್ನೊಂದರ ಮೇಲಲ್ಲವೆ ಹಳ್ಳಿಯ ನಾಟಕಗಳು ನಡೆಯುವುದು!

"ಬಂದಿರಾ ಮೇಷ್ಟ್ರೇ! ಯಾಕಿಷ್ಟು ಹೊತ್ತು?"

"ಬಸ್ಸು ಬರೋದು ತಡಾ ಆತು, ಹತ್ತಿರದ ದಾರಿ ಹಿಡಯೋಣಾಂತ ಕಾಲುದಾರೀಲಿ ಹೊರಟೆ, ದಾರಿ ತಪ್ಪಿತು. ಪುಣ್ಯಕ್ಕೆ ಇವರಿಬ್ಬರೂ ಸಿಕ್ಕಿದರು. ಅಲ್ಲೇ ಹೊಲದಾಗೆ ಕೆಲಸಾ ಮಾಡುತಿದ್ರು, ಪುಣ್ಯಾತ್ಮರು ಇಲ್ಲೀತನಕಾ ಕರಕೊಂಡು ಬಂದ್ರು."

"ಒಳ್ಳೇದಾತು. ನಡೀರಿ ಮೇಷ್ಟ್ರೆ ಊಟಕ್ಕೆ"

"ನನ್ನ ಜತೀಗೆ ಬಂದಿರೋ ಈ ಇಬ್ಬರಿಗೂ ದಯವಿಟ್ಟು ಊಟಾ ಹಾಕಬೇಕು. ಅವರೂ ಹಸಿದಿದ್ದಾರೆ ನನ್ನ ಹಾಂಗ!"

"ಹೇ ಅದಕೇನಪ್ಪಾ, ನಿಮ್ ಜತೀಗೆ ಬಂದಾರಂದ ಮ್ಯಾಲೆ ಅವರೂ ಊಟಕ್ಕೆ ಬರಲಿ."

ಹಳ್ಳಿಯ ಶ್ರೀಮಂತ ಪಟೇಲರ ಮನೆಯಲ್ಲಿ ಹಜಾರದಲ್ಲಿ ಊಟದ ವ್ಯವಸ್ಥೆ ಮಾಡಿದರು. ಸಂಗೀತಗಾರರ ಜತೆ ಅವರ ಅಂಗರಕ್ಷಕರಿಗೂ ಊಟ ಹಾಕಿದರು. ಆಗತಾನೇ ಹೆಂಚಿನಿಂದ ಇಳಿಸುತ್ತಿದ್ದ ಬಿಸಿ–ಬಿಸಿ ಹೋಳಿಗೆ, ಜತೆಗೆ ಅದರ ಮೇಲೆ ಎಲೆಗೆ ಬೀಳುವ ತುಪ್ಪದ ಧಾರೆ! ಇದಲ್ಲದೆ ಅನ್ನ ಸಾಂಬಾರು ಇತ್ಯಾದಿ. ಕಲ್ಲು–ಮುಳ್ಳುಗಳ ಹಾದಿ ಸವೆಸಿ ಕತ್ತಲಿನಲ್ಲಿ ಎದ್ದು–ಬಿದ್ದು ಪ್ರಯಾಣ ಮಾಡಿದ ಆಯಾಸಕ್ಕೆ ತಕ್ಕ ಪ್ರತಿಫಲ ಸಿಕ್ಕಿತ್ತು. ಮೂವರೂ ಹೊಟ್ಟೆ ತುಂಬಾ ತಿಂದರು. ನರಸಿಂಹಲುರವರದೇನೋ ಸಾಧಾರಣವಾದ ತುತ್ತಿನ ಚೀಲ. ಆದರೆ ಉಳಿದಿಬ್ಬರದು! ಆಳವಾದ ಕಂದಕಗಳಿಗೆ ಹತ್ತು–ಹನ್ನೆರಡು ಹೋಳಿಗೆಗಳು ಹಾರಿ ಬಿದ್ದು ಹುತಾತ್ಮರಾದವು! ಅವುಗಳ ಬಾಳು ಧನ್ಯ!

ಕೊಟ್ಟ ವಚನದಂತೆ ಸಂಗೀತದ ಮಾಸ್ತರರು ಈ ಇಬ್ಬರನ್ನು ನಾಟಕದ ಉದ್ದಕ್ಕೂ ತಮ್ಮ ಪಕ್ಕದಲ್ಲೇ ಕೂರಿಸಿಕೊಂಡರು. ಅವರೂ ಇಡೀ ರಾತ್ರಿ ನಾಟಕವನ್ನು ಕಣ್ಣು ಬಿಟ್ಟುಕೊಂಡು, ಮಾಸ್ತರರ ವಾದನವನ್ನು ಕಿವಿಯ ಬಾಗಿಲುಗಳನ್ನು ತೆರೆದಿಟ್ಟುಕೊಂಡು ನೋಡಿದರು–ಕೇಳಿದರು. ಇಡೀ ರಾತ್ರಿ ಮತ್ತೊಮ್ಮೆ ಔತಣ– ಈ ಬಾರಿ ಮನಸ್ಸಿಗೆ!

ನಸುಕಿನಲ್ಲಿ ನಾಟಕ ಮುಗಿದು ನರಸಿಂಹಲುರವರ ಕೈಗೆ ಐವತ್ತು ರೂಪಾಯಿ ಸಂಭಾವನೆ ಬಂತು. ಕೂಡಲೇ ಅವರು ಈ ಅಂಗರಕ್ಷಕರನ್ನು ಬದಿಗೆ ಕರೆದೊಯ್ದು ಕೈಲಿದ್ದ ಹಣವನ್ನು ಕೊಡ ಹೋದರು. ಆ ಇಬ್ಬರ ಕಣ್ಣುಗಳಲ್ಲೂ ನೀರ ಹನಿಗಳು!

"ತಗೋಳ್ರಪ್ಪ ನಾ ಹೇಳಿಧಾಂಗೆ ಅವರು ಕೊಟ್ಟ ರೊಕ್ಕ ನಿಮ್ಮ ಕೈಯಾಗಿಡತಿದ್ದೇನೆ."

ಮಾಸ್ತರರ ಮಾತು ಕೇಳಿದಾಗಂತೂ ಇಬ್ಬರಿಗೂ ತಡೆಯಲಾಗಲಿಲ್ಲ. ಇಬ್ಬರೂ ಕುಸಿದು ಅವರ ಪಾದಗಳನ್ನು ಹಿಡಿದರು.

"ಅಪ್ಪಾ ಮಾಸ್ತರ, ನಿನ್ನಂಥಾವನ್ನೆಲ್ಲೂ ಕಂಡಿಲ್ಲಪ್ಪಾ! ನಮ್ಮ ಧಂಧೇನೇ ಗಂಟಲ ಮಟಾ ಕುಡಿಯೋದು, ಮತ್ತೆ ಯಾರೂ ಇಲ್ಲದ ನಿರ್ಜನ ಪ್ರದೇಶದಾಗೆ ಹೋಗಿ ಬರೂ ಮಂದೀನ ಸುಲಿಗೀ ಮಾಡೂದು, ಕೊಡಲಿಲ್ಲಂದ್ರ ತಲೀ ಒಡಿಯೂದು. ಆದ್ರ ನೀ ನಮ್ಮನ್ನು ಇಲ್ಲೀಗೆ ಕರಕೊಂಡು ಬಂದು ನಮಗೆ ವಳ್ಳೇ ಊಟಾ ಹಾಕಿಸಿದ್ದೇ ಅಲ್ಲದೆ ಭಲೋ ನಾಟಕಾ ನೋಡಿಸಿದಿ, ಒಳ್ಳೇ ಸಂಗೀತ ಕೇಳಿಸಿದಿ. ನೀ ಬೇಕಿದ್ರ ನಮ್ಮ ವಿಷಯಕ್ಕೆ ಸತ್ಯಾ ಹೇಳಿ ಊರವರಿಂದ ಹೊಡೆಸಬಹುದಿತ್ತು. ಹಾಗ ಮಾಡಲಿಲ್ಲೋ, ಬದಲಿಗೆ ಮಾತು ಕೊಟ್ಟಾಂಗೆ ನಿನ್ನ ದುಡಿಮೀ ಮಾಡಿದ ರೊಕ್ಕಾ ಕೊಡಾಕ ಬರತಿದ್ದೀ. ನಿನ್ನ ಕೈಯಾಗಿಂದ ಈ ಹಣಾ ಕಿತ್ಕೊಂಡ್ರೆ ಯಾವ ದೇವರೂ ಮೆಚ್ಚಾಂಗಿಲ್ಲೋ! ನಾವು ಮಾಡಿದ ತಪ್ಪು ಹೊಟ್ಯಾಗೆ ಹಾಕಿಕೊಳ್ಳಪ್ಪಾ!"

ನರಸಿಂಹಲುರವರಿಗೆ ಇದೊಂದು ಅದ್ಭುತ! ಹೀಗೂ ಇದ್ದೀತೆ! ಅವರಿಗೆ ಅಂದಿನ ಗಳಿಕೆ ಕಳ್ಳರ ಪಾಲಾದರೆ ಊರಿಗೆ ವಾಪಸ್ ಹೋಗಲು ಮತ್ತು ಊರಿನಲ್ಲಿ ಸಂಸಾರ ತೂಗಿಸಲು ಬೇಕಾದ ಹಣಕ್ಕೇನು ಮಾಡುವುದೆಂಬ ಚಿಂತೆ ಇತ್ತು. ಬೆಟ್ಟದಂಥ ಸಮಸ್ಯೆ ಥಟ್ಟನೆ ಕರಗಿತಲ್ಲ!

"ಇಲ್ಲಪಾ, ನನಗೆ ಊರು ತಲುಪಲಿಕ್ಕೆ ಸಹಾಯ ಮಾಡೀರಿ, ನಿಮ್ಮನ್ನ ಹಿಡಿದು ಕೊಡುವಷ್ಟು ನೀಚ ನಾನಲ್ಲ ಬೇಕಂದ್ರ ಈ ಹಣ ಇಟ್ಟುಕೋರಿ."

"ಬ್ಯಾಡಪ್ಪಾ ತಮ್ಮ ನಮಗ ಇನ್ನೂ ನಾಚಿಗಿ ಪಡಿಸಬ್ಯಾಡ"

"ಹೌದ್ರಪ್ಪಾ, ನೀವು ಯಾಕೆ ಈ ಹೀನ ಧಂಧೆ ಮಾಡ್ತೀರಿ, ಈ ಕೊಲಿ ಸುಲಗೀ ಮಾಡೂದ್ರಿಂದ ನಿಮಗೆ ಕುಡಿಯಾಕ ನಾಲ್ಕು ಕಾಸು ಸಿಕ್ಕೀತು. ಆದರೆ

ಎಷ್ಟು ದಿನಾ! ನಿಮ್ಮ ಮನಿಯೋರಿಗೆ ನಿಮ್ಮಿಂದ ಯಾವ ಉಪಯೋಗಾನೂ ಇಲ್ಲ. ಇದೆಲ್ಲ ಬಿಟ್ಟು ಮರ್ಯಾದೆಯಿಂದ ದುಡಿದ ಸಂಪಾದನೆ ಮಾಡಿದರೆ ಮನೀಗೆ ಉಪಗಾರಾದೀತಲ್ಲೇನು?"

"ಹೌದು ನನ್ನಪ್ಪಾ! ನೀ ಹೇಳೋದು ಖರೆ. ಆಣೆ ಮಾಡಿ ಹೇಳತೀವೋ, ಇನ್ನು ಮ್ಯಾಲೆ ಈ ಕೆಟ್ಟ ಕೆಲಸಾ ಮಾಡೋದಿಲ್ಲ, ಇದು ಸತ್ಯಾನಪ್ಪಾ!"

ಅವರಿಂದ ಬೀಳ್ಕೊಂಡು ಹೊರಟ ನರಸಿಂಹಲು ತಮಗಾದ ಈ ವಿಶಿಷ್ಟ ಅನುಭವದ ಮೆಲುಕು ಹಾಕುತ್ತಾ ಊರಕಡೆ ಹೆಜ್ಜೆ ಹಾಕಿದರು. ಮನದ ಮೂಲೆಯಲ್ಲೆಲ್ಲೋ ಸಚ್ಚಿದಾನಂದಾನುಭವ!

* * * * *

ನಾಟಕದ ಬದುಕು ಏಳೆಂಟು ವರ್ಷ ಸಾಗಿತು. ಬದುಕೇನೋ ಹೇಗೋ ಸಾಗುತ್ತಿತ್ತು. ಈ ಮಧ್ಯೆ ಮದುವೆ ಮಕ್ಕಳೂ ಆದವು. ಜವಾಬ್ದಾರಿಯೂ ಹೆಚ್ಚಿತು. ನರಸಿಂಹಲುರವರ ಹಲ್ಲುಗಳು "ಘಟ್ಟಿ"ಯಾಗಿದ್ದವು. ಕಚ್ಚಿ ಹಿಡಿದು ಸಂಸಾರ ಸಾಗಿಸಿದರು. ಸಹಧರ್ಮಿಣಿ ಶಿವಮ್ಮನವರೋ! ಯಾವ ಲೋಕದಿಂದಿಳಿದ ಸಾತ್ವಿಕತೆಯ ಸಾಕಾರವೋ! ಪತಿಯ ಹೆಗಲೆಣೆಯಾಗಿ ಸಂಸಾರ ರಥವೆಳೆಯುತ್ತಿದ್ದರು.

ಆದರೆ ದಾಹ! ಅದಕ್ಕೆ ತಣಿವೆಲ್ಲಿ! ಬ್ಯಾಂಡ್ ಬದುಕಿನಲ್ಲಿ ಯಾಕೋ ತನಗೆ ಮನ ಒಗ್ಗಲಿಲ್ಲ. ಅದಕ್ಕಾಗಿ ತಾನು ನಾಟಕರಂಗಕ್ಕೆ ಬಂದೆ. ಇದೇನೋ ಸ್ವಲ್ಪ ಅಡ್ಡಿಯಿಲ್ಲ. ಮರ್ಯಾದೆ ಇದೆ. ಆದರೆ ಮರ್ಯಾದೆ ಸಿಕ್ಕಿದರಷ್ಟೇ ಸಾಕೇ? ತನ್ನ ಬದುಕಿನ ಗುರಿ ಇದಷ್ಟೇ ಅಲ್ಲವಲ್ಲ! ಅಲ್ಲಿ ಎತ್ತರದಲ್ಲಿದೆ ರಾಗರಸಾಲ. ಅದು ತನ್ನ ಕೈಗೆಟುಕಬೇಕು. ಅಷ್ಟು ಎತ್ತರಕ್ಕೆ ತನ್ನನ್ನು ಎತ್ತಬಲ್ಲವನೆಲ್ಲಿ ? ಯಾರಾತ!

*"ಗುರುವಿನ ಗುಲಾಮನಾಗುವ ತನಕ*
*ದೊರೆಯದಣ್ಣ ಮುಕುತಿ!"......*

❑

ಚರಣ 5

# ಗುರುವಿನ ಪಾದ ನನ್ನನೆ ನುಂಗಿತ್ತ !

ರಾಯಚೂರು ಸಮೃದ್ಧ ಮಳೆಯ ಪ್ರದೇಶವೇನೂ ಅಲ್ಲ. ಸಾಕಷ್ಟು ಹಿಂದುಳಿದ, ಅಭಿವೃದ್ಧಿ ಕಾಣದ ಜಿಲ್ಲೆ. ಧಾರವಾಡದಂತೆ ಕಲೆ–ಸಾಹಿತ್ಯಗಳ ಆವಾಸವೆಂದೂ ಹೇಳುವಂತಿಲ್ಲ. ಎಲ್ಲೋ ಮೂರು–ನಾಲ್ಕು ಜನ ಸಿಕ್ಕಾರು. ಅಂತಹ ರಾಯಚೂರು ಹಿಂದುಸ್ತಾನಿ ಸಂಗೀತ ಕ್ಷೇತ್ರದಲ್ಲಿ ತನ್ನದೊಂದು ಭದ್ರಸ್ಥಾನ ಗಳಿಸಲು ಮುಖ್ಯ ಕಾರಣಪುರುಷರೊಬ್ಬರು ಇದ್ದರು–ಪಂಡಿತ ಸಿದ್ಧರಾಮ ಜಂಬಲದಿನ್ನಿಯವರು.



ಇಪ್ಪತ್ತೆರಡರ ತರುಣ
ನರಸಿಂಹ

ಪಂಡಿತ್ ಸಿದ್ಧರಾಮ ಜಂಬಲದಿನ್ನಿಯವರು ಮಹಾನ್ ಗಾಯಕರಾದ ಪಂಚಾಕ್ಷರಿ ಗವಾಯಿಗಳ ಹಾಗೂ ಪಂಡಿತ್ ಮಲ್ಲಿಕಾರ್ಜುನ ಮನಸೂರರ ಶಿಷ್ಯರು. ರಾಯಚೂರು-ಗುಲ್ಬರ್ಗಾದ ಕಡೆ ಅವರು ಸಾಕಷ್ಟು ಪ್ರಸಿದ್ಧರಾಗಿದ್ದರು. ವಚನ ಸಾಹಿತ್ಯ ಗಾಯನವನ್ನು ಜನಪ್ರಿಯಗೊಳಿಸುವುದರಲ್ಲಿ ಅವರದು ಅತಿ ಪ್ರಮುಖ ಪಾತ್ರ.

ನರಸಿಂಹಲುರವರೂ ಸಹ ಪಂಡಿತ ಜಂಬಲದಿನ್ನಿಯವರ ಹೆಸರನ್ನು ಸಾಕಷ್ಟು ಕೇಳಿದ್ದರು. ದೂರದಿಂದ ನೋಡಿಯೂ ಇದ್ದರು. ಆದರೆ ಅವರೊಡನೆ ಮಾತನಾಡುವ ಯೋಗವಿನ್ನೂ ಆತನಕ ಬಂದಿರಲಿಲ್ಲ.

ನಾಟಕಗಳ ಕರೀಕೊಳವಿ ಮಾಸ್ತರರ ದಾಹ ತಣಿಸಬಲ್ಲ, ಸಂಗೀತಾಮೃತವನ್ನು ಧಾರೆ ಎರೆಯ ಬಲ್ಲ ಗುರುವಿನ ಹುಡುಕಾಟ ನಡೆದೇ ಇತ್ತು. ಹಾಗೆ ನೋಡಿದರೆ ಸಂಗೀತ ಪಾಠ ಹೇಳಿಕೊಡಬಲ್ಲ ಮೇಷ್ಟ್ರುಗಳು ರಾಯಚೂರಿನಲ್ಲಿ ಇದ್ದರೇನೋ ಸರಿ. ಆದರೆ ಅವರಲ್ಲಿ ಕಲಿಯುವ ನಿರ್ಧಾರ ನರಸಿಂಹಲುರವರ ಮನದಲ್ಲಿ ಚಿಗುರಲಿಲ್ಲ. ತಾವು ಸ್ವತಃ ಸಂಗೀತ ರಸವನ್ನು ಸವಿಯಬಲ್ಲವರಾದ್ದರಿಂದ ಆ ಮಾಸ್ತರುಗಳ ಸಂಗೀತದಲ್ಲಿ ಏನೋ ಕುಂದು ಇರುವಂತೆ ಅನಿಸುತ್ತಿತ್ತು. ಅವರೆಲ್ಲರಿಗಿಂತ ಉನ್ನತ ಸ್ಥಾನದಲ್ಲಿರುವ ಅತಿ ಶ್ರೇಷ್ಠ ಗುರುವಿಗಾಗಿ ನಡೆದಿತ್ತು ಅನ್ವೇಷಣೆ.

ಸಿಕ್ಕಿದರಲ್ಲ ಕೊನೆಗೂ ಸಿದ್ಧ ಪುರುಷ - ಸಾವಿರದೊಂಭೈನೂರ ಅರವತ್ತೈದರಲ್ಲಿ! ಎರಗೇರಾದಲ್ಲಿ!

ರಾಯಚೂರಿನಿಂದ ಹತ್ತು ಕಿಲೋಮೀಟರ್ ದೂರದ ಹಳ್ಳಿ ಎರಗೇರಾದಲ್ಲಿ ಈಶ್ವರಣ್ಣ ಎಂಬುವರೊಬ್ಬರಿದ್ದರು. ಅವರು ಪಂಡಿತ ಜಂಬಲದಿನ್ನಿಯವರ ಅಭಿಮಾನಿ.

ಹಳ್ಳಿಗಳಲ್ಲಿ ಸಂಗೀತಾಸಕ್ತರು ದೇವಸ್ಥಾನಗಳಲ್ಲಿ ಇಲ್ಲವೇ ಊರ ಪಟೇಲರ ಯಾ ಯಾರಾದರೂ ಶ್ರೀಮಂತರ ಮನೆಯ ಆವರಣದಲ್ಲಿ ಬೈಠಕ್ ಏರ್ಪಡಿಸುತ್ತಿದ್ದರು. ಅವರವರ ಶಕ್ತ್ಯಾನುಸಾರ ತೀರ ಕಡಿಮೆಯೂ ಅಲ್ಲ ಹೆಚ್ಚೂ ಅಲ್ಲದ ಸಂಭಾವನೆ ನೀಡುತ್ತಿದ್ದರು. ಇಂತಹ ಕಛೇರಿಗಳಿಗೆ ದೊಡ್ಡ ದೊಡ್ಡ ಸಂಗೀತಗಾರರು ಬರುವ ಪರಿಪಾಠ ಇರಲಿಲ್ಲ.

ಆದರೆ ಪಂಡಿತ ಜಂಬಲದಿನ್ನಿಯವರು ಇಂತಹ ಕೆಲವುಕಡೆ ಹೋಗುತ್ತಿದ್ದರು. –ಕಾರಣ ಸರಸ್ವತಿಗೂ ಲಕ್ಷ್ಮಿಗೂ ಇರುವ ಎಣ್ಣೆ–ಸೀಗೆಕಾಯಿ ಸಂಬಂಧ.

ಅದರಲ್ಲೂ ಈಶ್ವರಪ್ಪನವರು ಕರೆದರೆ ಗುರುಗಳು "ಇಲ್ಲ" ಎಂದು ಸುತರಾಂ ಹೇಳುತ್ತಿರಲಿಲ್ಲ. ಹೀಗೊಂದು ಬೈಠಕ್ಕಿನ ಕಾರ್ಯಕ್ರಮ ಎರಗೇರಾದಲ್ಲಿ ನಿಶ್ಚಿತವಾಯಿತು. ಇದು ನರಸಿಂಹಲುರವರಿಗೆ ತಿಳಿಯಿತು. ಅದೇನೂ ಯಾವ ಸುದ್ದಿ ಪತ್ರಿಕೆಯಲ್ಲಿಯೂ ಬಂದ ಸುದ್ದಿಯಲ್ಲ. ಹೀಗೇ ಕರ್ಣಾಕರ್ಣಿಯಾಗಿ ಹಾದು ಬಂದು ಇವರ ಕಿವಿಗೆ ಬಿದ್ದದ್ದು; ಹುಡುಕುತ್ತಿರುವ ಔಷಧಿಯ ಬಳ್ಳಿ ಕಾಲಿಗೇ ಸಿಕ್ಕರೆ!

ಬೈಠಕ್ ಇದ್ದ ಆದಿನ ನರಸಿಂಹಲುರವರು ಮಧ್ಯಾಹ್ನದ ಊಟ ಮುಗಿಸಿ ತಮ್ಮ ಉಕ್ಕಿನ ಕುದುರೆಯನ್ನೇರಿ ಎರಗೇರಾದ ಕಡೆಗೆ ಹೊರಟರು. ಎರಗೇರಾ ತಲುಪಿದಾಗ ಸಾಯಂಕಾಲ ನಾಲ್ಕು ಗಂಟೆಯ ಸುಮಾರು. ಆ ಹೊತ್ತಿಗೆ ಈಶ್ವರಪ್ಪನವರ ಮನೆಯಲ್ಲಿ ಬೈಠಕ್ಕಿಗಾಗಿ ಪೂರ್ವಸಿದ್ಧತೆ ನಡೆಯುತ್ತಿತ್ತು. ಬೈಠಕ್ಕಿನ ಸಮಯ ಎಂದಿನಂತೆ ರಾತ್ರಿಯ ಊಟದ ನಂತರ.

ಎರಗೇರಾದಲ್ಲಿ ನರಸಿಂಹಲುರವರ ಪರಿಚಯಸ್ತರು ಯಾರೂ ಇರಲಿಲ್ಲ. ಉಡುಪಿನ ಎಲ್ಲಾ ಜೇಬುಗಳಲ್ಲೂ ಗಾಳಿ ಓಡಾಡಲು ಮುಕ್ತ ಅವಕಾಶವಿತ್ತು. ಅಂದರೆ – ಖರ್ಚಿಗೆ ದಮ್ಮಡಿಯೂ ಇರಲಿಲ್ಲ. ಕಾರ್ಯಕ್ರಮ ಶುರು ಆಗಲು ಸಾಕಷ್ಟು ಸಮಯವಿತ್ತು. ಅಷ್ಟು ಹೊತ್ತು ಕಾಲ ಕಳೆಯುವುದು!?

ಸೈಕಲ್ಲನ್ನು ಯಾರೋ ಒಬ್ಬ ಪುಣ್ಯಾತ್ಮನ ಮನೆಯಮುಂದೆ ಆತನ ಅನುಮತಿಯೊಂದಿಗೆ ನಿಲ್ಲಿಸಿದರು ನರಸಿಂಹಲು. ಉಕ್ಕಿನ ಕುದುರೆಗೆ ಊಟ ಬೇಡದಿದ್ದರೂ ಇರಲಿಕ್ಕೊಂದು ನೆಲೆ ಬೇಕಲ್ಲ!

ನಾಲ್ಕು ಗಂಟೆಗಳ ಕಾಲ ಹಾಗೂ ಹೀಗೂ ಕಾಲ ತಳ್ಳಿದ ನರಸಿಂಹಲು ಕಾಯುತ್ತಿದ್ದ ಕ್ಷಣ ಬಂತು. ಈಶ್ವರಣ್ಣನವರ ಮನೆಯ ಪಡಸಾಲೆಯಲ್ಲಿ ಜಂಬಲದಿನ್ನಿಯವರ ಕಾರ್ಯಕ್ರಮ ಆರಂಭವಾಯಿತು.

ಪಡಸಾಲೆಯ ಕೆಳಭಾಗದಲ್ಲಿ ಮುಂದಿದ್ದ ಕೊಟ್ಟಿಗೆಯ ಬಳಿ ಕುಳಿತು ಸಂಗೀತ ಸವಿಯುತ್ತಿದ್ದ ನರಸಿಂಹಲುರವರ ಅಂತರಾಳದಲ್ಲಿ ಏನೇನೋ ಯೋಚನೆಗಳು. ಗುರುಗಳು ತನ್ನನ್ನು ಶಿಷ್ಯನೆಂದು ಪರಿಗ್ರಹಿಸುವರೆ? "ಇಲ್ಲ" ಎಂದು ತಿರಸ್ಕರಿಸಿದರೆ! ಮುಂದೆ? ಇಷ್ಟಾಗಿ ಅವರೊಂದಿಗೆ ಮುಖಾಮುಖಿಯಾಗುವುದು ಯಾವಾಗ?

ರಾತ್ರಿ ಒಂದು ಗಂಟೆಯ ಹೊತ್ತಿಗೆ ಕಾರ್ಯಕ್ರಮ ಮುಗಿಯಿತು. ಆ ಹೊತ್ತಿಗೆ ಗುರುಗಳನ್ನು ಕಾಣುವುದು, ಅದೂ ಅಷ್ಟು ಜನರ ನಡುವಿನಿಂದ ಹೋಗಿ ಅವರನ್ನು ಭೇಟಿಯಾಗುವುದು ಸೂಕ್ತವೆನ್ನಿಸದು. ಅಂದರೆ ಇನ್ನು ಬೆಳತನಕ ಕಾಯಲೇ ಬೇಕು. ಸರಿ, ನರಸಿಂಹಲು ತನ್ನ ಸೈಕಲ್ ಬಿಟ್ಟಿದ್ದ ಸ್ಥಳಕ್ಕೆ ನಡೆದು ಆ ಮನೆಯ ಕಟ್ಟೆಯ ಮೇಲೆ ಮಲಗಿದರು. –ಉಪವಾಸ, ನಿದ್ರೆ ಹೇಗೆ ಬಂದೀತು. ಮರುದಿನದ ಸೂರ್ಯ ಕತ್ತಲೆಯ ಮುಸುಕನ್ನು ತುಸು–ತುಸುವಾಗಿ ಸರಿಸುವ ನಸುಕಿಗಾಗಿ ಪ್ರತೀಕ್ಷೆಯಷ್ಟೇ ಉಳಿದುದು. ಆ ದಾರಿಯಲ್ಲಿ ಗುರುಗಳು ಬರುವುದನ್ನು ಕಾಯುತ್ತ ಕಾಲ ಕಳೆದರು ನರಸಿಂಹಲು.

ಬೆಳಿಗ್ಗೆ ಆರೂವರೆ ಗಂಟೆಗೆ ಗುರುಗಳು ನಿರೀಕ್ಷೆಯಂತೆ ನಿರ್ಮಲೀಕರಣಕ್ಕಾಗಿ ಪೂರ್ಣಕುಂಭಾಲಂಕೃತ ಹಸ್ತರಾಗಿ ಹೊರಬಂದರು. ನರಸಿಂಹಲು ಕೂಡಲೇ ಎದ್ದು ಅವರಿಗೆದುರಾಗಿ ಬಂದು ಅವರ ಪಾದಗಳಿಗೆ ಸಾಷ್ಟಾಂಗ ಬಿದ್ದರು. ಗುರುಗಳಿಗೆ ಇದು ಅನಿರೀಕ್ಷಿತ.

"ಏನಪ್ಪ ? ಯಾರು ನೀನು ?"

"ನಾನು ವಡವಾಟಿಯವನು ಸ್ವಾಮಿ, ನನ್ನ ಹೆಸರು ನರಸಿಂಹ ಅಂತ."

"ಹೌದ ? ಏನು ಮಾಡಿಕೊಂಡಿದ್ದೀ?"

"ಹೀಂಗ, ನಾಟಕಾಪಾಟಕಗೊಳಿಗೆ ಬ್ಯಾಕ್‌ಗ್ರೌಂಡ್ ಕೊಡ್ತೀನ್ರೀ, ಕ್ಲಾರಿಯೋನೆಟ್‌ನಾಗ"

ಗುರುಗಳು ಸಹ ಆಗಾಗ ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡಿ ಕೊಡುತ್ತಿದ್ದರು. ಬದುಕಬೇಕಲ್ಲವೆ! ಬದುಕು ಬೇಕಲ್ಲವೆ! ಹೋರಾಟಗಾರರು ಪರಸ್ಪರ ಹತ್ತಿರವಾಗಲೇ ಬೇಕಲ್ಲ!

– "ಹೌದೇನಪ್ಪಾ, ಮತ್ತೆ ಇಲ್ಲಿಗೆ ಯಾಕ ಬಂದಿದ್ದೀ?"

"ಗುರುಗಳೇ, ನಾನು ತಮ್ಮಲ್ಲಿ ಸಂಗೀತ ಕಲಿಯಬೇಕಂತಿದ್ದೀನಿ. ನನ್ನನ್ನು ಶಿಷ್ಯನನ್ನಾಗಿ ಸ್ವೀಕಾರ ಮಾಡಬೇಕು ತಾವು."

ನರಸಿಂಹಲು ಮತ್ತೊಮ್ಮೆ ಗುರುಪಾದಕ್ಕೆ ಶರಣಾದರು.

"ಸರೀನಪ್ಪ..... ಏನು ಕಲೀತೀ ನೀನು ? ಗಾಯನ ಕಲೀತೀಯಾ?"

"ಹಾಡೇನೋ ಅಲ್ಪಸಲ್ಪ ಹಾಡ್ತೇನಿ ಗುರುಗಳೇ. ಆದರೆ ನನಗ ಕ್ಲಾರಿಯೋನೆಟ್‌ನಲ್ಲಿ ಹಿಂದುಸ್ತಾನಿ ಸಂಗೀತ ಕಲಿಯುವ ಆಸೆ ಇದೆ."

"ಅಲ್ಲಪ್ಪಾ, ನನಗೆ ಕ್ಲಾರಿಯೋನೆಟ್ ಊದಾಕ ಬರವಲ್ದು ಮತ್ತೆ ನಿನಗೆ ನಾ ಹ್ಯಾಂಗ ಕಲಿಸಲಿ?"

ಈ ಪ್ರಶ್ನೆಗೆ ನರಸಿಂಹಲುರವರಿಗೆ ಥಟ್ಟನೆ ಅಲ್ಲಿಯೇ ಉತ್ತರ ಹೊಳೆದು ಬಾಯಿಂದ ಹೊರಬಂದೂ ಬಿಟ್ಟಿತ್ತು-

"ಗುರುಗಳೇ ನನಗೆ ತಾವು ಗಾಯನ ಹೇಳಿಕೊಡಿರಿ ನಾನು ತಾವು ಕಲಿಸಿದ್ದನ್ನು ನನ್ನ ವಾದ್ಯದೊಳಗೆ ತುಂಬಿಸಲಿಕ್ಕೆ ಪ್ರಯತ್ನ ಪಡ್ತೇನ್ರಿ"

ಗುರುಗಳಿಗೆ ಅಚ್ಚರಿ. ಎಂತಹ ಆತ್ಮ ವಿಶ್ವಾಸ ಈ ಯವಕನಿಗೆ! ಈತ ಇತರರ ಹಾಗಲ್ಲ. ಹಿಡಿದ ಕಾರ್ಯ ಸಾಧಿಸಿಯೇ ಬಿಡುವ ಛಲವಿದೆ ಇವನಲ್ಲಿ.

"ಆಯ್ತಪಾ ನಿನಗ ನಾ ಸಂಗೀತ ಹೇಳಿಕೊಡಾಕ ತಯಾರಿದ್ದೀನಿ."

ನರಸಿಂಹಲುವಿಗೆ ತಾನು ಹಿಂದಿನ ದಿನದಿಂದ ದೈಹಿಕವಾಗಿ ಅನುಭವಿಸಿದ ಪ್ರವಾಸದ ಪ್ರಯಾಸ, ಉಪವಾಸದಿಂದಾದ ತೀವ್ರ ಹಸಿವು-ದಾಹ, ಮತ್ತು ಮಾನಸಿಕವಾದ ಕಳವಳ-ಆತಂಕಗಳು ಒಮ್ಮೆಲೇ ಮಾಯವಾಗಿ ಕಣ್ತುಂಬಿ ಬಂದವು. ಗುರುಗಳು ಕೇಳಿದರು -

"ರಾಯಚೂರದಾಗ ನಮ್ಮನೀ ನೋಡೀಯೇನಪಾ?"

"ಗೊತ್ತು ಗುರುಗಳೆ."

"ನಾ ಅಲ್ಲಿಗೆ ಸಾಯಂಕಾಲ ಐದು ಗಂಟೆಗೆ ಬಂದಿರತೀನಿ. ಆ ಹೊತ್ತಿಗೆ ನೀ ಬಂದು ನನ್ನ ಭೆಟ್ಟ್ಯಾಗು."

ಇಷ್ಟೆಲ್ಲ ಮಾತುಕತೆ ಗುರುಗಳೊಂದಿಗೆ ಆಗುವಾಗ ಅವರು ಅಷ್ಟು ಹೊತ್ತು ಅಲ್ಲೇ ನಿಂತಿದ್ದರು! ಈ ಸಂಭಾಷಣೆಯನ್ನು ಈಶ್ವರಣ್ಣನವರು ಗಮನಿಸುತ್ತಿದ್ದರು. ಅವರಿಗೆ ಇದೊಂದು ಅಸಾಧಾರಣ ನೋಟ. ಅವರು ಕೇಳಿದರು.

"ಎಲ್ಲಿದ್ದೆಯಪ್ಪ ನಿನ್ನೆಯಿಂದ? ಬುವಾರ ಸಂಗೀತ ಕೇಳಿದೀ ಅನಿಸ್ತದ!"

"ಹೌದ್ರಿ, ಇಲ್ಲೆ ಈ ಮನಿ ಹೊರಗಿನ ಕಟ್ಟೀ ಮ್ಯಾಲೆ ಮಲಗಿದೆ."

"ಮತ್ತೆ ಊಟ?"

"ಈ ಊರಾಗೆ ನನ್ನ ಪರಿಚಯದವರ್‍ಯಾರೂ ಇಲ್ಲರಿ. ಹಂಗಾಗಿ ಊಟದ ಚಿಂತಿ ಮಾಡಲಿಲ್ಲರಿ."

ಗುರುಗಳಿಗೆ ಹಾಗೂ ಈಶ್ವರಣ್ಣನವರಿಗೆ ಆಘಾತ. ಛೇ! ಎಂತಹ ಅನರ್ಥ -ಆಯಿತಲ್ಲ!

"ಅಯ್ಯಯ್ಯೋ! ನಮ್ಮ ಊರಿಗೆ ಬಂದು ಉಪವಾಸ ಇದ್ಯಲ್ಲಪ್ಪ! ಛೇ!..... ಇರಲಿ, ನಾವು ಬಹಿರ್ದೆಸೆಗೆ ಹೋಗಿ ಬರತೇವಿ. ಇಲ್ಲೇ ಇರು. ಉಪಾಹಾರ ಮಾಡುವಂತಿ."

–ಅಂದರು ಈಶ್ವರಣ್ಣ.

* * * * *

ಸಂಜೆ ಐದಕ್ಕೆ ನರಸಿಂಹಲು ರಾಯಚೂರಿನಲ್ಲಿ ಗುರುಗಳ ಮನೆಗೆ ಬಂದರು. ಗುರುಗಳು ಅಲ್ಲಿ ಇದ್ದರು. ಸರಿ, ಶಿಷ್ಯನನ್ನು ಎದುರು ಕೂರಿಸಿಕೊಂಡರು. ಬೇರೆ ಯಾವ ರೀತಿಯ ಪೂಜೆ ಪುನಸ್ಕಾರ–ಆರಂಭೋತ್ಸವ ಯಾವುದೂ ಇಲ್ಲ. ನೇರವಾಗಿ ಸಂಗೀತ ಪೂಜೆಗೇ ತೊಡಗಿದರು. ಮೊದಲಿಗೇ ಭೀಮಪಲಾಸರಾಗ.

ನಿ ಸ ಗ ಮ ಪನಿಸೊ

ಸೊ ನೀ ದಾ ಪಾ ಮಾ ಗಾ ರೀ ಸ

ಗುರುಗಳು ಆರೋಹ ಅವರೋಹಗಳನ್ನು ಆಲಾಪಿಸಿದರು. ಶಿಷ್ಯ ಅವರು ಹೇಳಿದಂತೆ ಒಂದು ಕಡೆಯೂ ಕುಂದಿಲ್ಲದಂತೆ ಆಲಾಪಿಸಿದಾಗ ಗುರುಗಳಿಗೆ ಆನಂದ. ಅವರಿಗೆ ಬೇಕಾದ ಶಿಷ್ಯ ದೊರಕಿದ್ದನು. ಶಿಷ್ಯನಿಗೂ ಆತನಿಗೆ ಬೇಕಾದ ಗುರು ಸಿಕ್ಕಿದ್ದರು.

ಗುರುಗಳ ಅಮೂಲ್ಯ ಸಂಗೀತದ ಸಂಪತ್ತಿಗೆ ಅವರ ಮಕ್ಕಳಲ್ಲಿ ಯಾರೂ ಉತ್ತರಾಧಿಕಾರಿಗಳಾಗಬಲ್ಲವರು ಬರಲಿಲ್ಲ. ಒಬ್ಬೊಬ್ಬರೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಪದವಿ ಗಳಿಸಿ ಬದುಕುಮಾಡಿಕೊಂಡರು. ಈಗ ಈ ಸಂಗೀತನಿಧಿಗೆ ಗುರುಗಳು ಯೋಗ್ಯ ವಾರಸುದಾರನನ್ನು ಕಂಡುಕೊಂಡಿದ್ದರು.

ಅರವತ್ತೈದನೆಯ ಇಸವಿಯಿಂದ ಎಪ್ಪತ್ತರವರೆಗೆ, ಅಂದರೆ ಐದು ವರ್ಷಗಳ ಕಾಲ ಗುರುಗಳು ರಾಯಚೂರಿಗೆ ಬಂದಾಗಲೆಲ್ಲ ಶಿಷ್ಯ ಅವರಲ್ಲಿಗೆ ಹೋಗಿ

ಕಲಿಯುವುದು ಸಾಗುತ್ತಿತ್ತು. ಬದುಕಿನ ನಿರ್ವಹಣೆಗೆ ಅಲ್ಲಿ-ಇಲ್ಲಿ ನಡೆಯುವ ನಾಟಕ ಪ್ರದರ್ಶನಗಳಲ್ಲಿ ಮಾಡಿದ ಸೇವೆಗೆ ಸಿಗುವ ಸಂಭಾವನೆಯಷ್ಟೇ. ಆದರೆ ಇಂತಹ ಪರಿಸ್ಥಿತಿಯಲ್ಲಿ ನರಸಿಂಹಲು ಯಾರಿಂದಲೂ ಯಾವುದೇ ಧನಸಹಾಯ ವನ್ನೂ ಪಡೆಯುವ ಮನಸ್ಸು ಮಾಡಲಿಲ್ಲ. ಈ ನಡುವೆ ನರಸಿಂಹಲುರವರ ಸಂಸಾರದಲ್ಲಿ ಮೊದಲ ಮಗಳ ಆಗಮನವೂ ಆಯಿತು. ಜವಾಬ್ದಾರಿಯೂ ಹೆಚ್ಚಿತು.

ಸಾವಿರದೊಂಬೈನೂರ ಎಪ್ಪತ್ತರಲ್ಲಿ ಗುರುಗಳಿಗೆ ಗುಲ್ಬರ್ಗಾದ ಶರಣ ಬಸವೇಶ್ವರ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಹುದ್ದೆ ದೊರಕಿದ್ದರ ಪರಿಣಾಮವಾಗಿ ಗುರುಗಳು ಹೆಚ್ಚಿನ ದಿವಸಗಳನ್ನು ಗುಲ್ಬರ್ಗಾದಲ್ಲಿ ಕಳೆಯಬೇಕಾದುದು ಅನಿವಾರ್ಯವಾಯಿತು.

❑

ಚರಣ 6

# "ಗುರುವಿನ ಗುಲಾಮನಾಗಿ"

ನರಸಿಂಹಲು ಈಗೇನು ಮಾಡಬೇಕು! ರಾಯಚೂರಿನ ಪಕ್ಕದ ಜಿಲ್ಲೆಯೇ ಗುಲ್ಬರ್ಗಾ. ಆದರೆ ಮುಂಜಾನೆ ಹೋಗಿ ಸಂಜೆ ಮರಳುವ ದೈನಿಕ ಪರಿಪಾಟ ವಿಟ್ಟುಕೊಳ್ಳುವಷ್ಟು ಹತ್ತಿರವೇನಲ್ಲ. ಅಲ್ಲಿಗೆ ಹೋಗಿ ಅಲ್ಲಿ ವಾಸ್ತವ್ಯ ಹೂಡಿ ವಿದ್ಯಾರ್ಜನೆ ಮಾಡಬೇಕು. ಆದರೆ ಇಲ್ಲಿ ಸಂಸಾರದ ನಿರ್ವಹಣೆ?

ತರುಣ ನರಸಿಂಹಲು ಛಲ ಬಿಡದ ತ್ರಿವಿಕ್ರಮನಾಗಿದ್ದರು. ಜತೆಗೆ ಗುರುಗಳೂ ಸಹ "ಏನೇ ಆದರೂ ಸಂಗೀತ ಬಿಡಬೇಡ ತಮ್ಮ" ಎಂದು ಹೇಳಿದ್ದರು. ಅವರ ರಾಯಚೂರಿನ ಕುಟುಂಬ ಸಹ ನರಸಿಂಹಲುವಿನಲ್ಲಿ ಉತ್ಸಾಹ ತುಂಬಿದ್ದರು. ರಾಯಚೂರಿನಿಂದ ಗುಲ್ಬರ್ಗಾಕ್ಕೆ ಹೋಗಿ ಅಲ್ಲಿ ಹತ್ತು-ಹದಿನೈದು ದಿನ ಇರುವುದು, ಕಲಿಯುವುದು, ಶನಿವಾರ ಇಲ್ಲವೆ ಭಾನುವಾರ ಮರಳಿ ರಾಯಚೂರಿಗೆ ಬರುವುದು, ಪುನಃ ಸೋಮವಾರ ಗುಲ್ಬರ್ಗಾ ಕಡೆಗೆ – ಇದು ನರಸಿಂಹಲುವಿನ ಕಾರ್ಯಕ್ರಮವೆಂದು ನಿರ್ಧಾರವಾಯಿತು.

ಹೆಂಡತಿ ಶಿವಮ್ಮನವರು ತನ್ನವರ ಸಂಗೀತಾಭ್ಯಾಸಕ್ಕೆ ಮನಃ ಪೂರ್ವಕವಾಗಿ ಪ್ರೋತ್ಸಾಹ ನೀಡುತ್ತಿದ್ದರು. ಮೊದಲ ಬಾರಿಗೆ ನರಸಿಂಹಲು ಗುಲ್ಬರ್ಗಾಕ್ಕೆ ಹೊರಟಾಗ ಆಕೆ ತನ್ನ ಕಾಲಿನ ಗೆಜ್ಜೆಗಳನ್ನು ಬಿಚ್ಚಿ ಕೊಟ್ಟು ಅವನ್ನು ಮಾರಿ ಹಣ ಹೊಂದಿಸಿಕೊಳ್ಳಲು ಹೇಳಿದ್ದರು! ಆ ಹೊತ್ತಿನ ಸಮಸ್ಯೆ ಬಗೆಹರಿದಿತ್ತು.

ಆದರೆ ಅದೇನು ಒಮ್ಮೆ ಹೋಗಿಬರುವ ಕಥೆಯೇ! ಮತ್ತೆ ಮತ್ತೆ ಹೋಗಿ ಬರುತ್ತಿರಬೇಕಲ್ಲ! ಅಲ್ಲದೆ ಗುರುಗಳ ಮನೆಗೆ ಹೋಗುವಾಗ ಬರಿಗೈಯಲ್ಲಿ ಹೋಗಲಾದೀತೆ? ಗುರುಪತ್ನಿ ತಾರಮ್ಮನವರು "ರಾಯಚೂರಿನಿಂದ ಬರುವಾಗ ಒಂದು ಕಿಲೋ ಬೆಣ್ಣೆ ತಂದು ಬಿಡಪಾ" ಎಂದು ತಾಕೀತು ಮಾಡಿದ್ದರು. ಜೊತೆಗೆ ಗುರುಗಳಿಗೆ ಪುಟಾಣಿ (ಹುರಿಗಡಲೆ) ಎಂದರೆ ಪ್ರಾಣ.

ಈ ಎರಡು ವಸ್ತುಗಳನ್ನು ಕೊಂಡೊಯ್ಯಬೇಕು. ಇದರೊಂದಿಗೆ ಪ್ರಯಾಣದ ಖರ್ಚು, ತನಗೆ ಗುಲ್ಬರ್ಗಾದಲ್ಲಿ ಊಟಕ್ಕೆ ಹಣ, ಮತ್ತೆ ತಾನು ಮರಳಿ ಬರುವ ತನಕ ಸಂಸಾರಕ್ಕೆ ದಿನಸಿ ಪದಾರ್ಥಗಳು –ಎಲ್ಲ ಸೇರಿ ಹೆಚ್ಚು-ಕಡಿಮೆ ಒಂದೈವತ್ತು ರೂಪಾಯಿಗಳು ಬೇಕಾಗುತ್ತಿದ್ದವು.

ಇಷ್ಟೆಲ್ಲಾ ತಯಾರಿ ಮಾಡಿಕೊಂಡು ರಾತ್ರಿ ಒಂಭತ್ತರ ಟ್ರೈನು ಹಿಡಿದು ಹೊರಟರೆ ಬೆಳಿಗ್ಗೆ ನಾಲ್ಕಕ್ಕೆ ಗುಲ್ಬರ್ಗಾ ತಲುಪುತ್ತಿದ್ದರು. ಅಲ್ಲಿ ನಿಲ್ದಾಣದಿಂದ ಗುರುಗಳ ಮನೆಗೆ ಒಂದು ಗಂಟೆಯ ಕಾಲ್ನಡಿಗೆ. ಗುರುಮನೆಗೆ ಬಂದು ಐದು ಗಂಟೆಯ ಹೊತ್ತಿಗೆ ಬಾಗಿಲ ಸದ್ದು ಮಾಡಿದರೆ–

"ಬಂದೇನಪ್ಪಾ?"

ಗುರುಗಳ ಸ್ವಾಗತ ಧ್ವನಿ, "ಯಾರು" ಎಂದು ಎಂದೂ ಅವರು ಕೇಳಿದವರಲ್ಲ, ಶಿಷ್ಯದ ಬರವನ್ನು ಅವರು ನಿರೀಕ್ಷಿಸುತ್ತಿದ್ದರು.

ಉದಯಕಾಲದ "ಚಾಯ"ದೊಂದಿಗೆ ಗುರುಶಿಷ್ಯರ ಹೊಟ್ಟೆಗೆ ಹಿತಾನುಭವ, ಭೈರವ ರಾಗದೊಂದಿಗೆ ಮಾನಸ ಲೋಕ ವಿಹಾರ, ಶಿಷ್ಯನೊಳಗೆ ಹುದುಗಿರುವ ಸತ್ವವನ್ನು ಹೊರತೆಗೆದು ಅವನಿಗೆ ತೋರಿಸಿ ದಾರಿತೋರುವ ಉತ್ಖನನ ಕ್ರಿಯೆ. ಮತ್ತೆ ಊರಿಗೆ ಮರಳಿ ಹೋಗುವವರೆಗೆ ಈ ದಿನಚರಿ ನಡೆಯುತ್ತಿತ್ತು. ಮಾತಿನ ಧ್ವನಿಗೆ ಮತ್ತು ಹಾಡುವ ಧ್ವನಿಗೆ ಇರುವ ವ್ಯತ್ಯಾಸ, ಸ್ವರಗಳ ಗುರುತು, ರಾಗಗಳ ಕಲ್ಪನೆ, ಆನಂದದ ರಾಗಗಳು ಮತ್ತು ಶೋಕರಾಗಗಳನ್ನು ಹಾಡುವಾಗ ಅವುಗಳ ಭಾವಗಳನ್ನು ಕಲಿಯುತ್ತಾ ಕಲಿಯುತ್ತಾ, ತಾನೂ ರಿಯಾಜ಼್ ಮಾಡುತ್ತಾ ಸಾಧನೆಯ ಪಥದಲ್ಲಿ ನಡೆದರು ನರಸಿಂಹಲು.

ಭೈರವರಾಗದಲ್ಲಿ ರಿಷಭ ಮತ್ತು ಧೈವತ – ಎರಡೂ ಕೋಮಲ ಸ್ವರಗಳು. ಸಾಮಾನ್ಯವಾಗಿ ಯಾವ ಗುರುವೂ ತನ್ನ ಶಿಷ್ಯನಿಗೆ ಕೋಮಲ ಸ್ವರಗಳನ್ನೊಳಗೊಂಡ ರಾಗಗಳನ್ನು ಕಲಿಕೆಯ ಆರಂಭದಲ್ಲಿ ಕಲಿಸುವುದಿಲ್ಲ. ಆರಂಭದ ಎಲ್ಲ ರಾಗಗಳೂ ಶುದ್ಧ ಸ್ವರಗಳನ್ನೊಳಗೊಂಡಿರುತ್ತದೆ. ಕೋಮಲ ಸ್ವರದೊಡನೆ ಹಾಡಲಾರಂಭಿಸಿದರೆ ಕಲಿಯುವ ಶಿಷ್ಯನಿಗೆ ಶುದ್ಧ ಸ್ವರ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸಾಧಾರಣ ವಾಗಿ ರಾಗದ ಕಲಿಕೆ ಭೂಪರಾಗದ ಮೂಲಕ ಆರಂಭವಾಗುತ್ತದೆ.

ಸ ರಿ ಗ ಪ ದ ಸಂ

ಸಂ ದ ಪ ಗ ರಿ ಸಾ

ಇದು ಭೂಪ ರಾಗದ ಸ್ವರಗಳ ಆರೋಹ-ಅವರೋಹ. ಇದರ ಬದಲಿಗೆ ಬಿಭಾಸ ರಾಗ ಕಲಿಸಿದರೆ ಅದರ ಸ್ವರಸಂಚಾರ.

ಸ ರಿ ಗ ಪ ದ ಸ

ರಿ ಸ ದ ಪ ಗ ರಿ ಸ – ಎಂದು ಇರುತ್ತದೆ.

ಇದರಲ್ಲಿ ರಿಷಭ ಕೋಮಲ. ಈ ಬಿಭಾಸ ರಾಗವನ್ನು ಮೊದಲು ಕಲಿಸುವ ಪರಿಪಾಠವನ್ನು ಯಾವ ಗುರುವೂ ಇಟ್ಟುಕೊಂಡಿರುವುದಿಲ್ಲ.

ಆದರೆ ಜಂಬಲದಿನ್ನಿ ಗುರುಗಳು ತಮ್ಮ ಶಿಷ್ಯನಿಗೆ ಕಲಿಸುವಾಗ ಈ ನಿಯಮವನ್ನು ಹಾಕಿಕೊಳ್ಳಲೇ ಇಲ್ಲ. ತಮಗೆ ಸ್ಫೂರ್ತಿ ಬಂದಾಗ ತಮಗೆ ಹಾಡಬೇಕೆನಿಸಿದ ರಾಗವನ್ನು ಹಾಡುತ್ತಾ ಹಾಗೇ ತನ್ನ ಶಿಷ್ಯನಿಗೆ ಅದನ್ನೂ ಪರಿಚಯಿಸುತ್ತಿದ್ದರು. ಅದರಲ್ಲಿ ಕೋಮಲ ಸ್ವರವಿರಲಿ, ಇರದಿರಲಿ! ಅವರಿಗೆ ವಿಶ್ವಾಸವಿತ್ತು. ತನ್ನ ಶಿಷ್ಯ ಎಂಥದ್ದೇ ರಾಗ ಕೇಳಿದರೂ ಅದನ್ನು ಮನೋಗತ-ಕಂಠಗತ ಮಾಡಿಕೊಳ್ಳಬಲ್ಲ ಸತ್ವವುಳ್ಳವನೆಂದು.

ಈ ಗುರು-ಶಿಷ್ಯ ಸಂಬಂಧವಾದರೂ ಎಂಥದ್ದು! ಶುದ್ಧ ಭಾರತೀಯ ಪದ್ಧತಿಯ ಗುರು-ಶಿಷ್ಯ ಸಂಪ್ರದಾಯದ ಸಂಬಂಧ. ಗುರುವಿನ ಕಾಲು ತಿಕ್ಕುವುದು. ಮೈ-ಕೈ ಮರ್ದನ ಮಾಡುವುದು, ಗುರು ಹೇಳಿದ ಕಾರ್ಯವನ್ನು ಪಾಲಿಸುವುದು, ಅಕ್ಷರಶಃ – ನಿಲ್ಲು ಎಂದರೆ ನಿಲ್ಲುವುದು ಕೂರು ಎಂದರೆ ಕೂರುವುದು...... ಇದು ನರಸಿಂಹಲು ಗುರುವಿನೊಂದಿಗೆ ನಡೆದುಕೊಂಡ ರೀತಿ.

ಗುರುಗಳು ತಮ್ಮ ವೃತ್ತಿಯ ಕರ್ತವ್ಯ ನಿರ್ವಹಣೆಗಾಗಿ ಕಾಲೇಜಿಗೆ ಹೋದರೆ ಶಿಷ್ಯ ಅಲ್ಲಿ ತರಗತಿಯ ಹೊರಗೆ ಕುಳಿತು ಪಾಠ ಕೇಳುತ್ತಿದ್ದರು. ಬಿ.ಎ. ತರಗತಿ ಅದು. ವಿದ್ಯಾರ್ಥಿಗಳು ಗುರುಗಳನ್ನು ಕೇಳುತ್ತಿದ್ದರು-

"ಸಾರ್, ನರಸಿಂಹಲು ಅವರು ರಾಯಚೂರಿನಿಂದ ಇಲ್ಲಿಗೆ ಬರ್ತಾರೆ. ತಾವು ಅವರಿಗೆ ಪಾಠ ಹೇಳ್ತೀರಿ. ಅವರಿಗೆ ಹ್ಯಾಂಗ ಕಲಿಸ್ತೀರಿ ಅಂಬೋದನ್ನ ನಾವು ನೋಡಬೇಕಲ್ಲ!"

ಕಾಲೇಜಿನಲ್ಲಿ ಒಂದು ಶಿಕ್ಷಣಕ್ರಮದಲ್ಲಿ ಕಲಿಸಬೇಕಾದ ಅನಿವಾರ್ಯತೆ ಗುರುಗಳಿಗೆ ಇತ್ತಲ್ಲ! ಅಲ್ಲಿ ಗುರುವಿಗೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯವಿಲ್ಲ. ಮಾಡಬೇಕು-ಮಾಡಬೇಕು, ಅಷ್ಟೇ. ಶಿಷ್ಯ ಕಲಿತನೆ! ಏನು ಕಲಿತನು? ಎಷ್ಟು

ಕಲಿತನು? ಹೇಗೆ ಕಲಿತನು?..... ಇದೆಲ್ಲ ಆಯಾ ಕಲಿಯುವವನ ಆಸ್ಥೆಯನ್ನು ಅವಲಂಬಿಸಿರುತ್ತದೆ. ಅದೂ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ದೃಷ್ಟಿಯಿಂದ ಮಾತ್ರ. ಆದರೆ ಗುರುವಿನ ಮುಂದೆ ತನ್ನನ್ನು ಶಿಷ್ಯನೆಂದು ಸಮರ್ಪಿಸಿಕೊಂಡು ಬೊಗಸೆಯೊಡ್ಡಿ ದಾನಕ್ಕಾಗಿ ಕಾತರನಾಗಿರುವ ಜ್ಞಾನಭಿಕ್ಷುವಿಗೆ!

"ಇಲ್ಲಪ್ಪಾ! ನಾ ಅವಗೇನೂ ಕಲಿಸೋದಿಲ್ಲ"

ವಿದ್ಯಾರ್ಥಿಗಳಿಗೆ ಆಶ್ಚರ್ಯ.

"ಅಲ್ಲ ಸರ್, ದೂರದೂರಿಂದ ಇಲ್ಲಿಗೆ ಬರ್ತಾರವರು. ಅವರಿಗೆ ನೀವು ಕಲಿಸೂದಿಲ್ಲಂದ್ರ!.....ನಿಮ್ಮ ಜತೀಗೇ ಇರ್ತಾರಲ್ಲ ಅವರು!"

"ನನ್ನ ಜತೀಗೇ ಇರ್ತಾನಪ್ಪಾ ಅಂವಾ. ಆದರ ನಾ ಅವಗೇನೂ ಕಲಿಸೂದಿಲ್ಲ. ಅದೆಲ್ಲ ಅಂವಗ ತಾನೇ ಬರ್ತದ. ನಾ ಹಾಡತಾ ಇರ್ತೀನಿ. ಅಂವಾ ಕೇಳಿಸಿಕೊಳ್ಳತಾನ, ಹಾಂಗ ಬಾಚಿಕೋತಾನ."

– "ಅದು ಹ್ಯಾಂಗ ಬರ್ತದ ಸರ!"

"ಬರ್ತದಪಾ, ನಮ್ಮಲ್ಲಿ ಗುರು–ಶಿಷ್ಯ ಪರಂಪರೆ ಅಂತ ಒಂದು ಐತ್ಯಲ್ಲ? ಅದರ ಹಾಂಗ, ಅಂವಾ ನನ್ನ ಜತೀಗೆ ಯಾವಾಗೂ ಇರ್ತಾನ, ನಾ ಹೇಳಿದ್ದು ಕೇಳಿಸಿಕೋತಾನ, ಹಾಂಗ ಹಾಡೂದಕ್ಕೆ ಕಲೀಬೇಕಂತ ಶ್ರಮ ಪಡತಾನ. ಇಲ್ಲಿ ಕಲಿಸೂ ಹಾಂಗ ನಾ ಅಂವಗ ಕಲಿಸೂದಿಲ್ಲ. ಅಂವಾ ಕಲಿಯೂ ಹಾಂಗ ನಿಮ್ಮ ಕಾಲೇಜಿನ ಸಿಲೆಬಸ್‌ನಾಗ ಕಲಿಯಾಕಾಗೂದೂ ಇಲ್ಲ."

ಇದು ನರಸಿಂಹಲುರವರ ಸಾಧನಾಮಾರ್ಗ – ನಿಷ್ಠೆ, ಏಕಾಗ್ರತೆ, ಛಲ. ದಾರಿಯೇನೂ ಸುಗಮವಾಗಿರಲಿಲ್ಲ. ಪ್ರತಿಬಾರಿ ಗುರುಮನೆಗೆ ಹೋಗುವಾಗಲೂ ಇಪ್ಪತ್ತೈದು ರೂಪಾಯಿ ಸಾಲ –ವಾರಕ್ಕೊಮ್ಮೆ. ಅದರಲ್ಲಿ ಆರು ರೂಪಾಯಿ ಗುಲ್ಬರ್ಗಾಕ್ಕೆ ಹೋಗಿ ಬರುವ ಖರ್ಚು. ಹತ್ತು ರೂಪಾಯಿ ಅಲ್ಲಿ ಊಟದ ಖರ್ಚು. ಈ ಸಾಲ ತೀರುವುದು.....ಆಗಾಗ ನಾಟಕಗಳಿಗೆ ಸಂಗೀತಗಾರನಾಗಿ ದುಡಿದು ಗಳಿಸಿದ ಹಣದಿಂದ. ಮಾವನ ಕಡೆ ಏನೋ ಸ್ಥಿತಿ ಚೆನ್ನಾಗಿ ಇತ್ತು. ಅವರು ಅಳಿಯನಿಗೆ ಸಂಸಾರ ನಿರ್ವಹಣೆಗೆ ರಾಗಿ ಇತ್ಯಾದಿ ಧಾನ್ಯಗಳನ್ನು ಕೊಡಲೂ ತಯಾರಿದ್ದರು. ಆದರೆ ನರಸಿಂಹಲು ಅವರ ಸ್ವಾಭಿಮಾನ ಕೇಳಬೇಕಲ್ಲ! ಸಾಲವೆಂದು ಕೊಟ್ಟರೆ ಅಡ್ಡಿಯಿಲ್ಲ. ಅದನ್ನು ತೀರಿಸುವಾಗ ಬೇಡವೆನ್ನಬಾರದು, ಹಾಗಿದ್ದರೆ ಸರಿ, ಇಲ್ಲದಿದ್ದರೆ ಸುತರಾಂ ಬೇಡ – ಎಂದು ಕಡ್ಡಿಮುರಿದಂತೆ

ಹೇಳಿದರು. ಮಾವನಿಗೆ. ಅವರಾದರೂ ಪಾಪ ಏನು ಮಾಡಿಯಾರು! "ಆತಪ್ಪಾ, ಹಂಗ ಮಾಡು" ಅಂದರವರು.

ಹಾಗೆ ನೋಡಿದರೆ ವಡವಾಟಿಯ ಮನೆಯ ಕಡೆ ಒಳ್ಳೆಯ ಸ್ಥಿತಿವಂತರು. ಆದರೆ ನರಸಿಂಹ ಮನೆ-ಊರು-ಮಾರು ಬಿಟ್ಟು ಬಂದಿದ್ದರಲ್ಲವೆ! ಆ ಕಾರಣಕ್ಕಾಗಿ ಅವರ ಬಗ್ಗೆ ಊರಮನೆಯವರಿಗೆ ಅಲಕ್ಷ್ಯ. ನರಸಿಂಹಲುರವರೂ ಊರಮನೆಯಿಂದ ಯಾವುದೇ ಸಹಾಯವನ್ನು ನಿರೀಕ್ಷಿಸಲಿಲ್ಲ.

ಗುರುಗಳು ಗುಲ್ಬರ್ಗಾದಲ್ಲಿದ್ದರಲ್ಲವೇ! ಶಿಷ್ಯನ ರೈಲು ಪ್ರಯಾಣ ಸಾಗುತ್ತಿತ್ತು. ರೈಲು ಟಿಕೇಟಿಗಾಗಿ ಹಣವೂ ಖರ್ಚಾಗುತ್ತಿತ್ತು. ಆದರೆ ಕೆಲವೊಮ್ಮೆ ಟಿಕೇಟಿಗಾಗಿ ಹಣವಿರುತ್ತಿರಲಿಲ್ಲವಲ್ಲ! ಆಗ ಟಿಕೇಟು ಇಲ್ಲದೆ ಪ್ರಯಾಣಿಸುವ ಅನಿವಾರ್ಯತೆ. ರಾತ್ರಿ ಹೊರಟು ನಸುಕಿನಲ್ಲಿ ಗುಲ್ಬರ್ಗಾ ಸೇರುವ ಪ್ಯಾಸೆಂಜರ್ ಗಾಡಿ ಅದು ಸಾಮಾನ್ಯವಾಗಿ ಟಿಕೇಟ್ ಎಗ್ಜಾಮಿನರ್ ತನಿಖೆಗೆ ಬರುತ್ತಿರಲಿಲ್ಲವಾದ್ದರಿಂದ ಅಂಥ ತೊಂದರೆ ಆಗುತ್ತಿರಲಿಲ್ಲ. ಆದರೆ ಅಕಸ್ಮಾತ್ ಬಂದರೆ !

ಅಂತಹ ಸಂದರ್ಭಗಳೂ ಬರುತ್ತಿದ್ದವು. ಆಗೆಲ್ಲ ನರಸಿಂಹಲುವನ್ನು ಆ ಅಧಿಕಾರಿ ಮುಂದಿನ ಸ್ಟೇಷನ್‌ನಲ್ಲಿ ಕೆಳಗಿಳಿಸುತ್ತಿದ್ದ. ಆದರೆ ಇವರಿಗೆ ಕಲಿಯುವ ಹುಚ್ಚಿನಲ್ಲಿ ಹುಟ್ಟಿಕೊಂಡ ಭಂಡತನವಿತ್ತಲ್ಲ! ಸ್ಟೇಷನ್‌ನಲ್ಲಿ ಇಳಿದವರು ಕಾಯುತ್ತಿದ್ದು, ಆ ಗಾಡಿ ಚಲಿಸುತ್ತಿದ್ದಂತೆ ಹಿಂದಿನ ಯಾವುದಾದರೂ ಬೋಗಿಯೊಂದನ್ನು ಹತ್ತುತ್ತಿದ್ದರು.

ಹಾಗೂ ಒಮ್ಮೆ ಈತನ ಮುಖಾಮುಖಿ ಒಬ್ಬ ಖಡಕ್ ಅಧಿಕಾರಿಯೊಂದಿಗೆ ಆಯಿತು. ತನಿಖೆಗೆ ಬಂದ ಅಧಿಕಾರಿ ನರಸಿಂಹಲುರರವರನ್ನು ಕೇಳಿದನು.

– "ಟಿಕೆಟ್"

– "ಟಿಕೆಟ್ ಇಲ್ಲರಿ"

– "ಟಿಕೆಟ್ ಇಲ್ಲಂದರೆ! ಗಾಡಿ ಹತ್ತುವಾಗ ಟಿಕೆಟ್ ಬೇಕನ್ನೋದು ಗೊತ್ತಿಲ್ಲೇನು?"

– "ಗೊತ್ತುರೀ! ಆದರೆ ನನ್ನ ಹತ್ರ ಟಿಕೆಟ್ ತೆಗೆಸಲಿಕ್ಕೆ ಹಣ ಇಲ್ಲ"

– "ಹಂಗಂದ್ರ! ಸರಿ, ದಂಡ ಕಟ್ಟು"

– "ದಂಡಕಟ್ಟಲಿಕ್ಕೆ ಹಣ ಇದ್ದಿದ್ರೆ ಟಿಕೀಟ್ ತಗೋತಿದ್ದೇರಿ, ಇಲ್ಲ, ಅದಕ್ಕೆ ಟಿಕೇಟಿಲ್ಲದೆ ಹೊರಟಿದ್ದೀನಿ."

– "ಎಲ! ಗಾಡಿ ಏನು ನಿನ್ನ ಅಪ್ಪನದೇನು?"

– "ಅಲ್ಲ ಸರ್! ನನ್ನ ಅಪ್ಪನದಂತೂ ಅಲ್ಲ ಆದರೆ ನಿಮ್ಮ ಅಪ್ಪನದೂ ಅಲ್ಲವಲ್ಲ!"

ಅಧಿಕಾರಿಗೆ ಕೆಣಕಿದಂತಾಯಿತ್ತು, ಸಿಟ್ಟು ಬಂತು. ಹೊಡೆಯಲು ಕೈ ಎತ್ತಿದನು, ತರುಣ ನರಸಿಂಹಲು ಹೇಳಿದನು.

– "ನನ್ನ ಮೈಮೇಲೆ ಮಾತ್ರ ಕೈ ಹಾಕಬೇಡಿ ಹುಷಾರ್. ಬೇಕಂದ್ರೆ ನನ್ನ ಮೇಲೆ ಕೇಸ್ ಹಾಕರಿ, ಜೇಲಿಗೆ ಕಳಿಸಿರಿ. ಆದರೆ ಮೈ ಮುಟ್ಟೋ ಹಂಗಿಲ್ಲ ನೋಡ್ರಿ!"

"ಎಂಥಾ ಭಂಡನಿರಬೇಕು ಈತ!" – ಅಧಿಕಾರಿಗೆ ಸಿಟ್ಟಿನ ಜತೆ ಕೌತುಕ.

– "ಎಲ್ಲಿಗೆ ಹೋಗ್ತಾ ಇರೋದು?"

– ಗುಲ್ಬರ್ಗಾಕ್ಕೆ ರೀ, ಪ್ರತಿ ವಾರ ಹೋಗ್ತೇನರೀ ಅಲ್ಲಿ ನನ್ನ ಗುರುಗಳ ಹತ್ತಿರ ಸಂಗೀತ ಕಲಿಯಾಕ. ಸುಳ್ಳಲ್ಲರಿ, ನೋಡಿರಿಲ್ಲೆ"

ನರಸಿಂಹಲು ತನ್ನ ಬಳಿ ಇದ್ದ ಕ್ಲಾರಿಯೋನೆಟ್ ಪೆಟ್ಟಿಗೆ ತೆರೆದು ವಾದ್ಯವನ್ನು ತೋರಿಸಿದರು.

ಅಂಥಾ ಖಡಕ್ ಅಧಿಕಾರಿಗೂ ಹೃದಯವೆಂಬುದಿರುವುದಿಲ್ಲವೇ ! ಯುವಕನ ಪ್ರಾಮಾಣಿಕತೆ ಮತ್ತು ಸಂಗೀತ ಕಲಿಯುವ ಛಲ. ಅವನ ಮನ ಕಲಕಿದವು. ನರಸಿಂಹಲುವಿಗೆ ಯಾವ ತೊಂದರೆಯೂ ಆಗಲಿಲ್ಲ.

* * * * *

"ಗುರು–ಶಿಷ್ಯ ಪರಂಪರೆ" ಎಂದರೆ ಏನು? ಶಿಷ್ಯ ವಿದ್ಯೆ ಕಲಿಯಬೇಕೆಂದರೆ ಗುರುವಿನ ಸೇವೆ ಮಾಡಬೇಕೆಂದು ಹೇಳಿದ್ದೆನಲ್ಲವೆ! ಜೊತೆಗೆ ಗುರು ಹೇಳಿದಂತೆ ಕೇಳಬೇಕು. ಅಕ್ಷರಶಃ ಗುರುವಿನ ಗುಲಾಮನಾಗಬೇಕು. ಇಲ್ಲದಿದ್ದರೆ ಅಜ್ಞಾನದಿಂದ ಮುಕ್ತಿದೊರೆಯಬೇಕಲ್ಲ! ಒಮ್ಮೆ ಹೀಗಾಯಿತು ನೋಡಿ!

ಸಂಜೆಯ ಸಮಯ. ಅಂದು ಮೋಡ ಕವಿದ ವಾತಾವರಣ. ಮಳೆ ಇರಲಿಲ್ಲ. ಗುರುಗಳು ತಮ್ಮ ಪತ್ನಿಯೊಂದಿಗೆ ಖರೀದಿಗಾಗಿ ಬಜಾರಕ್ಕೆ ಹೊರಟರು.

ಮನೆಗೆ ಬೀಗ ಹಾಕಿದ ಗುರುಗಳು ಶಿಷ್ಯನಿಗೆ "ಇಲ್ಲೆ ನಿಂದ್ರಪ್ಪಾ, ಈಗ ಬರತೀವಿ" ಎಂದು ಹೊರಟಾಗ ಐದು ಗಂಟೆಯ ಸಮಯ.

ಶಿಷ್ಯನೋ! ಗುರುವಾಕ್ಯ ಪರಿಪಾಲಕ. "ಇಲ್ಲೇ ನಿಂದ್ರಪ್ಪಾ" ಅಂದರೆ "ಇಲ್ಲಿಯೇ ಇರು" ಎಂಬರ್ಥವೂ ಇದೆ. ಆದರೆ ಈತ ಅವರ ಅಪ್ಪಣೆಯನ್ನು ಅಕ್ಷರಶಃ ಪಾಲಿಸುವಾತ, ನಿಂತರು.

ಗುರುಗಳು ಅತ್ತ ಹೋದ ಅರ್ಧ ಗಂಟೆಗೆ ಮಳೆರಾಯನ ಆಗಮನವಾಯಿತು. ಆಲಾಪದಿಂದ ಶುರುವಾದ ವರ್ಷಾಗಾಯನ ಮಂದ್ರ-ಮಧ್ಯಮಗಳಿಂದ ತಾರಕಕ್ಕೇರಿತು. ಯುವಕ ನರಸಿಂಹಲು ನಿಂತೇ ಇದ್ದರು. ಮನೆಯಮುಂದೆ ಮಳೆಯಿಂದ ತಪ್ಪಿಸಿಕೊಳ್ಳಲು ಯಾವ ನೆರಳೂ ಇಲ್ಲ. ಮೈ ಮಳೆಯಿಂದ ನೆನೆದು ನಡುಗುತ್ತಿತ್ತು. ಮನಸ್ಸು ಗುರುವನ್ನು ನೆನೆಯುತ್ತಿತ್ತು.

ಅರ್ಧಗಂಟೆಯಲ್ಲಿ ಮರಳುತ್ತೇವೆಂದು ಹೇಳಿ ಹೊರಟ ಗುರುಗಳಿಗೆ ದಾರಿ ಯಲ್ಲಿ ಅವರ ಗೆಳೆಯರೊಬ್ಬರು ಅಪರೂಪಕ್ಕೆ ಸಿಕ್ಕಿದರು. "ಅಪರೂಪ"ದ ಸಂಭ್ರಮ ಗುರುಗಳನ್ನು ಪತ್ನೀ ಸಮೇತ ಅವರ ಮನೆಗೆ ಕರೆದೊಯ್ದಿತು. ಅಲ್ಲಿ ಊಟವೂ ಆಗಿ ಲೋಕಾಭಿರಾಮ ಹರಟೆ ಮುಗಿದು ಮನೆಗೆ ಮರಳುವಾಗ ರಾತ್ರಿ ಹನ್ನೊಂದು ಗಂಟೆ.

ಅಷ್ಟು ಹೊತ್ತು, ಅಂದರೆ ಆರು-ತಾಸುಗಳ ಕಾಲ ಗಾಳಿ – ಮಳೆಯಲ್ಲಿ ತೊಪ್ಪೆಯಾಗಿ ಶಿಷ್ಯ ಗುರುಮಂದಿರದ ಮುಂದೆ ನಿಂತಿದ್ದನು.

ಗುರುಗಳು ಕಾರಿನಲ್ಲಿ ಮನೆಯ ಮುಂದೆ ಬಂದಿಳಿದರು. ಗುರುಪತ್ನಿ ನರಸಿಂಹಲು ನಿಂತಿದ್ದ ಪರಿನೋಡಿ ಆಘಾತ. "ಏನು ಮನುಷ್ಯನೋ! ಮಳೆ ಬಂದರೆ ಎಲ್ಲಾದರೂ ನಿಲ್ಲಬಾರದ! ಮೂರ್ಖ" ಎಂದರು.

ಗುರುಗಳು ಆಕೆಗೆ ಸುಮ್ಮನಿರಲು ಹೇಳಿದರು. ಮನೆಯ ಬಾಗಿಲು ತೆರೆದು ಒಳಗೆ ಹೋಗಿ ತಮ್ಮ ಧೋತರವೊಂದನ್ನು ತಂದು ಉಡಲು ನೀಡಿದರು. ತಾವೇ ಸ್ವತಃ ಚಹಾ ಮಾಡಿ ಶಿಷ್ಯನಿಗೆ ಕುಡಿಯಲು ಕೊಟ್ಟರು. ಅವರಿಗೆ ಅರ್ಥವಾಗಿತ್ತು. ತಮ್ಮ ಶಿಷ್ಯನ ಮನೋವೃತ್ತಿ ಎಂಥಾದ್ದು ಎಂಬುದು.

ಶಿಷ್ಯನಿಗೋ, ಗುರುವಿನ ಮಾತು ವೇದವಾಕ್ಯವಾಗಿತ್ತು. ಗುರುವಿನ ಆಜ್ಞೆ ಶಿರೋಧಾರ್ಯವಾಗಿತ್ತು. ಗುರುವಿಗೆ ತನ್ನನ್ನು ಸಮರ್ಪಿಸಿ ಅವರ ಸೇವೆಯಲ್ಲಿ ತನ್ನನ್ನು ತಾನು ಮರೆಯುವ ಭಕ್ತಿ ಆತನದು. ಗುರು ಆತನ ನಿಷ್ಠೆಗೆ ಮಾರು

ಹೋಗಿದ್ದರು. ಎಷ್ಟೋ ಬಾರಿ ಆತನನ್ನು ಗುರು ಜತೆಯಲ್ಲಿ ಕುಳ್ಳಿರಿಸಿಕೊಂಡು ಸಹಭೋಜನ ಮಾಡುತ್ತಿದ್ದರು. ಈ ಪ್ರೀತಿ–ವಾತ್ಸಲ್ಯಗಳು ಶಿಷ್ಯನ ನೆನಪಿನ ಬುತ್ತಿಯಲ್ಲಿ ಉಳಿದು ಆಗಾಗ ಆತ ಅದನ್ನು ಹೊರದೆಗೆದು ಸವಿದು ಆನಂದಿಸುತ್ತಾರೆ.

ಗುರು ಸಾನ್ನಿಧ್ಯದಲ್ಲಿ ಇದ್ದಷ್ಟು ದಿನವೂ ಸಂಗೀತದ್ದೇ ಗುಂಗು, ಅದೇ ಗುನುಗು. ಅಲ್ಲಿಂದ ಮರಳಿ ತನ್ನ ಮನೆಗೆ ರಾಯಚೂರಿಗೆ ಬಂದರೆ ಮತ್ತೆ ಗುಲ್ಬರ್ಗಾಕ್ಕೆ ಹೋಗುವವರೆಗೆ ಸಂಸಾರದ ಕಡೆಗೆ ಗಮನ, ಮನೆಯ ಖರ್ಚಿಗಾಗಿ, ಹೊರಗೆ ಮಾಡಿದ ಸಾಲದ ತೀರುವಳಿಗಾಗಿ – ಹೋರಾಟ!

ಸೀಸನ್ ಇದ್ದಾಗ ತಿಂಗಳಲ್ಲಿ ಎರಡರಿಂದ ಮೂರು ನಾಟಕಗಳು ಕೈಯಲ್ಲಿರುತ್ತಿದ್ದವು. ಆದರೆ ಜೂನ್ ತಿಂಗಳಿಂದ ಸೆಪ್ಟೆಂಬರ್‌ವರೆಗಿನ ಅವಧಿ – ಮಳೆಗಾಲದಲ್ಲಿ ನಾಟಕ ಯಾರು ಆಡುತ್ತಾರೆ! ಆಗಂತೂ ಕೈಸಾಲ ಮಾಡದೆ ವಿಧಿಯೇ ಇಲ್ಲವಲ್ಲ! ಆದರೆ ಇದು ಯಾವುದೂ ನಮ್ಮ ಸ್ವರಯಾತ್ರಿಕನ ನಡೆಗೆ ತಡೆಯೊಡ್ಡುವಷ್ಟು ಶಕ್ತವಾಗಿರಲಿಲ್ಲ. ಶಿಲ್ಪಕಾರನ ಉಳಿಯ ಹೊಡೆತಕ್ಕೆ ಮೈಯ್ಯೊಡ್ಡುತ್ತ ಒಡ್ಡುತ್ತ ಕಲ್ಲು ಕಲಾಕೃತಿಯಾಗಿ ಮಾರ್ಪಡುತ್ತಿತ್ತು.

* * * * *

ನರಸಿಂಹಲುರವರಿಗೆ ಮಗಳ ನಂತರ ಒಬ್ಬ ಮಗನು ಹುಟ್ಟಿದ್ದ. ಬಹಳ ಚುರುಕಾಗಿದ್ದ ಮಗು ಅದು. ಗಿರೀಶ್ವರನೆಂದು ಕರೆಯುತ್ತಿದ್ದರು. ಅವನನ್ನು ಅವನಿಗೆ ಒಂದು ವರ್ಷವಾಗಿದ್ದಾಗ ಒಮ್ಮೆ ಅವನಿಗೆ ಜಡ್ಡಾಯಿತು. ವೈದ್ಯರಿಗೆ ತೋರಿಸಿ ಅವರು ಬರೆದುಕೊಟ್ಟ ಔಷಧಿಯನ್ನು ಕೊಡುತ್ತಿದ್ದರು. ಆದರೆ ಹುಡುಗನ ಆರೋಗ್ಯ ಕ್ಷೀಣಿಸುತ್ತಲೇ ಇತ್ತು. ಕೊನೆಗೊಮ್ಮೆ ವೈದ್ಯರೇ ಕೈಚೆಲ್ಲಿ ಆ ಮಗು ಇನ್ನು ಹೆಚ್ಚುದಿನ ಬದುಕಲಾರದೆಂದು ಹೇಳಿದರು.

ಹಾಗೆಯೇ ಆ ಮಗುವಿನ ಕೊನೆಯ ದಿನವೂ ಬಂತು. ಅಂದು ನರಸಿಂಹಲುರವರು ಗುರುಗಳ ಬಳಿಗೆ ತೆರಳಬೇಕಾದ ದಿನ. ಅವರದು ಕದಲದ ನಿರ್ಧಾರ. ಅತ್ತೆ ಬೈದರೂ ಅಚಲರಾಗಿದ್ದರು ಅವರು. ಹೆಂಡತಿಗೆ ಹೇಳಿ ಹೊರಟೇಬಿಟ್ಟರು.

ಗುರುಗಳ ಬಳಿಗೆ ಹೋದಾಗ ಅವರಿಗೆ ಶಿಷ್ಯನ ಕಳೆಗುಂದಿದ ಮುಖ ನೋಡಿ "ಏನೋ ಆಗಿದೆ" ಎಂಬ ಸಂಶಯ ಬಂತು. ಶಿಷ್ಯನನ್ನು ಅವರು ಕೇಳಿಯೂ ಕೇಳಿದರು.

ಗುರುವಿನಲ್ಲಿ ಸುಳ್ಳು ಹೇಳಲಾದೀತೆ! ನಿಜ ಸಂಗತಿ ಹೊರಬಿತ್ತು.

ಗುರುಗಳು ಅವಾಕ್ಕಾದರು. ಹೀಗೂ ಉಂಟೆ! ತಮಗೇ ಇಂತಹ ಒಂದು ಅನುಭವವಾದ ಸಂದರ್ಭದಲ್ಲಿ ತಮ್ಮ ಕಾರ್ಯಕ್ರಮ ರದ್ದು ಮಾಡಿ ಮನೆಗೆ ಬಂದಿದ್ದರವರು. ಆದರೆ ಈ ಶಿಷ್ಯ!

– "ನನಗಿಂತ ದೊಡ್ಡ ಮನುಷ್ಯನಪ್ಪಾ ನೀನು! ಆತು. ಈಗ ನೀನು ಯಾವ ಗಾಡಿ ಸಿಗುತ್ತದೋ ಆ ಗಾಡೀಲಿ ಮನೀಗೆ ವಾಪಸ್ ಹೋಗು"

– ಎಂದರು ಗುರುಗಳು. ಗುರುವಿನಪ್ಪಣೆ! ನರಸಿಂಹಲುರವರು ಮನೆಗೆ ಮರಳಿದರು. ಇವರ ಬರವನ್ನೆ ನಿರೀಕ್ಷಿಸುತ್ತಿತ್ತೋ ಎಂಬಂತೆ ಆ ಮಗು ಇವರು ಮನೆಯೊಳಗೆ ಕಾಲಿಟ್ಟು ಮಗುವಿನ ಮುಖ ನೋಡುತ್ತಿದ್ದಂತೆಯೇ ಈ ಲೋಕದಿಂದ ಮುಂದಕ್ಕೆ ಪ್ರಯಾಣ ಬೆಳೆಸಿತು.

* * * * *

1970–72ರ ಸಾಲುಗಳಲ್ಲಿ ನರಸಿಂಹಲುರವರನ್ನು ಕ್ಷಯರೋಗ ಆಕ್ರಮಿಸ ಲಾರಂಭಿಸಿತು. ಸಂಗೀತಗಾರನಿಗೆ, ಅದರಲ್ಲೂ ಉಸಿರುತುಂಬಿ ಊದಬೇಕಾದ ವಾದ್ಯ ನುಡಿಸುವಾತನಿಗೆ ಶ್ವಾಸಕೋಶ ಬಲವಾಗಿರಬೇಕು. ಆ ಬಲ ಬೇಕಾದರೆ ವಾದಕ/ಗಾಯಕ ಪುಷ್ಕಳವಾಗಿ ಹಾಲು–ಹಯನು–ಹಣ್ಣು–ಹಂಪಲುಗಳನ್ನು ಸೇವಿಸುತ್ತಿರಬೇಕು. ಆದರೆ ಒಂದು ಹೊತ್ತಿನ ತುತ್ತಿಗೂ ತತ್ವಾರ ಎಂಬಂತಿರುವಾಗ ಈ ಕಲಾಪಿಪಾಸುವಿಗೆ ಆ ಭಾಗ್ಯ ಎಲ್ಲಿದ್ದೀತು! ಊದಲು ಶ್ವಾಸ ನೀಡಿ ದಣಿಯುವ ಘುಪ್ಪುಸಗಳಿಗೆ ಪೋಷಣೆ ಸಿಗದೆ ಅವು ರೋಗಗ್ರಸ್ತವಾದವು.

ವೈದ್ಯರು ನರಸಿಂಹಲುರವರನ್ನು ಪರೀಕ್ಷಿಸಿ ಅವರ ಪತ್ನಿಗೆ. "ಈತ ವಾದ್ಯ ಊದುವದನ್ನು ಬಿಡದಿದ್ದರೆ ಜೀವ ಉಳಿಯುವ ಸಂಭಾವ್ಯತೆ ಬಹಳ ಕಡಿಮೆ" ಎಂದು ಅಪ್ಪಣೆ ಕೊಟ್ಟರು. ಆದರೆ ಪತ್ನಿ ಶಿವಮ್ಮನವರಿಗೆ ಗೊತ್ತು– ಗಂಡನಿಗೆ ಬುದ್ಧಿ ಹೇಳುವುದು ತಮ್ಮ ಅಳವಿನಲ್ಲಿಲ್ಲ–ಎಂಬುದು. ವೈದ್ಯರಿಗೆ ಅದನ್ನೇ ಹೇಳಿದರವರು.

ಸರಿ, ವೈದ್ಯರು ಖುದ್ದು ನರಸಿಂಹಲುರವರಿಗೇ ತಮ್ಮ ಬುದ್ಧಿ ಮಾತು ಹೇಳಿದರು. ಆದರೆ....!

– "ನೋಡಿ ಡಾಕ್ಟರೇ ನಾನು ಬೇಕಾದರೆ ನನ್ನ ವಾದ್ಯವನ್ನು ಊದುತ್ತ–ಊದುತ್ತ ಜೀವ ಬಿಟ್ಟೇನು. ಈ ವಾದ್ಯ ಊದುವುದನ್ನು ನಿಲ್ಲಿಸುವುದಿಲ್ಲ. ನನ್ನ

ಬದುಕಿನಲ್ಲಿ ಸಂಗೀತ ಸಾಧನೆ ಮಾಡಬೇಕೆಂದು ಮನಸ್ಸು ಮಾಡಿದ್ದೇನೆ, ಮಾಡುತ್ತೇನೆ. ತಮ್ಮ ಕೈಲಾದಷ್ಟು ಕರ್ತವ್ಯವನ್ನು ತಾವು ಮಾಡಿರಿ, ಮುಂದಿನದು ಅವನಿಚ್ಛೆ!" ಅಂದರು ನರಸಿಂಹಲು.

ವೈದ್ಯರಾದರೂ ಏನು ಮಾಡಿಯಾರು! ತಮ್ಮ ಕಡೆಯಿಂದ ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿದರು. ಕೊನೆಗೂ ನರಸಿಂಹಲುರವರ ಅಕ್ಷಯ ಮನೋಬಲದ ಮುಂದೆ ಕ್ಷಯವೇ ಕ್ಷಯಿಸಿತು. ಈಗ ಈ ಸಾಧಕನಿಗೆ ಅರವತ್ತೈದು ವರ್ಷಗಳು, ಊರೂರು ಸುತ್ತುತ್ತಾ ಸಂಗೀತ ಕಛೇರಿ ನಡೆಸುತ್ತಾರೆ, ತಮ್ಮ ವಿದ್ಯೆಯನ್ನು ಬೇಡಿ ಬಂದವರಿಗೆ ಧಾರೆ ಎರೆಯುತ್ತಲೂ ಇದ್ದಾರೆ.

* * * * *

ಗಾಯನವನ್ನೇನೋ ಗುರುವಿನಿಂದ ಕಲಿಯುವುದಾಯಿತು. ಅದರಲ್ಲಿ ಪರಿಣತಿ ಪಡೆಯಲು ಹಗಲು-ರಾತ್ರಿ ಶ್ರಮಿಸುವುದೂ ಆಯಿತು, ಕಲಿತೂ ಕಲಿತರು. ಆದರೆ ಅದನ್ನು ಕ್ಲಾರಿಯೋನೆಟ್‌ನಲ್ಲಿ ಅದನ್ನು ಹೊರಡಿಸುವುದು!

ಹೇಳಿಕೇಳಿ ಕ್ಲಾರಿಯೋನೆಟ್ ಎಂಬುದು ವಿದೇಶೀ ವಾದ್ಯ. ವಿದೇಶೀ ವಾದ್ಯಗಳ ಸಾಲಿಗೆ ಇದರ ಜೊತೆಗೆ ಸ್ಯಾಕ್ಸೋಫೋನ್, ಮ್ಯಾಂಡೋಲಿನ್, ಗಿಟಾರ್, ಹಾರ್ಮೋನಿಯಂನಂತಹ ವಾದ್ಯಗಳೂ ಸೇರುತ್ತದೆ. ಇವುಗಳಲ್ಲಿ ಒಂದೊಂದು ಮನೆಯಿಂದ ಒಂದೊಂದು ಸ್ವರವನ್ನು ಬೇರೆ ಬೇರೆಯಾಗಿ ಹೊರಡಿಸಬಹುದು. ಆದರೆ ಗಾಯನದಲ್ಲಿರುವಂತೆ ಅಥವಾ ಶುದ್ಧ ಭಾರತೀಯ ವಾದ್ಯಗಳಾದ ಕೊಳಲು, ವೀಣೆ, ಸಿತಾರುಗಳಲ್ಲಿ ಬರುವಂತೆ ಸ್ವರದಿಂದ ಸ್ವರಕ್ಕೆ ಸುಲಭ-ಸುಲಲಿತವಾಗಿ ಜಾರುವ ಕ್ರಿಯೆ ಅಂದರೆ ಮೀಂಡ್ ತೆಗೆಯುವ ಕಲೆ ಇವುಗಳಲ್ಲಿ ಬಾರದು, ಬಂದರೂ ಬಹಳ ಕಷ್ಟ.

ವಿದೇಶೀ ವಾದ್ಯಗಳ ರಚನೆಯೇ ಅಂಥದ್ದು. ವಾದ್ಯ-ವೃಂದಗಳಲ್ಲಿ ಸ್ವರಗಳ ನೋಟೇಷನ್ ಬರೆದ ಹಾಳೆ ನೋಡಿಕೊಂಡು ಕಂಡಕ್ಟರನ ಕೈಯಲ್ಲಿರುವ ಬೇಟನ್‌ನ ಚಲನೆಯನ್ನು ಅನುಸರಿಸಿ ಆ ಸ್ವರಗಳನ್ನಷ್ಟೇ ಬೇರೆಬೇರೆಯಾಗಿ ನುಡಿಸುತ್ತಾ ರಾಗ ಹೊರಡಿಸಲಿಕ್ಕೆ ಮಾತ್ರ ಅನುಕೂಲವಾದವು ಅವು. ಅವುಗಳಲ್ಲಿಯೂ ಕ್ಲಾರಿಯೋನೆಟ್, ಅಂದರೆ -ರಾಯಚೂರಿನ ಹಳ್ಳಿಗಳಲ್ಲಿ ಆಗ ಕರೆಯುತ್ತಿದ್ದಂತೆ- "ಕರಿ ಕೊಳವಿ"ಯಲ್ಲಿ ಮೀಂಡ್ ತೆಗೆಯುವುದು ಹರಸಾಹಸ.

ನರಸಿಂಹಲುರವರು ತಮ್ಮ ವಾದ್ಯವಾದನಕ್ಕೆ ಅಳವಡಿಸಿಕೊಂಡಿದ್ದು ಗಾಯಕಿ ಶೈಲಿ. ಗಾಯಕಿ ಶೈಲಿ ಅಂದರೆ-ಸರಳವಾಗಿ ಹೇಳಬೇಕೆಂದರೆ- ಹಾಡುವಾಗ ಗಾಯಕ ಅನುಸರಿಸುವ ಹಂತಗಳು.

ಗಾಯಕನಿಗೆ ಹಾಡಲುಬೇಕಾದ್ದು ಚೀಜ಼್. ಒಂದು ಚೀಜ಼್‌ನ ಬಂದಿಶ್- ಸ್ಥಾಯಿ (ಪಲ್ಲವಿ) ಮತ್ತು ಅಂತರ (ಚರಣ)ಗಳನ್ನು ಹಾಡುವಾಗ ಆ ರಾಗಕ್ಕೆ ಸಂಬಂಧಿಸಿದ ಸ್ವರಗಳ ಜಾಡಿನಲ್ಲಿ ಆಲಾಪ್ ಮಾಡುವುದು, ತಾನ್ ಹೇಳುವುದು ಬೋಲ್‌ತಾನ್ ಹಾಡುವುದು. ಇಷ್ಟಿದ್ದರೆ ಗಾಯನಕ್ಕೆ ಸಾಕು. ಆದರೆ ವಾದ್ಯವಾದಕನಿಗೆ ಇನ್ನೂ ಹೆಚ್ಚಿನ ಪರಿಣತಿ ಬೇಕು. ವಾದ್ಯದಲ್ಲಿ ಆಲಾಪ್, ಬೋಲ್‌ತಾನ್, ತಾನ್‌ಗಳಲ್ಲದೆ ಲಯದ ಜೊತೆಗೆ ಲಯಕಾರಿ ಸ್ವರಗಳನ್ನು ನುಡಿಸಬೇಕು. ವಾದ್ಯವಾದನದಲ್ಲಿ ಎಂಟನೇ, ಹತ್ತನೇ ಕಾಲದಲ್ಲಿ ಸಂಚರಿಸುವಂತೆ ಗಾಯನದಲ್ಲಿ ಸಂಚರಿಸಲು ಸಾಧ್ಯವಿಲ್ಲ. ಧ್ವನಿಪೆಟ್ಟಿಗೆ (Vocal Box)ಯ ಶಕ್ತಿಗೊಂದು ಮಿತಿಯಿದೆ. ವಾದ್ಯಗಳಲ್ಲಿ ಆ ವೇಗ ಸಾಧ್ಯವಿರುವುದರಿಂದ ವಾದಕ ಅದನ್ನೂ ಸಾಧಿಸಬೇಕಾಗುತ್ತದೆ.

ಗಾಯಕಿ ಶೈಲಿಯನ್ನೂ ಅಳವಡಿಸಿಕೊಂಡು ಜತೆಗೆ ಮೀಂಡ್ ಸಹ ತೆಗೆಯುವುದನ್ನು ಕ್ಲಾರಿಯೋನೆಟ್‌ನಂತಹ ವಿದೇಶಿ ವಾದ್ಯದಲ್ಲಿ ಕಲಿಯುವುದು ಪರಿಶ್ರಮದ ಕೆಲಸ. ಈ ಪರಿಶ್ರಮವನ್ನು ನರಸಿಂಹಲುರವರು ಅನವರತವಾಗಿ, ಏಕಚಿತ್ತದಿಂದ, ಶ್ರದ್ಧೆಯಿಂದ ಮಾಡುತ್ತಾ ಮಾಡುತ್ತಾ ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದರು.

ಗಾಯನವನ್ನು ವಾದನವನ್ನಾಗಿ ಪರಿವರ್ತಿಸಿ ವಾದ್ಯ ಕಲಾವಿದನಾಗಿ ಸಾಧನೆಮಾಡಬೇಕೆಂದರೆ ಶ್ರದ್ಧೆ-ಪರಿಶ್ರಮಗಳೊಂದಿಗೆ ಆ ಸಂಗೀತಗಾರನಿಗೆ ತನ್ನ ವಾದ್ಯದ ಬಗ್ಗೆ ಮಮತೆ ಇರಬೇಕು - ಮಗುವಿನ ಬಗ್ಗೆ ತಾಯಿಗಿರುವಂತೆ -- ಅಥವಾ -- ತಾಯಿಯ ಬಗ್ಗೆ ಮಗುವಿಗಿರುವಂತೆ- ಎಂದರೂ ಆದೀತು. ನರಸಿಂಹಲುರವರಿಗೆ ತನ್ನ ಕ್ಲಾರಿಯೋನೆಟ್ ಬಗ್ಗೆ ಇರುವ ಮಮತೆ ಅದಕ್ಕೂ ಹೆಚ್ಚಿನದು. ತಾನು ಬೇರೆ ಅಲ್ಲ, ತನ್ನ ವಾದ್ಯ ಬೇರೆ ಅಲ್ಲ - ಎಂಬ ಅದ್ವೈತ ಭಾವ.

ಪು.ತಿ.ನರಸಿಂಹಾಚಾರ್‌ರವರ ನಾಟಕ 'ಗೋಕುಲ ನಿರ್ಗಮನ'ದಲ್ಲಿ ಕೃಷ್ಣನ ಕೈಯಿಂದ ಬಲರಾಮನು ಕೊಳಲನ್ನು ಕಿತ್ತು ಬೀಳಿಸಿದಾಗ ಕೃಷ್ಣನು ಅನುಭವಿಸಿದ ನೋವು ಬೇರೆ ಅಲ್ಲ, ವಾದ್ಯಕಲಾವಿದ ತನ್ನ ವಾದ್ಯ ಕಳೆದುಕೊಂಡರೆ, ಇಲ್ಲ ಅದಕ್ಕೇನಾದರೂ ಆದರೆ ಅನುಭವಿಸುವ ನೋವು ಬೇರೆ ಅಲ್ಲ! ಈ ರೀತಿಯ

ಅವಿನಾಭಾವ ನರಸಿಂಹಲುರವರಲ್ಲಿ ತಮ್ಮ ವಾದ್ಯದ ಬಗ್ಗೆ ಅದು ಕೈಗೆ ಬಂದಂದಿನಿಂದ ಈ ತನಕವೂ ಇದೆ. ಈ ಬಗ್ಗೆ ಒಂದು ಕುತೂಹಲಕಾರಿ ಘಟನೆಯೊಂದಿದೆ. ಅದನ್ನು ಮುಂದೆ ಬರೆಯುವೆ.

ಇಷ್ಟೆಲ್ಲ ಹೇಳುತ್ತಿರುವಾಗ ಓದುಗರಿಗೆ ಅನ್ನಿಸಬಹುದು. ಜಂಬಲದಿನ್ನಿ ಗುರುಗಳು ನರಸಿಂಹಲುರವರನ್ನು ಎಷ್ಟು ಸುಲಭವಾಗಿ ಶಿಷ್ಯನೆಂದು ಸ್ವೀಕರಿಸಿ ಕಲಿಸಿದರಲ್ಲ! ಎಂದು ಆದರೆ ಇದು ತಿಳಿದುಕೊಂಡಷ್ಟು ಸರಾಗವಾಗಿರಲಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಪ್ರತಿವಾರವೂ ಶಿಷ್ಯನು ಗುರುವಿನಿಂದ ಯಾವ ರಾಗವನ್ನೂ ಪಡೆಯದೆ, ಏನೂ ಹೇಳಿಸಿಕೊಳ್ಳದೆ, ಬರಿಯ ಸೇವೆಯನ್ನು ಮಾಡಿ ವಾಪಸ್ ಬರುವ ಪರಿಸ್ಥಿತಿಯೂ ಇತ್ತು. ಈ ರೀತಿ ಸತತ ಐದು ವರ್ಷಗಳ ಕಾಲ ನಡೆಯಿತು.

ಇದರಿಂದ ಶಿಷ್ಯನಿಗೆ ಅನ್ನಿಸಿತ್ತು– ಓಹೋ! ಬಹುಶಃ ಸಂಗೀತ ಗುರುನಾಗುವ ನನ್ನ ಕನಸು ಈ ಜನ್ಮದಲ್ಲಿ ನನಸಾಗುವ ಸಾಧ್ಯತೆ ಇಲ್ಲವೋ ಏನೋ! ನನಗೆ ಇಷ್ಟೇ ಪ್ರಾಪ್ತಿಯೇನೋ!......


ಆ ಐದು ವರ್ಷಗಳ ನಂತರ ನರಸಿಂಹಲು ಊರಿಗೆ ಹಿಂತಿರುಗಿದವರು ಮರಳಿ ಹೋಗದಿರಲು ನಿರ್ಧರಿಸಿ ರಾಯಚೂರಿನಲ್ಲೇ ಉಳಿದರು. ಮರಳಿ ಹೋಗಲಿಲ್ಲ. ಕೆಲವು ದಿನಗಳಲ್ಲೇ ಅವರಿಗೆ ಗುರುಗಳಿಂದ ಪೋಸ್ಟ್‌ಕಾರ್ಡಿನಲ್ಲಿ ರಾಯಸ ಬಂತು– "ಕೂಡಲೇ ಹೊರಟು ಬಾ".

ಗುರುಗಳ ಕರೆ! ಯುವಕ ನರಸಿಂಹಲುವಿನ ಮನಸ್ಸು ಹುರುಪುಗೊಂಡಿತ್ತು. ಮತ್ತೆ ಅವರು ಗುಲ್ಬರ್ಗಾಗೆ ಓಡಿದರು. ಗುರು–ಶಿಷ್ಯರ ಮರುಭೇಟಿಯಾಯಿತು. ಗುರುವಿಗೆ ಶಿಷ್ಯನ ತಳಮಳ, ಕಾತುರ, ಆತಂಕ – ಅರ್ಥವಾಗಿತ್ತು. ತಮ್ಮ ಮುಂದೆ ಬೊಗಸೆಯೊಡ್ಡಿ ಬಗ್ಗಿ ನಿಂತ ಶಿಷ್ಯನಿಗೆ ಕೈತುಂಬಾ ರಾಗರಸಧಾರೆಯೆರೆದರು. ಶಿಷ್ಯನಿಗೋ! –ತೀರದ ಹಸಿವು, ಚಪ್ಪರಿಸುತ್ತಾ ರಸಗ್ರಹಣ ಮಾಡಿದರು. ಕಂಠಸ್ಥವಾದ ರಾಗಗಳನ್ನು ಕ್ಲಾರಿಯೋನೆಟ್‌ನೊಳಗೆ ತುಂಬಿ ಮತ್ತೊಂದು ತುದಿಯಿಂದ ಹೊರದೆಗೆಯುವ ಪರಿಶ್ರಮವನ್ನು ಮಾಡಿದರು. ಇದೆಲ್ಲದರ ಫಲ.....ನರಸಿಂಹಲು ವಡವಾಟಿಯವರು ಉತ್ತಮ ವಾದಕರಷ್ಟೇ. ಅಲ್ಲದೆ ಉತ್ತಮ ಗಾಯಕರೂ ಆಗಿ ರೂಪುಗೊಳ್ಳುತ್ತಾ ಹೋದರು.

ಕಲಿಯುವುದಾದರು ಯಾವ ಪರಿ! ಗುರು ನಡೆದ ಕಡೆ ಶಿಷ್ಯ ನಡೆದರು. ಅಕ್ಷರಶಃ! ಉದಯಕಾಲದೊಳೆದ್ದು ಶೌಚಕರ್ಮಕ್ಕೆಂದು ಗುರು ಹೊರಟರೆ

ಅವರ ಹಿಂದೆ "ತಂಬಿಗಿ" ಅವರಿಗಾಗಿ ಹಿಡಿದು ಶಿಷ್ಯನೂ ಹೊರಟನೆ! ಮುಗಿಸಿಕೊಂಡು ಮರಳುವಾಗ ಗುರುವಿಗೆ ಯಾವುದೋ ಒಂದು ರಾಗದ ಸ್ಫೂರ್ತಿ ಬಂದು ಹಾಡಿದರೆ ಶಿಷ್ಯನ ಬೊಗಸೆ ಅಲ್ಲಿ ಸಿದ್ಧ. ಅಲ್ಲಿ ಇಲ್ಲಿ ನೆಲ ಹುಡುಕಿ ಒಂದು ಕಾಗದದ ತುಂಡೋ, ಇಲ್ಲವೆ ಸಿಗರೇಟು ಪ್ಯಾಕೋ ಸಿಕ್ಕಿದ್ದನ್ನು ಎತ್ತಿ ಅದರಲ್ಲಿ ಚೀಸ್ ಬರಕೊಳ್ಳಲು ಶಿಷ್ಯನಿಗೆ ಆದೇಶ. ಅಂತಹ ಕಾಗದದ ಚೂರುಗಳೆಷ್ಟೋ! ಸಿಗರೇಟು ಪ್ಯಾಕುಗಳು ಎಷ್ಟೋ!..... ಅವೆಲ್ಲವನ್ನೂ ಈ ಶಿಷ್ಯ ಈಗಲೂ ತಮ್ಮ ಬಳಿ ಜೋಪಾನವಾಗಿ ಇಟ್ಟಿದ್ದಾರೆಂದರೆ ಈತನ ಶ್ರದ್ಧೆ ಗುರುನಿಷ್ಠೆ –ಎಷ್ಟು ಇದ್ದಿರಬಹುದು!

ನರಸಿಂಹ ಪಂಡಿತ್ ನರಸಿಂಹಲು ವಡವಾಟಿಯಾಗಿ ರೂಪುಗೊಂಡ ಪರಿಯನ್ನು ಯಾವುದೇ ಉಪಮಾನ ನೀಡಿ ಹೇಳಹೋದರೂ ಕ್ಲೀಷೆಯಾದೀತು. ಇಂತಹ ಒಬ್ಬ ಗುರುನಿಷ್ಠ ಈ ಕಾಲದಲ್ಲಿ ನಮ್ಮ ಜೊತೆ ಒಡನಾಡಿದ್ದರು ಎಂದು ಹೇಳಿದರೆ ಮುಂದಿನ ತಲೆಮಾರಿಗೆ ಇದನ್ನು ನಂಬುವುದೇ ಒಂದು ಪ್ರಯಾಸದ ಸಂಗತಿ.



ತಮ್ಮ ಗುರುಗಳಾದ ಶ್ರೀ ಸಿದ್ಧರಾಮ ಜಂಬಲದಿನ್ನಿಯವರ
ಗಾಯನ ಸಾಥ್ ನೀಡಿದ್ದು

❑

ಚರಣ 7

# ಸುರಮಣಿ

**ಗು**ರು-ಶಿಷ್ಯ ಸಂಬಂಧ ಮೂರು ತರಹೆಯವು ಇವೆ.

ಒಂದು:- ತನ್ನ ಶಿಷ್ಯನಿಗೆ ಗುರು "ಸರಿಗಮ"ದ ಪ್ರತಿಸ್ವರದಲ್ಲೂ ಶಿಷ್ಯನ ದನಿ ಯೊಂದಿಗೆ ತನ್ನ ದನಿ ಸೇರಿಸಿ ಪ್ರತಿಕ್ಷಣವೂ ತಿದ್ದಿ-ತೀಡಿ ಹೇಳಿಕೊಡುವುದು. ಇಲ್ಲಿ ಶಿಷ್ಯ ಹೆಚ್ಚು ಕಲಿಯುವುದು ಅಪರೂಪ.

ಎರಡು:- ಶಿಷ್ಯ ತನ್ನ ಗುರುವಿನಿಂದ ಒಂದು ಮಟ್ಟಕ್ಕೆ ಕಲಿತು, ಅಲ್ಲಿಗೆ ತಾನು ಕಲಿತೆನೆಂಬ ಅಲ್ಪತೃಪ್ತನಾಗಿ ಲಘುಸಂಗೀತ ಹಾಡುತ್ತ ಪ್ರಸಿದ್ಧ ಪುರುಷನಾಗುವುದು. ಇವರು ಪ್ರಸಿದ್ಧರಾದಾರು, ಸಿದ್ಧರಾಗುವ ಸಾಧ್ಯತೆ ಕಡಿಮೆ.

ಮೇಲಿನ ಎರಡು ವರ್ಗಗಳೂ ತಮ್ಮ ಗುರು ಇಂಥವನೆಂದು ತಾವು ತಾವೇ ಹೇಳಿಕೊಂಡು ತಿರುಗುತ್ತಾರೆ. ಅವರಿಗೆ ಹೇಳಿಕೊಟ್ಟವ ತಾನು ಅವರ ಗುರು ಎಂದು ಎಲ್ಲೂ ತಾನಾಗಿಯೇ ಹೇಳಿಕೊಳ್ಳುವುದಿಲ್ಲ.

ಈ ಎರಡೂ ವರ್ಗಗಳಿಂದ ಬೇರೆಯೇ ಆದ ಮೂರನೆಯ ವರ್ಗವೊಂದಿದೆ.

ಈ ವರ್ಗದಲ್ಲಿ ಶಿಷ್ಯ ತನ್ನ ಗುರುವನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಿಸುತ್ತಾನೆ. ಅವನ ಸೇವೆಯೇ ತನಗೆ ಮಹಾಭಾಗ್ಯ ಎಂದುಕೊಂಡು ಗುರುವಿನ ಊಳಿಗ ಮಾಡುತ್ತಾನೆ. ಗುರುವಿನ ಹೆಜ್ಜೆಗಳು ಅವನ ದಾರಿಗೆ ಗುರುತಾಗುತ್ತವೆ. ಗುರುವಿಗೆ ಇದು ಅರ್ಥವಾದಾಗ ಆತನ ಹೃದಯ ಈ ಶಿಷ್ಯನಿಗಾಗಿ ತೆರೆದುಕೊಳ್ಳುತ್ತದೆ. ಗುರು-ಶಿಷ್ಯರ "ಅದ್ವೈತತೆ"ಯ ಅನುಭವ - ಅನುಭಾವವಾಗುತ್ತದೆ. ಈ ಗುರು-ಶಿಷ್ಯರು ಪರಸ್ಪರ ಸಂಬಂಧವನ್ನು ಹೆಮ್ಮೆಯಿಂದ ಎಲ್ಲಾ ಕಡೆ ಹೇಳಿಕೊಳ್ಳುತ್ತಾರೆ.

ಪಂಡಿತ ಜಂಬಲದಿನ್ನಿ ಗುರುಗಳ ಮತ್ತು ವಡವಾಟಿಯವರ ಗುರು-ಶಿಷ್ಯ ಸಂಬಂಧ ಇದು. ಇಂತಹ ಶಿಷ್ಯನಿಗಲ್ಲದೆ ಇನ್ನಾರಿಗೆ ಒಲಿದಾಳು ಸಂಗೀತ

ಶಾರದೆ! ನರಸಿಂಹಲು ವಡವಾಟಿಯವರು ದಿನೇದಿನೇ ಪರಿಪೂರ್ಣತೆಯತ್ತ ಸಾಗುತ್ತ ನಡೆದರು.

ಈ ಸಾಧನೆಯ ಕಾಲದಲ್ಲಿ ಆರ್ಥಿಕ ತೊಂದರೆಯ ಅನುಭವ ಸಾಕಷ್ಟು ಆಯಿತು. ಆದರೆ ನರಸಿಂಹಲು ಧೈರ್ಯಗೆಡಲಿಲ್ಲ. ಕೊನೆಗೊಮ್ಮೆ ಆಕಾಶವಾಣಿ ಕಲಾವಿದನಾಗಿ ಆಯ್ಕೆಯಾದ ನಂತರ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಸುಧಾರಿಸತೊಡಗಿತು.

ಪಂಡಿತ ಜಂಬಲದಿನ್ನಿಯವರು ಹಾಡುತ್ತಿದ್ದ ಸಂಗೀತ ಗ್ವಾಲಿಯರ್ ಮತ್ತು ಜಯಪುರ ಘರಾಣೆಯದು. ಸಾಧಾರಣವಾಗಿ ಒಬ್ಬ ಸಂಗೀತಗಾರ ಒಂದು ಘರಾಣೆಯನ್ನು ಅನುಸರಿಸುತ್ತಾನೆ. ಪಂ. ಭೀಮಸೇನ ಜೋಷಿ, ಗಂಗೂಬಾಯಿ ತಾಯಿ ಹಾನಗಲ್ಲರು ಮತ್ತು ಅವರ ಶಿಷ್ಯರು ಪಡೆದದ್ದು ಪಂಡಿತ ಸವಾಯಿ ಗಂಧರ್ವರ ಕಿರಾಣಾ ಘರಾಣೆ. ಒಂದೊಂದು ಘರಾಣೆಯದ್ದು ಒಂದೊಂದು ಸಂಗೀತ ಶೈಲಿ. ಜಂಬಲದಿನ್ನಿಯವರು ಗ್ವಾಲಿಯರ್ ಘರಾಣೆಯ ಶೈಲಿಯನ್ನು ಕಲಿತದ್ದು "ಸಂಗೀತದ ಸಂತ" ಪಂಚಾಕ್ಷರಿ ಗವಾಯಿಯವರಿಂದ. ಪಂಚಾಕ್ಷರಿ ಯವರು ಕಲಿತದ್ದು ನೀಲಕಂಠ ಬುವಾ ಮಿರಜಕರ್ ಅವರಿಂದ.

ನಂತರ ಪಂಚಾಕ್ಷರಿಯವರು ಲಿಂಗೈಕ್ಯರಾದ ಮೇಲೆ ಜಂಬಲದಿನ್ನಿ ಗುರುಗಳು ಪಂಡಿತ ಮಲ್ಲಿಕಾರ್ಜುನ ಮನಸೂರರಲ್ಲಿ ಶಿಷ್ಯತ್ವ ಪಡೆದು ಅವರಲ್ಲಿ ಅಭ್ಯಾಸ ಮಾಡಿದರು. ಅವರದು ಜಯಪುರ ಘರಾಣೆ. ಹೀಗಾಗಿ ಜಂಬಲದಿನ್ನಿಯವರ ಸಂಗೀತ ಎರಡು ಶೈಲಿಗಳ ಮೇಳವಾಗಿ ಹೊಮ್ಮಿತ್ತು. ಅವರ ಏಕಮಾತ್ರ ಶಿಷ್ಯರಾದ ನರಸಿಂಹಲುರವರದ್ದು ಸ್ವಾಭಾವಿಕವಾಗಿ ಗ್ವಾಲಿಯರ್ ಜಯಪುರ ಘರಾಣೆಯಾಗಿದ್ದು. ಅವರು ಅದನ್ನು ಕ್ಲಾರಿಯೋನೆಟ್‌ನಲ್ಲಿ ಗಾಯಕಿ ಶೈಲಿಯಲ್ಲಿ ಅಳವಡಿಸಿಕೊಂಡರು.

ಸಂಗೀತ ಸಾಧಕನಿಗೆ ಬೇರೆ ಸಂಗೀತ ವಿಧಾನಗಳ ಪರಿಚಯವೂ ಇರಬೇಕು. ಗುರುಗಳು ಶಿಷ್ಯನಿಗೆ ಇದಕ್ಕಾಗಿ ರಾಯಚೂರಿನಲ್ಲೇ ಇದ್ದ ಒಬ್ಬ ಹಾರ್ಮೋನಿಯಂ ಪಟುವಿನಲ್ಲಿ ಕಲಿಯ ಹೇಳಿದರು. ಆ ಪಟುವಿನ ಹೆಸರು ಕಾಖಾಚಾರ್ಯ ಎಂದಿರಲಿ. ನಿಜ ಹೆಸರು ಬೇಡ.

ಗುರುಗಳು ಯಾವ ಉದ್ದೇಶ್ಯದಿಂದ ಈ ಮಾತು ಹೇಳಿದರೆಂಬುದು ಅರ್ಥವಾಗಲಿಲ್ಲ. ಆ ಘಟ್ಟದಲ್ಲಿ ಆತನಿಗೆ ಸಂಗೀತವಿನ್ನೂ ಸಿದ್ಧಿಸಿಯೂ ಇರಲಿಲ್ಲ. ಗುರುವಿನಾಣತಿಯನ್ನು ಪಾಲಿಸಲೇಬೇಕಲ್ಲ!

ಕಾಖಾಚಾರ್ಯರು ಸಂಗೀತಜ್ಞಾನವಿರುವವರೇ, ಚೆನ್ನಾಗಿ ಹಾರ್ಮೋನಿಯಂ ಬಾರಿಸುತ್ತಿದ್ದರು. ಆದರೆ ಸ್ವರ ಶುದ್ಧಿ ಇರಲಿಲ್ಲ. ದನಿ ಇಂಪಾಗಿರಲಿಲ್ಲ. ಇಷ್ಟಾಗಿದ್ದರೆ ಯಾವ ಬಾಧಕವೂ ಇರಲಿಲ್ಲ. ಆದರೆ ಅವರು ಮಾಡುತ್ತಿದ್ದುದು ಸಂಗೀತದ ವ್ಯಾಪಾರ-ವಿಕ್ರಯ.

ಆಗಿನ ಕಾಲಕ್ಕೆ ಹತ್ತು ರೂಪಾಯಿ -ಇಪ್ಪತ್ತು ರೂಪಾಯಿ ಶುಲ್ಕವೆಂದರೆ ಒಳ್ಳೆಯ ಮೊತ್ತವೇ. ನರಸಿಂಹಲು ಕೊಡುತ್ತಿದ್ದುದು ಹತ್ತು ರೂಪಾಯಿ. ಆ ಹತ್ತು ರೂಪಾಯಿಗಳಿಗೆ ಅವರು ನೀಡುತ್ತಿದ್ದದ್ದು ಕೊಸರು. ಇಂತಹ ಶಿಷ್ಯರಿಗೆ ಪಾಠ ಹೇಳುವಾಗ ಇಪ್ಪತ್ತು ರೂಪಾಯಿ ಕೊಡುವ ಶಿಷ್ಯನ ಪ್ರವೇಶವಾದರೆ ಹತ್ತು ರೂಪಾಯಿಯ ಶಿಷ್ಯರಿಗೆ ಕೊಕ್!

ನರಸಿಂಹಲುವಿಗೆ ಇದು ಜುಗುಪ್ಸೆ ತರಿಸಿತು. ಜೊತೆಗೆ ರಸದ ಕಬ್ಬನ್ನು ಸವಿದ ಆನೆಯಮರಿಗೆ ಕಸ-ಜೊಂಡು ಇಷ್ಟವಾದೀತೆ! ಅಲ್ಲಿಗೆ ಬೇರೆಡೆ ಸಂಗೀತ ಕಲಿಯುವ ಪ್ರಯತ್ನ ಮುರಿದುಬಿತ್ತು.

* * * * *

1965ರಿಂದ 1978ರವರೆಗೂ ಗುರುಸೇವೆ, ಸಂಗೀತ ಸಾಧನೆ -ಎರಡೂ ಅವ್ಯಾಹತವಾಗಿ ಸಾಗಿತು. ಅಲ್ಲಿ-ಇಲ್ಲಿ ಸಂಗೀತ ಕಛೇರಿಯೂ ಕೆಲವು ಸಿಗುತ್ತಿದ್ದುದರಿಂದ ಹಣಕಾಸಿನ ಪರಿಸ್ಥಿತಿ ಸ್ವಲ್ಪ-ಸ್ವಲ್ಪ ಸುಧಾರಿಸಿಕೊಂಡಿತ್ತು. 1976ರಲ್ಲಿ ನರಸಿಂಹಲು ಆಕಾಶವಾಣಿ ಕಲಾವಿದನಾದ ಮೇಲೆ ಅಡ್ಡಿ ಇಲ್ಲ ಎನ್ನುವ ಮಟ್ಟಿಗೆ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಆಗಿನ ಕಾಲದಲ್ಲಿ ರಾಯಚೂರು-ಗುಲ್ಬರ್ಗಾದಿಂದ ಆಕಾಶವಾಣಿ ಕಲಾವಿದರು ಹೆಚ್ಚು ಇರಲಿಲ್ಲ. ಅದರಲ್ಲೂ ಕ್ಲಾರಿಯೋನೆಟ್ ವಾದ್ಯ ನುಡಿಸಬಲ್ಲ ಹಿಂದೂಸ್ತಾನಿ ಸಂಗೀತಗಾರನಂತೂ ವಡವಾಟಿಯವರೊಬ್ಬರೇ. ಈ ಕಾರಣದಿಂದ ಇವರಿಗೆ ಸಾಕಷ್ಟು ಕಾರ್ಯಕ್ರಮಗಳು ಸಿಗುತ್ತಿದ್ದು ಜೇಬು ಹಣದೊಂದಿಗೆ ಸಂಭಾಷಿಸುವ ಅವಕಾಶ ಮೆಲ್ಲ-ಮೆಲ್ಲನೆ ಕೂಡಿ ಬಂತು.

ಜಂಬಲದಿನ್ನಿ ಗುರುಗಳು 1988ರ ಡಿಸೆಂಬರ್ 31 ರಲ್ಲಿ ನಿಧನರಾದ ನಂತರ ನರಸಿಂಹಲುರವರಿಗೆ ಬಹುದೊಡ್ಡ ನಿಧಿ ಕಳೆದುಕೊಂಡಂತನಿಸಿತ್ತು. ಈ ಬಗ್ಗೆ ವಿವರವಾಗಿ ಮುಂದೆ ಹೇಳುವೆ.

ನರಸಿಂಹಲುರವರಿಗೆ ಆಗ ತಮ್ಮ ಗುರುವಿನ ಗುರುವಾದ ಮನಸೂರ ಬುವಾರವರ ಸೇವೆಯನ್ನು ಕೆಲಕಾಲ ಮಾಡಿ ಜ್ಞಾನಗಳಿಸುವ ಮನಸ್ಸಾಯಿತು ಬುವಾರರವರು ಗುರುಗಳಿಗಿಂತ ಹತ್ತು ವರ್ಷದೊಡ್ಡವರು. ಜ್ಞಾನದಲ್ಲೂ ಹಿರಿಯರು.

ಅವರಲ್ಲಿಗೆ ಯಾರಾದ್ರೂ "ನಿಮ್ಮಲ್ಲಿಗೆ ನಾನು ಸಂಗೀತ ಕಲಿಯಲು ಬಂದಿದ್ದೇನೆ" ಎಂದರೆ ಅವರು ಅಷ್ಟು ಸುಲಭವಾಗಿ ಕಲಿಸಲು ಒಪ್ಪುವವರಲ್ಲ. ಮನೆಯ ಗೇಟಿನ ಹೊರಗಿನಿಂದಲೇ ಆಚೆ ಕಳಿಸುವಂಥವರು. ಅವರಷ್ಟೇ ಅಲ್ಲ, ಬಹಳಷ್ಟು ಮೇರು ಸಂಗೀತಗಾರರು ಇರುವುದೇ ಹಾಗೆ.

ತ.ರಾ.ಸು.ರವರ ಹಂಸಗೀತೆ ಓದಿದ್ದೀರಲ್ಲ! ಅದರಲ್ಲಿ ವೆಂಕಟಸುಬ್ಬಯ್ಯನಿಗೆ ಸಿಕ್ಕಿದ ಗುರುವಿನ ಹಾಗೆ. ಶಿಷ್ಯ ಗಟ್ಟಿ ವಸ್ತು ಎಂದು ಖಾತ್ರಿಯಾದ ಹೊರತು ಅವರು "ಊಹೂಂ!"

ಮನಸೂರ ಬುವಾರವರಿಗೆ ನರಸಿಂಹಲುರವರು ತಮ್ಮ ಶಿಷ್ಯ ಸಿದ್ಧರಾಮ ಜಂಬಲದಿನ್ನಿಯವರ ಶಿಷ್ಯ ಎಂಬುದು ತಿಳಿದಿತ್ತಲ್ಲವೇ! ಆದ್ದರಿಂದ ನರಸಿಂಹಲುರ ವರಿಗೆ ಮನಸೂರ ಬುವಾರೊಡನೆ ಮಾತನಾಡಲು ಯಾವ ಕಷ್ಟವೂ ಆಗಿಲಿಲ್ಲ. ಬುವಾರೊಡನೆ ಇವರು ಅರಿಕೆ ಮಾಡಿಕೊಂಡದ್ದು ಇಷ್ಟೇ– "ನನಗೆ ತಮ್ಮ ಸೇವೆ ಮಾಡುವ ಅವಕಾಶ ಕೊಡಿ." ಮನಸೂರರು ಇದಕ್ಕೆ ಸಮ್ಮತಿಸಿದರು.

ಹಾಗೆ ಯಾವ ಗುರುವೂ ಯಾರ್‍ಯಾರಿಂದಲೋ ಸೇವೆಮಾಡಿಸಿ ಕೊಳ್ಳಲು ಇಷ್ಟ ಪಡುವುದಿಲ್ಲ. ತನಗೆ ಪ್ರಿಯನಾದ, ತಾನು ಮೆಚ್ಚುವ ಶಿಷ್ಯನಾದರೆ ಮಾತ್ರ ಅವರಿಗೆ ಆದೀತು. ಈ ನಿಟ್ಟಿನಲ್ಲಿ ಯೋಚಿಸಿದರೆ ನರಸಿಂಹಲುರವರು. ಬುವಾರಿಗೆ ಪ್ರಿಯಶಿಷ್ಯನಾಗುವ ಎಲ್ಲ ಅರ್ಹತೆ ಗಳಿಸಿದ್ದರು. ಮನಸೂರ ಬುವಾರವರಿಂದ ಅನುಮತಿ ಸಿಕ್ಕಿತು. ಸೇವೆಯ ದಾರಿ "ಸ–ರಾಗ"ವಾಯಿತು. ಸಂಗೀತ ಪರಮಹಂಸನ ಸೇವಾ ಕಾಲದಲ್ಲಿ ಅವರ ಬಾಯಿಂದ ಉದುರಿದ ಮುತ್ತುಗಳನ್ನು ಆಯ್ದು ನರಸಿಂಹಲು ಸಂಪಾದಿಸಿ ಸಿರಿವಂತರಾದರು. ಧಾರವಾಡಕ್ಕೆ ಆಕಾಶವಾಣಿ ಕಾರ್ಯಕ್ರಮ ನೀಡಲು ಹೋದಾಗಲೆಲ್ಲ ಬುವಾರ ಮನೆಗೆ ಹೋಗುವುದು, ಅಲ್ಲಿ ಅವರ ಮೈಕೈಗೆ ಎಣ್ಣೆ ತೀಡಿ ಮಾಲಿಷ್‌ಮಾಡಿ ಅವರಿಗೆ ಹಗುರೆನ್ನಿಸುವಂತೆ ಮಾಡುವುದು – ಈ ಕಾಯಕದಲ್ಲಿ ನರಸಿಂಹಲು ತೃಪ್ತಿಕಂಡರು.

ಸಮಯದ ಕುದುರೆ ನೆಗೆದು ವರ್ಷಗಳಷ್ಟು ಮುಂದಕ್ಕೆ ಜಿಗಿದಿದೆ, ಹಿಂದಕ್ಕೆ ಬರೋಣ.

* * * * *

1981ನೇ ಇಸವಿ. ಅಷ್ಟು ಹೊತ್ತಿಗಾಗಲೇ ಹದಿನೈದು ವರ್ಷಗಳ ಕಾಲ ಜಂಬಲದಿನ್ನಿ ಗುರುಗಳಲ್ಲಿ ನರಸಿಂಹಲು ಶಿಷ್ಯ ವೃತ್ತಿ ಮಾಡಿದ್ದರು. ಅಷ್ಟರೊಳಗೆ 1975ರಲ್ಲಿ ಆಕಾಶವಾಣಿ ಕಲಾವಿದರಾಗಿದ್ದರು.




ಮುಂಬೈ ಸುರ್ ಸಿಂಗಾರ್ ಸಂಸ್ಥೆಯಿಂದ ಸುರ್‌ಮಣಿ ಪ್ರಶಸ್ತಿ ಪಡೆದ ಸಂದರ್ಭದಲ್ಲಿ

ಮುಂಬೈಯಲ್ಲಿ ಸುರಸಿಂಗಾರ ಸಂಸದ್ ಎಂಬ ಒಂದು ಸಂಸ್ಥೆ ಪ್ರತಿವರ್ಷವೂ ಒಂದು ಸಂಗೀತ ಸಮ್ಮೇಳನವನ್ನು ನಡೆಸುತ್ತದೆ. ಈ ಸಮ್ಮೇಳನದ ವೈಶಿಷ್ಟ್ಯವೆಂದರೆ ಇದರಲ್ಲಿ "ನಾಳಿನ ಕಲಾವಿದ"ನನ್ನು ಗುರುತಿಸಲಾಗುತ್ತದೆ. ಮಹಾ-ಮಹಾ ಸಂಗೀತ ಸಂಗೀತ ದಿಗ್ಗಜಗಳು ಇದರಲ್ಲಿ ತೀರ್ಪುಗಾರರಾಗಿರುತ್ತಾರೆ. ಅಷ್ಟೇ ಮಹಾ ದಿಗ್ಗಜರುಗಳು ಪ್ರೇಕ್ಷಕರ ಸಾಲಿನಲ್ಲೂ ಇರುತ್ತಾರೆ. ಏಳು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಸ್ಪರ್ಧೆಗಾಗಿ ಬರುವವರು ಉತ್ತಮ ಮಟ್ಟದ ಪರಿಣತಿ ಪಡೆದಿರದಿದ್ದಲ್ಲಿ ಇದರಲ್ಲಿ ಪಾಲ್ಗೊಳ್ಳುವುದು ಅವರ ಹುಚ್ಚುತನವಾದೀತು.

ನರಸಿಂಹಲು ತನ್ನ ಗುರುಗಳಲ್ಲಿ ಈ ವಿಷಯದಲ್ಲಿ ಸಲಹೆ ಕೇಳಿದರು. ಗುರುಗಳಿಗೆ ಆತ್ಮವಿಶ್ವಾಸವಿತ್ತು.... ಕಲಿಸಿದವರು ಅವರೇ ಅಲ್ಲವೇ!

"ಅಲಬತ್ ಹೋಗಪ್ಪಾ, ನಿನಗ ಯೋಗ್ಯತಾ ಐತಿ. ಅಲ್ಲಿ ನಿನ್ನ ಕೆಲಸಾ ನೀನು ಮಾಡು, ಮುಂದಿಂದು ಶಿವಾ ನೋಡಿಕೋತಾನ."

-ಅಂದರು ಗುರುಗಳು. ಅಂಥ ಒಂದು ಅವಕಾಶ ಶಿಷ್ಯನಿಗೆ ಸಿಗಬೇಕೆಂಬ ಹೆಬ್ಬಯಕೆ ಅವರಿಗೂ ಇತ್ತು. ಆ ಸ್ಪರ್ಧೆಯೇ ಅಂಥಾದ್ದು.

ಸುರ್ ಸಿಂಗಾರ್ ಸಂಸ್ಥೆಯ ರೂವಾರಿ ಶ್ರೀ ಬ್ರಿಜ್ ನಾರಾಯಣ್‌ರವರು ಮಹಾನ್ ಸಂಗೀತಪ್ರೇಮಿ. ಪ್ರತಿವರ್ಷವೂ ಅವರು ನಡೆಸುವ ಆ ಮೇಳದಲ್ಲಿ

ಮೂರು ಪ್ರಕಾರಗಳಿಗೆ ಬಹುಮಾನ ಇಡಲಾಗಿರುತ್ತದೆ. ಗಾಯನ–ವಾದನಕ್ಕೆ ಸುರಮಣಿ ಬಿರುದು, ತಾಳವಾದ್ಯಕ್ಕೆ ತಾಲಮಣಿ ಬಿರುದು ಹಾಗೂ ನೃತ್ಯಕ್ಕೆ ಸಿಂಗಾರಮಣಿ ಬಿರುದು. ಜೊತೆಗೆ ವಿಜೇತರಿಗೆ ತಲಾ ರೂ.5,000/– ಚೆಕ್. (ಆಗಿನ ಕಾಲಕ್ಕೆ, ಈಗ ಹೆಚ್ಚಾಗಿದ್ದೀತು). ವಿಜೇತರಿಗೆ ಆ ಸಂಸ್ಥೆಯೇ ನಡೆಸುವ ಹರಿದಾಸ ಸಂಗೀತ –ಸಮ್ಮೇಳನದಲ್ಲಿ ತಮ್ಮ ಕಲಾಪ್ರದರ್ಶನ ನೀಡುವ ಸದವಕಾಶವೂ ಸಿಗುತ್ತದೆ. ಸಂಗೀತ–ನೃತ್ಯ ಜಗತ್ತಿನಲ್ಲಿ ಈ ಸ್ಪರ್ಧೆ ಮಹತ್ವದ್ದೆಂದು ಮಾನ್ಯವಾಗಿದೆ.

ನರಸಿಂಹಲು ಅರ್ಜಿ ಕಳಿಸಿದರು. ಉತ್ತರವೂ ಬಂತು. ಅವರ ಸಂಗೀತ ಕಛೇರಿಗೆ ಅನುಮತಿ ದೊರಕಿತ್ತು. ಮುಂಬೈಗೆ ಹೋಗಿ ಬರುವ ಅಲ್ಲಿ ಇಳಿದುಕೊಳ್ಳುವ ಹಾಗೂ ಊಟ ಉಪಾಹಾರಗಳ ಖರ್ಚೆಲ್ಲ ಕಲಾವಿದರದ್ದೇ.

ಹೊರಡುವ ದಿನ ಬಂತು. ಗುರುವಿನ ಹರಕೆಯನ್ನು ಶಿರದ ಮೇಲೆ ಹೊತ್ತು ನರಸಿಂಹಲು ಸಿದ್ಧರಾಗಿ ಮುಂಬೈ ದಿಕ್ಕಿಗೆ ಪ್ರಯಾಣ ಬೆಳೆಸಿದರು.

ಮುಂಬೈಯಲ್ಲಿ ವಿ.ಟಿ. ಸ್ಟೇಷನ್‌ನಲ್ಲಿ ಇಳಿದ ನರಸಿಂಹಲು ಹತ್ತಿರದಲ್ಲಿ ಆಜ಼ಾದ್ ಮೈದಾನದ ಬಳಿ ಇದ್ದ ವಿಷ್ಣುಭವನ ಎಂಬ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದರು. ಸರಳವಾದ, ಅಗ್ಗವಾದ ಹೋಟೆಲ್ ಅದು, ಸಾಕು ಬಿಡಿ, ನಡೆದೀತು.

ಬೆಳಗಿನಿಂದ ಸಂಜೆಯವರೆಗೂ ನಡೆಯುತ್ತಿತ್ತು ಸ್ಪರ್ಧೆ. ಸ್ಪರ್ಧೆ ನಡೆಯುವ ಸ್ಥಳಕ್ಕೆ ತೆರಳಿದ ನರಸಿಂಹಲುರವರು ಅಲ್ಲಿಯ ಪರಿಸ್ಥಿತಿಯನ್ನು ಅಳೆದು ತೂಗಿ ನೋಡಿದರು. ನಿರಾಶೆಯ ದಿಕ್ಕಿನಲ್ಲಿ ನಡೆಯುತ್ತಿತ್ತು ಮನಸ್ಸು.

ಸಂಸ್ಥೆಯ ವತಿಯಿಂದ ಯಾವ ಗಾಯಕ–ವಾದಕನಿಗೂ ಪಕ್ಕವಾದ್ಯದ ನೆರವು ಇರಲಿಲ್ಲ. ಎಲ್ಲವನ್ನೂ ಸ್ಪರ್ಧಾಳುವೇ ಹೊಂಚಿಕೊಳ್ಳಬೇಕು. ಆದರೆ ನರಸಿಂಹಲುರವರಿಗೆ ಅಲ್ಲಿ ಪರಿಚಯಸ್ಥರಾದರೂ ಯಾರಿದ್ದರು! ಯಾರನ್ನು ಕೇಳುವುದು? ಯಾವ ತಬಲಾ ವಾದಕನನ್ನು ಕೇಳಿದರೂ ಎಲ್ಲರೂ ನಿರಾಕರಿಸುವವರೇ!

ಮುಂಬೈಗೆ ಬಂದುದಷ್ಟೇ ಭಾಗ್ಯ! ಇದು ಆಗುವುದಲ್ಲ, ಹೋಗುವುದಲ್ಲ. ಇದೆಲ್ಲ ಗೊತ್ತಿದ್ದಿದ್ದರೆ ರಾಯಚೂರಿನಿಂದಲೇ ಯಾರನ್ನಾದರೂ ಕರೆತರಬಹುದಿತ್ತು. ಈಗ....... "ಚಿಂತೆ ಯಾತಕೋ ಮನುಜಾ, ಭ್ರಾಂತಿ ಯಾತಕೋ!" ಸುಂದರ ಕನಸು ಬಣ್ಣ ಕಳೆದುಕೊಂಡು ಪೇಲವವಾಗುತ್ತಿತ್ತು.

ನರಸಿಂಹಲು ಸಭೆಯಿಂದ ಹೊರಬಂದರು ಇನ್ನೇನು ಹೊರಡಬೇಕು, ಹಿಂದಿನಿಂದ ಹೆಗಲಮೇಲೆ ಯಾರದ್ದೋ ಕೈಬಿತ್ತು. ನರಸಿಂಹಲು ತಿರುಗಿ ನೋಡಿದರು- ಎಂದೋ ಒಮ್ಮೆ ಗುರುಗಳೊಡನೆ ಅವರ ಕಛೇರಿಯಲ್ಲಿ ಭಾಗವಹಿಸಿದಾಗ ಪರಿಚಯವಾದಾತ. ಅರ್ಜುನ್ ಎಂದು ಹೆಸರು. ಹೈದರಾಬಾದಿನ ಶೇಖ್ ದಾವೂದ್ ಸಾಹೇಬ್ ಎಂಬ ಪ್ರಸಿದ್ಧ ತಬಲಾಪಟುವಿನ ಶಿಷ್ಯ. ಸಮಾರಂಭಕ್ಕೆ ಶ್ರೋತೃವಾಗಿ ಬಂದಿದ್ದರು.

ನರಸಿಂಹಲುರವರ ಸಮಸ್ಯೆಯನ್ನು ಅರ್ಜುನ್ ಕೇಳಿಸಿಕೊಂಡರು. ಅವರ ಸ್ವತಃ ತಬಲಾ ಕಲಾವಿದರಷ್ಟೇ! ನರಸಿಂಹಲುರವರಿಗೆ ಸಾಥ್ ನೀಡಲು ಅವರು ತಯಾರು. ಆದರೆ ತಬಲಾ ತಂದಿಲ್ಲವಲ್ಲ!

"ನೀವೇನೂ ಕಾಳಜಿ ಮಾಡಬೇಡಿ. ಸ್ಟೇಜ್ ಹಿಂದೆ ಕಲಾವಿದರು ಇರುತ್ತಾರೆ. ಯಾರನ್ನಾದರೂ ಕೇಳೋಣ ದೇವರಿದ್ದಾನೆ."

ಇಬ್ಬರೂ ರಂಗದ ಹಿಂದೆ ಹೋದರು. ಮರೆತಿದ್ದೆ, ಶೃತಿಗೆ ತಾನ್‌ಪುರಾ ಮೀಟಲು ಗೆಳೆಯನೊಬ್ಬನನ್ನೂ ಹುಡುಕಿದರು ಅರ್ಜುನ್. ಆದರೆ ತಾನ್‌ಪುರಾ ಸಹ ಬೇಕಾಗಿತ್ತು. ಅಲ್ಲಿ ಅವರಿವರನ್ನು ಯಾಚಿಸಿದರು. ಆದರೆ ಯಾರೂ ಅಂತಹ ದಾನಶೂರ ಇರಲಿಲ್ಲ. ನರಸಿಂಹಲುವಿನ ಸಮಯ ಹತ್ತಿರ ಬರುತ್ತಿತ್ತು. ಮೂವರೂ ಒಟ್ಟಾಗಿ ಒಂದು ನಿರ್ಧಾರಕ್ಕೆ ಬಂದರು.

ಐದು ನಿಮಿಷಗಳಿವೆ ಎನ್ನುವಾಗ ಹತ್ತಿರದಲ್ಲಿದ್ದ ಒಂದು ತಬಲಾ-ಡಗ್ಗಾ ಮತ್ತು ಒಂದು ತಾನಪುರವನ್ನು ಅರ್ಜುನ್ ಮತ್ತು ಅವರ ಗೆಳೆಯ ಥಕ್ಕನೆ ಎತ್ತಿಕೊಂಡರು. ನರಸಿಂಹಲುರವರ ಹೆಸರು ಕರೆಯಲಾಯಿತು. ಮೂರೂ ಜನ ವೇದಿಕೆಗೆ ಪ್ರವೇಶಿಸಿದರು.

ಒಳಗೆ ಆ ಎರಡೂ ವಾದ್ಯಗಳ ಮಾಲೀಕರು "ಹೋ" ಎನ್ನುತ್ತಿದ್ದರು. ಈ ಮೂರೂ ಜನರಿಗೆ ಪರಿವೆಯೇ ಇರಲಿಲ್ಲ.

ವೇದಿಕೆಯ ಮೇಲೆ ಬಂದು ಕುಳಿತವರೇ ಮೂರು ವಾದ್ಯಗಳನ್ನು ಅಲ್ಲಿಯೇ ಕಾರ್ಯಕ್ರಮಕ್ಕೆ ಹದಗೊಳಿಸಿಕೊಂಡರು. ಕೇವಲ ನಲವತ್ತೈದು ನಿಮಿಷಗಳ ಕಾಲಾವಕಾಶ ಮಾತ್ರ.

ಶೃತಿ ಹೊಂದಿಸಿಕೊಂಡ ನಂತರ ನರಸಿಂಹಲು ಬಾಯಿಗೆ ಕ್ಲಾರಿಯೋನೆಟ್ ಹಚ್ಚಿ ಆರಂಬಿಸಿದರು – ಮಾರೋಬಿಹಾಗ್ ರಾಗ.

ಇಡಿಯ ಸಭೆ ನಿಶ್ಯಬ್ದ. ಒಂದು ಅದ್ಭುತ ರಸಾನುಭವ ವಾಗುತ್ತಿತ್ತು ಅಲ್ಲಿ. ಕ್ಲಾರಿಯೋನೆಟ್ ಎಂಬ ಶುದ್ಧ ವಿದೇಶೀ ವಾದ್ಯದ ಒಳಗಿನಿಂದ ಹೊರಹೊಮ್ಮುತ್ತಿತ್ತು ಶುದ್ಧ ದೇಶೀಯ ಸಂಗೀತ!

ಗ್ವಾಲಿಯರ್-ಜಯಪುರ ಘರಾಣೆಯಲ್ಲಿ ಗಾಯಕಿ ಶೈಲಿಯಲ್ಲಿ ಅಲೆ ಅಲೆಯಾಗಿ ಹರಿಯುತ್ತಿತ್ತು. ಮಾರೋಬಿಹಾಗ್ ರಾಗ. ಆಲಾಪ್, ತಾನ್, ಚೀಜ್, ಬೋಲ್‌ತಾನ್ - ಎಲ್ಲವನ್ನೂ ಸುಂದರವಾಗಿ ಪ್ರಸ್ತುತಪಡಿಸಿ ಸ್ವರಸಂಚಾರ ಮಾಡಿ, ಕೊಟ್ಟ ಕಾಲಾವಕಾಶ ಮುಗಿಯುವ ಕ್ಷಣಕ್ಕೆ ಸರಿಯಾಗಿ ರಾಗಕ್ಕೆ ಮುಕ್ತಾಯಕೊಟ್ಟರು ನರಸಿಂಹಲು.

ಒಂದೇಕ್ಷಣ:......ನೀರವತೆಯ ಕ್ಷಣ. ನಂತರ! ಕಿವಿ ಗಡಚಿಕ್ಕುವ ಚಪ್ಪಾಳೆಗಳ ಸುರಿಮಳೆ, ಕಲಾವಿದರು ತಮ್ಮ ವಾದ್ಯಗಳೊಂದಿಗೆ ಎದ್ದು ಒಳಗೆ ನಡೆದರು.

ಬ್ರಿಜ್‌ನಾರಾಯಣ್‌ರವರು ವೇದಿಕೆ ಹತ್ತಿ ಧ್ವನಿವರ್ಧಕದ ಬಳಿಗೆ ನಡೆದರು.

"ಸುರಮಣಿ ಪ್ರಶಸ್ತಿಗೆ ಇನ್ನು ಯಾವ ಸ್ಪರ್ಧೆಯ ಅಗತ್ಯವೂ ಇಲ್ಲ. ನಮಗೆ "ಕಲ್ ಕಾ ಕಲಾಕಾರ್" - ನಾಳಿನ ಕಲಾವಿದ ಸಿಕ್ಕಿ ಆಗಿದೆ. ಕರ್ನಾಟಕದ ನರಸಿಂಹಲು ವಡವಾಟಿಯವರು ಈ ವರ್ಷದ ಸುರಮಣಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ."

ರಾಯಚೂರಿನ ವಡವಾಟಿಯಂತಹ ಒಂದು ಸಣ್ಣ ಹಳ್ಳಿಯಿಂದ ಬಂದ ಕರಿಕೊಳವಿ ಮೇಷ್ಟ್ರು ಸಿದ್ಧಿಯಿಂದ ಪ್ರಸಿದ್ಧಿಯನ್ನು ತಲುಪಿದ್ದರು.

ನೇಪಥ್ಯಕ್ಕೆ ನಡೆದ ಕಲಾವಿದರು ಆ ವಾದ್ಯಗಳ ಮಾಲೀಕರ ಕ್ಷಮೆ ಯಾಚಿಸಿದ್ದು ಅವರು ಕ್ಷಮಿಸಿದ್ದು ಎಲ್ಲವೂ ಆಯಿತು.

ನರಸಿಂಹಲು ಗೆಳೆಯರನ್ನು ಬೀಳ್ಕೊಟ್ಟು ಹೋಟೇಲಿಗೆ ತೆರಳಿ ಊಟಮುಗಿಸಿ ಮಲಗಿದರು.

ಮಾರನೆಯ ದಿನ ಶೌಚಕರ್ಮಾದಿಗಳನ್ನು ಪೂರೈಸಿದ ನರಸಿಂಹಲು ಉಪಾಹಾರಕ್ಕಾಗಿ ರೆಸ್ಟೋರೆಂಟ್‌ಗೆ ಬಂದರು. ಗಲ್ಲಾದ ಮೇಲೆ ಯಜಮಾನರಿದ್ದರು. ಕೈಯಲ್ಲಿ ಆ ದಿನದ ಸುದ್ದಿ ಪತ್ರಿಕೆ ಅದರಲ್ಲಿ ಹಿಂದಿನದಿನದ ಇತಿಹಾಸದ ವರದಿ. ಓದುತ್ತಿದ್ದ ಯಜಮಾನರ ಮುಖದಲ್ಲಿ ಸಂಭ್ರಮದ ಭಾವ. ಎದ್ದವರೇ ಸೀದಾ ನರಸಿಂಹಲುರವರ ಬಳಿಗೆ ಬಂದರು.

"ಸ್ವಾಮಿ, ನಮಸ್ಕಾರ. ನಿಮ್ಮಂಥಾ ದೊಡ್ಡ ಕಲಾವಿದರು. ನಮ್ಮಲ್ಲಿ ಉಳಿದುಕೊಂಡಿರುವುದೇ ನಮ್ಮ ಭಾಗ್ಯ. ನಮ್ಮ ಕರ್ನಾಟಕದವರು ನೀವು ಅನ್ನೋದು ನಮಗೆ ಇನ್ನೂ ಗರ್ವದ ಸಂಗತಿ. ತುಂಬಾ ಸಂತೋಷ. ನನ್ನ ಮನೆಗೆ ಬನ್ನಿ, ನನ್ನ ಸಂಸಾರದ ಪರಿಚಯ ಮಾಡಿಕೊಡುತ್ತೇನೆ."

"ಖಂಡಿತಾ ಬರುತ್ತೇವೆ ರಾಯರೆ" – ನರಸಿಂಹಲು ಹೇಳಿದರು.

"ಇನ್ನೊಂದು ಮಾತು. ಹೋಟೆಲ್‌ನ ವಾಸ್ತವ್ಯದ ಬಾಡಿಗೆ, ಊಟೋಪಚಾರದ ಬಾಬ್ತು – ಏನೂ ಕೊಡಬೇಕಿಲ್ಲ ತಾವು."

"ಅಯ್ಯೋ! ಅದು ಹೇಗಾದೀತು!"

"ಇಲ್ಲ, ಇದು ನಾವು ನಿಮಗೆ ಕೊಡುವ ಗೌರವ, ದಯವಿಟ್ಟು ಬೇಡ ಅನ್ನದಿರಿ"

ನರಸಿಂಹಲುರವರು ಯಜಮಾನರ ಪ್ರೀತಿಗೆ ಮನಸೋತರು.

"ಹಾಗಿದ್ದಲ್ಲಿ ಒಂದು ಕೆಲಸಮಾಡುತ್ತೇನೆ. ನಿಮ್ಮ ಮನೆಯಲ್ಲಿ ದೇವರ ಕೋಣೆಯ ಮುಂದೆ ನನ್ನ ವಾದ್ಯವನ್ನು ನುಡಿಸುತ್ತೇನೆ. ಇಲ್ಲವೆನ್ನಬಾರದು."

ಯಜಮಾನರು ಅವಾಕ್ಕಾದರು. ಇಂತಹ ಮಹಾ ವಿದ್ವಾಂಸ, ಇರುಳು ಕಳೆದು ಹಗಲು ಬರುವಷ್ಟರಲ್ಲೇ ಹೆಸರುಗಳಿಸಿದ ಈ ಕಲಾವಿದ. ನಮ್ಮ ಮನೆಯಲ್ಲಿ ಸಂಗೀತದ ರಸಾನುಭವ ನೀಡುತ್ತಾರೆ!

"ಖಂಡಿತ ಸ್ವಾಮಿ, ನಮ್ಮ ಪುಣ್ಯ"

* * * * *

"ನನಗ ಗೊತ್ತಪಾ ನೀನ ಗೆಲ್ಲುವಾತ ಅಂತ" –ಎದುರಿಗೆ ಬಂದುನಿಂತ ಶಿಷ್ಯನಿಗೆ ಹೃದಯತುಂಬಿ ಹರಸಿದ ಜಂಬಲದಿನ್ನಿ ಗುರುಗಳು ಅಂದರು. ಖುಷಿಯಾಗಿತ್ತು ಅವರಿಗೆ. ತಾವು ಪೋಷಿಸಿದ ಪ್ರತಿಭೆಯಲ್ಲವೆ ಇದು!

❑

ಚರಣ 8

# ಸ್ವರಯಾತ್ರೆ

ನರಸಿಂಹಲು ಈಗ ಪಂಡಿತ ನರಸಿಂಹಲು ವಡವಾಟಿ ಆಗಿದ್ದರು. ಸ್ವರ ಸಾಧನೆ ಅದರ ಪಾಡಿಗೆ ಸಾಗುತ್ತಲೇ ಇತ್ತು. ಈಗಲೂ ಅದು ಸಾಗುತ್ತಿದೆ. ಅದೊಂದು ಎಂದಿಗೂ ನಿಲ್ಲದ, ಬತ್ತದ ಧಾರೆ. ಆದರೆ ನರಸಿಂಹಲುರವರ ಈಗ ತನ್ನ ವಿದ್ಯೆಯನ್ನು ಬದುಕಿನ ಸಂಪಾದನೆಯ ಮಾರ್ಗವನ್ನಾಗಿ ಮಾಡಿಕೊಂಡಿದ್ದರು. ಸಂಗೀತ ಕಛೇರಿ ನೀಡುತ್ತಿದ್ದರು. ಆಕಾಶವಾಣಿಯಲ್ಲಂತೂ "ಎ" ಶ್ರೇಣಿಯ ಕಲಾವಿದರಾಗಿ ಬಿಟ್ಟಿದ್ದರು. ಊರೂರುಗಳಲ್ಲಿ ಅವರಿಗೆ ಕರೆ ಬರತೊಡಗಿದವು. ಜತೆಗೆ ತಮ್ಮ ರಾಯಚೂರಿನಲ್ಲೂ ಉತ್ಸವ-ಹಬ್ಬಗಳಂದು ಕಛೇರಿ ನೀಡುತ್ತಿದ್ದರು. ಈ ಸಿದ್ಧಿಗಾಗಿ ಅವರು ಪಟ್ಟ ಶ್ರಮ, ಎದುರಿಸಿದ ಸಮಸ್ಯೆಗಳು, ಕೇಳಿದ ಕಟಕಿಗಳು-ಎಲ್ಲವನ್ನೂ ಮೆಲುಕುಹಾಕುವಾಗ ಅವರಿಗೆ ಆಗೆಲ್ಲ ಧನ್ಯತೆಯ ಭಾವ.

ಒಮ್ಮೆ ಇಂಥದ್ದೇ ಒಂದು ಸಂದರ್ಭದಲ್ಲಿ ನರಸಿಂಹಲುರವರು ಒಂದು ಉತ್ಸವ ಕಾರ್ಯಕ್ರಮದಲ್ಲಿ ಕಛೇರಿ ನೀಡುತ್ತಿದ್ದರು. ತಮ್ಮದೇ ಊರಿನ ಸಂಗೀತಗಾರನಲ್ಲವೇ ಈ ನಮ್ಮ ನರಸಿಂಹ! ಸಾಕಷ್ಟು ಜನ ಸೇರಿದ್ದರು. ನರಸಿಂಹಲುರವರು ಒಂದು ರಾಗವನ್ನು ಕೈಗೆತ್ತಿಕೊಂಡು ಅದರ ಒಳಹೊಕ್ಕು ಸಂಚರಿಸುತ್ತಿದ್ದರು. ಒಳ್ಳೆಯ ರಸಮಯ ಸಮಯ! ವಾದಕನೂ ಅನುಭವಿಸುತ್ತಿದ್ದನು, ಕೇಳುಗರೂ ಸವಿಯುತ್ತಿದ್ದರು. ಸ್ವರಸಂಚಾರ ಅಲೆಯಲೆಯಾಗಿ ಉಕ್ಕಿ ಎತ್ತರಕ್ಕೇರಿ ಮತ್ತೀಳಿಜಾರಿ, ಆಳಕ್ಕಿಳಿದು ಮೇಲಕ್ಕೆ ಸುಳಿದು ಕೊನೆಗೊಮ್ಮೆ ಷಡ್ಜಕ್ಕಿಳಿದು ಹಕ್ಕಿಯಂತೆ ರೆಕ್ಕೆಯನ್ನು ಮೆಲ್ಲಗೆ ಕೊಡವುತ್ತಾ ಸ್ಥಿರವಾಯಿತು.

"ಚೆನ್ನಾಗಿ ಬಾರಿಸಿದಿ ಬಿಡಪ್ಪಾ! ತಗೊ ನನ್ನ ಕಡಿಂದ ಹತ್ತು ರೂಪಾಯಿ. ಖುಷಿಯಿಂದ ಆಯಾರ ಮಾಡ್ತಿದ್ದೀನಿ."

ನರಸಿಂಹಲು ಈ ಲೋಕಕ್ಕೆ ಇಳಿದು ಆಗತಾನೇ ಹುಟ್ಟಿ ಅತ್ತು ಶಾಂತವಾದ ಮಗುವಿನಂತೆ ಕಣ್ಣುಮುಚ್ಚಿಕೊಂಡಿದ್ದವರು ದನಿ ಕೇಳಿ ಎಚ್ಚೆತ್ತು ಕಣ್ತೆರೆದು

ನೋಡಿದರು. ಎದುರಿಗೆ ನಿಂತಿದ್ದವರನ್ನು ಗುರುತಿಸಿದರು. ಹುಬ್ಬು ಗಂಟಕ್ಕಿತು, ಹಳೆಯ ನೆನಪು ಮರುಕಳಿಸಿ ಮನಸ್ಸು ಕ್ಷುಬ್ಧವಾಯಿತು......... ನೆನಪಿನಂಗಳದಲ್ಲಿ ಭೂತದ ಕುಣಿತ ಶುರುವಾಗಿತ್ತು.

ಆಗಿನ್ನೂ ನರಸಿಂಹಲು ರಾಯಚೂರು–ಗುಲ್ಬರ್ಗಾ "ಇಂದಾ–ಗೆ ಪರ್ಯಟನ" ಮಾಡುತ್ತಿದ್ದರು. ಸಂಸಾರದಲ್ಲಿ ಈಸಾಟ ತೊಡಗಿತ್ತು. ಕಲಿಕೆಗೆ ಸಂಬಂಧಿಸಿದ ಖರ್ಚೂ ಸಹ. ಕಷ್ಟಗಳು ಮೇಲಿಂದ ಮೇಲೆ ಬರುತ್ತಲೇ ಇದ್ದವು.

ಹೀಗೊಂದು ದಿನ ಯುವಕ ನರಸಿಂಹ ಯಾವುದೋ ಜಡ್ಡಿಗೆ ಸಂಬಂಧಿಸಿದ ಮಾತ್ರೆಗಳನ್ನು ಖರೀದಿಸಲು ಹತ್ತಿರದ ಒಂದು ಔಷಧಿಯಂಗಡಿಗೆ ಹೋದರು. ಅಂಗಡಿಯವನಿಗೆ ಸಾಕಷ್ಟು ಸಂಗೀತ ಜ್ಞಾನವಿತ್ತು. ಹಾಡಲು ಅಷ್ಟು ಚೆನ್ನಾಗಿ ಬಾರದಿದ್ದರೂ ರಸಗ್ರಹಣ ಶಕ್ತಿ ಇತ್ತು.

– "ಏನಪ್ಪಾ ಗುಲ್ಬರ್ಗಾಕ್ಕೆ ಹೋಗ್ತೀಯಂತೆ ಸಂಗೀತ ಕಲಿಯಾಕ!"

– "ಹೌದರಿ"

– "ದುಡ್ಡಿಗೆ ಏನು ಮಾಡ್ತೀಯೋ?"

– "ಹ್ಯಾಂಗೋ ಆಗ್ತದೆರೀ, ಕೆಲವೊಮ್ಮೆ ಸಾಲ ಮಾಡಬೇಕಾಗುತ್ತದೆ. ನನ್ನ ಕಡೆ ದುಡ್ಡು ಬಂದಾಗ ಅದನ್ನು ತೀರಿಸೋದು, ಮತ್ತೆ ಸಾಲ ಮಾಡೋದು."

ನರಸಿಂಹನಿಗೆ ಒಂದು ರೀತಿ ಮನಸ್ಸು ಹಗುರಾದಂತೆನಿಸಿತು. ತನ್ನನ್ನು ಹೀಗೊಬ್ಬರು ವಿಚಾರಿಸುವವರಿದ್ದಾರಲ್ಲ!

"ಏ ಹುಡುಗಾ, ಯಾಕೋ ನಿನಗೆ ಈ ಹುಚ್ಚೆಲ್ಲಾ! ಬಿಟ್ಬಿಡು. ಇದು ಆಗೋದಲ್ಲ ಹೋಗೋದಲ್ಲ, ಸುಮ್ಮನೆ ಏನಾರ ಬ್ಯಾರೆ ಕೆಲಸಮಾಡಿ ಸಂಸಾರ ನೋಡಕೋ. ಈ ಸಂಗೀತ–ಗಿಂಗೀತ ಎಲ್ಲ ನಿನ್ನಂಥಾವ್ರಿಗಲ್ಲ."

ಹಗುರಾಗಿದ್ದ ಮನಸ್ಸು ಭಾರವಾಯಿತು. ಔಷಧಿಯನ್ನು ಖರೀದಿಸಿ ಹಣ ನೀಡಿದ ನರಸಿಂಹ ಮೌನಿಯಾಗಿ ಅಲ್ಲಿಂದ ನಿರ್ಗಮಿಸಿದನು. ಈ ಕಹಿನೆನಪು ಮಾಸಲು ಸಾಕಷ್ಟೇ ಸಮಯ ಹಿಡಿದಿತ್ತು.

"ನಿಮ್ಮ ರೂಪಾಯಿ ತಗೊಂಡು ಪಾಕೀಟಿನಾಗೆ ಹಾಕ್ಕೋಳ್ರೀ!" ಮನಸ್ಸು ಕುದಿಯುತ್ತಿದ್ದರೂ ಗಾಂಭೀರ್ಯ ಬಿಡದೆ ನರಸಿಂಹಲು ಅವರಿಗೆ ಹೇಳಿದರು.

– "ಇರಲಪ್ಪಾ, ನನಗೆ ಖುಷಿಯಾಗಿದೆ ನಾನು ಕೊಡ್ತಿದೀನಿ. ಇಟಕೋ"

– "ಮೊದಲು ಅದನ್ನು ಪಾಕೀಟಿಗೆ ಹಾಕ್ಕೋರೀ ಆಮ್ಯಾಲೆ ಮಾತು."

ಆ ವ್ಯಕ್ತಿ ತಬ್ಬಿಬ್ಬಾಗಿ ಕೈಲಿದ್ದ ಹಣ ಜೇಬಿಗೆ ಇಳಿಬಿಟ್ಟನು.

"ಆ ದಿನ ನಿಮ್ಮ ಅಂಗಡಿಗೆ ಔಷಧಿ ತಗೊಳ್ಳಿ ಬಂದಿದ್ದಾಗ ಏನಂದಿದ್ದಿರಿ ನೀವು? – 'ಈ ಸಂಗೀತ–ಗಿಂಗೀತ ಎಲ್ಲ ನಿನ್ನಂಥಾವ್ರಿಗಲ್ಲ. ಈ ಹುಚ್ಚು ಬಿಟ್ಟಿಡು' ಅಂದಿದ್ರಲ್ಲಾ? ಮತ್ತೆ ಈಗ ಇಲ್ಲಿಗೆ ನನ್ನ ಸಂಗೀತ ಕೇಳಾಕೆ ಬರುವಂಥಾದ್ದೇನಿತ್ತು? ನಿಮ್ಮನ್ನ ನಾನು ಕರೆದಿದ್ನೇನು?"

"ಇಲ್ಲಪಾ, ಮನಿಯಾಗೆ ಹೀಂಗೆ ಅಡ್ಡಾಗಿದ್ದೆ ಊಟ ಮುಗಿಸಿಕೊಂಡು. ಹಾಂಗ ನಿನ್ನ ಸಂಗೀತ ಕಿವೀಗೇ ಬಿತ್ತು. ಯಾರಪ್ಪಾ ಇಷ್ಟು ಚೆನ್ನಾಗಿ ಬಾರಿಸಾಂವ ಅಂತ ಬಂದೆ. ನಿನ್ನನ್ನ ನೋಡಿ ಖುಷಿ ಆತು. ಆ ಖುಷಿಗೆ ಆಯಾರ ಮಾಡ್ತಿದೀನಿ. ತಗೋಪಾ, ಬ್ಯಾಡನಬ್ಯಾಡ."

– "ಯಾರಿಗ್ರೀ ಬೇಕು ನಿಮ್ಮ ಆಯಾರ ಪಾಯಾರ ಎಲ್ಲ! ಆದಿನ ನಾನು ನಿಮ್ಮ ಹತ್ರ ಬಂದು ನನಗೇನಾರ ಸಹಾಯ ಮಾಡ್ರೀ – ಅಂತ ಕೇಳಿದ್ನೇನು? ಇಲ್ಲಲ್ಲಾ! ನನ್ನ ಕಷ್ಟ ನಾನು ಅನುಭವಿಸಿಕೋತಾ ಒದ್ದಾಡ್ತಾ ಹ್ಯಾಂಗೋ ಬದುಕು ಮಾಡ್ತಾ ಇದ್ದೆ. ಇಂಥವ್ನಿಗೆ ಸಹಾಯ ಮಾಡೋದಿರ್ಲಿ, ನಾಲ್ಕು ಒಳ್ಳೇ ಮಾತಾದ್ರೂ ಬ್ಯಾಡ್ವಾ? ಇಲ್ಲಂದರೆ ಸುಮ್ಮನಾದರೂ ಇರಬೇಕು ಅದು ಬಿಟ್ಟು...ನೀವೇನಂದಿರಿ ಹೇಳಿ?".

– "ದೊಡ್ಡೋನಪ್ಪಾ ನೀನು! ಕೆಟ್ಟ ಗಳಿಗೆ ಏನೋ ಅನಬಾರದ್ದು ಅಂದುಬಿಟ್ಟೆ ಅಂದು ನಾನು."

"ಆತು ಬಂದಿದ್ದೀರಿ ಹೋಗಿ ಕೂಡ್ರಿ, ಕೇಳ್ರಿ, ನಿಮ್ಮ ಆಯಾರ–ಗೀಯಾರ ಎಲ್ಲ ಹಿಂಗ ಕೊಡಾಕ ಬರಬ್ಯಾಡ್ರಿ, ನಿಮ್ಮ ದುಡ್ಡಿಂದ ಬದುಕೋವಷ್ಟು ಗತಿಗೆಟ್ಟಿಲ್ಲ ನಾನು."

ಆ ಮರ್ಯಾದಸ್ಥ ವ್ಯಕ್ತಿ ತೆಪ್ಪಗೆ ತಲೆತಗ್ಗಿಸಿ ವಾಪಸ್ ನಡೆದ. ಕುಳಿತಿದ್ದ ಕೇಳುಗರಿಗೆ ಅದೊಂದು ವಿಶಿಷ್ಟ ದೃಶ್ಯ

ನರಸಿಂಹಲು ಮನಸ್ಸು ಬೀಗಿತ್ತು. ಮುಂದಿನ ರಾಗ ತೆಗೆದುಕೊಂಡರು. ಹಕ್ಕಿ ಗರಿಗೆದರಿತು. ಹಾರಾಡಿತು. ಮುದದ ಮುಗಿಲ ತೇರನ್ನೇರಿ ಮಾನಸ ಜಗದ ಉದ್ದಗಲಕ್ಕೆ .....ರಸಗಡಲಿನಾಳಕ್ಕೆ, ರಸಿಕನೊಡಲಾಳಕ್ಕೆ!

* * * * *

ಚನ್ನೈನಲ್ಲಿ (ಆಗಿನ ಮದ್ರಾಸ್) ಮಹೇಶ್ ಎಂಬ ಕನ್ನಡಿಗರೊಬ್ಬರು "ಸಂಗೀತ" ಎಂಬ ಧ್ವನಿಸುರುಳಿಗಳನ್ನು ತಯಾರಿಸುವ ಸಂಸ್ಥೆಯೊಂದನ್ನು ನಡೆಸುತ್ತಿದ್ದರು. ಸಾಕಷ್ಟು ಸಂಗೀತಗಾರರ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿದ್ದರು ಅವರು. ಸಂಗೀತ ಧ್ವನಿ ಮುದ್ರಣ ಮತ್ತು ಧ್ವನಿಸುರುಳಿಗಳ ಮಾರಾಟದಲ್ಲಿ ಅವರ ಹೆಸರು ಆಗ ಸಾಕಷ್ಟು ಪ್ರಸಿದ್ಧ. ಖ್ಯಾತ ಸಂಗೀತಗಾರರನೇಕರು ತಮ್ಮ ಸಂಗೀತವನ್ನು ಅಲ್ಲಿ ಮುದ್ರಿಸಿದ್ದರು ಮತ್ತು ಆ ಧ್ವನಿಸುರುಳಿಗಳು ಮಾರುಕಟ್ಟೆಯಲ್ಲಿ ತುಂಬಾ ಜನಪ್ರಿಯವೂ ಆಗಿದ್ದವು.

ಆಗಿನ್ನೂ ಅಷ್ಟು ಪ್ರಸಿದ್ಧರಾಗಿರದಿದ್ದ ನರಸಿಂಹಲುರವರು ತಮ್ಮದೊಂದು ಧ್ವನಿಸುರುಳಿಯೊಂದನ್ನು ಮಾಡಿಸಲು ಉದ್ದೇಶಿಸಿದರು. ಪ್ರತಿಯೊಬ್ಬ ಕಲಾವಿದನ ಆಸೆಯಲ್ಲವೇ ಅದು!

ಸರಿ, ಮಹೇಶರವರೊಂದಿಗೆ ಪತ್ರ ವ್ಯವಹಾರ ಶುರುವಾಯಿತು. ತಮ್ಮ ಪರಿಚಯ, ತಮ್ಮ ವಾದನ ಪ್ರಕಾರ – ಇತ್ಯಾದಿಗಳನ್ನು ವಿವರಿಸಿ ಪತ್ರ ಬರೆದರು ನರಸಿಂಹಲು ಮಹೇಶರವರಿಗೆ. ಪ್ರತ್ಯುತ್ತರ ಅಷ್ಟು ಪ್ರೋತ್ಸಾಹಕರವಾಗಿರಲಿಲ್ಲ. ಕ್ಲಾರಿಯೋನೆಟ್‌ನಲ್ಲಿ ಹಿಂದುಸ್ತಾನಿ ಸಂಗೀತವೇ! ಅದೊಂದು ಕರ್ಕಶಧ್ವನಿಜನಕ ವಾದ್ಯ! ಪಾಶ್ಚಾತ್ಯ ಶೈಲಿಯ ಸಂಗೀತಕ್ಕಷ್ಟೇ ಸರಿ ಅದು. ಹಿಂದುಸ್ತಾನಿಯ ಏರಿಳಿತಗಳಿಗೆ, ಅದರ ನಯನಾಜೂಕುಗಳಿಗೆ, ಅದರ ತಾನ್, ಆಲಾಪ್, ಬೋಲ್‌ತಾನ್‌ಗಳಿಗೆ ಒಗ್ಗಿಸಿಕೊಳ್ಳಬಲ್ಲ ವಾದ್ಯವೇ ಅದು! ಅಂತಹ ವಾದ್ಯದ ವಾದನವನ್ನು ಧ್ವನಿ ಮುದ್ರಿಸಿದರೆ ಆ ಧ್ವನಿ ಸುರುಳಿಗಳು ಮಾರುಕಟ್ಟೆಯಲ್ಲಿ ಹೇಗೆ ಮಾರಾಟವಾಗಬಲ್ಲವು? ಯಾರು ಕೊಂಡಾರು? ಮುದ್ರಣಕ್ಕಾಗಿ ಸ್ಟುಡಿಯೋ ವೆಚ್ಚ ಮುಂತಾದವುಗಳು ಇದ್ದೇ ಇರುತ್ತವಲ್ಲವೇ? ಕ್ಯಾಸೆಟ್‌ಗಳು ಮಾರಾಟವಾಗದಿದ್ದರೆ? ಮಾಡಿದ ಖರ್ಚು ಹುಟ್ಟದಿದ್ದರೆ!......ಮಹೇಶ್‌ರವರು ಅಂಥಾ ಉತ್ಸುಕತೆ ತೋರಿಸಲಿಲ್ಲ.

ಆದರೆ ನರಸಿಂಹಲುರವರದು ಅದಮ್ಯ ವಿಶ್ವಾಸ.

"ತಾವು ಇದೊಂದು ಬಾರಿ ನನಗೆ ಅವಕಾಶ ಮಾಡಿಕೊಡಿ. ಅದು ಗೆಲ್ಲುವುದೆಂಬ ವಿಶ್ವಾಸ ನನಗಿದೆ. ಹಾಗೊಂದು ವೇಳೆ ತಮಗೆ ನಷ್ಟವಾದರೆ, ಆ ನಷ್ಟವನ್ನು ನಾನು ಹೇಗಾದರೂ ಮಾಡಿ ತುಂಬಿಕೊಡುತ್ತೇನೆ" -ಎಂದು ಮಹೇಶರವರಿಗೆ ಪತ್ರ ಬರೆದು ಕೊನೆಗೆ ಅವರನ್ನು ಒಪ್ಪಿಸಿದರು. ಅವರಿಗೂ ಅನ್ನಿಸಿರಬೇಕು-ಯಾಕೆ ಒಂದು ಕೈ ನೋಡಬಾರದು-ಎಂದು.

- "ಸರಿ, ಬಂದು ಬಿಡಿ. ಸ್ಟುಡಿಯೋ ಏರ್ಪಾಡು ಮಾಡುತ್ತೇನೆ." ಮಹೇಶರವರು ಉತ್ತರಿಸಿದರು. ದಿನ, ಸ್ಥಳ ಎರಡೂ ನಿಗದಿಯಾಯಿತು.

ಸಂಗೀತ ಧ್ವನಿಮುದ್ರಣ ಎಂದರೆ ಆಟವೆ! ಸಾಥ್ ನೀಡಲು ತಬಲವಾದಕರು ಬೇಕು. ತಾನಪುರ ಮೀಟಲೊಬ್ಬರು ಬೇಕು. ಎರಡೂ ಸಲಕರಣೆಗಳನ್ನು ವಾದಕರೊಂದಿಗೆ ಕರೆದೊಯ್ಯಬೇಕು. ಮದರಾಸಿನಲ್ಲಿ ತಾನಪುರ ಹುಡುಕುವಂತಿಲ್ಲ. ಅಲ್ಲಿ ಸಿಗುವ ತಂಬೂರಿಗಳು ಕರ್ನಾಟಕ ಸಂಗೀತಕ್ಕೆ ಹದಗೊಳಿಸಿದಂಥವು. ವಾದಕರು ಸುಮ್ಮನೆ ಬರುವುದಿಲ್ಲವಲ್ಲ! ಸಂಭಾವನೆ ಕೇಳಿದರವರು. ನರಸಿಂಹಲುರವರು ಅದಕ್ಕೆ ಸಮ್ಮತಿಸಿದರು. ಸಂಭಾವನೆಯ ಖರ್ಚು, ಮದರಾಸಿಗೆ ಎಲ್ಲರೂ ಹೋಗಿ ಬರುವ ಖರ್ಚು, ಅಲ್ಲಿ ಊಟ, ವಸತಿ ಮತ್ತು ಸ್ಥಳೀಯ ಓಡಾಟದ ವೆಚ್ಚ ಮತ್ತಿತರ ಇತ್ಯಾದಿಗಳು -ಎಲ್ಲಕ್ಕೂ ನರಸಿಂಹಲುರವರದ್ದೇ ಹೊಣೆ. ಅದೂ ಸಹ ಇತ್ಯರ್ಥ, ಅಕ್ಷರಶಃ ಇತಿ "ಅರ್ಥ" ಆಯಿತು.

ನಿಗದಿತ ದಿನದ ಮುಂಜಾನೆ ಪರಿವಾರ ಮದರಾಸು ತಲುಪಿ ಒಂದು ಸಾಧಾರಣ ವಸತಿ ಗೃಹದಲ್ಲಿ ವಾಸ್ತವ್ಯ ಹೂಡಿದರು. ಸುಪ್ರಭಾತದ ನಿಸರ್ಗದ ಕರೆಯೋಲೆಗೆ ಓಗೊಡುವುದು, ಸ್ನಾನ, ಉಪಾಹಾರ, ದೈನಂದಿನ ತಾಲೀಮು ಎಲ್ಲವನ್ನು ಮುಗಿಸಿ ನಿಗದಿತ ಸ್ಟುಡಿಯೋಗೆ ಹೊರಟು ನರಸಿಂಹಲುರವರ ಪರಿವಾರ ಅಲ್ಲಿಗೆ ಸರಿಯಾದ ಸಮಯಕ್ಕೆ ತಲುಪಿತು. ಅಲ್ಲಿ ಮಹೇಶರವರು ಕಾಣಲಿಲ್ಲ.

ಎಲ್ಲರೂ ಒಳಗೆ ನಡೆದು ರಿಕಾರ್ಡಿಸ್ಟ್‌ರವರನ್ನು ಭೆಟ್ಟಿ ಮಾಡಿದರು. ಸಂಯೋಗವಶಾತ್ ಅವರೂ ಕನ್ನಡಿಗರೆ. ಹೆಸರು ಹನುಮಂತಾಚಾರ್ ಎಂದು. (ಸಿನಿಮಾ-ನಾಟಕ ಕಲಾವಿದ ಮತ್ತು ಯೂನಿವಾಕ್ಸ್ ವಾದಕರಾದ ಆ ದಿವಂಗತ ಹನುಮಂತಾಚಾರ್ ಅವರಲ್ಲ ಇವರು). ಸಂಗೀತ ಬಲ್ಲವರು, ಉತ್ತಮ ಹಾರ್ಮೋನಿಯಂ ಪಟವೂ ಹೌದು.

ನಮಸ್ಕಾರಗಳ ದೃಶ್ಯ ಮುಗಿಯಿತು.

– "ಹಾಂ, ಏನು ಹೇಳಿ!"

– "ನಾನು ನರಸಿಂಹಲು ವಡವಾಟಿ ಅಂತ. ರಿಕಾರ್ಡಿಂಗ್‌ಗೆ ಬಂದಿದ್ದೇನೆ. ಮಹೇಶ್ ಅವರೇ ಬರ್ಲಿಕ್ಕೆ ಹೇಳಿದರು"

– "ಹಾಂ ಹಾಂ! ಮಹೇಶ್ ಅವರು ಇವತ್ತು ಬುಕ್ ಮಾಡಿದ್ದಾರೆ. ರಾಯಚೂರಿಂದ ಬಂದಿದೀರ? ಏನು ರಿಕಾರ್ಡಿಂಗು?"

– "ನನ್ನ ಕ್ಲಾರಿಯೋನೆಟ್‌ವಾದನದ್ದು."

ಹನುಮಂತಾಚಾರ್ರು ದಂಗಾದರು. ಏನಿದು!

– "ಕ್ಲಾರಿಯೋನೆಟ್ಟು! ಏನು ಸಂಗೀತಾ ನುಡಿಸ್ತೀರಿ? ಸಿನಿಮಾದ್ದ?"

– "ಹಿಂದೂಸ್ತಾನಿ ಶಾಸ್ತ್ರೀಯ ರಾಗ ನುಡಿಸ್ತೀನಿ"

ಮೊದಲೇ ದಂಗಾಗಿದ್ದ ಹನುಮಂತಾಚಾರ್ರು ಮತ್ತೂ "ಹಂಗಾ"ದರು. ಇವನು ಯಾವ ಸೀಮೆಯ ಸಂಗೀತಗಾರನಪ್ಪಾ! ಕ್ಲಾರಿಯೋನೆಟ್ ಹೇಳಿಕೇಳಿ ವಿದೇಶಿವಾದ್ಯ. ಆರ್ಕೆಸ್ಟ್ರಾ ಮೂರ್ಕೆಸ್ಟ್ರಾಗಳಲ್ಲಿ, ಮೆರವಣಿಗೆಗಳಲ್ಲಿ ಪೇಂ ಪೇಂ ಮಾಡುವ ಪೀಪಿ ಅದು. ಅದರಾಗೆ ಸಂಗೀತ, ಹಿಂದೂಸ್ತಾನಿ ಸಂಗೀತ ನುಡಿಸ್ತಾನಂತಲ್ಲ ಇವನು!.....

– "ಏನ್ರೀ ಇದು! ಆ ಮಹೇಶನಿಗೆ ಏನಾಗಿದೆ! ಯಾರ‍್ಯಾರನ್ನೋ ಕರಕೊಂಡು ಬರ‍್ತಾನಲ್ಲ! ಆ ಕ್ಲಾರಿಯೋನೆಟ್‌ನಲ್ಲಿ ಏನು ಬಾರಿಸ್ತೀರ್ರೀ ನೀವು ? ಸುಮ್ಮನೆ ವೇಸ್ಟು ಎಲ್ಲ."

"ಇಲ್ಲ ಸಾರ್ ನೀವು ರಿಕಾರ್ಡಿಂಗ್ ಮಾಡ್ರಿ, ನನಗೆ ವಿಶ್ವಾಸ ಇದೆ ಚೆನ್ನಾಗಿ ನುಡಿಸಬಲ್ಲೆ ಅಂತ."

"ಸರಿ, ನನಗೇನು! ಹೋಗಿ ಕೂಡ್ರಿ ಅಲ್ಲಿ...... ಏನಪ್ಪಾ ನೀನು ತಬಲಾ ಬಾರಿಸೋನೇನು ? ಮತ್ತೆ ನೀನು..... ತಂಬೂರಿ ಮೀಟುವವನು! ಆಯ್ತು ಎಲ್ಲರೂ ಹೋಗಿ ಮೈಕ್ ಮಂದೆ ಕೂಡಿ."

ಯಾವುದೇ ರೀತಿಯ ಪ್ರೋತ್ಸಾಹಕರ ಧ್ವನಿಯಲ್ಲ ಅದು, ಬರೀ ಯಾಂತ್ರಿಕ, ಮೈಕ್ ಸರಿ ಹೊಂದಿಸಿದ ಹನುಮಂತಾಚಾರ್ ತಮ್ಮ ಕೋಣೆಯೊಳಗೆ ಪ್ರವೇಶಿಸಿದರು.

ನರಸಿಂಹಲುರವರ ತಂಡ ಮೈಕ್ ಮುಂದೆ ಕುಳಿತು ತಮ್ಮ ತಮ್ಮ ವಾದ್ಯಗಳನ್ನು ಶೃತಿಗೆ ಹೊಂದಿಸಿಕೊಂಡರು. ನಂತರ ಹನುಮಂತಾಚಾರ್ ಅವರ ಸಂಕೇತಕ್ಕಾಗಿ ಕಾದರು.

ತಂಬೂರಿಯ ನಾದ ಸ್ಟುಡಿಯೋದ ನೀರವತೆಯೊಳಗಿನ ನವಿರಾಗಿ ಹೊರ ಹೊಮ್ಮಿತು. ನರಸಿಂಹಲುರವರೇ ತಂತಿ ಹದಗೊಳಿಸಿದಂತಹ ತಂಬೂರಿಯದು! ಗುಂಯ್.....ಎಂದು ನಾದದ ಅಲೆ ಹೊರಟಿತ್ತು.

ನರಸಿಂಹಲು ಸಮೇತರಾಗಿ ಎಲ್ಲರೂ ಹೆಡ್‌ಫೋನ್ ತಲೆಗೇರಿಸಿಕೊಂಡರು. ಮೊದಲ ರಿಕಾರ್ಡಿಂಗ್, ಮೊದಲ ಬಾರಿ ಶಿರಸ್ತ್ರಾಣವೇರಿಸಿದ್ದು. ಹೊಸ ಹೊಚ್ಚ ಹೊಸ ಅನುಭವ! "ಯುದ್ಧಕ್ಕೆ ಹೊರಟ್ಹಾಂಗಿತ್ತು" ತಯಾರಿ. ಆ ಕ್ಷಣದಲ್ಲಿ ಅದು ಇದ್ದದ್ದೂ ಹಾಗೆಯೇ. ಇದೂ ಒಂದು "ಕದನ ಕುತೂಹಲ". (ಹಾಗಂತ ಒಂದು ರಾಗ ಕರ್ನಾಟಕ ಸಂಗೀತದಲ್ಲಿ ಇದೆಯೆಂದು ಕೇಳಿ ಬಲ್ಲೆ)

"ನಾನು ಓಳಗೆ ಹೋಗಿ ಎಲ್ಲ ಸೆಟ್ ಮಾಡಿ ಸಿಗ್ನಲ್ ಮಾಡ್ತೀನಿ ಆ ಮ್ಯಾಲೆ ಶುರು ಮಾಡ್ರಿ ಅದೇನು ಮಾಡ್ತೀರೋ......." ಹನುಮಂತಾಚಾರ್ರು ಸೂಚನೆ ನೀಡಿ ರಿಕಾರ್ಡಿಂಗ್ ಕ್ಯಾಬಿನ್ ಪ್ರವೇಶಿಸಿದರು. ಮುಖದ ಗಂಟು ಅವರ ಯಜ್ಞೋಪವೀತದ ಬ್ರಹ್ಮಗಂಟಿನಷ್ಟೇ ಬಿಗುವಾಗಿತ್ತು. ಅಂಥಾ ವಯಸ್ಸೇನೂ ಆಗಿರಲಿಲ್ಲ ಅವರಿಗೆ, ಮಧ್ಯವಯಸ್ಸು. ಆದರೆ ಮರೆವು ಎಂದು ಕಾಣುತ್ತದೆ. ನಗು ಮರೆತಿದ್ದರು.

ಕ್ಯಾಬಿನ್ನಿನಿಂದ ನರಸಿಂಹಲುರವರಿಗೆ ಮತ್ತೆ ಸೂಚನೆ ಬಂತು. "ನೋಡ್ರೀ ಅರ್ಧಗಂಟೆ ಕಾರ್ಯಕ್ರಮ ಇದು. ಇಪ್ಪತ್ತೆಂಟೂವರೆ ನಿಮಿಷಕ್ಕೆ ಸರಿಯಾಗಿ ನಿಲ್ಲಿಸಬೇಕು. ಜಾಸ್ತಿನೂ ಇಲ್ಲ ಕಮ್ಮೀನೂ ಇಲ್ಲ ಗೊತ್ತಾಯ್ತಾ?" –ಅದೇ ಮಿಲಿಟರಿ ಆರ್ಡರ್ರು,

"ಆಗಿಲಿ ಸ್ವಾಮಿ" – ಇವರದ್ದು ಅದೇ ವಿನಯ. ಯುದ್ಧಕ್ಕೆ ಹೊರಟ ಸೈನಿಕನದು....... ಕದನ ಕುತೂಹಲ!

ಸರಿ ಎಲ್ಲ ಚೆಕ್ ಆಪ್ ಆಯ್ತು. ರಿಕಾರ್ಡಿಂಗ್ ಗುಂಡಿ ಚಾಲೂ ಆಯ್ತು ಹನುಮಂತಾಚಾರ್ಯರು ಕಂಟ್ರೋಲ್ ಟವರ್.... ಅಲ್ಲಲ್ಲ, ಕ್ಯಾಬಿನ್ನಿನಿಂದ ತಮ್ಮ ಹಸ್ತವನ್ನೆತ್ತಿ, ಬಲವೋ ಎಡವೋ ನೆನಪಿಲ್ಲ. ಹೆಬ್ಬೆರಳು ತೋರಿ ಸಿಗ್ನಲ್ ಮಾಡಿದರು.

– ಟೇಕ್ ಆಫ್...

ಶೃತಿ ಮಾಡಿದ ತಂಬೂರಿಯಿಂದ ನಾದ ಸಂಚಾರವಾಯ್ತು. ಇಡೀ ಕೋಣೆ ಸಂಗೀತಕ್ಕೆ ಸಜ್ಜುಗೊಳ್ಳತೊಡಗಿತು.

ನರಸಿಂಹಲುರವರು ಕ್ಲಾರಿಯೋನೆಟ್ ತುಟಿಗಿಟ್ಟುಕೊಂಡು ಹಗುರಾಗಿ ಸ್ವರ ಹೊರಡಿಸಲಾರಂಭಿಸಿದರು. ಯಮನ್ ರಾಗ ಮಂದ್ರದಿಂದ ಮೆಲ್ಲಗೆ, ಮೆಲ್ಲಮೆಲ್ಲಗೆ ಸುತ್ತಲೂ ಆವರಿಸತೊಡಗಿತು.

ಹನುಮಂತಾಚಾರ್ಯರ ಮುಖದ ನರಗಳು ಮೆಲ್ಲಗೆ ಸಡಿಲಾಗತೊಡಗಿದವು. ಇಷ್ಟು ಚೆನ್ನಾಗಿ ಕ್ಲಾರಿಯೋನೆಟ್‌ನಿಂದ ಸ್ವರ ಹೊರಡಬಲ್ಲುದೆ! ಸಂಗೀತ ಗೊತ್ತಿದ್ದವರಲ್ಲವೇ ಅವರು! ಗುಣಗ್ರಾಹಿಯೂ ಆಗಿದ್ದರು, ರಸಗ್ರಾಹಿಯೂ ಸಹ. ತಿಳಿಯಾದರು ಅವರು, ವಾದಕನ ಸತ್ವದ ತಿಳಿವು ಬಂದೊಡನೆ. ಇಪ್ಪತ್ತೆಂಟೂವರೆ ನಿಮಿಷಗಳ ಅವಧಿ ನೀಡಲಾಗಿತ್ತು. ವಡವಾಟಿಯವರು ಆಲಾಪ್ ಮುಗಿಸಿ ಚೀಜ಼್ ತೆಗೆದುಕೊಂಡು ಯಮನ್ ನುಡಿಸಿದರು. ತಾನ್, ಬೋಲ್‌ತಾನ್ ಎಲ್ಲವೂ ಆಗಿ ಮುಗಿದು ಕೊನೆಗೆ ಸ್ವರಾವರೋಹ ಮಾಡಿ ಷಡ್ಜಕ್ಕಿಳಿದು ಬಂದಾಗ, ರೆಕ್ಕೆಬೀಸುತ್ತಾ ಇಳಿದ ಹಂಸ ನೆಲಮುಟ್ಟಿ ತನ್ನ ರೆಕ್ಕೆಗಳನ್ನು ಮೆಲ್ಲಗೆ ಕೊಡವಿ ಸುತ್ತಲೂ ತಂಗಾಳಿಯನ್ನು ಹರಡಿದಂತಾದಾಗ ಸರಿಯಾಗಿ ಅರ್ಧಗಂಟೆಗೆ ಒಂದೂವರೆ ನಿಮಿಷ ಬಾಕಿ ಇತ್ತು.

ರೀಟೇಕ್ ಇಲ್ಲ, ರೀ ರಿಕಾರ್ಡಿಂಗ್ ಇಲ್ಲ! ಮೊದಲ ಬಾರಿಗೆ ರಿಕಾರ್ಡಿಂಗ್‌ಗಾಗಿ ನುಡಿಸುತ್ತಿರುವುದು. (ಆಕಾಶವಾಣಿಯ ಕಲಾವಿದನಾಗಿ ನುಡಿಸಿದ್ದು ಬಿಟ್ಟು) ಇಪ್ಪತ್ತೆಂಟುವರೆ ನಿಮಿಷಗಳ ಸತತ ವಾದನ. ಕನಸು ತಿಳಿವೊಡೆದು ಎಚ್ಚೆತ್ತಾಗ ಯಾವುದೋ ಗಂಧರ್ವಲೋಕದಲ್ಲಿ ಸಂಚರಿಸಿ ಮರಳಿದ ಅನುಭವ ಹನುಮಂತಾ ಚಾರ್ಯರಿಗೆ.

ಆಚಾರ್ಯರು ಸ್ವಿಚ್ ಆಫ್ ಮಾಡಿ ನರಸಿಂಹಲುರವರ ಬಳಿಗೆ ಬಂದವರೇ ಅವರ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು.

"ಏನಪ್ಪಾ, ಯಾರೇ ಆಗ್ಲಿ, ರಿಕಾರ್ಡಿಂಗ್‌ಗೆ ಬಂದರೆಂದರೆ ಅಡಿಗಡಿಗೆ ತಪ್ಪು ಮಾಡ್ತಾರೆ, ತುಂಡುತುಂಡಾಗಿ ರಿಕಾರ್ಡ್ ಆಗುತ್ತೆ ನೀವು ನೋಡಿದ್ರೆ ಇಪ್ಪತೆಂಟೂವರೆ ಅಂದರೆ ಇಪ್ಪತೆಂಟೂವರೆ ನಿಮಿಷಕ್ಕೆ ಸರಿಯಾಗಿ ಮುಗಿಸಿದ್ದೀರಲ್ಲ!

ಅದೂ ಹ್ಯಾಂಗ! ಒಮ್ಮೆಯೂ ಸಹ ನಿಲ್ಲಲಿಲ್ಲ. ಒಂದು ತಪ್ಪಿಲ್ಲ ಒಂದು ಕೊರೆ ಇಲ್ಲ. ಭಾಳ ಚಂದ ಇತ್ತಪ್ಪ!"

ಸಟ್ಟನೆ ಆಫೀಸ್ ಒಳಗೆ ನಡೆದು ಬಾಗಿಲು ಹಾಕಿಕೊಂಡು ಹನುಮಂತಾಚಾರ್‍ರು ಮಹೇಶರವರಿಗೆ ಫೋನ್ ತಿರುಗಿಸಿದರು.

"ಅದ್ಭುತ ಮಹೇಶ್, ತುಂಬಾ ಚೆನ್ನಾಗಿ ಬಂದಿದೆ. ಒಂದೂ ಕಡೆ ತಪ್ಪಿಲ್ಲ. ಚೆನ್ನಾಗಿ ನುಡಿಸಿದ್ದಾರೆ."

ಅವರು ಒಳಗೆ ಮಾತನಾಡುತ್ತಿದ್ದರೂ ಅವರ ಮಾತುಗಳು ಹೊರಗಿದ್ದವರ ಕಿವಿಗಳಿಗೆ ಸುಲಭ ಶ್ರಾವ್ಯವಾಗಿತ್ತು. ಇಡೀ ತಂಡಕ್ಕೆ ಹುರುಪು, "ಗೆದ್ದೆವು" ಎಂಬ ನಿಟ್ಟುಸಿರು.

ಮಾತು ಮುಗಿಸಿ ಹೊರ ಬಂದವರೇ ಹನುಮಂತಾಚಾರ್ಯರು ಮತ್ತೆ ನರಸಿಂಹಲುರವರತ್ತ ಬಂದರು.

"ಆಯ್ತು ಈಗ ಇನ್ನೊಂದು ಬದಿ ಕ್ಯಾಸೆಟ್ ತುಂಬ ಬೇಕಲ್ಲ! ಇನ್ನೊಂದು ರಾಗ ಹಚ್ಚಿ, ತಯಾರಿದೀರಾ?"

ನರಸಿಂಹಲುರವರಿಗೆ ತಮ್ಮ ಕಿವಿಯನ್ನು ತಾನೇ ನಂಬಲಾಗಲಿಲ್ಲ. "ಒಂದು ರಾಗ ನುಡಿಸುವದೇ ಸಹಿಸಿಯಾರೇ ಈ ವ್ಯಕ್ತಿ" ಅಂದುಕೊಂಡರೆ ಇನ್ನೊಂದು ರಾಗಕ್ಕೆ ಹಸಿರು ದೀಪ!

ಸರಿ, ಮತ್ತೆ ಕುಳಿತಿತು ವೃಂದ. ಈ ಬಾರಿ ನರಸಿಂಹಲುರವರು ನುಡಿಸಲು ಎತ್ತಿಕೊಂಡ ರಾಗ ಜೈಜಯವಂತಿ. ಝುಪ್‌ತಾಲ್ ವಿಲಂಬಿತ್‌ಗೆ, ತೀನ್‌ತಾಲ್ ಚೀಜ಼್‌ಗೆ. ಮತ್ತೆ ಹಾರಿತು ಹಂಸ. ನಾದ ಲೋಕದಲ್ಲಿ ಹಾರಾಡಿ, ತೇಲಾಡಿ ಇಪ್ಪತ್ತೆಂಟೂವರೆ ನಿಮಿಷಗಳ ಕಾಲ ಬಗೆಬಗೆಯಲ್ಲಿ ವಿಹರಿಸಿ ಕೊನೆಗೆ ಮತ್ತೊಮ್ಮೆ ನೆಲಮುಟ್ಟಿ ರೆಕ್ಕೆಯನ್ನು ಕೊಡವಿ ಮಡಿಸಿಕೊಂಡಿತು.

ಒಂದು ಬದಿಗೆ ಯಮನ್, ಇನ್ನೊಂದು ಬದಿಗೆ ಜೈಜಯವಂತಿ! ಮೊದಲ ಬಾರಿಗೆ ಹಿಂದುಸ್ತಾನಿಯಲ್ಲಿ ಕ್ಲಾರಿಯೋನೆಟ್ ವಾದನ ರಿಕಾರ್ಡಿಂಗ್ ಆಗಿತ್ತು. ಮಧ್ಯಾಹ್ನ ಊಟದ ಹೊತ್ತಿಗೆ ಬಂದ ಕಾರ್ಯ ಮುಗಿದಿತ್ತು.

ಹನುಮಂತಾಚಾರ್ಯರಿಗೆ ತಮ್ಮ ಭಾವನೆಗಳನ್ನೂ ಹೇಳಿಕೊಳ್ಳಲು ಶಬ್ದಗಳೇ ಸಿಗುತ್ತಿರಲಿಲ್ಲ. ಬಂದವರೇ ಮತ್ತೊಮ್ಮೆ ನರಸಿಂಹಲುರವರ ಕೈಗಳನ್ನು ಹಿಡಿದು ಕೊಂಡರು.

– "ಅಪ್ಪಾ, ಏನೂ ತಿಳ್ಕೋಬೇಡಪ್ಪ ಹಗುರಾಗಿ ಮಾತನಾಡಿದೆ. ನನ್ನ ಮಾತೇ ಹಂಗೆ. ಮನಸ್ಸಿಗೆ ಹಚ್ಚಿಕೋಬೇಡ."

– "ಇಲ್ರೀ ಪರವಾಗಿಲ್ಲ ಅದು ಸ್ವಾಭಾವಿಕ. ಈ ವಾದ್ಯದ ಬಗ್ಗೆ ಯಾರಿಗೂ ಗೊತ್ತಿಲ್ಲ. ನಿಮಗೆ ಹೇಗೆ ತಿಳಿದೀತು!"

"ಇಲ್ಲಪ್ಪ, ಈ ವಾದ್ಯಕ್ಕೆ ಜೀವ ತಂದು ಕೊಟ್ಟದ್ದೀ ನೀನು. ಅದರ ಮಹತ್ವ ನನಗೆ ಈಗ ಗೊತ್ತಾಯ್ತು. ಇನ್ನು ನೋಡಪ್ಪ ನಮ್ಮ ಕಂಪೆನಿಯ ಮೂಲಕ ಇಡೀ ದೇಶಕ್ಕೆ ಗೊತ್ತಾಗುತ್ತೆ."

"ಆಗಲಿ ಸ್ವಾಮಿ, ದೇವರು ದೊಡ್ಡವನು. ನಾವೀಗ ರೂಮಿಗೆ ಹೋಗ್ತೀವಿ, ಮಹೇಶ್‌ರವರಿಗೆ ಹೇಳಿಬಿಡಿ."

ಅವರಿಗೆ ವಿದಾಯ ಹೇಳಿ ತಮ್ಮ ತಮ್ಮ ವಾದ್ಯ ಸಲಕರಣೆಗಳೊಂದಿಗೆ ಎಲ್ಲರೂ ಸ್ಟುಡಿಯೋದಿಂದ ಹೊರಗೆ ಬಂದು ಟ್ಯಾಕ್ಸಿ ಹಿಡಿದು ರೂಮಿನತ್ತ ತಿರುಗಿದರು. ಎಲ್ಲರೂ ಕೆಲಸ ಮುಗಿದ ಖುಷಿಯಲ್ಲಿ ಸಮಭಾಗಿಗಳಾಗಿದ್ದರು.

"ಅಣ್ಣಾ ನನಗಿವತ್ತು ಬಹಳ ಖುಷಿಯಾಗಿದೆ. ನಾನೊಂದು ಬಾಟಲಿ ಬಿಯರು ಹಾಕಬೇಕು. ನೀವು ರೂಮಿಗೆ ಹೋಗ್ರಿ" ತಬಲಾಜೀ ಅಂದರು.

"ಏ! ನೀ ಒಬ್ಬನೇ ಯಾಕೋ? ಇವತ್ತು ನಾವೆಲ್ಲ ಒಟ್ಟಿಗೇ ಬಿಯರ್ ಹಾಕೋಣ" ನರಸಿಂಹಲುರವರು ಮರುನುಡಿದರು.

ಎಲ್ಲರೂ ರೂಮಿಗೆ ಹೋಗಿ ಅಲ್ಲಿ ಎಲ್ಲ ವಾದ್ಯಗಳನ್ನೂ ಇಳಿಸಿ ಬಾರಿಗೆ ನಡೆದರು. ಉಳಿದವರಿಗೆ ಸುರೆ ಹೀರಿ ಅಭ್ಯಾಸವಿತ್ತು. ಆದರೆ ನರಸಿಂಹಲುರವರಿಗೆ ಇದು ಪ್ರಪ್ರಥಮ ಪರಿಚಯ, ಗೆಳೆಯರಿದ್ದರಲ್ಲ! ಒಂದು ಬಾಟಲಿ ರಸಾನುಭವ ಪಡೆದರು ನರಸಿಂಹಲು, ಸಾಕಾಯಿತು.

ಊಟ ಮುಗಿಸಿ ಕೋಣೆಯಲ್ಲಿ ಹಾಸಿಗೆಯ ಮೇಲೆ ಅಡ್ಡಾದವರಿಗೆ ಸಾಯಂಕಾಲ ಐದರವರೆಗೂ ಎಚ್ಚರವೇ ಇಲ್ಲ. ಐದು ಘಂಟೆಗೆ ಕೋಣೆಯಲ್ಲಿದ್ದ ಫೋನು ಟ್ರಿಂಗಿಸಿದಾಗ, –ಅದು ಎಷ್ಟು ಬಾರಿ ಟ್ರಿಂಗಿಸಿತ್ತೋ! –ಎಚ್ಚೆತ್ತು ರಿಸೀವರ್ ಕೈಗೆತ್ತಿಕೊಂಡು "ಹಲೋ" ಎಂದರು. ಆ ಕಡೆಯಿಂದ ಮಹೇಶ್‌ರವರ ಧ್ವನಿ.

– "ಏನು ವಡವಾಟಿಯವರೆ? ಏನು ಮಾಟ ಮಾಡಿದ್ದೀರಿ? ನಮ್ಮ ಹನುಮಂತಾಚಾರ್ಯರಂತೂ ಬಾಯಿತುಂಬಾ ನಿಮ್ಮ ಕೀರ್ತನೆಯೇ!"

– "ಏನೋ ಸಾರ್, ತಮ್ಮ ವಿಶ್ವಾಸ, ದೇವರ ದಯೆ. ಎಲ್ಲಾ ಸುಗಮವಾಗಿ ಆಯಿತು."

"ಟೈಂ ಮಾಡಿಕೊಂಡು ಸ್ಟುಡಿಯೋಗೆ ಬನ್ನಿ, ಕಾಯ್ತಾ ಇರ್ತೀನಿ"

– "ಬರ್ತೀನಿ ಸಾರ್, ನಮಸ್ಕಾರ"

ಗೆಳೆಯರೊಂದಿಗೆ ಸ್ಟುಡಿಯೋಗೆ ತೆರಳಿದರು ನರಸಿಂಹಲು. ಮಹೇಶ್ರವರಿಂದ ಪ್ರೀತ್ಯಾದರಪೂರ್ವಕವಾದ ಸ್ವಾಗತ ಸಿಕ್ಕಿತು. ಅವರಿಗೆ ಅಂದಿನ ಘಟನೆಯ ಬಗ್ಗೆ ಎಷ್ಟು ಹೊಗಳಿದರೂ ಸಾಲದು. ಒಂದೇ ಟೇಕ್‌ಗೆ ರಿಕಾರ್ಡಿಂಗ್ ಎಲ್ಲೂ ಎಡವದೆಯ ಮುಗಿದದ್ದು ಅವರಿಗೊಂದು ಅದ್ಭುತ, ಅಪೂರ್ವ.

ಆಗಿನ ಕಾಲಕ್ಕೆ ಹೆಚ್ಚೇ ಅನ್ನಬಹುದು, ಐದು ಸಾವಿರ ರೂಪಾಯಿಗಳ ಸಂಭಾವನೆಯನ್ನು ಮಹೇಶ್‌ರವರು ಸಂತೋಷದಿಂದ ನರಸಿಂಹಲುರವರಿಗೆ ನೀಡಿದರು. ನರಸಿಂಹಲುರವರಿಗೆ ಸಹ ಅಷ್ಟು ಸಾಕೆನಿಸಿತ್ತು. ತಬಲಾಜಿಯವರಿಗೆ ಅದರಲ್ಲಿ ಒಂದು ಸಾವಿರ ಪಾಲು ನೀಡಿದ ಮೇಲೆ ಉಳಿದದ್ದು ಅವರಿಗೆ ಸಾಕಷ್ಟಾಯಿತು. ಪ್ರಯಾಣ, ಊಟ, ವಸತಿ, ಮತ್ತಿತರ ವೆಚ್ಚ ಕಳೆದು ಇನ್ನೂ ಉಳಿದಿತ್ತು. ಮೊಟ್ಟಮೊದಲ ರಿಕಾರ್ಡಿಂಗ್ ಸಂಭಾವನೆ, ಸಂಭ್ರಮ!

ಮುಂದೆ ಮಹೇಶ್‌ರವರು ನರಸಿಂಹಲುರವರಿಂದ ಇನ್ನೂ ಬಹಳಷ್ಟು ರಾಗಗಳನ್ನು ರಿಕಾರ್ಡಿಂಗ್ ಮಾಡಿಸಿದರು. ಎಲ್ಲಕ್ಕೂ ತುಂಬಾ ಬೇಡಿಕೆ ಬಂದು ಎಲ್ಲಾ ಕ್ಯಾಸೆಟ್‌ಗಳೂ ಚೆನ್ನಾಗಿ ಮಾರಾಟವಾದವು. ಮದುವೆ, ಮಂಗಲ ಕಾರ್ಯಗಳಿಗಾಗಿ "ಕಲ್ಯಾಣಮಂಗಲ ನಾದಂ" ಎಂಬ ಧ್ವನಿಸುರುಳಿಯೂ ಮುದ್ರಿತವಾಗಿ ಮಾರಾಟವಾಯಿತು. ಇದರ ಜೊತೆಗೆ ವಿದ್ವಾನ್ ಕದ್ರಿ ಗೋಪಾಲನಾಥ್‌ರವರ ಸ್ಯಾಕ್ಸೋಫೋನ್‌ನೊಂದಿಗೆ ನರಸಿಂಹಲುರವರ ಕ್ಲಾರಿಯೋನೆಟ್ ಜುಗಲ್ ಬಂದಿಯೂ ಸಹ ಹಲವಾರು ಧ್ವನಿ ಸುರಳಿಗಳು ಹೊರಬಂದವು. ಮ್ಯಾಗ್ನಾ ಸೌಂಡ್, ಹೆಚ್.ಎಂ.ವಿ. ಮುಂತಾದ ಕಂಪೆನಿಗಳೂ ಮುಂದೆ ನರಸಿಂಹಲುರವರ ಕ್ಲಾರಿಯೋನೆಟ್ ವಾದನದ ಧ್ವನಿಮುದ್ರಣ ಮಾಡಿಕೊಂಡವು. ವಿದೇಶಿ ವಾದ್ಯವಾದ ಕ್ಲಾರಿಯೋನೆಟ್ ಹೀಗೆ ಕರ್ನಾಟಕದ ಒಬ್ಬ ಅಪೂರ್ವ ಸಾಧಕನಿಂದ ಇಡೀ ದೇಶದ ಸಂಗೀತ ವಲಯದಲ್ಲಿ ಜನಪ್ರಿಯವಾಯಿತು.

ಇಲ್ಲಿಯವರೆಗೆ ಈರೀತಿ ಇವರು 20–25 ರಾಗಗಳನ್ನು ಧ್ವನಿಸುರುಳಿಗಾಗಿ ಒಬ್ಬರೇ ನುಡಿಸಿರುವುದಲ್ಲದೆ ಕದ್ರಿಯವರೊಂದಿಗೆ ಏಳೆಂಟು ಜುಗಲ್‌ಬಂದಿ ಮುದ್ರಣಕ್ಕೂ ನುಡಿಸಿದ್ದಾರೆ.

ಈಗಲೂ ಸಹ ನರಸಿಂಹಲುರವರು ಕ್ಯಾಸೆಟ್‌ಗಳ ಬಗ್ಗೆ ಮಾತನಾಡುವಾಗಲೆಲ್ಲ ತಮಗೆ ಮಹೇಶ್‌ರವರು ನೀಡಿದ ಪ್ರೋತ್ಸಾಹವನ್ನು ನೆನೆಯಲು ಮರೆಯುವುದೇ ಇಲ್ಲ.

❑

ಚರಣ 9

# ಸಾಗರದಾಚೆಗೆ

1988ರಲ್ಲಿ ವಡವಾಟಿಯ ನಮ್ಮ ಸಂಗೀತಗಾರನಿಗೆ ವಿದೇಶ ಪ್ರಯಾಣದ ಯೋಗವೂ ಬಂತು.

ಇಲ್ಲಿ ಒಂದು ಮಾತು ಹೇಳಲೇಬೇಕು. ಸಾಧಾರಣವಾಗಿ ಸರ್ಕಾರಿ ನೌಕರರು, ಅಧಿಕಾರಿಗಳು ಎಂದರೆ ನಮ್ಮ ಕಲ್ಪನೆಯೇ ವಿಶಿಷ್ಟ. ಅವರಿಗೆ ಫೈಲು, ಕಛೇರಿಯ ಕೆಲಸ, ತಮಗೆ ಅದರಿಂದ ಸಿಗುವ ಪ್ರತಿಫಲ – ಇಂಥಾದ್ದನ್ನು ಬಿಟ್ಟರೆ ಬಾಕಿ ಯಾವುದೂ ಅವರಿಗೆ ಮುಖ್ಯವಲ್ಲ ಎಂಬ ಕಲ್ಪನೆ ಜನಸಾಮಾನ್ಯರಿಗೆ ಸಹಜ. ಆದರೆ ಅಂತಹ ಸಮುದಾಯದಲ್ಲೂ ಕೆಲವರು ಆ ಮಟ್ಟದಿಂದ ಮೇಲೇರಿ ಸಂಸ್ಕೃತಿ, ಕಲೆಗಳ ಬಗ್ಗೆ ಚಿಂತನೆನಡೆಸುವವರು, ಕಲೆಯನ್ನು, ಕಲಾವಿದರನ್ನು ಗುರುತಿಸಿ ಅವರಿಗೆ ತಮ್ಮ ಅಧಿಕಾರದ ಮಿತಿಯಲ್ಲಿ ಕೈಲಾದಷ್ಟು ಪ್ರೋತ್ಸಾಹ ನೀಡುವ ಗುಣಗ್ರಾಹಿಗಳು, ಗುಣವಂತರು ಇರುತ್ತಾರೆ.....ಈಗಲೂ ಸಹ.

ಅಂಥವರಲ್ಲಿ ಒಬ್ಬರು ಶ್ರೀ ಐ.ಎಂ. ವಿಠ್ಠಲಮೂರ್ತಿಯವರು. ಹಾಗೆ ಸುಮ್ಮನೆ ಹೆಸರು ಹೇಳಿದರೆ ಅವರು ಯಾರೆಂಬುದು ತಿಳಿಯದಿದ್ದೀತು. ತಮ್ಮ ತಂದೆಯವರ ಹೆಸರಿನಲ್ಲಿರುವ "ಅನಿಕೇತನ" ಚಿತ್ರ ನಿರ್ಮಾಣ ಸಂಸ್ಥೆಗೆ ಬೆಂಬಲಿಗರಾಗಿ ರಾಷ್ಟ್ರಕವಿ ಕುವೆಂಪುರವರ "ಕಾನೂರು ಹೆಗ್ಗಡತಿ" ಕಾದಂಬರಿಯನ್ನು, ಭೈರಪ್ಪನವರ "ಮತದಾನ" ಕಾದಂಬರಿಯನ್ನು ಚಲನಚಿತ್ರಮಾಡಲು ಕಾರಣರಾದವರು ಇವರು.

1975–76 ರಿಂದ ನರಸಿಂಹಲುರವರ ಸಂಗೀತ ಕಛೇರಿಗಳು ಆರಂಭ ವಾಗಿದ್ದವು. ದೇಶದ ವಿವಿಧ ಎಡೆಗಳಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಇವರು ಕಛೇರಿಗಳನ್ನು ನೀಡಿ ಹೆಸರು ಗಳಿಸಲು ತೊಡಗಿದ್ದವು. ವಿಠ್ಠಲಮೂರ್ತಿಯವರು ಇವರ ಸಂಗೀತವನ್ನು ಕಛೇರಿಗಳಲ್ಲಿ ಆಕಾಶವಾಣಿಯ ಮೂಲಕ ಕೇಳಿದ್ದರು ಇವರ ಬಗ್ಗೆ ಪತ್ರಿಕಾ ವರದಿಗಳನ್ನು ವಿಮರ್ಶೆಗಳನ್ನು ಓದಿದ್ದರು. ಬಹುಶಃ ಆಗಲೇ ಅವರ ಮನಸ್ಸಿನಲ್ಲಿ ಈ ವಾದಕನಿಗೆ ಹೇಗಾದರೂ ಸರ್ಕಾರದ ಮೂಲಕ

ಕಾರ್ಯಕ್ರಮಗಳನ್ನು ಕೊಡಿಸಿ ಪ್ರೋತ್ಸಾಹಿಸಬೇಕಂಬ ಉದ್ದೇಶ್ಯವನ್ನು ಹೊಂದಿದ್ದಿರ ಬಹುದು. ಅಂತಹ ಸದವಕಾಶವೊಂದು ಸಿಗಲು 1988ರವರೆಗೆ ಕಾಯ ಬೇಕಾಯಿತು.

1988ರಲ್ಲಿ ವಿಠ್ಠಲಮೂರ್ತಿಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ನಿಯುಕ್ತರಾಗಿದ್ದಾಗ ನಡೆದದ್ದು ಇದು.

ಇಂಗ್ಲೇಂಡಿನ ಮ್ಯಾಂಚೆಸ್ಟರಿನಲ್ಲಿ ಅಕ್ಕನ ಬಳಗ ಎಂಬೊಂದು ಸಾಂಸ್ಕೃತಿಕ ಕೂಟ ಇದೆ. ಅವರು ಆ ವರ್ಷ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಯೋಜಿಸಿದರು. ನೃತ್ಯ, ಜಾನಪದ ಕಲೆ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ–ಇತ್ಯಾದಿ ಪ್ರದರ್ಶನಗಳನ್ನು ಹಮ್ಮಿಕೊಳ್ಳ ಲಾಗಿತ್ತು ಹಾಗೂ ಇದಕ್ಕಾಗಿ ಕರ್ನಾಟಕದ ವಿವಿಧ ಸ್ಥಳಗಳಿಂದ ಕಲಾವಿದರನ್ನು ಆಹ್ವಾನಿಸುವ ಯೋಜನೆ ಹಾಕಲಾಗಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಕಲಾವಿದರನ್ನು ಆರಿಸಿ ಕಳುಹಿಸುವ ಹೊಣೆ ಹೊತ್ತಾಗ ವಿಠ್ಠಲ ಮೂರ್ತಿಯವರ ಮನಸ್ಸಿಗೆ ಹೊಳೆದ ಹೆಸರು ನರಸಿಂಹಲು ವಡವಾಟಿಯವರದ್ದು. ಕೂಡಲೇ ಅವರು ವಡವಾಟಿಯವರ ರಾಯಚೂರಿನ ವಿಳಾಸವನ್ನು ಪಡೆದುಕೊಂಡು ಅವರನ್ನು ಸಂಪರ್ಕಿಸಿದರು. ನರಸಿಂಹಲುರವರು ಪ್ರಥಮ ವಿದೇಶಯಾತ್ರೆಗೆ ಸನ್ನದ್ಧರಾಗಿ ಹೊರಟರು.

ಹದಿನೈದು ದಿನಗಳ ಆ ಪ್ರವಾಸ ನರಸಿಂಹಲುರವರ ಪಾಲಿಗೆ ಒಂದು ರೋಮಾಂಚಕರ ಅನುಭವ. ಅಷ್ಟೇ ಅಪೂರ್ವ ಅನುಭವ ಅಲ್ಲಿಯ ಪ್ರೇಕ್ಷಕರಿಗೆ. ನರಸಿಂಹಲುರವರು ಅಲ್ಲಿ ಎಲ್ಲಿಯೂ ಮಂದಗತಿಯಲ್ಲಿ ವಾದನ ಮಾಡಲಿಲ್ಲ. ಶ್ರೋತೃಗಳನ್ನು ಅವರು ಸಭಾತ್ಯಾಗ ಮಾಡದಂತೆ ಹಿಡಿದಿಡಬೇಕಾಗಿತ್ತು. ಅದಕ್ಕಾಗಿ ಅವರು ತ್ರಿತಾಲ್, ತೀನ್‌ತಾಲ್, ಝುಪ್‌ತಾಲ್ ನಂತಹ ತೀವ್ರಗತಿಯ ತಾಳಗಳಲ್ಲೇ ತಮ್ಮವಾದನವನ್ನು ಪ್ರಸ್ತುತಪಡಿಸಿದರು. ಆಲಾಪ್‌ಗಳನ್ನು ನುಡಿಸಿ ನಂತರ ಚೀಜ್ ತೆಗೆದುಕೊಂಡು ತಾನ್, ಬೋಲ್‌ತಾನ್, ಲಯಕಾರಿಗಳಲ್ಲಿ ಸಂಚರಿಸುತ್ತಾ ಶ್ರೋತೃಗಳಿಗೆ ಹೊಸದೊಂದು ಅನುಭವ ನೀಡಿದರು. ನಿಜಕ್ಕೂ ಅದು ಅವರಿಗೆ ಹೊಸ ಅನುಭವ. ಈ ಮೊದಲು ರವಿಶಂಕರ್‌ರವರ ಸಿತಾರ್ ಕೇಳಿದ್ದರು, ಶಿವಕುಮಾರ ಶರ್ಮರವರ ಸಂತೂರ್ ಕೇಳಿದ್ದರು. ಪಿಟೀಲುವಾದನ, ವೀಣೆ, ಕೊಳಲು– ಎಲ್ಲವನ್ನೂ ಕೇಳಿದ್ದರವರು. ಕ್ಲಾರಿಯೋನೆಟ್ ವಾದನ ವಿನಿಕೆಯೂ ಅವರಿಗೆ ಹೊಸದಲ್ಲ. ಆದರೆ ಅದನ್ನು ಕೇಳಿದ್ದು ಕರ್ನಾಟಕ ಸಂಗೀತ ಶೈಲಿಯಲ್ಲಿ.

ಇದು!...... ಹಿಂದುಸ್ತಾನಿ ಶೈಲಿಯಲ್ಲಿ ಈ ವಾದ್ಯದ ಸೊಗಸು ಅನುಭವಿಸಿದ್ದು ಇದೇ ಸ್ಯೆ.

ಇದರ ಪರಿಣಾಮವೆಂದರೆ ಅಲ್ಲಿ ನಡೆದ ಪ್ರತಿಯೊಂದು ಕಾರ್ಯಕ್ರಮದಲ್ಲಿ ನರಸಿಂಹಲುರವರ ವಾದನವು ಅವಿಭಾಜ್ಯ ಅಂಗವಾಗಿ ಹೋಯಿತು. ಅದೂ ಏನು! ಪ್ರತಿಯೊಂದು ಕಾರ್ಯಕ್ರಮ ಶುರು ಆಗಬೇಕಾದ್ದು ಇವರ ವಾದನದಿಂದಲೇ. ಕಾರ್ಯಕ್ರಮದ ರೂವಾರಿಗಳಿಗೆ ಅರಿವಾಗಿ ಬಿಟ್ಟಿತ್ತು — ಸಭೆಯಲ್ಲಿ ಗದ್ದಲಗೌಜು ನಿಂತು ಜನರು ಶಾಂತವಾಗಿರಬೇಕಾದರೆ, ಮುಂದಿನ ಕಾರ್ಯಕ್ರಮಗಳು ಸುಲಲಿತವಾಗಿ ನಡೆಯಬೇಕೆಂದರೆ ನರಸಿಂಹಲು ವಡವಾಟಿಯವರ ಕ್ಲಾರಿಯೋನೆಟ್ ವಾದನವೊಂದೇ ಸುಲಭೋಪಾಯ –ಎಂಬ ವಾಸ್ತವತೆ.


ಮ್ಯಾಂಚೆಸ್ಟರ್‌ನಿಂದ ಲಂಡನ್‌ಗೆ ಪ್ರಯಾಣಮಾಡಿದ ನರಸಿಂಹಲುರವರಿಗೆ ಅಲ್ಲಿಯ ಭಾರತೀಯ ವಿದ್ಯಾಭವನದಲ್ಲಿ ಕಾರ್ಯಕ್ರಮದ ಅವಕಾಶ ದೊರೆಯಿತು. ಅಲ್ಲಿ ತಮ್ಮ ಕಾರ್ಯಕ್ರಮ ನೀಡಲು ಪಂಡಿತ್ ಶಿವಕುಮಾರ್‌ಶರ್ಮರವರು ಉಸ್ತಾದ್ ಝಾಕಿರ್ ಹುಸೇನ್‌ರಂತಹವರೂ ಬಂದಿದ್ದರು. ಅವರೆಲ್ಲರೂ ತಂತಮ್ಮ ಕಾರ್ಯಕ್ರಮ ನೀಡುವುದರೊಂದಿಗೆ ನರಸಿಂಹಲುರವರ ಕ್ಲಾರಿಯೋನೆಟ್ ವಾದನವನ್ನೂ ಕೇಳಿದರು, ಬಹಳವಾಗಿ ಮೆಚ್ಚಿಕೊಂಡರು.

ಶ್ರೀ ಎಂ.ಪಿ. ಪ್ರಕಾಶ್‌ರವರು ಕರ್ನಾಟಕದ ಕಲಾವಿದರ ತಂಡದ ನೇತೃತ್ವ ವಹಿಸಿದ್ದರು. ಪ್ರತಿಯೊಂದು ಕಾರ್ಯಕ್ರಮದ ನಂತರ ಅದರ ವರದಿಯನ್ನು ಸರ್ಕಾರಕ್ಕೆ ಕಳಿಸಬೇಕಿತ್ತು. ಪ್ರತಿಯೊಂದು ವರದಿಯಲ್ಲೂ ಪ್ರಕಾಶ್‌ರವರಿಂದ ನರಸಿಂಹಲು ವಡವಾಟಿಯವರ ಬಗ್ಗೆ ಪ್ರಶಂಸೆಯ ಸುರಿಮಳೆ. ಬರೆದಷ್ಟೂ ತೃಪ್ತಿಯಿಲ್ಲ ಅವರಿಗೆ. ಅಲ್ಲದೆ ತಮ್ಮ ಬಳ್ಳಾರಿ ಜಿಲ್ಲೆಯ ಪಕ್ಕದ ಜಿಲ್ಲೆಯಾದ ರಾಯಚೂರಿನವರು ಇವರು ಎಂಬ ಅಭಿಮಾನ ಬೇರೆ, ಸ್ವಾಭಾವಿಕ ಅಲ್ಲವೆ!

ಬರಿಯ ಸಂಗೀತದ ಬಗ್ಗೆ ಅಷ್ಟೇ ಅಲ್ಲ, ಈ ಸಂಗೀತಗಾರನ ವ್ಯಕ್ತಿತ್ವದ ಬಗ್ಗೆ ಸಹ ಪ್ರಕಾಶ್‌ರವರು ಮೆಚ್ಚುಗೆಯ ಮಾತುಗಳನ್ನು ಬರೆದು ವರದಿ ಮಾಡಿದ್ದರು. ಉಳಿದ ಕಲಾವಿದರು, ಅದರಲ್ಲೂ ಮೊದಲ ಬಾರಿಗೆ ಕಡಲು ದಾಟಿ ಹೋದವರು ಕಾರ್ಯಕ್ರಮ ತೊಡಗುವ ಮೊದಲು ಊರು ಸುತ್ತಿ, ಪ್ರೇಕ್ಷಣೀಯವೋ ಅಲ್ಲವೊ, ಒಟ್ಟಿನಲ್ಲಿ ಸ್ಥಳ ವೀಕ್ಷಣೆ ಮಾಡಲು ಹೋಗುತ್ತಿದ್ದರು. ಮೋಜು ಮಾಡುತ್ತಿದ್ದರು. ಪರಿಣಾಮವಾಗಿ ಅವರು ಕಾರ್ಯಕ್ರಮಗಳಿಗೆ ಬಹಳಷ್ಟು ಬಾರಿ ತಡವಾಗಿ

ಬರುತ್ತಿದ್ದು ಸಂಘಟಕರಿಗೆ ಪೇಚು ತರುತ್ತಿದ್ದರು. ಆದರೆ ನರಸಿಂಹಲುರವರು ಆ ಪೈಕಿಯವರಾಗಿರಲಿಲ್ಲ. ಇಂತಿಷ್ಟು ಹೊತ್ತಿಗೆ ಕಾರ್ಯಕ್ರಮ ಆರಂಭವಾಗುವುದೆಂದರೆ ಅದಕ್ಕೆ ಸಾಕಷ್ಟು ಮುಂಚಿತವಾಗಿ ಸ್ಥಳಕ್ಕೆ ಬಂದು ತಮ್ಮ ಎಲ್ಲ ಪೂರ್ವಸಿದ್ಧತೆಗಳನ್ನು ಮುಗಿಸಿ ತಮಗೆ ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ತಮ್ಮ ಕಾರ್ಯಕ್ರಮ ನೀಡುತ್ತಿದ್ದರು. ಒಂದು ಬಾರಿಯೂ ಅದು ತಪ್ಪಲಿಲ್ಲ, ಯಾವುದೇ ಕಾರಣಕ್ಕೂ ಸಹ.

ಈ ಪ್ರವಾಸದ ನಂತರ ಎರಡನೆಯ ಬಾರಿಗೆ ಲಂಡನ್‌ಗೆ ಭಾರತೀಯ ವಿದ್ಯಾಭವನದ ಆಹ್ವಾನದ ಮೇರೆಗೆ ಅಲ್ಲಿ ಕಾರ್ಯಕ್ರಮ ನೀಡಲು ಹೋದರು. ಆಗಲೂ ಸಹ ಅದ್ಭುತ ಪ್ರತಿಕ್ರಿಯೆ ಸಿಕ್ಕಿತು. ಮತ್ತೂರು ಕೃಷ್ಣಮೂರ್ತಿಯವರು ಆಗ ಅಲ್ಲಿದ್ದರು.



**ಕ್ಯಾಲಿಫೋರ್ನಿಯಾ ಯೂನಿವರ್ಸಿಟಿ ಕ್ಯಾಲ್ ಆರ್ಟ್ಸ್ ಪ್ರಿನ್ಸಿಪಾಲ್ ಹಾಗೂ ಪಾಶ್ಚಾತ್ಯ ಕ್ಲಾರಿಯೋನೆಟ್ ವಾದಕ ವಿಲಿಯಂ ಪಾರ್ವೆಲ್ ಅವರು ವಡವಾಟಿಯವರೊಂದಿಗೆ ಸಂತಸ ಹಂಚಿಕೊಳ್ಳುತ್ತಿರುವ ಸಮಯ.**

ನಂತರ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ಪ್ರಾಚಾರ್ಯ ರಾಗಿ (Visting Professor) ಬರಲು ಆಹ್ವಾನಿತರಾಗಿ ನರಸಿಂಹಲುರವರು ಹೋಗುವ ಸಂದರ್ಭ ಬಂತು. ಪಂಡಿತ್ ರವಿಶಂಕರ್ ಅವರು ಆ ವಿಶ್ವವಿದ್ಯಾಲಯ ದಲ್ಲಿ ಹಿಂದೂಸ್ತಾನಿ ಸಂಗೀತ ಘಟಕವೊಂದನ್ನು ಸ್ಥಾಪಿಸಿದ್ದರು. ಸಾಕಷ್ಟು ಜನ

ಭಾರತೀಯ ಮತ್ತು ವಿದೇಶಿಯರು ಅಲ್ಲಿ ಹಿಂದುಸ್ತಾನಿ ಸಂಗೀತ ಅಧ್ಯಯನ ಮಾಡುತ್ತಿದ್ದರು.

ಪಂಡಿತ್ ರವಿಶಂಕರ್‌ರವರು ಅಲ್ಲಿ ತರಗತಿಗಳಲ್ಲಿ ಹಾರ್ಮೋನಿಯಂ, ಸಿತಾರ್, ಶಹನಾಯಿ, ಸರೋದ್, ತಬಲಾ ಮುಂತಾದ ಸಂಗೀತ ಪರಿಕರಗಳನ್ನು ಶೇಖರಿಸಿಟ್ಟಿದ್ದರು. ಕೆಲಕಾಲ ಅಲ್ಲಿ ಅವರು ಪಾಠವನ್ನು ಹೇಳುತ್ತಿದ್ದರು. ಆಮೇಲೆ ಅವರು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ತಮ್ಮದೇ ಸಂಗೀತಶಾಲೆ ಆರಂಭಿಸಿ ಈಗ ಅಲ್ಲಿಯೇ ಇದ್ದಾರೆ.

ನರಸಿಂಹಲುರವರು ಅಲ್ಲಿಗೆ ಹೋಗಿದ್ದ ಆ ಸಂದರ್ಭದಲ್ಲಿ ಹೆಸರಾಂತ ಸರೋದ್ ವಾದಕರಾದ, ಕನ್ನಡದವರೇ ಆದ ಪಂಡಿತ್ ರಾಜೀವ ತಾರಾನಾಥರೂ ಸಹ ಇದ್ದರು.

ಅಮೆರಿಕಾದ ವಿಶ್ವವಿದ್ಯಾಲಯಗಳದ್ದೊಂದು ವೈಶಿಷ್ಟ್ಯವಿದೆ. ಅಲ್ಲಿ ವಿದ್ಯಾರ್ಥಿಗಳು ತಮಗೆ ಬೇಕಾದ ಯಾವುದೇ ರೀತಿಯ ಸಂಗೀತವನ್ನೂ ಕಲಿಯಬಹುದು, ಯಾವುದೇ ವಾದನವನ್ನೂ ಅಭ್ಯಸಿಸಬಹುದು. ಯಾವ ಯಾವ ಕಲೆಗೆ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆಂಬುದರ ಮೇಲೆ ಅವಲಂಬಿಸಿ ಆಡಳಿತ ವರ್ಗ ಅಗತ್ಯರಾದವರನ್ನು ವಿಸಿಟಿಂಗ್ ಪ್ರೊಫೆಸರರಾಗಿ ಬರಲು ಆಹ್ವಾನಿಸುತ್ತಾರೆ.

ನಮ್ಮ ದೇಶದಲ್ಲಿ ಪಂಡಿತರಿದ್ದಾರೆ, ಸಜ್ಜನರೂ ಇದ್ದಾರೆ. ಆದರೆ ಪಾಂಡಿತ್ಯ ಮತ್ತು ಸಜ್ಜನಿಕೆ ಒಬ್ಬ ವ್ಯಕ್ತಿಯಲ್ಲಿ ಮೇಳೈಸಿದಾಗ ಅದೊಂದು ವಿಶಿಷ್ಠ ವ್ಯಕ್ತಿತ್ವವಾಗುತ್ತದೆ. ಪ್ರತಿಭಾವಂತನೊಬ್ಬ ಪ್ರಕಾಶಕ್ಕೆ ಬರಲು ಅವನನ್ನು ಇನ್ನೊಬ್ಬ ಪ್ರತಿಭಾವಂತ ಗುರುತಿಸುವ ಅಗತ್ಯವಿದೆ. ಆದರೆ ನಮ್ಮ ದೇಶದ ಬಹಳಷ್ಟು ಪಂಡಿತರು, ಕಲಾವಿದರು ಇನ್ನೊಂದು ಪ್ರತಿಭೆಯನ್ನು ಗುರುತಿಸುವುದಿರಲಿ, ಆ ಪ್ರತಿಭೆ ಹೇಗೋ ಮಾಡಿ ಮುಂದೆ ಬಂದರೆ ಕರುಬುವವರೇ ಹೆಚ್ಚು.

ಆದರೆ ಅಮೆರಿಕಾದಂತಹ ದೇಶಗಳಲ್ಲಿ –ಆ ದೇಶವೇನೂ ಸರ್ವಾಂಗ ಪರಿಪೂರ್ಣವಲ್ಲ–ಸಂಸ್ಕೃತಿ ಮತ್ತು ಕಲೆಯ ವಿಷಯಗಳಲ್ಲಿ ಸರ್ಕಾರವೇ ಒಂದು ನೀತಿಯನ್ನು ಅನುಸರಿಸುತ್ತಿದೆ. ಅದೆಂದರೆ ದೇಶ–ವಿದೇಶಗಳ ವಿವಿಧ ಸಾಂಸ್ಕೃತಿಕ ಮತ್ತು ಕಲಾ ಕ್ಷೇತ್ರಗಳ ಅಧ್ಯಯನ ನಡೆಸುವವರಿಗೆ ಅದಕ್ಕೆ ಬೇಕಾದ ಅಗತ್ಯಗಳನ್ನು ಪೂರೈಸುವುದು, ತನ್ನಲ್ಲಿಯ ಒಬ್ಬ ವಿದ್ವಾಂಸನನ್ನು ಇನ್ನೊಂದು ದೇಶಕ್ಕೆ ಕಲಾವಿದರ ಅನ್ವೇಷಣೆಗಾಗಿ ನಿಯುಕ್ತಗೊಳಿಸುವುದು, ತನ್ನ ವಿಶ್ವವಿದ್ಯಾಲಯಗಳಲ್ಲಿ ಅಂತಹ ಕಲೆಗೆ ಪೀಠವನ್ನು ಸ್ಥಾಪಿಸಿ ಗೌರವಿಸುವುದು.

ನಾವು ವಿದೇಶೀಯರನ್ನು ಬಹಳಷ್ಟು ಕಡೆ ಅನುಕರಿಸುತ್ತೇವೆ. ಕೆಲವನ್ನು ಅನುಕರಿಸಲಾಗದೆ, ಆದರೂ ಪ್ರಯತ್ನ ಬಿಡದೆ ಇಲ್ಲಿ–ಅಲ್ಲಿ ಎರಡೂ ಕಡೆ ಸಲ್ಲದವರಾಗಿದ್ದರೂ ಏನೋ ಒಂದು ರೀತಿಯ ವಿಚಿತ್ರ ತೃಪ್ತಿಪಡೆಯುತ್ತೇವೆ. ಆದರೆ ಅವರಲ್ಲಿ ಇರುವ ಮೇಲೆ ಹೇಳಿದಂತಹ ಗುಣವನ್ನು ಲಕ್ಷಿಸುವುದಿಲ್ಲ. ಅವರು ತಮ್ಮತನವನ್ನು ಬಿಟ್ಟುಕೊಡದೆ ಇತರರನ್ನು ಪ್ರೋತ್ಸಾಹಿಸುತ್ತಾರೆ. ನಾವು! ನಮ್ಮ ಭಾಷೆಯನ್ನು ಮರೆಯುತ್ತೇವೆ. ನಮ್ಮದೇ ನೆಲದಲ್ಲೂ ನಮ್ಮದೇ ಭಾಷೆ ಮಾತನಾಡಲು ನಾಚುತ್ತೇವೆ. ಕಂಟೋನ್ಮೆಂಟಿನ ದೊಡ್ಡ ಹೋಟೆಲ್ಲಿಗೆ ಹೋದರೆ ಅಲ್ಲಿ ಬೇರರ್‌ನೊಂದಿಗೂ ಇಂಗ್ಲೀಷಿನಲ್ಲಿ ಮಾತನಾಡಿ ಹೆಮ್ಮೆ ಪಡುತ್ತೇವೆ. ಇಲ್ಲ ತಮಿಳಿನಲ್ಲಿ, ಹಿಂದಿಯಲ್ಲಿ –ಅಥವಾ ಇನ್ನಾವುದೇ ಭಾಷೆಯಲ್ಲಿ ಮಾತನಾಡಿ ಖುಷಿ ಪಡುತ್ತೇವೆ. ನಮ್ಮ ಔದಾರ್ಯ ಎಲ್ಲಿಯವರೆಗೆ ಎಂದರೆ ಆತ ಒರಿಯಾ ಭಾಷೆಯವನಾಗಿದ್ದರೆ ಒರಿಯಾದಲ್ಲಿಯೇ ಬಡಬಡಿಸಲು ಪ್ರಯತ್ನಿಸುತ್ತೇವೆ. ಇವೆಲ್ಲವೂ ಯಾವ ಭಾಷೆಯ ಬಲಿಪೀಠದ ಮೇಲೆ? ನಮ್ಮದೇ ಆದ ಕನ್ನಡದ ಬಲಿಪೀಠ. ಹಾಗೂ ಏನಾದರೂ ಕನ್ನಡದಲ್ಲೇ ಮಾತನಾಡಿದೆವೋ –ಆತ ನಮ್ಮನ್ನು ಒಂದು ವಿಚಿತ್ರ ಪ್ರಾಣಿಯನ್ನು ನೋಡುವಂತೆ ನೋಡುತ್ತಾನೆ. ಅದಕ್ಕೇ ಹುಟ್ಟಿದೆ ಅಲ್ಲವೇ ನಮ್ಮ ಪ್ರಥಮ ರಾಷ್ಟ್ರಕವಿ ದಿ॥ ಮಂಜೇಶ್ವರ ಗೋವಿಂದ ಪೈ ಅವರ ಹಾಡು! ನಮ್ಮ ಪಾಡು!

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ

ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ....

ಇಂಥದ್ದೇ ಔದಾರ್ಯ ನಮ್ಮ ಸಂಸ್ಕೃತಿಯ ಬಗ್ಗೆ ಸಹ. ಪಾಶ್ಚಾತ್ಯ ದೇಶದವರು ಬೇರೆಯೇ ರೀತಿ ಬಿಡಿ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ನರಸಿಂಹಲುರವರ ಬಗ್ಗೆ ವಿವರಗಳನ್ನು ಸಂಗ್ರಹಿಸಲು ಮತ್ತು ಆ ಮಾಹಿತಿಗಳನ್ನು ವರದಿ ಮಾಡಲು ವಿಲಿಯಂ ಪೊವೆಲ್ ಎಂಬುವವರು ನಿಯುಕ್ತರಾದರು. ಅವರೋ! ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದಲ್ಲಿ ಕ್ಲಾರಿಯೋನೆಟ್‌ನ ಉತ್ತಮ ವಾದಕರು, ಅಂಥಿಂಥವರಲ್ಲ.

ಪೊವೆಲ್‌ರವರು ಭಾರತದಲ್ಲಿ ಚೆನ್ನೈ (ಆಗಿನ ಮದ್ರಾಸು)ನಲ್ಲಿ ಬಂದು ಇಳಿದುಕೊಂಡವರೇ ನರಸಿಂಹಲುರವರಿಗೆ ಪತ್ರ ಬರೆದು ತಾವು ಅವರನ್ನು ರಾಯಚೂರಿನಲ್ಲಿ ಭೇಟಿ ಮಾಡುವುದೋ, ಅಥವಾ ನರಸಿಂಹಲುರವರೇ ಮದ್ರಾಸ್‌ಗೆ ಬರುವರೇ ಎಂದು ಕೇಳಿದರು.

ನರಸಿಂಹಲುರವರಿಗೆ ವಿಚಿತ್ರವಾದ ಅನುಭವವದು. ಅಂತಹ ಒಬ್ಬ ಸಂಗೀತಗಾರ ತಮ್ಮನ್ನು ಕಾಣಬೇಕೆಂದರೆ! ಆದರೆ ರಾಯಚೂರಿನಲ್ಲಿ ಆ ಏಪ್ರಿಲ್ ಮೇ ತಿಂಗಳಲ್ಲಿ ಎಲ್ಲರಿಗಿಂತ ಹೆಚ್ಚಿನ ಕಾರ್ಯಶೀಲ ಎಂದರೆ ಸೂರ್ಯ. ಝಳಝಳನೆ ಬೆವರು ಸುರಿವಂತೆ ಝಳವನ್ನು ಝಳಪಿಸುವ ಸೂರ್ಯ ನೆತ್ತಿಯ ಮೇಲೆ ಅಟ್ಟಹಾಸಮಾಡುವ ಆ ಕಾಲದಲ್ಲಿ ಬೆಚ್ಚಗಿನ ನಾಡಾದ ಅಮೆರಿಕಾದಿಂದ ಬಂದವರನ್ನು "ಇಲ್ಲಿಗೇ ಬನ್ನಿ" ಎಂದು ಕರೆಸಿಕೊಂಡರೆ! (ಇಷ್ಟಾಗಿ ಮದ್ರಾಸೇನೂ ಶೀತಲ ಸ್ವರ್ಗವಲ್ಲ, ಆದರೆ ಅಲ್ಲಿ ಒಳ್ಳೊಳ್ಳೆಯ ಹವಾನಿಯಂತ್ರಿತ ವಸತಿ ಗೃಹಗಳಿವೆಯಲ್ಲ!) ಮುಜುಗರ ಇವರಿಗೆ. ಜೊತೆಗೆ ರಾಯಚೂರಿಗೆ ಮೊವೆಲ್ ರವರನ್ನು ಕರೆಸಿಕೊಳ್ಳಲು ಅಂತಹ ದರ್ಶನಯೋಗ್ಯ ಐತಿಹಾಸಿಕ ಅವಶೇಷಗಳು ಅಷ್ಟೇನೂ ಇಲ್ಲ. ಬರಿಯ ಕಲ್ಲು ಬಂಡೆಗಳಿಂದ ಕೂಡಿದ ಗುಡ್ಡಗಳು, ಊರುತುಂಬಾ ವರಾಹಾವತಾರಿಗಳಿದ್ದರೂ ಶುದ್ಧಿ ಕಾಣದ ವಾತಾವರಣ..... ಊಹೂಂ, ಬೇಡ! ನರಸಿಂಹಲುರವರು ತಾವೇ ಮದ್ರಾಸಿಗೆ ಬರುತ್ತೇನೆಂದು ಮೊವೆಲ್‌ರವರಿಗೆ ತಿಳಿಸಿದರು.

ಹೇಳಿದಂತೆ ಮದ್ರಾಸಿಗೆ ತೆರಳಿದ ನರಸಿಂಹಲುರವರಿಗೆ ಮೊವೆಲ್‌ರಿಂದ ಅತ್ಯಾದರಪೂರ್ವಕ ಸ್ವಾಗತ ದೊರೆಯಿತು. ತಾವಿಳಿದುಕೊಂಡಿದ್ದ ಹೋಟೆಲ್ ನಲ್ಲಿಯೇ ನರಸಿಂಹಲುರವರಿಗೂ ವಾಸ್ತವ್ಯದ ಏರ್ಪಾಡು ಮಾಡಿದರು. ಸೊಗಸಾದ ಆತಿಥ್ಯ –ಮನೆಗೆ ಬಂದ ಅತಿಥಿಯಿಂದ! ನರಸಿಂಹಲುರವರು ತಮ್ಮ ಜೇಬಿನಿಂದ ಯಾವುದೇ ಖರ್ಚುಮಾಡಲು ಮೊವೆಲ್‌ರವರು ಬಿಡಲಿಲ್ಲ. "ನೀವೇನೂ ಇದರ ಬಗ್ಗೆ ಕಸಿವಿಸಿಪಡುವ ಅಗತ್ಯವಿಲ್ಲ. ನಮ್ಮ ಸರಕಾರ ನನ್ನ ಈ ಖರ್ಚುಗಳನ್ನೆಲ್ಲಾ ನೋಡಿಕೊಳ್ಳುತ್ತೆ. ಚಿಂತೆ ಬೇಡ" ಎಂದು ಬಿಟ್ಟರವರು.

ಅಲ್ಲಿಯೇ ಹೋಟೆಲ್ ಎದುರಿಗಿದ್ದೊಂದು ರಿಕಾರ್ಡಿಂಗ್ ಸ್ಟುಡಿಯೋದಲ್ಲಿ ಕೆಲವು ರಾಗ ವಾದನಗಳನ್ನು ಧ್ವನಿಮುದ್ರಿಸಿ ಕ್ಯಾಸೆಟ್ ಮಾಡಿಸಿಕೊಂಡರು ಮೊವೆಲ್‌ರವರು. ಜೊತೆಗೆ ಈಗಾಗಲೇ ಬೇರೆ ಸ್ಟುಡಿಯೋಗಳಿಂದ ಪ್ರಕಾಶಿತವಾದ ತಮ್ಮ ಕ್ಯಾಸೆಟ್‌ಗಳನ್ನು ನರಸಿಂಹಲುರವರು ಮೊವೆಲ್‌ರಿಗೆ ನೀಡಿದರು. ಅವೆಲ್ಲವನ್ನು ಮೊವೆಲ್‌ರವರು ಮತ್ತೆ ಮತ್ತೆ ಕೇಳಿದರು. ಕೇಳಿದಷ್ಟೂ ಅವರಿಗೆ ಬೆರಗು. ತಮ್ಮ ಕಡೆಯ ಈ ವಾದ್ಯದಲ್ಲಿ ಭಾರತೀಯ ಸಂಗೀತದ ಕ್ಲಿಷ್ಟ ಸ್ವರಗಳು, ಗಮಕಗಳು, ಲಯಕಾರಿಗಳು, ಮೀಂಡ್‌ಗಳು ಹೇಗೆ ಸುಲಲಿತವಾಗಿ ಹೊರಬರುತ್ತಿವೆ.... ಅದೂ ಯಾವುದೇ ರೀತಿಯ ಬದಲಾವಣೆಯನ್ನೂ ಮಾಡಿರದ ಈ ವಾದ್ಯದಲ್ಲಿ!

ನರಸಿಂಹಲುರವರನ್ನು ಹೊಗಳಿದಷ್ಟೂ ಅವರಿಗೆ ತೃಪ್ತಿಯಿಲ್ಲ. ಈ ಬಗ್ಗೆ ಅವರು ನರಸಿಂಹಲುರವರಿಗೆ ಪತ್ರವನ್ನು ಬರೆದುಕೊಟ್ಟರು. ಆ ಪತ್ರ ಈಗಲೂ ನರಸಿಂಹಲುರವರ ಬಳಿ ಇದೆ.

ಹಿಂದುಸ್ತಾನಿಯಲ್ಲಿ ನರಸಿಂಹಲುರವರ ಹಾಗೂ ದಕ್ಷಿಣಾದಿಯಲ್ಲಿ ಎ.ಕೆ.ಸಿ. ನಟರಾಜನ್‌ರವರ ಧ್ವನಿಸುರುಳಿಗಳನ್ನು ಸಂಗ್ರಹಿಸಿಕೊಂಡ ಮೊವೆಲ್‌ರವರು ಅವನ್ನು ಒಯ್ದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತಪಡಿಸಿದರು. ಇದರ ಜೊತೆಗೆ ಡಾಕ್ಯುಮಂಟರಿ ವಿಡಿಯೋಕ್ಯಾಸೆಟ್ ಒಂದನ್ನು –ನರಸಿಂಹಲು ವಡವಾಟಿ ಹಾಗೂ ಎ.ಕೆ.ಸಿ. ನಟರಾಜನ್‌ರವರ ಬದುಕು ಮತ್ತು ಸಾಧನೆ ಕುರಿತು –ಸಹ ತಯಾರು ಮಾಡಿಕೊಂಡು ಹೋಗಿದ್ದು ಅದನ್ನೂ ಪ್ರಸ್ತುತಪಡಿಸಿದರು.

ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ ದಾಖಲಾತಿಗಳನ್ನು ಅದಕ್ಕೆ ಸಂಬಂಧಪಟ್ಟ ವಿದ್ವಾಂಸರು, ತಜ್ಞರು ವೀಕ್ಷಿಸಿ, ವಿಶ್ಲೇಷಿಸಿ, ವಿಮರ್ಶಿಸಿ ಅವರಿಗೆ ಇದು ಅತ್ಯಮೂಲ್ಯವೆಂದು ಕಂಡುಬಂದಲ್ಲಿ ಆಗ ಅವರು ಅದರ ಬಗ್ಗೆ ತಮ್ಮ ಅಂಗೀಕಾರವನ್ನು ವ್ಯಕ್ತಪಡಿಸುತ್ತಾರೆ. ಅವರಲ್ಲಿ ಪ್ರತಿಯೊಬ್ಬನೂ ಯಾವುದೇ ಆಮಿಷಕ್ಕಾಗಲಿ ಮಮಕಾರಕ್ಕಾಗಲಿ ಒಳಗಾಗದ ಸಂಶಯಾತೀತ ವ್ಯಕ್ತಿ.

ನರಸಿಂಹಲು ವಡವಾಟಿಯವರು ಆಯ್ಕೆಯಾದರು. ಅಲ್ಲಿಯೇ ಸಂದರ್ಶಕ ಪ್ರಾಚಾರ್ಯರಾಗಿದ್ದ ಪಂಡಿತ್ ರಾಜೀವ ತಾರಾನಾಥರನ್ನೂ ವಿಚಾರಿಸಿದರು. ರಾಜೀವರು ತಮಗೆ ನರಸಿಂಹಲುರವರ ಪರಿಚಯವಿದೆಯೆಂದು, ಅವರು ತಮ್ಮದೇ ಆದ ಕರ್ನಾಟಕದವರೆಂದು ಹೇಳಿ ಅವರ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದರು.

ಕೆಲವು ದಿನಗಳಲ್ಲಿಯೇ ನರಸಿಂಹಲುರವರಿಗೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಕರೆ ಬಂತು.

"ತಮ್ಮ ಬಗ್ಗೆ ಮೊವೆಲ್‌ರವರು ಸಂಗ್ರಹಿಸಿದ ವಿಡಿಯೋ ಮತ್ತು ಆಡಿಯೊ ಮಾಹಿತಿಗಳನ್ನು ಗಮನಿಸಿ ನಾವು ತಮ್ಮನ್ನು ನಮ್ಮಲ್ಲಿಗೆ ಸಂದರ್ಶಕ ಪ್ರಾಚಾರ್ಯರಾಗಿ ಬರಲು ಆಮಂತ್ರಿಸುತ್ತಿದ್ದೇವೆ. ನಲವತ್ತು ದಿನಗಳ ಕಾಲ ತಾವು ನಮ್ಮಲ್ಲಿದ್ದು ನಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ವಿನಂತಿ. ಈ ನಲವತ್ತು ದಿನಗಳಿಗಾಗಿ ತಮಗೆ ನಾವು ಡಾಲರ್ 3000 ಸಂಭಾವನೆ ನಿಗದಿಪಡಿಸಿದ್ದೇವೆ.

ಈ ಕರೆಗೆ ತಾವು ತಮ್ಮ ಒಪ್ಪಿಗೆಯನ್ನು ಮಾರುತ್ತರದಲ್ಲಿ ನೀಡಬೇಕು."

.... ನಿರಾಕರಿಸಲಾಗದಂತಹ ಆಮಂತ್ರಣ! 3000 ಡಾಲರ್ ಅಂದರೆ ಆಗಿನ ಕಾಲಕ್ಕೆ 1,50,000/– ರೂಪಾಯಿಗಳು. ಸಣ್ಣ ಮೊತ್ತವೇನಲ್ಲ. ಇದರ ಜೊತೆಗೆ ಪ್ರಯಾಣದ ವೆಚ್ಚ, ವಸತಿಯ ಏರ್ಪಾಡು –ಎಲ್ಲವೂ ಸರಕಾರದ್ದೇ. ನರಸಿಂಹಲುರವರು ಕೂಡಲೇ ಒಪ್ಪಿಗೆಯ ಪತ್ರವನ್ನು ಕಳುಹಿಸಿದರು.




ಕ್ಯಾರಿಯೋನೆಟ್ ರೀಡ್ಸ್ ತಯಾರಿಸುವ ಪ್ರಪಂಚದ ಪ್ರತಿಷ್ಠಿತ RICO Royal ಸಂಸ್ಥೆ ಡಾ॥ ಪಂಡಿತ್ ನರಸಿಂಹಲು ವಡವಾಟಿಯವರನ್ನು ಆದರಿಸಿ ಸನ್ಮಾನಿಸಿದ ಸಂದರ್ಭದಲ್ಲಿ ಕಂಪನಿ ಮಾಲೀಕರಾದ ಮಾರ್ಕಸ್ ಮತ್ತು ವಿಲಿಯಂ ಪಾವೆಲ್.

ಕ್ಯಾಲಿಫೋರ್ನಿಯಾಗೆ ಹೋಗುವುದೇನೋ ಸರಿಯೆ, ಆದರೆ ಅಲ್ಲಿ ಮಾತನಾಡಲು ಇಂಗ್ಲೀಷ್ ಬೇಕಲ್ಲ! ನರಸಿಂಹಲುರವರ ಬಾಲ್ಯದ ಕಲಿಕೆ ಪ್ರಾಥಮಿಕ ಮೂರನೆಯ ಇಯತ್ತೆಗೇ ಮುಗಿದಿತ್ತು. ಸಂಗೀತ ಕಲಿತ ಮೇಲೆ ಮುಂದೊಮ್ಮೆ ತಾನು ಕನಿಷ್ಠ ಹೈಸ್ಕೂಲ್‌ವರೆಗಾದರೂ ಓದಿದವನೆಂದೆನಿಸಲಿ ಎಂಬ ನಿರ್ಧಾರಕ್ಕೆ ಬಂದು ಎಸ್ಸೆಸ್ಸಲ್ಸಿ ಪರೀಕ್ಷೆಗೆ ಖಾಸಗಿಯಾಗಿ ಕುಳಿತು ತೇರ್ಗಡೆಯೂ ಆದರು. ಆದರೂ ಇಂಗ್ಲೀಷಿನಲ್ಲಿ ಪರಿಣತನಾಗಬೇಕಾದ ಅಗತ್ಯ ಕಾಣಲಿಲ್ಲ. ವಿದೇಶಕ್ಕೆ ಹೋಗಬೇಕಾದೀತೆಂಬ ಕನಸೇನೂ ಬಿದ್ದಿರಲಿಲ್ಲವಲ್ಲ!..... ಆದರೆ ಈಗ ಬಂದಿದೆಯಲ್ಲ ಅಂತಹ ಸಂದರ್ಭ! ಸರಿ, ಸ್ವಯಂ ಅಧ್ಯಯನ ಮತ್ತೆ ಶುರು.

ರ್‍ಯಾಪಿಡೆಕ್ಸ್ ಇಂಗ್ಲೀಷ್ ಕೋರ್ಸ್ ಪುಸ್ತಕ ಓದಿದರು. ಪ್ರತಿದಿನವೂ ತಪ್ಪದೆ ಇಂಗ್ಲಿಷ್ ದಿನ ಪತ್ರಿಕೆಯನ್ನು ಛಲಬಿಡದ ತ್ರಿವಿಕ್ರಮನಂತೆ ಓದಿಯೇ ಓದಿದರು. ಅಂತೂ ಇಂತೂ "ಆದೀತು" ಎಂಬಷ್ಟು ಇಂಗ್ಲೀಷು ತಲೆಯೊಳಗೆ ತುರುಕಿದ್ದಾಯಿತು. ಎಷ್ಟರಮಟ್ಟಿಗೆ -ಎಂದರೆ ಪರಸ್ಪರ ಮಾತುಕತೆಗೆ ರಾಗಗಳ ಬಗ್ಗೆ ಮಾತನಾಡುವಷ್ಟು, ಸಾಧಾರಣ ಮಟ್ಟದಲ್ಲಿ ಶ್ರೋತೃಗಳಿಗೆ ಅರ್ಥವಾಗಲು ಸಾಕಾಗುವಷ್ಟು ಮಟ್ಟಿಗೆ,

ಕ್ಯಾಲಿಫೋರ್ನಿಯಾಗೆ ಬಂದಿಳಿದವರಿಗೆ ವಿಶ್ವವಿದ್ಯಾಲಯದ ಕಡೆಯಿಂದ ಪ್ರೀತಿಪೂರ್ವಕ ಸ್ವಾಗತ ದೊರೆಯಿತು. ವಸತಿಯ ಏರ್ಪಾಡು ಆಗಿತ್ತು. ಊಟಕ್ಕೆ ಶಾಕಾಹಾರ ಬೇಕೆಂದರು, ಅದೂ ಆಯಿತು. ಇವರ ಇಂಗ್ಲೀಷನ್ನು ಹೇಗೋ ಸರಿಯಾಗಿಯೇ ಅರ್ಥಮಾಡಿಕೊಂಡು ಬಿಡುತ್ತಿದ್ದರು ಆತಿಥೇಯರು.

ಬೆಂಗಳೂರು ದಂಡುಪ್ರದೇಶದಲ್ಲೊಮ್ಮೆ ಸುತ್ತಾಡಿ ಬನ್ನಿ. ಅಲ್ಲಿ ಬಹುತೇಕ ಪ್ರತಿಯೊಂದು ಅಂಗಡಿ-ಹೋಟೇಲ್‌ಗಳಲ್ಲೂ ಇಂಗ್ಲೀಷ್ ದರ್ಬಾರು. ಕನ್ನಡದಲ್ಲಿ ಮಾತನಾಡಿದರೆ ಇರಲಿ, ಇಂಗ್ಲೀಷಿನಲ್ಲಿ ತಪ್ಪು ಮಾತನಾಡಿದರೂ ಸಹ "ನಗೆಪಾಟಲೀಪುತ್ರ" ರಾಗುತ್ತೇವೆ ನಾವು. ನಾನು ಓದಿದ್ದ ಬೆಂಗಳೂರಿನ ಸೆಯಿಂಟ್ ಜೋಸೆಫ್ಸ್ ಕಾಲೇಜಿನಲ್ಲಂತೂ ಹಳ್ಳಿಯಿಂದ ನಗರಕ್ಕೆ ಬಂದಿದ್ದ ನನ್ನ ಇಂಗ್ಲೀಷ್ ಮಾತುಗಳು ಲೆಕ್ಚರರುಗಳಿಗೆ ಹಾಗೂ ನನ್ನ ಸಹ ವಿದ್ಯಾರ್ಥಿಗಳಿಗೆ



**ಅಮೇರಿಕಾದ ಕ್ಯಾಲಿಫೋರ್ನಿಯಾ, World Music Institute ನಲ್ಲಿ ಸಭಾಂಗಣದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವ ಡಾ॥ ವಡವಾಟಿಯವರು**

ಹಾಸ್ಯಾಸ್ಪದ ವಸ್ತುವಾಗಿತ್ತು. ಈಗ ಬಿಡಿ, ಚೆನ್ನಾಗಿದೆ ನನ್ನ ಇಂಗ್ಲೀಷ್. ಆದರೆ ಆಗ! ನನ್ನ ಬಗ್ಗೆ ನನಗೆ ಎಂತಹ ನೈಚ್ಯಾನುಸಂಧಾನವಿದ್ದಿರಬಹುದು ಆಗ!

ಆದರೆ ನೆಲದ ಭಾಷೆಯೇ ಇಂಗ್ಲೀಷ್ ಆಗಿರುವ ಅಮೇರಿಕಾದಲ್ಲಿ ತಪ್ಪು ಮಾತನಾಡಿದರೆ! ಯಾವ ಮುಜುಗರವೂ ಬೇಡ. – ಅವರು ನಿಮ್ಮ ತೊದಲು ಇಂಗ್ಲೀಷ್ ಮಾತುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಶ್ರಮಿಸುತ್ತಾರೆ ಅವರಿಗೆ ಬೇಕಾದ್ದು ನಮ್ಮ ಭಾಷಾ ಪಾಂಡಿತ್ಯವಲ್ಲ. ನಮ್ಮಿಂದ ಏನು ಅಪೇಕ್ಷಿಸಿದ್ದಾರೋ ಅದನ್ನು ಅವರಿಗೆ ತಲುಪಿಸಿದರಾಯಿತು.

ಭಾಷೆ ಯಾವರೀತಿಯಲ್ಲೂ ನರಸಿಂಹಲುರವರಿಗೆ ಅಡ್ಡಗಾಲು ಹಾಕಲಿಲ್ಲ. ವಿದ್ಯಾರ್ಥಿಗಳು ಹಾಗೂ ಸಹ–ಅಧ್ಯಾಪಕರು ಸೇರಿದಂತೆ ಎಲ್ಲರೂ, ಪ್ರತಿಯೊಬ್ಬರೂ ನರಸಿಂಹಲುರವರ ಪ್ರಾಯೋಗಿಕ ತರಗತಿಗಳಲ್ಲಿ ಉತ್ಸಾಹದಿಂದ ಕುಳಿತು ಆಸ್ಥೆಯಿಂದ ಅವರ ವಾದನವನ್ನು ಕೇಳಿದರು.

ಹೀಗಿರಲಾಗಿ ಒಂದುದಿನ....ಇಲ್ಲೊಂದು ಕತೆಯುಂಟು.

ನರಸಿಂಹಲುರವರನ್ನು ವಿದ್ಯಾಲಯದ ಮುಖ್ಯಸ್ಥರು ಒಂದು ದಿನ ಸಂಗೀತದ ಬಗ್ಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಲು ಕೇಳಿಕೊಂಡರು.

ರಾಗ ವಿಸ್ತಾರ ಮಾಡಿ ವಾದ್ಯವನ್ನು ನುಡಿಸಿ–ಎಂದರೆ ಅದೇನೋ ಚೆನ್ನಾಗಿಯೇ ಮಾಡಬಲ್ಲೆ, ಪಾಠ ಹೇಳಿಕೊಡಿ ಅಂದರೆ–ಅದೂ ಆದೀತು, ವಿದ್ಯಾರ್ಥಿಗಳೆದುರು ತಮಗೆ ಬಂದಷ್ಟು ಇಂಗ್ಲೀಷಿನಲ್ಲಿ....ಏಕೆಂದರೆ ಇಂಗ್ಲೀಷಿನಲ್ಲಿ ಹೇಳಿ ಅರ್ಥಮಾಡಿಸಲಾಗದ ಎಷ್ಟೋ ವಿಷಯಗಳು ವಾದ್ಯದ ಮೂಲಕವೇ, ಅದರದ್ದೇ ಭಾಷೆಯಲ್ಲಿ ಸಂವಹನಗೊಳ್ಳುತ್ತಿದ್ದವು.

ಆದರೆ 'ಭಾಷಣ'...ಪಾಂಡವರ ಪತ್ತೆಗಾಗಿ ಮಗನ ಬದಲು ಧೃತರಾಷ್ಟ್ರನೇ ಹೋಗಬೇಕಾದಂಥ ಸ್ಥಿತಿ!

ಒಂದು ಆಶಾಕಿರಣ ಇತ್ತು ಅಲ್ಲಿ.

ನರಸಿಂಹಲುರವರು ಅಲ್ಲಿಯೇ ಇದ್ದ ಪಂಡಿತ್ ರಾಜೀವ ತಾರಾನಾಥರನ್ನು ಕೇಳಿದರೆ ಹೇಗೆಂದು ಯೋಚಿಸಿದರು. ಸಹೃದಯಿ, ಪರಿಚಯಸ್ಥ, ಎಲ್ಲಕ್ಕಿಂತ ಮಿಗಿಲಾಗಿ ತನ್ನದೇ ಭಾಷೆ ಮಾತನಾಡಬಲ್ಲ ತನ್ನದೇ ರಾಜ್ಯದವರು.

ಅಲ್ಲಿಗೇ ಸಮಸ್ಯೆ ತೀರಿತಲ್ಲ!

ನರಸಿಂಹಲುರವರು ತಾರಾನಾಥರನ್ನು ಭೆಟ್ಟಿಯಾದರು. ತಮ್ಮ ಸಮಸ್ಯೆ ಹೇಳಿಕೊಂಡು ಸಹಾಯಕ್ಕಾಗಿ, ಅಂದರೆ ತನ್ನ ಭಾಷಣವನ್ನು ಕನ್ನಡದಿಂದ ಇಂಗ್ಲೀಷಿಗೆ ಅನುವಾದಿಸಿ ಶ್ರೋತೃಗಳಿಗೆ ಮುಟ್ಟಿಸಲು ವಿನಂತಿಸಿದರು.

"ಅಯ್ಯೋ ನಿನ್ನ ಭಾಷಣ ಇರೋ ದಿನವೇ ನನ್ದು ಬ್ಯಾರೆ ಕಡೆ ಕಾರ್ಯಕ್ರಮ ಇದ್ಯಲ್ಲಪ್ಪಾ! ಅದನ್ನ ಬಿಟ್ಟು ಹೆಂಗೆ ಬರಲಿ! ಇಲ್ಲಪ್ಪಾ, ನೀ ಆದಿನಾ ಹೆಂಗರೆ ಮ್ಯಾನೇಜ್‌ಮಾಡು ಈ ವಿಷಯದಾಗೆ ನಾ ಏನೂ ಮಾಡಲಿಕ್ಕಾಗಲ್ಲ". ರಾಜೀವ ತಾರಾನಾಥರು ಕೈ ಎತ್ತಿಬಿಟ್ಟರು!

ಕಿಟಕಿಯಿಂದ ಹಾರಿಹೋದ ಪಿಶಾಚಿ ಗವಾಕ್ಷಿಯ ಮೂಲಕ ಒಳಗೆ ಬಂದಿತ್ತು! ಬೇರಿನ್ನಾವ ಕನ್ನಡಿಗನೂ ಅಲ್ಲಿ ಇರಲಿಲ್ಲ. "ಏನು ಮಾಡಲಿ ಗುರುಗಳೇ! ಹೀಗೊಂದು ಪ್ರಸಂಗ ಎದುರಾಯಿತಲ್ಲ! ಭಾಷಣ ತಪ್ಪಿಸುವಂತಿಲ್ಲ. ಹಾಗೆ ಮಾಡಿದಲ್ಲಿ ಕರ್ತವ್ಯಲೋಪ. ಮಾಡೋಣವೆಂದರೆ..... ನನ್ನ ಈ "ಕಂ, ಗೋ, ಈಟ್, ಸಿಂಗ್, ಪ್ಲೇ" ಇಂಗ್ಲೀಷಿಗೆ ಎಷ್ಟೆಂದು ಜೋತು ಬೀಳಲಿ! ತಾವೇ ನನಗೆ ದಾರಿ ತೋರಿಸಿ ಗುರುಗಳೇ"-ತಮ್ಮಷ್ಟಕ್ಕೆ ತಾವೇ ಅಂದುಕೊಂಡರು. ಒಂಟಿಯಾಗಿ ಈ ದೇಶಕ್ಕೆ ಬಂದ ವಿವೇಕಾನಂದರಿಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವವಿತ್ತು. ಅವರು "ಅಮೇರಿಕಾದ ಸೋದರ ಸೋದರಿಯರೆ" ಎಂದು ಶುರು ಹಚ್ಚಿ ಚಪ್ಪಾಳೆ ಗಿಟ್ಟಿಸಿಕೊಂಡು ಜನ-ಮನ ಗೆದ್ದರು. ಆದರೆ ತಾನು! ತನ್ನಲ್ಲೇನಿದೆ!

ಏಕಿಲ್ಲ! ಧೈರ್ಯವಿತ್ತು, ಛಲವಿತ್ತು, ಹಿಡಿದ ಕೆಲಸ ಬಿಡದ ಪಟ್ಟು ಇತ್ತು. ಕೈಯಲ್ಲಿ ಕರಿಕೊಳವಿ ಇತ್ತು. ತಲೆಯ ತುಂಬಾ ಸಂಗೀತವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮನದ ಶ್ರದ್ಧಾಪೀಠದಲ್ಲಿ ಕುಳಿತು "ಹೆದರಬ್ಯಾಡ ಹುಡುಗಾ" ಎಂದು ಕಿವಿಯಲ್ಲಿ ಉಸುರಿ ಕಾಯುವ ಗುರುವಿದ್ದರು. ನೀರಿಗೆ ಇಳಿಯುವ ತನಕ ತಾನೇ ಭಯ, ಛಳಿ! ಇಳಿದ ಮೇಲೆ? ಸ್ವರಕ್ಷಣೆಗಾದರೂ ಈಸಬೇಕು, ಈಸಿ ಜೈಸಬೇಕು. ದೈವದ ಮೇಲೆ ಭಾರ ಹಾಕಿ ಕಾರ್ಯಕ್ರಮದ ಹಿಂದಿನ ರಾತ್ರಿ ತಾವು ಏನು ಹೇಳಬೇಕು ಎಂಬುದನ್ನು ತಮ್ಮದೇ ಇಂಗ್ಲೀಷಿನಲ್ಲಿ ಟಿಪ್ಪಣಿ ಮಾಡಿಕೊಂಡರು ನರಸಿಂಹಲು.

ನಿಗದಿತ ದಿನ, ನಿಗದಿತ ಸಮಯ ಬಂತು.

ದ್ರೋಣರ ಚಕ್ರವ್ಯೂಹದೊಳಗೆ ಅಭಿಮನ್ಯು ನುಗ್ಗಿದ, ಏಕಾಕಿ, ಅಸಹಾಯ ಶೂರ, ಅಕ್ಷೀಣ ಬಲ.

ಅಭಿಮನ್ಯು ಕಂಡಂತಹ ಅಂತ್ಯ ಇಲ್ಲಿರಲಿಲ್ಲ. ಹೇಳಿದೆನಲ್ಲ! ಆ ಕೇಳುಗರಿಗೆ ಬೇಕಾದ್ದು ನಿಮ್ಮ ಭಾಷೆ ಪ್ರಭುತ್ವವಲ್ಲ. ನೀವು ಹೇಳಲು ಶ್ರಮಿಸುತ್ತಿದ್ದಂತೆ ಅವರು ಅರ್ಥಮಾಡಿಕೊಳ್ಳಲು ಶ್ರಮಿಸುತ್ತಿರುತ್ತಾರೆ. ಅರ್ಥಮಾಡಿಕೊಳ್ಳುತ್ತಾರೆ, ಅರ್ಥಮಾಡಿ ಕೊಂಡರು. ಅದ್ಭುತವಾದ ಪ್ರತಿಕ್ರಿಯೆ ನೀಡಿದರು.

ಭಾರತೀಯ ಶಾಸ್ತ್ರೀಯ ಸಂಗೀತದ ಸ್ವರೂಪ, ಪ್ರಯೋಗಗಳು, ಈ ಸಂಗೀತ ಗಾಯನದಲ್ಲಿ ಹೇಗೆ ಮೂಡುತ್ತದೆ. ವಾದನದಲ್ಲಿ ಹೇಗೆ ಬರುತ್ತದೆ. ಎರಡರಲ್ಲಿ

ವ್ಯತ್ಯಾಸಗಳು ಏನೇನಿವೆ... ಎಲ್ಲವನ್ನೂ ವಿಷದವಾಗಿ ತನಗೆ ತಿಳಿದ ಇಂಗ್ಲೀಷಿನಲ್ಲಿ ಮಾತನಾಡುತ್ತಾ ಮಧ್ಯೆ ಮಧ್ಯೆ ಗಾಯನದ, ವಾದನದ ಪರೀಕ್ಷಾರ್ಥ ಉದಾಹರಣೆಗಳು ...... ಹೀಗೆ ಹೇಳುತ್ತಾ ಹೋದಂತೆ ಕೇಳುಗರು ತನ್ಮಯರಾಗಿ ಹೊರ ಜಗತ್ತಿನ ಪರಿವೆ ಇಲ್ಲದೆ ಮೈಯೆಲ್ಲ ಕಿವಿಯಾಗಿ ಕೇಳುತ್ತಿದ್ದರು. ಇಪ್ಪತ್ತೈದು ನಿಮಿಷಗಳ ಕಾಲ ನಡೆದ ಉಪನ್ಯಾಸ ಮುಗಿದಾಗ ಎಲ್ಲ ಕೇಳುಗರೂ ಎದ್ದು ನಿಂತು Standing ovation ನೀಡಿದರು. ಅದು ಅವರು ತಾವು ಮೆಚ್ಚಿದ್ದನ್ನು ಸೂಚಿಸಲು ತೋರಿಸುವ ಅತ್ಯುನ್ನತ ಗೌರವ.

ಅಂದು ಸಂಜೆ ನರಸಿಂಹಲುರವರ ಕ್ಲಾರಿಯೋನೆಟ್ ವಾದನ ಇದೇ ಕಾರ್ಯಕ್ರಮದ ಅಂಗವಾಗಿತ್ತು. ಅಲ್ಲಿಯವರೇ ಆದ ಉತ್ತಮ ತಬಲಾಪಟು ಜಾನ್ ಅಥೆನ್‌ರವರ ಸಾಥ್‌ನೊಂದಿಗೆ ಕಛೇರಿ ನಡೆಯಿತು. ಸುಮಾರು 200 ಜನರ ಸಭೆಯದು. ಹೆಚ್ಚಿನ ಜನ ಟ್ರಂಪೆಟ್, ಕ್ಲಾರಿಯೋನೆಟ್, ಸ್ಯಾಕ್ಸೋಫೋನ್ ಮುಂತಾದ ವಾದ್ಯದ ಪ್ರವೀಣರು – ಪಾಶ್ಚಾತ್ಯ ಶೈಲಿಯಲ್ಲಿ. ಅಲ್ಲೊಬ್ಬರು ಡ್ರಂಸ್ ಪಟುವಿದ್ದರು, ಬ್ರುಗ್‌ಮೋಮ್ ಎಂಬಾತ. ತಾಳದ ಲೆಕ್ಕಾಚಾರದಲ್ಲಿ ಪ್ರವೀಣ. ನರಸಿಂಹಲುರವರ ವಾದನದ ಸಂಚಾರಗತಿ, ತಪ್ಪದ ತಾಳ ಎಲ್ಲೆಲ್ಲಿ ಸಂಚರಿಸಿದರೂ ಮತ್ತೆ ಸೇರಬೇಕಾದಲ್ಲಿ ಸೇರುವ ನಡೆ –ಎಲ್ಲವನ್ನೂ ಗಮನಿಸಿದ ಆ ಕಲಾವಿದ ಕಛೇರಿಮುಗಿದ ನಂತರ ವಾದಕನಿದಿರು ಬಂದು ನೆಲಕ್ಕೆ ಹಣೆ ಹಚ್ಚಿ ಗೌರವ ಸಲ್ಲಿಸಿದರು, ಭಾರತೀಯ ಪದ್ಧತಿಯಲ್ಲಿ.

ಮರುದಿನ ಅಲ್ಲಿಗೆ ಬಂದ ರಾಜೀವ ತಾರಾನಾಥರು ಎಲ್ಲೆಲ್ಲಿ ಹೋದರೂ ಅವರ ಕಿವಿಗೆ ಬೀಳುತ್ತಿದ್ದುದು ನರಸಿಂಹಲುರವರ ಉಪನ್ಯಾಸದ ಬಗ್ಗೆ ಪ್ರಶಂಸೆಯೋ ಪ್ರಶಂಸೆ –ಪ್ರತಿಯೊಬ್ಬರ ಬಾಯಲ್ಲೂ!

"ಏನು ಮಾಡಿದ್ಯಪ್ಪಾ ವಡವಾಟಿ, ಎಲ್ರೂ ನಿನ್ನೆ ನಡೆದ ಉಪನ್ಯಾಸದ ಬಗ್ಗೆ ಅಷ್ಟೊಂದು ಮಾತಾಡ್ತಾರಲ್ಲ?" ರಾಜೀವರು ನರಸಿಂಹಲುರವರಿಗೆ ಕೇಳಿದರು.

"ಏನೋ ಮಾತಾಡಿದೆನಪ್ಪ. ಅದು ಅವ್ರಿಗೆ ಅರ್ಥ ಆಯ್ತು. ಅದಕ್ಕೇ ಅವರು ಹಂಗೆ ಹೇಳ್ತಾರೆ."

"ಅಲ್ಲೋ! ಇಂಗ್ಲೀಷ್ ಸರಿಯಾಗಿ ಮಾತಾಡ್ಲಿಕ್ಕ ಬರೂದಿಲ್ಲ ನಿನಗ, ಅಧೆಂಗೆ ಅರ್ಥ ಆಯ್ತೋ ಅವ್ರಿಗೆ?"

"ಗೊತ್ತಿಲ್ಲಪ್ಪ! ಆ ಸಮಯದಲ್ಲಿ ನನಗೆ ತೋಚಿದ ಹಾಗೆ ಮಾತಾಡ್ದೆ. ಗುರುಗಳು ದಾರಿ ತೋರ್‍ಸಿದ್ರು. ನಡ್ಕೊಂಡು ಹೋದೆ. ಕೇಳೋರ ಮನಸಿನ ಬಾಗಿಲು ತೆರಿದಿತ್ತು, ಒಳಹೊಕ್ಕೆ, ಉಳಿದದ್ದೆಲ್ಲ ಸಲೀಸು!"

ರಾಜೀವರು ಆಶ್ಚರ್ಯಮೂಕರಾಗಿದ್ದರು. ಅವರ ಮನಸ್ಸು ಏನು ಮಾತನಾಡುತ್ತಿತ್ತೋ –ಅವರಿಗೇ ಗೊತ್ತು.


ನಲವತ್ತು ದಿನಗಳ ಕಾಲ ಪ್ರವಚನ–ಉಪನ್ಯಾಸಗಳು ಚೆನ್ನಾಗಿಯೇ ನಡೆದವು. ಪ್ರವಾಸ ಸಾರ್ಥಕವಾಗಿತ್ತು. ಸಂಭಾವನೆ ಮೂರು ಸಾವಿರ ಡಾಲರ್ ನಿಗದಿಯಾಗಿತ್ತಲ್ಲ, ಅದನ್ನು ಹೆಚ್ಚಿಸಿ ಒಟ್ಟು ಐದು ಸಾವಿರ ಡಾಲರ್ ಸಂಭಾವನೆ ಸಿಕ್ಕಿತು. ಇವರ ಪರಿಶ್ರಮಕ್ಕೆ ಪ್ರಾಮಾಣಿಕ ಪ್ರತಿಕ್ರಿಯೆ ಅವರದು.

ಈಗ ಅಮೆರಿಕಾದಲ್ಲಿ ವಡವಾಟಿಯವರಿಗೆ ಶಿಷ್ಯವರ್ಗವಿದೆ. ಭಾರತಿ ಐಯ್ಯಂಗಾರ್ ಎಂಬಾಕೆ, ಭಾರತೀಯ ತಂದೆ ಮತ್ತು ಅಮೆರಿಕನ್ ತಾಯಿಗೆ ಜನಿಸಿದಾಕೆ, ಉತ್ತಮ ಕ್ಲಾರಿಯೋನೆಟ್ ವಾದಕಿ. ಆಗಾಗ ರಾಯಚೂರಿಗೆ ಬಂದು ಹೊಸ ರಾಗಗಳ ಪರಿಚಯ ಮಾಡಿಕೊಂಡು ಅಲ್ಲಿಗೆ ಹೋಗಿ ರಿಯಾಜ್ ಮಾಡುತ್ತಾರೆ. ಇವರು ಮಾತ್ರವಲ್ಲದೆ ಇನ್ನೂ ಸಾಕಷ್ಟು ಮಂದಿ ಶಿಷ್ಯರಿದ್ದಾರೆ ಅಮೆರಿಕಾದಲ್ಲಿ.

❑



**ಅಮೇರಿಕಾದ ಶಿಷ್ಯರೊಂದಿಗೆ**
**ಅಮೇರಿಕಾದಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಿರುವುದು**



ಅಮೇರಿಕಾದಲ್ಲಿ ವಡವಾಟಿಯವರ ಬಳಿ ಕ್ಲಾರಿಯೋನೆಟ್ ಅಭ್ಯಾಸ ಮಾಡಿದ
ವಿದ್ಯಾರ್ಥಿನಿಯರು – ಟಾನಿ, ವಡವಾಟಿ, ಮಾಲತಿ



ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ
ವಿಶ್ವವಿದ್ಯಾಲಯದಲ್ಲಿ ಬೀಳ್ಕೊಡುಗೆ ಸಮಾರಂಭ

ಚರಣ 10

# ಬೆಳ್ಳಿತೆರೆಯಲ್ಲಿ ಬೆಳ್ಳಿ ಮೂಡಿತು

ನರಸಿಂಹಲುರವರು ಚಿತ್ರರಂಗಕ್ಕೂ ಕಾಲಿಟ್ಟರು. ಇದೂ ಸಹ ಅವರಿಗೆ ಅನಿರೀಕ್ಷಿತ. ನಮ್ಮದೇ ಆದ ಕನ್ನಡ ಚಿತ್ರರಂಗ ಇವರನ್ನು ಇನ್ನೂ ಬಳಸಿಕೊಂಡಿಲ್ಲ. ಇನ್ನು ಭಾರತದ ಇತರ ಭಾಷಾ ಚಿತ್ರರಂಗದಲ್ಲಿ ಇವರು ಪ್ರವೇಶಿಸಿದರೆ ಅದು ಆಶ್ಚರ್ಯ. ಆದರೆ ನರಸಿಂಹಲುರವರ ಪಾಲಿಗೆ ಇವೆಲ್ಲಕ್ಕಿಂತ ದೊಡ್ಡ ಆಶ್ಚರ್ಯ ಕಾದಿತ್ತು.... ಒಂದು ಫ್ರೆಂಚ್ ಭಾಷೆಯ ಚಿತ್ರಕ್ಕಾಗಿ ಸಂಗೀತ ಸಂಯೋಜನೆಗೆ ಕರೆ!

ಶ್ರೀ ಡಿ.ಕೆ.ಚೌಟರವರದು ಸಾಂಸ್ಕೃತಿಕ ರಂಗದಲ್ಲಿ ಚಿರಪರಿಚಿತ ಹೆಸರು. ತುಳುಭಾಷೆಯಲ್ಲಿ ನಾಟಕ ಬರೆದಿದ್ದಾರೆ. ನಾಟಕಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಕೆಲಕಾಲ ಕರ್ನಾಟಕದ ಚಿತ್ರಕಲಾಪರಿಷತ್‌ನ ಕಾರ್ಯದರ್ಶಿಗಳೂ ಆಗಿದ್ದರು. ಮಗ ಸಂದೀಪ್ ಚೌಟ ಹೆಸರಾಂತ ಸಂಗೀತ ನಿರ್ದೇಶಕ. ಮಗಳು ಪ್ರಜ್ಞಾ ಚೌಟ ಜಗತ್ತಿನಲ್ಲೇ ಪ್ರಪ್ರಥಮ ಮಹಿಳಾ ಮಾವುತಳು, ಆನೆಗಳನ್ನು ಪಳಗಿಸುವುದರಲ್ಲಿ ಪರಿಣತೆ.

ಚೌಟರ ಅಳಿಯ ಫ್ರಾನ್ಸ್ ದೇಶದವರಾದ ಫಿಲಿಪ್ ಗೋರ್ಟೆ ಎಂಬಾತ ಚಲನಚಿತ್ರ ನಿರ್ಮಾಪಕ-ನಿರ್ದೇಶಕ. ಇವರೊಂದು ಡಾಕ್ಯು ಡ್ರಾಮಾ, ಅಂದರೆ ವಾಸ್ತವತೆಯನ್ನು ನಾಟಕ ರೂಪದಲ್ಲಿ.....ಚಿತ್ರಕಥಾರೂಪದಲ್ಲಿ ನಿರೂಪಿಸುವ – ಚಲನಚಿತ್ರವೊಂದನ್ನು ನಿರ್ಮಿಸಿದರು. ಚಿತ್ರ ಫ್ರೆಂಚ್ ಭಾಷೆಯದು. ಆದರೆ ಅದರ ಹೆಸರು ಹಿಂದೀ ಭಾಷೆಯಿಂದ ಆಯ್ದ ಶಬ್ದ – 'ಹಾಥೀ'. ಹೆಸರೇ ಹೇಳುವಂತೆ ಅದು ಆನೆಗಳ ಕಥೆ, ಆನೆಗಳನ್ನು ಪಳಗಿಸಿ ಸಾಕುವವರ ಕಥೆ.

ಚಿತ್ರ ನಿರ್ಮಾಣ ಮುಗಿದು ಸಂಕಲನವಾಗಿ ಎಲ್ಲವೂ ಪೂರೈಸಿದ ನಂತರ ಅದಕ್ಕೆ ಸೂಕ್ತವಾದ ಹಿನ್ನೆಲೆ ಸಂಗೀತ ನೀಡಬಲ್ಲ ಯೋಗ್ಯ ಸಂಗೀತಗಾರನ ಅಗತ್ಯ ಬಿತ್ತು. ಗೋರ್ಟೆಯವರು ಎಲ್ಲಾ ಕಡೆ ಪ್ರಯತ್ನಿಸಿದರು. ಅವರಿಗೆ ತೃಪ್ತಿಯಾಗುವಂತೆ ಸಂಗೀತ ನೀಡಬಲ್ಲವರು ಸಿಗಲಿಲ್ಲ.

ಒಮ್ಮೆ ಗೋರ್ಟೆಯವರು ವಿಮಾನದಲ್ಲಿ ಪ್ರಯಾಣಿಸಲು ಏರ್‌ಪೋರ್ಟ್‌ಗೆ ಬಂದು ಅಲ್ಲಿ ಕಾಯುತ್ತಿದ್ದಾಗ ಅಲ್ಲಿ ಒಂದು ಸಿ.ಡಿ. ಪ್ಲೇಯರ್‌ನಿಂದ ಸಂಗೀತ ಕೇಳಿ ಬರುತ್ತಿತ್ತು. ಇವರ ಕಿವಿಗಳು ನಿಮಿರಿದವು. ವಾದ್ಯ ಸಂಗೀತವದು. ಮೊದಲು ಯಮನ್ ರಾಗ, ನಂತರ ಜೈಜಯವಂತಿ ರಾಗ. ಸುಶ್ರಾವ್ಯವಾದ ವಾದನ! ಗೋರ್ಟೆಯವರು ತಲ್ಲೀನರಾಗಿ ಅದನ್ನು ಕೇಳಿದರು. ತನಗೆ ಬೇಕಾದ ಸಂಗೀತ ಸಂಯೋಜಕ ಇಲ್ಲಿ, ಈ ಸಿ.ಡಿ. ಯಲ್ಲಿದ್ದರು. ಇನ್ನು ಇವರು ಎಲ್ಲಿದ್ದಾರೆಂದು ಪತ್ತೆಮಾಡಿ ಮುಂದಿನ ಕೆಲಸ.

- ಗೋರ್ಟೆಯವರು ಚೌಟರಿಗೆ ಫೋನ್‌ಮಾಡಿದರು. "ಏರ್‌ಪೋರ್ಟ್‌ನಲ್ಲಿ ನರಸಿಂಹಲು ವಡವಾಟಿ ಎಂಬುವವರ ಕ್ಲಾರಿಯೋನೆಟ್ ವಾದನವನ್ನು ಕೇಳಿದೆ. ನನಗೆ ಅವರ ಸಂಗೀತ ತುಂಬಾ ಹಿಡಿಸಿತು. ನನ್ನ ಫಿಲಂಗೆ ಅವರನ್ನು ಸಂಗೀತಸಂಯೋಜನೆಗೆ ಕೇಳೋಣ ಎಂದು ಉದ್ದೇಶಿಸಿದ್ದೇನೆ. ಅವರನ್ನು ಹೇಗಾದರೂ ಮಾಡಿ ಪತ್ತೆ ಮಾಡಿ ಅವರ ವಿಳಾಸ ಹಾಗೂ ಫೋನ್ ನಂಬರ್ ತಿಳಿಸಬೇಕು." ಎಂದು ಚೌಟರನ್ನು ಕೇಳಿಕೊಂಡರು.

ಚೌಟರಲ್ಲಿ ನರಸಿಂಹಲುರವರ ಫೋನ್ ನಂಬರ್ ಇತ್ತು. ಸರಿ, ಅವರಿಂದ ವಡವಾಟಿಯವರಿಗೆ ಫೋನ್ ಬಂತು. ರಾಯಚೂರಿನಲ್ಲಿದ್ದರು ವಡವಾಟಿಯವರು ಆಗ, ಮನೆಯಲ್ಲಿ.

'ವಡವಾಟಿಯವರೆ, ನನ್ನ ಅಳಿಯ ಫಿಲಿಪ್ ಗೋರ್ಟೆ ಅಂತ, ಫ್ರಾನ್ಸಿನವ, ಒಂದು ಫ್ರೆಂಚ್ ಫಿಲಂ ತಯಾರು ಮಾಡಿದ್ದಾನೆ. ಅದಕ್ಕೆ ತಾವು ಸಂಗೀತ ನೀಡಬೇಕಂತೆ. ಈ ಬಗ್ಗೆ ನಿಮ್ ಜತೆ ಅವನು ಚರ್ಚೆ ಮಾಡಬೇಕಂತೆ. ಬೆಂಗಳೂರಿಗೆ ಬರಲಿಕ್ಕೆ ತಮಗೆ ಯಾವಾಗ ಪುರುಸೊತ್ತು ಸಿಗುತ್ತೆ ಅಂತ ತಿಳಿಸಿದರೆ ನಾನು ಅವನಿಗೆ ಹೇಳ್ತೇನೆ, ಆಗ ಅವನು ಸಹ ಬರ್ತಾನೆ". ಚೌಟರೆಂದರು.

ನರಸಿಂಹಲುರವರು ಮಾರುತ್ತರ ನೀಡಿದರು–" ಆಗಲಿ ಸ್ವಾಮಿ, ಅವರು ಯಾವಾಗ ಬೆಂಗಳೂರಿಗೆ ಬರಲಿಕ್ಕಾಗುತ್ತೋ ತಿಳಿಸಿದರೆ ಆಗ ನಾನು ಬರ್ತೀನಿ, ತೊಂದರೆ ಇಲ್ಲ. ಅವರನ್ನು ಕೇಳಿ ನನಗೆ ಹೇಳಿ."

ಗೋರ್ಟೆಯವರೊಂದಿಗೆ ಮಾತನಾಡಿದ ಚೌಟರು ಭೆಟ್ಟಿಯ ದಿನಗಳನ್ನು ನಿಗದಿ ಪಡಿಸಿದರು. ಗೋರ್ಟೆಯವರಿಗಂತೂ ಆನಂದ, ತನ್ನ ಮಾವನಿಗೆ ಅಂತಹ ಖ್ಯಾತ ಸಂಗೀತಗಾರ ತುಂಬಾ ಪರಿಚಯದ ವ್ಯಕ್ತಿ ಎಂಬುದು ತಿಳಿದಾಗ, ತಾನು ಸರಿಯಾದ ವ್ಯಕ್ತಿಯನ್ನೇ ಹಿಡಿದಿರುವೆ ಎಂಬುದು ಖಚಿತವಾಗಿತ್ತು.

ಗೋರ್ತೆಯವರು ಭೆಟ್ಟಿಯ ದಿನ ಗೊತ್ತುಪಡಿಸಿ ತಿಳಿಸಿದರು. ಹೋಟೆಲ್ ಅಶೋಕದಲ್ಲಿ ಇಳಿದುಕೊಳ್ಳುವ ವ್ಯವಸ್ಥೆಯಾಯಿತು.

ತಮ್ಮ ಫಿಲಂ ಬಗ್ಗೆ ಗೋರ್ತೆಯವರು ನರಸಿಂಹಲುರವರಿಗೆ ಭೆಟ್ಟಿಯ ಸಂದರ್ಭದಲ್ಲಿ ವಿವರಿಸಿದರು. ಅದು ಫ್ರಾನ್ಸ್ ಸರಕಾರದ್ದೇ ನಿರ್ಮಾಣ. ಅಂದರೆ ಹಣಹೂಡಿಕೆ ಸರಕಾರದ್ದೇ. ಚಿತ್ರದ ಕಥೆಯನ್ನು ವಿವರಿಸಿದ ಗೋರ್ತೆಯವರು ತಮ್ಮ ಈ ಚಿತ್ರಕ್ಕೆ ಸಂಗೀತ ನಿರ್ದೇಶಕರಾಗಬೇಕೆಂದು ನರಸಿಂಹಲುರವರನ್ನು ಕೇಳಿಕೊಂಡರು.

ನರಸಿಂಹಲುರವರು ಶುದ್ಧ ಶಾಸ್ತ್ರೀಯ ಸಂಗೀತಗಾರರು. ಫಿಲಂ ಸಂಗೀತದ ಬಗ್ಗೆ ಅವರಿಗೆ ಕೇಳಿ ಗೊತ್ತೇ ಹೊರತು ಮಾಡಿ ಅನುಭವ ಇರಲಿಲ್ಲ. ಇದನ್ನೇ ಅವರು ಗೋರ್ತೆಯವರೆಲ್ಲ ಮುಕ್ತ ಮನಸ್ಸಿನಿಂದ ಹೇಳಿಕೊಂಡರು.

ಗೋರ್ತೆಯವರು ಮಾತನಾಡುವ ಫ್ರೆಂಚ್ ಭಾಷೆ ನರಸಿಂಹಲು ರವರಿಗೆ ಅರ್ಥವಾಗುವುದಿಲ್ಲವೆಂಬ ಅರಿವಿದ್ದು ಅವರು ತಮ್ಮೊಂದಿಗೆ ಇಂಗ್ಲಿಷ್ ಅನುವಾದಕ ರೊಬ್ಬರನ್ನು ಕರೆತಂದಿದ್ದರು. ಹೀಗಾಗಿ ಆ ಇಂಟರ್‌ಪ್ರಿಟರ್ ಮೂಲಕ ಮಾತು ಕತೆ ನಡೆದಿತ್ತು. ಜೊತೆಗೆ ಆ ಅನುವಾದಕರೇ ಕನ್ನಡದಲ್ಲಿ ತಿಳಿಸಿಹೇಳುತ್ತಿದ್ದರು. ಏಕೆಂದರೆ ನರಸಿಂಹಲುರವರಿಗೆ ಇಂಗ್ಲಿಷ್ ಅಲ್ಪ ಸ್ವಲ್ಪ ಅರ್ಥವಾಗುತ್ತಿದ್ದರೂ ಅವರು ಮಾತನಾಡುವ ಶೈಲಿಯನ್ನು ಅನುಸರಿಸಿ ಅರ್ಥಮಾಡಿಕೊಳ್ಳುವುದು ಕಠಿಣವೇ.

ಗೋರ್ತೆಯವರು "ನಿಮಗೆ ಅನುಭವವಿಲ್ಲದಿರಬಹುದು ಆದರೆ ನಮಗೆ ನೀವು ಈ ಕೆಲಸ ನಿರ್ವಹಿಸಬಲ್ಲಿರೆಂಬ ವಿಶ್ವಾಸವಿದೆ. ಈ ಕಾರ್ಯಕ್ಕೆ ಸೂಕ್ತ ವ್ಯಕ್ತಿ ನೀವೇ ಎಂಬುದು ನಮಗೆ ಖಾತ್ರಿಯಾಗಿದೆ. ಒಪ್ಪಿಕೊಳ್ಳಿ".

"ಆಯಿತು. ನೀವು ಇಷ್ಟು ವಿಶ್ವಾಸ ಇಟ್ಟಿದ್ದೀರಿ ಅಂದರೆ ಪ್ರಯತ್ನ ಮಾಡ್ತೀನಿ, ನೋಡೋಣ".

ಗೋರ್ತೆಯವರು ನಸುನಕ್ಕರು– "ಅಲ್ಲ ಇಂತಹ ದೊಡ್ಡ ವಿದ್ವಾಂಸ! ಪ್ರಯತ್ನ ಮಾಡ್ತೀನಿ ಅಂತಾರಲ್ಲ! ಎಂಥಾ ನಿಗರ್ವಿ ಈತ!" ಎಂದುಕೊಂಡಿರ ಬಹುದು.

ಇನ್ನು ಮುಂದಿನ ಕೆಲಸ ಫಿಲಂಗೆ ಎಂತಹ ಹಿನ್ನೆಲೆ ಸಂಗೀತ ಬೇಕು ಎಂಬುದರ ಬಗ್ಗೆ ಚಿಂತನೆ. ಅದಕ್ಕೆ ಫಿಲಂ ನೋಡಬೇಕು. ಗೋರ್ತೆಯವರು

ತಾವು ತಯಾರಿಸಿ ತಂದಿದ್ದ ಫಿಲಂ ಪ್ರತಿಯೊಂದನ್ನು ಪ್ರೊಜೆಕ್ಟರ್ ಮೂಲಕ ತೆರೆಯ ಮೇಲೆ ಹಾಯಿಸಿ ತೋರಿಸಿದರು. ಅವರು ಎಲ್ಲ ಸಲಕರಣೆಗಳನ್ನೂ ಪೂರ್ವಭಾವಿಯಾಗಿ ತರಿಸಿಟ್ಟುಕೊಂಡಿದ್ದರು.

ನರಸಿಂಹಲುರವರು ಅದನ್ನು ನೋಡಿದರು, ನೋಡಿಯೇ ನೋಡಿದರು.

ಇಡೀ ಚಿತ್ರ ಉತ್ತರಭಾರತದ ಕೋಟಿಕೊತ್ತಲಗಳು ಕಾಡುಗಳು ಗುಡ್ಡಬೆಟ್ಟಗಳು – ಇವುಗಳನ್ನು ಹೆಚ್ಚಾಗಿ ಒಳಗೊಂಡಿತ್ತು. ಕೆಲವುಭಾಗಮಾತ್ರ ತನ್ನ ಸ್ವದೇಶವಾದ ಫ್ರಾನ್ಸ್‌ನಲ್ಲಿ ಗೋರ್ಟೆಯವರು ಚಿತ್ರಿಸಿದ್ದರು. ಅಚ್ಚರಿ ಎಂದರೆ ಖೆಡ್ಡಾಗೆ ಪ್ರಸಿದ್ಧವಾದ ಕರ್ನಾಟಕದ ಒಂದೇ ಒಂದು ದೃಶ್ಯವೂ ಅದರಲ್ಲಿರಲಿಲ್ಲ, ಏಕೋ ಏನೋ!

ಆನೆಗಳನ್ನು ಪಳಗಿಸುವುದು, ಅವುಗಳನ್ನು ಸಾಕುವುದು, ಅವುಗಳ ಜೀವನ ಕ್ರಮ, ಅವುಗಳನ್ನು ಕೆಲಸ ಕಾರ್ಯಗಳಿಗೆ ಬಳಸುವುದು, ಮಾಹುತರ ಬದುಕು, ಅವರು ಆನೆಗಳನ್ನು ನಿಯಂತ್ರಿಸುವ ಪರಿ– ಇವೆಲ್ಲವೂ ವಿವರವಾಗಿ ಆ ಫಿಲಂನಲ್ಲಿ ಚಿತ್ರಿತವಾಗಿದ್ದವು.

ನರಸಿಂಹಲುರವರು ನೋಡಿದರು, ನೋಡಿಯೇ ನೋಡಿದರು. ತನ್ಮಯರಾಗಿ ನೋಡಿದರು. ತಲೆಯೊಳಗೆ ರಾಗರಾಗಿಣಿಯರ ನರ್ತನ ನಡೆಯುತ್ತಿತ್ತು.

ಗೋರ್ಟೆಯವರ ಕೇಳಿಕೆಗೆ ಸಮ್ಮತಿಸಿ ನರಸಿಂಹಲುರವರು ಬೆಂಗಳೂರಿನಲ್ಲೇ ಕೆಲವು ದಿನ ಉಳಿಯುವ ನಿರ್ಧಾರ ಮಾಡಿದರು. ಅವರಿಗಾಗಿ ಗೋರ್ಟೆಯವರು ಒಂದು ಕೋಣೆಯನ್ನು ತೆಗೆದುಕೊಂಡರು.

ಅಲ್ಲಿಂದ ಪ್ರತಿದಿನ ಅದೇ ಫಿಲಂ ಅನ್ನು ಮತ್ತೆ ಮತ್ತೆ ನೋಡುವುದಾಯಿತು. ಜೊತೆಗೆ ಗೋರ್ಟೆಯವರು ಅದರ ಬಗ್ಗೆ ಅಗತ್ಯವಿದ್ದೆಡೆ ವಿವರಣೆ ನೀಡುತ್ತಿದ್ದರು. ಮೊದಲೆರಡು ಮೂರು ದಿನ ನರಸಿಂಹಲುರವರಿಗೆ ಯಾವುದೇ ಹೊಳಹು ಸಹ ಕಾಣಲಿಲ್ಲ. ಆದರೆ ತಲೆಯಲ್ಲಿ ರಿಂಗಣ ನಡೆದಿತ್ತು.

"ಅಲ್ಲ. ಇವರು ನನ್ನ ಬಗ್ಗೆ ಇಷ್ಟು ವಿಶ್ವಾಸ ಇಟ್ಟಿದ್ದಾರೆ. ಆದರೆ ನಾನು ಇದಕ್ಕೆ ಸರಿಯಾಗಿ ಸ್ಪಂದಿಸುತ್ತಿಲ್ಲವಲ್ಲ! ಛೆ! ಏನಿದು!" ನರಸಿಂಹಲುರವರಿಗೆ ಕಸಿವಿಸಿ ಶುರುವಾಗಿತ್ತು. ಹಗಲುರಾತ್ರಿ ಅದೇ ಯೋಚನೆ, ಕುಳಿತಾಗ, ನಿಂತಾಗ, ತಿನ್ನುವಾಗ, ಕುಡಿಯುವಾಗ–ಉಸಿರು ತೆಗೆದುಕೊಂಡಾಗ, ಉಸಿರು ಬಿಡುವಾಗ..... ಅದೇ ಯೋಚನೆ, ಅಶೋಕ ಹೋಟೆಲ್‌ನ ಕೋಣೆ ಭರ್ಜರಿಯಾಗೇ ಇತ್ತು.

ಆದರೆ ಅದರ ಸುಖ ಅನುಭವಿಸುವ "ಯೋಗ ಬೇಕಲ್ಲ"– ತಲೆಯಲ್ಲಿ ಗುಂಗಿನ ಗುಂಗೀಹುಳ ಗುಂಯ್ ಅನ್ನುತ್ತಿರುವಾಗ ಮಲಗಿದರೆ ಮೆತ್ತನ್ನ ಹಾಸಿಗೆ ಸಹ ಕತ್ತಿಯಲಗಿನಂತೆ ಚುಚ್ಚಿ ಚುಚ್ಚಿ ಕಾಡುತ್ತದೆ. ನಿದ್ದೆ ಕಾಡಿಗೆ ಓಡುತ್ತದೆ.

ಹೀಗೆ ಮೂರುದಿನಗಳು ಕಳೆದು ನಾಲ್ಕನೆಯ ದಿನ ಮತ್ತೊಮ್ಮೆ ಫಿಲಂ ನೋಡಿದ ನರಸಿಂಹಲುರವರ ತಲೆಯಲ್ಲಿ ಸೃಜನಶೀಲತೆ ಜಾಗೃತವಾಗತೊಡಗಿತು. ಚಿತ್ರದಲ್ಲಿ ಆನೆ ನಡೆಯುತ್ತಾ ಬರುವುದನ್ನು ಬೇರೆ ಬೇರೆ ಕೋನಗಳಲ್ಲಿ ಚಿತ್ರೀಕರಿಸಿದ್ದರು. ಗೋರ್ಟೆಯವರು ಈ "ಗಜಗಮನ"ಕ್ಕೆ ಒಂದು ಸ್ವರಸಂಯೋಜನೆ ಮಾಡಲು ಸೂಚಿಸಿದ್ದರು.

ಮತ್ತೆ ಫಿಲಂ ಹಾಕಿದರು. ಆರಂಭದಲ್ಲೇ ಆನೆ ಬರುವ ದೃಶ್ಯ. ಅದು ನಡೆದುಕೊಂಡು ಬರುತ್ತಿದೆ. ನರಸಿಂಹಲುರವರ ಗಮನ ಗಜದ ಕಡೆ ಅಲ್ಲ, ಅದರ "ಗಮನ"ದ ಕಡೆಗೆ – ಆನೆಯ ಕಾಲುಗಳ ಕಡೆಗಷ್ಟೇ ಅವರು ದೃಷ್ಟಿನೆಟ್ಟರು. ಬೇರೆ ಯಾವ ಕಡೆಯೂ ಅವರ ನೋಟ ಕದಲಲಿಲ್ಲ. ಹಕ್ಕಿಯ ಕಣ್ಣನ್ನಷ್ಟೆ ತನ್ನ ಕಣ್ಣುಗಳಲ್ಲಿ ತುಂಬಿಕೊಂಡು ಗುರಿಯಿಟ್ಟ ಅರ್ಜುನನ ಏಕಾಗ್ರತೆ ಅದು.

ಆನೆ ತನ್ನ ಒಂದು ಕಾಲನ್ನು ಎತ್ತಿ ಮುಂದೆ ತಂದು ಮತ್ತೆ ನೆಲಕ್ಕೆ ಊರಲು ತೆಗೆದುಕೊಳ್ಳುವ ಕಾಲವೆಷ್ಟು? ಸುಮಾರು 10ರಿಂದ 12 ಸೆಕೆಂಡುಗಳು. ಇದಕ್ಕೆ ಬೇಕಾದ ತಾಳ ಯಾವುದು? ಚಿಂತೆಯ ಮುಸುಕು ಕಿತ್ತೊಗೆದು ಚಿಂತನದ ಕಡೆಗೆ ಸಾಗಿತ್ತು ಮನಸ್ಸು, ಬೆಳಕು ಕಂಡಿತ್ತು, ನಸುಕು ಹರಿಸುವ ಬೆಳ್ಳಿ ಮೂಡಿತ್ತು ಚಿದಾಕಾಶದಲ್ಲಿ.

ತಾಳ ಝುಪ್‌ತಾಲ್ — "ಧೀನ್ನದಿದ್ಧಿನ್ನ ತೀನ್ನದಿದ್ಧಿನ್ನ", ರಾಗ ಜೈಜಯವಂತಿ – ಇದರಲ್ಲಿ ಸ್ವರಸಂಯೋಜನೆ ಮಾಡಿ ಆನೆಯ ನಡಿಗೆಗೆ ಹೊಂದಿಸಿದಾಗ ನರಸಿಂಹಲುರವರು ಆರ್ಖಿಮಿಡೀಸ್ ಆಗಿದ್ದರು. ಅವರು ಸ್ನಾನದ ಕೋಣೆಯಲ್ಲಿ ಇರಲಿಲ್ಲ ಮತ್ತು ಬಾಗಿಲು ತೆರೆದುಕೊಂಡು ಬೀದಿಯಲ್ಲಿ ಓಡಲಿಲ್ಲ – ಅಷ್ಟೇ.

ಎರಡು ನಿಮಿಷಗಳ ಸಂಯೋಜನೆ ಅದು. ನರಸಿಂಹಲುರವರು ಈಗ ತಮ್ಮ ಕ್ಲಾರಿಯೋನೆಟ್ ಹೊರತೆಗೆದರು. ಗೋರ್ಟೆಯವರು ತಮ್ಮ ಕ್ಯಾಸೆಟ್ ರಿಕಾರ್ಡರ್ ಹೊರತೆಗೆದು ನರಸಿಂಹಲುರವರು ತಾವು ಸಂಯೋಜಿಸಿದ ಸ್ವರಗಳನ್ನು ತಾವು ಆಯ್ದ ತಾಳದಲ್ಲಿ ಎರಡು ನಿಮಿಷ ಅವಧಿಗೆ ನುಡಿಸಿದರು. ಗೋರ್ಟೆಯವರು ಅದನ್ನು ಮುದ್ರಿಸಿಕೊಂಡರು.

ಮತ್ತೆ ಫಿಲಂ ಹಾಕಿದರು. ಈ ಬಾರಿ ಕ್ಯಾಸೆಟ್‌ನ ಮುದ್ರಿತ ಸ್ವರದೊಂದಿಗೆ ಆನೆಯ ನಡಿಗೆ, ಜೈಜಯವಂತಿ, ಝುಪ್‌ತಾಲ್!

"Wonderful" (ಅದ್ಭುತ!)

ಗೋರ್ಟೆಯವರು ಮೆಚ್ಚುಗೆಯಿಂದ ಉದ್ಗರಿಸಿದರು. ನಿಜಕ್ಕೂ ಅದೊಂದು ಅದ್ಭುತ ಅನುಭವವಾಗಿತ್ತು. ರಾಗ-ತಾಳಗಳಿಗೆ ಸರಿಯಾಗಿ ಆನೆ ಹೊಂದಿಕೊಂಡು ಕಾಲು ಹಾಕುತ್ತಿತ್ತು -ಪರದೆಯ ಮೇಲೆ ವಡವಾಟಿಯವರಿಗೆ ಎಳೆಗಳು ಗೋಜಲು ಕಳಚಿಕೊಂಡು ಬಿಡಿಬಿಡಿಯಾಗಿ ಸಿಕ್ಕಿದ್ದವು. ಮುಂದೆ ಎಲ್ಲವೂ ನಿಚ್ಚಳ. ಒಂದೊಂದು ದೃಶ್ಯಕ್ಕೂ ಆಯಾ ಸನ್ನಿವೇಶಕ್ಕೆ ತಕ್ಕಂತೆ ಬೇಕಾದ ತಾಳ, ಬೇಕಾದ ಸ್ವರ. ನರಸಿಂಹಲುರವರ ನಿದ್ದೆ ಹತ್ತಿರ ಸುಳಿಯಲಿಲ್ಲ. ಸುಳಿದರೂ ಕೆಲವೇ ಗಂಟೆಗಳ ಕಾಲ-ಹೊಸತರಲ್ಲಿ ಗೊಂದಲದಿಂದ, ಈಗ ಉತ್ಸಾಹದಿಂದ.

ಫಿಲಂನಲ್ಲಿ ಒಂದು ದೃಶ್ಯದಲ್ಲಿ ಮಾವುತನೊಬ್ಬ ಸತ್ತ ಸಂದರ್ಭ ಚಿತ್ರಿತವಾಗಿದೆ. ಈ ಮಾವುತನಿಗೆ ಆನೆಗಳೆಂದರೆ ತುಂಬಾ ಮಮತೆ. ಎಷ್ಟೆಂದರೆ.....ಅಷ್ಟು ಪ್ರೀತಿ ತನ್ನ ಹೆಂಡತಿ-ಮಕ್ಕಳ ಮೇಲೂ ಇಲ್ಲವೆನಿಸುವಷ್ಟು, ಆನೆಗಳಿಗೂ ಸಹ ಅವನೆಂದರೆ ತುಂಬಾ ಪ್ರೀತಿ. ಈ ಮಾವುತ ಒಮ್ಮೆ ಅನಾರೋಗ್ಯದಿಂದ ಹಾಸಿಗೆ ಹಿಡಿದು ರೋಗ ಉಲ್ಬಣಿಸಿ ಸಾಯುತ್ತಾನೆ. ಇಡೀ ಕುಟುಂಬವೇ ಅಳುತ್ತಿರುತ್ತದೆ. ಮನುಷ್ಯರಷ್ಟೇ ಅಲ್ಲ, ಆನೆ ಸಹ. ಆ ಮಾವುತ ಮನೆಯಮುಂದೆ ಕಟ್ಟಿ ಹಾಕಿರುವ ಆನೆಯ ಕಣ್ಣುಗಳಲ್ಲಿ ನೀರು! ನರಸಿಂಹಲುರವರಿಗೆ "ತೋಡಿ" ರಾಗದ ಹೊರತು ಬೇರೆ ರಾಗ ಆ ಸಂದರ್ಭಕ್ಕೆ ಸರಿಎನಿಸಲಿಲ್ಲ. ಹೀಗಾಗಿ ತೋಡಿ ರಾಗದಲ್ಲಿ ಸ್ವರ ಸಂಯೋಜಿಸಲು ನಿರ್ಧರಿಸಿದರವರು.

ರಾತ್ರಿ ಮಲಗಿದವರು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಕುಳಿತು ನರಸಿಂಹಲುರವರು ಕ್ಲಾರಿಯೋನೆಟ್‌ನಲ್ಲಿ ತೋಡಿರಾಗದ ಆಲಾಪ್ ಶುರು ಹಚ್ಚಿಕೊಂಡರು. ಸುತ್ತಲೂ ನೀರವತೆ. ಕತ್ತಲ ಮಬ್ಬು ಹರಿದಿರಲಿಲ್ಲ ಹೊರಗೆ. ಹೋಟೆಲ್‌ನ ಒಳಗೆ ಚಟುವಟಿಕೆಗಳು ನಾಮಮಾತ್ರಕ್ಕಿದ್ದು ಉಳಿದಷ್ಟಕ್ಕೂ ಸ್ತಬ್ಧತೆ, ನಿಶ್ಶಬ್ಧತೆ. ಆ ನೀರವತೆಯೊಳಗಿನಿಂದ ತೋಡಿರಾಗದ ರಸವಾಹಿನಿ ಜಿನುಗ ತೊಡಗಿತು. ಮೆಲ್ಲಮೆಲ್ಲಗೆ ಮಂದ್ರದಿಂದ ಮಧ್ಯಮಕ್ಕೆ ಬಂದು ಸುತ್ತಲೂ ಆವರಿಸ ತೊಡಗಿತು ಸಂಗೀತ. ಆಗ ಬೆಳಗಿನ ಐದೂವರೆ ಗಂಟೆ. ಹೊರಗೆ ದಿಗಂತದಲ್ಲಿ ಅರುಣರಾಗ, ಒಳಗೆ ಇಲ್ಲಿ ತೋಡಿರಾಗ.

ಕೋಣೆಯ ಹೊರಗಿನಿಂದ ಕರೆಗಂಟೆ ಬಾರಿಸಿದ ಸದ್ದು ಕೇಳಿಸಿತು. ತಮ್ಮದೇ ಕೋಣೆಯ ಕರೆಗಂಟೆಯದು. "ಯಾರಪ್ಪ ಅದು ಈ ಬೆಳ್‌ಬೆಳಿಗ್ಗೆ" -- ನರಸಿಂಹಲುರವರು ಎದ್ದು ಹೋಗಿ ಬಾಗಿಲು ತೆರೆದರು.

ಎದುರಿಗೆ ಹೋಟೆಲ್ ರಾತ್ರಿಯ ಮೇಲ್ವಚಾರಕ.

"ಕ್ಷಮಿಸಿ ಸಾರ್, ತೊಂದರೆಕೊಟ್ಟೆ"

_ "ಪರವಾಯಿಲ್ಲ ಹೇಳಿ"

"ಸಾರ್ ಪಕ್ಕದ ಕೋಣೆಯಲ್ಲಿರೋರು ಬಂದು ನಮಗೆ ದೂರು ಕೊಟ್ಟಿದ್ದಾರೆ ನಿಮ್ಮ ಕೋಣೆಯಿಂದ ಬರೋ ಶಬ್ದದಿಂದ ಅವರಿಗೆ ತೊಂದರೆ ಆಗ್ತಿದೆ ಅಂತ."

– ನರಸಿಂಹಲುರವರಿಗೆ ಪೆಚ್ಚೆನಿಸಿತು. ಅರೆ! ಯಾರಪ್ಪ ಅದು ಸಂಗೀತದ್ವೇಷಿ! ಅಥವಾ ನಾನೇನಾದರೂ ಅಪಸ್ವರ ಬಾರಿಸಿದೆನೆ! ಇಲ್ಲವಲ್ಲ, ಅಪಸ್ವರ ಬಾರಿಸಿದಂತಿಲ್ಲ!

"ಹೌದಾ! ಅಯ್ಯೋ, ನನ್ನ ಸಂಗೀತದಿಂದ ಬೇರೆಯವರಿಗೆ ಕಿರುಕುಳ ಆಗುತ್ತೆ ಅಂತ ತಿಳಿದಿರಲಿಲ್ಲಪ್ಪ. ನನ್ನದೇ ಲೋಕದಲ್ಲಿದ್ದೆ ನಾನು. ಇದು ಹೋಟೆಲ್‌ನ ಒಂದು ಕೋಣೆ, ಅಕ್ಕಪಕ್ಕ ಬೇರೆ ಕೋಣೆಗಳಿವೆ, ಅಲ್ಲಿ ಜನ ಇರ್ತಾರೆ ಅನ್ನೋದು ಮರೆತುಬಿಟ್ಟೆ. ಹೋಗಲಿ ಬಿಡಪ್ಪಾ, ನಾನು ಎಲ್ಲರೂ ಎದ್ದಮೇಲೆ ನನ್ನ ಸಂಗೀತ ಶುರು ಹಚ್ಚಿಕೋತೀನಿ."

"ಹಾಗಲ್ಲ ಸಾರ್, ನಿಮ್ಮ ಸಂಗೀತದ ಬಗ್ಗೆ ಅವರಿಗೆ ಏನೂ ದೂರಿಲ್ಲ. ಆದರೆ ಬೆಳಿಗ್ಗೆ ಬೆಳಿಗ್ಗೆ ಒಳ್ಳೆಯ ಸಕ್ಕರೆ ಸವಿನಿದ್ದೆ ಸವೀತಾ ಇರುವಾಗ ನೀವು ಬಾರಿಸ್ತಾ ಇರೋ ರಾಗದಿಂದ ಅವರ ನಿದ್ದೆ ಹಾರಿಹೋಯಿತಂತೆ. ದುಃಖ ತಡೀಲಾರದೆ ಕಣ್ಣಲ್ಲಿ ನೀರು ಸುರಿಸ್ತಾ ಇದ್ರು, ಇದರ ಬದಲು ಯಾವುದಾದರೂ ಉಲ್ಲಾಸ ಕೊಡೋ ರಾಗ ಬಾರಿಸಿದರೆ ಅಡ್ಡಿ ಇಲ್ಲವಂತೆ."

ದಂಗಾದರು ವಡವಾಟಿಯವರು.

ಪಕ್ಕದ ರೂಮಿನವ ಅಳುತ್ತಿದ್ದಾನೆಯೆ! ಹಾಗೆಂದರೆ ತಾನು ನುಡಿಸುತ್ತಿರುವ ರೀತಿ ಸರಿಯಾಗಿದೆ. ತನ್ನ ಕೋಣೆಯಿಂದ ಹೊರಸುಳಿದ ರಾಗವನ್ನು ಪಕ್ಕದ ಕೋಣೆಯವನು ಬರೀ ಕೇಳಿಸಿಕೊಂಡಿದ್ದಕ್ಕೇ ಅಳುತ್ತಿದ್ದಾನೆಂದರೆ....... ಸಾವಿನ ದೃಶ್ಯದಲ್ಲಿ ಅದನ್ನು ಹೊಂದಿಸಿದರೆ ಅದು ಇನ್ನೆಷ್ಟು ಪ್ರಭಾವ ಬೀರೀತು! ದೃಶ್ಯ-ಶ್ರವ್ಯ ಎರಡೂ ಮೇಳೈಸಿದಾಗ ಅದರ ಅನುಭವ ಹೇಗಿದ್ದೀತು –ಅಲ್ಲವೇ !

ಆ ಸ್ವರ ಸಂಯೋಜನೆಯೂ ಮುದ್ರಿತವಾಯಿತು, ಕ್ಯಾಸೆಟ್‌ನಲ್ಲಿ. ಅರ್ಧನಿಮಿಷ ಗೋರ್ಟೆಯವರಿಗೆ ತೃಪ್ತಿ–ತನ್ನ ಎಣಿಕೆ ಸುಳ್ಳಾಗಲಿಲ್ಲ, ತಾನು ಇಲ್ಲಿಗೆ ಬಂದದ್ದು ವ್ಯರ್ಥವಾಗಲಿಲ್ಲ –ಎಂದು.

ಎಲ್ಲ ಹಿನ್ನೆಲೆಗೂ ಮುಖ್ಯವಾಗಿ ಕ್ಲಾರಿಯೋನೆಟ್ ಉಪಯೋಗಿಸಿದ್ದರೂ ಜೊತೆಗೆ ಸಿತಾರ್, ಕೊಳಲು ಹಾಗೂ ತಬಲಾ ವಾದಕರನ್ನು ಬಳಸಿಕೊಂಡಿದ್ದರು. ಎಲ್ಲಿಯೂ ಒಮ್ಮೆಯೂ ಗಾಯನವನ್ನು ಬಳಸಲಿಲ್ಲ. ಹಿಂದೆ ನಾಟಕಗಳಿಗೆ ಹಿನ್ನೆಲೆ ಸಂಗೀತನೀಡಿದ್ದ ಅನುಭವ ಈಗ ಇಲ್ಲಿ ಕೆಲಸಕ್ಕೆ ಬಂದಿತ್ತು.

ಒಂದು ಕಡೆ ಮಾತ್ರ ಗಾಯನದ ಉಪಯೋಗ ಮಾಡಲೇಬೇಕಾಗಿತ್ತು.

ಒಂದು ದೊಡ್ಡ ಕೋಟೆ, ಅದಕ್ಕೊಂದು ಎತ್ತರದ, ಭಾರವಾದ ಬಾಗಿಲು. ಅದನ್ನು ತೆರೆಯಲು ಹಾಕಲು ಕನಿಷ್ಠ ಇಪ್ಪತ್ತು ಜನರು ಬೇಕು. ಆ ದ್ವಾರದ ಮೂಲಕ ಪ್ರವೇಶಿದ್ದರೆ ಒಳಗೊಂದು ಶಿವಾಲಯ. ಆ ಶಿವಾಲಯಕ್ಕೆ ಸುತ್ತಮುತ್ತಲ ಗುಡ್ಡಗಾಡುಗಳ ಮಂದಿ "ನಡೆದುಕೊಳ್ಳುವವರು." ಅವರೆಲ್ಲ ಆ ದೇವಸ್ಥಾನಕ್ಕೆ ಬಂದು ಪೂಜಿಸಿ ಹರಕೆ ಹೊತ್ತು ಹಿಂತಿರುಗಿ ಹೋಗುವ ದೃಶ್ಯವೊಂದು ಈ ಫಿಲಂನಲ್ಲಿತ್ತು. ಗೋರ್ಟೆಯವರಿಗೆ ಇದಕ್ಕೊಂದು ಗಾಯನದ ಹಿನ್ನೆಲೆ ಸ್ವರ ಬೇಕಾಗಿತ್ತು.

ನರಸಿಂಹಲುರವರು ಆ ದೃಶ್ಯವನ್ನು ಗಮನಿಸಿದರು. ಒಂದೂವರೆ ನಿಮಿಷಗಳ ಕಾಲಕ್ಕೆ ಸ್ವರಸಂಯೋಜನೆಬೇಕಾಗಿತ್ತು. ಜಂಜೂಟಿರಾಗದಲ್ಲಿ ಒಂದು ಗೀತೆ ಇತ್ತು.

*ಮಹಾದೇವ ದೇವಾ*
*ಜಟಾ ಜೂಟ ಶ್ರೀ ನೀಲಕಂಠಾ*
*ನೀಲಕಂಠಾ......*

ದೇವಸ್ಥಾನ ಪರಿಕ್ರಮ ಮಾಡುತ್ತಿರುವ ಭಕ್ತಾಧಿಗಳಿಗೆ ಈ ಹಾಡು ಕೇಳಿದಾಗ ಅವರು ಈ ಸ್ವರ ಎಲ್ಲಿಂದ ಬರುತ್ತಿದೆ ಎಂದು ಅತ್ತಿತ್ತ ಹುಡುಕುತ್ತಿರುವಂತೆ ಭಾಸವಾಗುತ್ತಿತ್ತು. ದೃಶ್ಯ –ಶ್ರವ್ಯಗಳನ್ನು ಬೆರೆಸಿದಾಗ.

ಎಲ್ಲವೂ ಸಿದ್ಧವಾಗಿ ರಿಕಾರ್ಡಿಂಗ್ ಆಗಿ ಫಿಲಂನ ದೃಶ್ಯಗಳೊಂದಿಗೆ ಅವುಗಳನ್ನು ಒಪ್ಪವಾಗಿ ಜೋಡಿಸಿದ್ದೂ ಆಯಿತು. ಅಂದರೆ Synchronisation ಮಾಡಿದ್ದೂ ಆಯಿತು. ಫಿಲಂ ಸಿದ್ಧವಾಗಿ ಫ್ರಾನ್ಸ್‌ನಲ್ಲಿ ಪ್ರದರ್ಶಿತವಾಗಿ ಎಲ್ಲರ ಮೆಚ್ಚುಗೆಗಳಿಸಿತು.

1998ರಲ್ಲಿ ಹೈದರಾಬಾದ್‌ನಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯಿತು. ಅದರ ಉದ್ಘಾಟನೆಯನ್ನು ಹಿರಿಯನಟ, ಚಿರಯುವಕ ದೇವ್ ಆನಂದರು ಮಾಡಿದರು. ಈ ಉತ್ಸವದಲ್ಲಿ "ಹಾಥೀ" ಚಿತ್ರವೂ ಪಾಲ್ಗೊಂಡಿತು, ಬಹುಮಾನವನ್ನು ಗಳಿಸಿತು.

ತದನಂತರ ಒಮ್ಮೆ ಫಿಲಿಪ್ ಗೋರ್ಟೆಯವರು ಒಮ್ಮೆ ಬೆಂಗಳೂರಿಗೆ ಬಂದಾಗ ಅಲ್ಲಿಯ ಟಾಟಾ ಇನ್ಸ್ಟಿಟ್ಯೂಟ್ ಆಫ್ ಸಾಯಿನ್ಸ್ ಪ್ರೇಕ್ಷಾಗೃಹದಲ್ಲಿ "ಹಾಥೀ" ಚಿತ್ರದ ಪ್ರದರ್ಶನವನ್ನು ವಿಶೇಷ ಆಹ್ವಾನಿತರಿಗಾಗಿ ಏರ್ಪಡಿಸಿದರು. ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಜೆ.ಎಚ್. ಪಟೇಲರು, ಮಂತ್ರಿಗಳಾದ ಎಂ.ಪಿ.ಪ್ರಕಾಶ್ ಮತ್ತಿತರ ಗಣ್ಯರು ಆ ಚಿತ್ರವನ್ನು ವೀಕ್ಷಿಸಿದರು. ಆ ಸಂದರ್ಭದಲ್ಲಿ ಗೋರ್ಟೆಯವರು ಮಂತ್ರಿಗಳೊಂದಿಗೆ ಮಾತನಾಡುತ್ತಾ ನರಸಿಂಹಲುರವರು ಕ್ಲಾರಿಯೋನೆಟ್‌ನಲ್ಲಿ ಮಾಡಿದ ಸಾಧನೆ ಹಾಗೂ ಚಿತ್ರಕ್ಕೆ ನೀಡಿದ ಸಂಗೀತದ ಬಗ್ಗೆ ಬಾಯಿತುಂಬಾ ಪ್ರಶಂಸಿಸಿದ್ದೇ ಅಲ್ಲದೆ ತನ್ನ ದೇಶದ ಜನರು ಇವರ ಸಂಗೀತ ಸಂಯೋಜನೆಯನ್ನು ಮೆಚ್ಚಿಕೊಂಡ ಸಂತೋಷವನ್ನೂ ಹಂಚಿಕೊಂಡರು. ಅಂದು ವಡವಾಟಿಯವರಿಗೆ ಆ ಪ್ರೇಕ್ಷಾಗೃಹದಲ್ಲಿ ಸನ್ಮಾನವೂ ನಡೆಯಿತು. ಪಟೇಲರಿಗೆ ಹಾಗೂ ಎಂ.ಪಿ.ಪ್ರಕಾಶ್‌ರವರಿಗೆ ಆ ದಿನ ಒಂದು ರೀತಿಯ ಸಂಭ್ರಮ –ಟೈಟಲ್ ಕಾರ್ಡಿನಲ್ಲಿ ಸಂಗೀತಗಾರನ ಹೆಸರಿನೊಂದಿಗೆ ರಾಯಚೂರು ಮತ್ತು ಕರ್ನಾಟಕದ ಹೆಸರು ಎರಡೂ ಸೇರಿಸಲ್ಪಟ್ಟಿದ್ದವು. ಫ್ರಾನ್ಸಿನ ಚಲನಚಿತ್ರದಲ್ಲಿ ಕರ್ನಾಟಕದ ಹೆಸರು.

ಈ ಚಿತ್ರಕ್ಕೆ ಮಾಡಿದ ಕೆಲಸಕ್ಕಾಗಿ ಒಳ್ಳೆಯ ಸಂಭಾವನೆಯೂ ಸಿಕ್ಕಿತು. ಈ ಮೊಬಲಗು ನರಸಿಂಹಲುರವರು ರಾಯಚೂರಿನಲ್ಲಿ ಮಾಡಿದ್ದ ಒಂದು ಸತ್ಕಾರ್ಯಕ್ಕಾಗಿ ತೆಗೆದ ಸಾಲವನ್ನು ತೀರಿಸಲು ಉಪಯೋಗವಾಯಿತು. ಅಂತಹ ಸತ್ಕಾರ್ಯವನ್ನು ಬಹಳ ಜನರು ಮಾಡಿರಲಿಕ್ಕಿಲ್ಲ. ತನಗೆ ವಿದ್ಯೆ ನೀಡಿದ ಗುರು ಪಂಡಿತ ಸಿದ್ಧರಾಮ ಜಂಬಲದಿನ್ನಿಯವರ ಹೆಸರಿನಲ್ಲಿ ಸ್ವರಸಂಗಮ ಸಂಗೀತ ವಿದ್ಯಾಲಯ ಎಂಬ ಸಂಗೀತಶಾಲೆಯೊಂದನ್ನು ನಿರ್ಮಿಸಿದ್ದು. ಅದರದ್ದೇ ಒಂದು ಕತೆಯುಂಟು. ಮುಂದೆ ಅದನ್ನು ಹೇಳುತ್ತೇನೆ.

ನಮ್ಮ ದೇಶದ, ನಮ್ಮ ನಾಡಿನ ಸ್ವಾಭಿಮಾನಿ ಚಿತ್ರ ನಿರ್ಮಾಪಕರೆ, ನಿರ್ದೇಶಕರೆ! ದೂರದೇಶದಿಂದ ಹುಡುಕಿಕೊಂಡು ಬಂದು ಹೆಕ್ಕಿತೆಗೆದ ಆಣಿ

ಮುತ್ತು ನಿಮ್ಮದೇ ಮನೆಯ ಹಿತ್ತಲಲ್ಲಿ, ನಿಮ್ಮ ಕಡೆಗಣ್ಣೋಟಕ್ಕೂ ಬೀಳದೆ ವ್ಯರ್ಥವಾಗಿ ಮೂಲೆ ಸೇರಿದೆ. ಅದರ ಹೊಳಪು ಅದಕ್ಕುಂಟು. ನಿಮಗುಂಟೆ, ಈ ಮುತ್ತನ್ನು ಬಳಸಿಕೊಳ್ಳುವ ವಿವೇಚನೆ!?

ಚಾಣಾಕ್ಯ ನೀತಿಯಲ್ಲೊಂದು ಸೂಕ್ತಿಯಿದೆ.

*ಲೋಕಯಾತ್ರಾ ಭಯಂ ಲಜ್ಜಾ ದಾಕ್ಷಿಣ್ಯಂ ತ್ಯಾಗಶೀಲತಾ!*
*ಪಂಚ ಯತ್ರ ನ ವಿದ್ಯಂತೇ ನಕುರ್ಯಾತ್ ತತ್ರ ಸಂಸ್ಥಿತಂ ॥*

ಯಾವ ಎಡೆಯಲ್ಲಿ –ಜೀವನೋಪಾಯಕ್ಕೆ ದಾರಿ, ಶಾಸನಭಯ, ನೀಚಕಾರ್ಯಗಳ ಬಗ್ಗೆ ನಾಚಿಕೆ, ಕಲಾಸೃಷ್ಟಿಗಳನ್ನು ಪ್ರೋತ್ಸಾಹಿಸುವ ವಿವೇಚನಾಶೀಲರು ಮತ್ತು ತ್ಯಾಗ ಬುದ್ಧಿ –ಈ ಐದು ಲಕ್ಷಣಗಳಿಲ್ಲವೋ ಅಂತಹ ಎಡೆ ಬದುಕಲು ಯೋಗ್ಯವಾದದ್ದಲ್ಲ.

ಇಂತಹ ಸ್ಥಿತಿಯಿಂದ ನನ್ನ ದೇಶ, ನನ್ನ ನಾಡು ಹೊರಬರಲಿ ಎಂದು ನನ್ನ ಮನದೊಳಗಿನ ಆಸೆ ಮತ್ತು ನಿರೀಕ್ಷೆ. ಇದಕ್ಕಾಗಿ ಡಿ.ಕೆ. ಚೌಟ, ಪ್ರಜ್ಞಾ ಚೌಟರಂತಹವರ ಸಂತತಿ ಬೆಳೆಯಬೇಕು.

ಇಲ್ಲೊಂದು ಸಂಗತಿ ಹೇಳಲೇಬೇಕು.

ಫಿಲಂ ಪ್ರದರ್ಶನಕ್ಕೆ ಗಣ್ಯವ್ಯಕ್ತಿಗಳನ್ನೇ ಅಲ್ಲದೆ ಪತ್ರಿಕಾಮಾಧ್ಯಮದವರನ್ನೂ ಆಹ್ವಾನಿಸಲಾಗಿತ್ತು. ವಿವಿಧ ಪತ್ರಿಕೆಗಳಿಂದ ಪ್ರತಿನಿಧಿಗಳು ಅಲ್ಲಿಗೆ ಬಂದಿದ್ದರು. ಪ್ರದರ್ಶನದ ನಂತರ ನಿರ್ದೇಶಕರನ್ನು ಕಂಡು ಮಾತನಾಡಿಸಿ ಎಲ್ಲರೂ ತೆರಳಿದರು.

......ಒಬ್ಬರನ್ನು ಬಿಟ್ಟು ಎಲ್ಲರೂ.

ಆ ಪ್ರತಿನಿಧಿ ನರಸಿಂಹಲು ವಡವಾಟಿಯವರು ಬಿಡುವು ಮಾಡಿಕೊಳ್ಳುವುದನ್ನೇ ಕಾಯುತ್ತಿದ್ದರು. ಕೊನೆಗೆ ಎರಡು ತಾಸುಗಳ ನಂತರ ವಡವಾಟಿಯವರನ್ನು ಭೆಟ್ಟಿಮಾಡಿ ಅವರನ್ನು ಸಂದರ್ಶಿಸಿದರು. ಅವರ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಮುಕ್ತಮನಸ್ಸಿನಿಂದ ಬರೆದರು. –ಯಾವುದೇ ಅತಿಶಯವಿಲ್ಲದೆ.

ಆದರೆ ಆತ ಸುಮ್ಮನೆ ಬಂದು ನೋಡಿ, ಹೋಗಿ ವರದಿ ಒಪ್ಪಿಸಿದ ವರದಿಗಾರನಷ್ಟೇ ಆಗಿರಲಿಲ್ಲ. ಈ ಸಂಗೀತಗಾರನ ಮತ್ತು ಆ ವರದಿಗಾರನ

ನಡುವೆ ಅಂದು ಗೆಳೆತನ ಮೊಳೆತಿತ್ತು. ಅಂದು ಮೊಳೆತ ಗೆಳೆತನ ಇಂದಿನವರೆಗೂ ಬೆಳೆಯುತ್ತಾ ಬಂದು ಉಳಿದಿದೆ.

ಅವರೇ ಕನ್ನಡಪ್ರಭ –ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಸಂಪಾದಕರಾದ ಶ್ರೀ ಶಿವಸುಬ್ರಹ್ಮಣ್ಯಂ..... ನರಸಿಂಹಲು ವಡವಾಟಿಯವರ ಕಟ್ಟಾ ಅಭಿಮಾನಿ ಗೆಳೆಯ. ಅವಕಾಶ ಸಿಕ್ಕಾಗಲೆಲ್ಲ ನರಸಿಂಹಲುರವರ ಬಗ್ಗೆ ತಮ್ಮ ಪತ್ರಿಕೆಗಳಲ್ಲಿ ವರದಿ. ಪ್ರಕಟವಾಗುವಂತೆ ನೋಡಿಕೊಳ್ಳುತ್ತಿರುತ್ತಾರೆ. ಇವರು ಮತ್ತು ಇವರ ಸಹಧರ್ಮಿಣಿ ಶ್ರೀಮತಿ ದೀಪಾರವರು –ಇಬ್ಬರೂ ಸಂಗೀತಪ್ರೇಮಿಗಳು ಹಾಗೂ ಗುಣಗ್ರಾಹಿಗಳು.

❑

ಚರಣ 11

# ಆಕಾಶವಾಣಿಯಲ್ಲಿ

ಒಂದು ಸಾವಿರದ ಒಂಬೈನೂರ ಎಪ್ಪತ್ತಾರು. ಧಾರವಾಡ ಆಕಾಶವಾಣಿ ಕೇಂದ್ರ ...... ಸ್ವಲ್ಪ ಸಮಯವನ್ನು ಹಿಂದಕ್ಕೆ ಸರಿಸೋಣ.

ಆಕಾಶವಾಣಿಯಲ್ಲಿ ಕಲಾವಿದನಾಗಿ ಸೇರಬೇಕೆಂದರೆ ಒಬ್ಬ ಗಣ್ಯಕಲಾವಿದನ ಶಿಫಾರಸ್ಸು ಬೇಕೇಬೇಕು. ಇಲ್ಲದಿದ್ದಲ್ಲಿ ಅದು ಆಗುವ ಕೆಲಸವಲ್ಲ. ಗುರುಗಳ ಶಿಫಾರಸಿನ ಬಲದ ಮೇಲೆ ನರಸಿಂಹಲುರವರು ಆಕಾಶವಾಣಿಯಲ್ಲಿ ಆಡಿಷನ್‌ಗಾಗಿ ಅರ್ಜಿಸಲ್ಲಿಸಿದರು.....ಧಾರವಾಡ ಆಕಾಶವಾಣಿ ನಿಲಯ ನಿರ್ದೇಶಕರಿಗೆ.

ನಿಗದಿತ ದಿನದಂದು ನರಸಿಂಹಲುರವರು ಎಲ್ಲ ತಯಾರಿಯೊಂದಿಗೆ ಧಾರವಾಡ ಆಕಾಶವಾಣಿ ನಿಲಯಕ್ಕೆ ಹೋದಾಗ ಅವರೂ ಸೇರಿ ಇಪ್ಪತ್ತು ಮಂದಿ ಕಲಾವಿದರು ಆಡಿಷನ್‌ಗಾಗಿ ಕಾದು ಕುಳಿತಿದ್ದರು. ನರಸಿಂಹಲುರವರೂ ತಮ್ಮ ಸರದಿಗಾಗಿ ಕಾದು ಕುಳಿತರು.

ಒಬ್ಬೊಬ್ಬರಾಗಿ ತಮ್ಮ ಹೆಸರು ಬಂದೊಡನೆ ಆಯಾ ಕಲಾವಿದರು ಎದ್ದು ಒಳಗೆ ಆಡಿಷನ್ ಕೋಣೆಗೆ ನಡೆದರು. ಪರೀಕ್ಷೆ ಎದುರಿಸಿದರು. ಹೊರಗೆ ಬಂದರು. ಹಾಗೆ ಆಡಿಷನ್ ಮುಗಿಸಿಕೊಂಡು ಬಂದವರನ್ನು ಒಂದು ಕಡೆ ಕೂರಿಸಲಾಯಿತು. ಆಡಿಷನ್‌ಗಾಗಿ ಕಾಯುತ್ತಿದ್ದವರು ಇನ್ನೊಂದು ಕಡೆ. ಅಲ್ಲಿ ನರಸಿಂಹಲುರವರೂ ಒಬ್ಬರು. ಅವರ ಸರದಿ ಬರುವ ಹೊತ್ತಿಗೆ ಮಧ್ಯಾಹ್ನವಾಗಿತ್ತು.

ನರಸಿಂಹಲುರವರು ಮುಲ್ತಾನಿ ರಾಗವನ್ನೆತ್ತಿಕೊಂಡು ತಮ್ಮ ವಾದ್ಯವನ್ನು ನುಡಿಸಿದರು. ಕ್ಲಿಷ್ಟವಾದ ರಾಗವದು. ಸ್ವಲ್ಪ ವ್ಯತ್ಯಾಸವಾದರೆ ಅದು ತೋಡಿಗೆ ತಿರುಗಿಬಿಡುತ್ತದೆ. ಇಲ್ಲವೆ ಮಧುವಂತಿಯಾಗಿ ಬಿಡುತ್ತದೆ. ಆಕಡೆ-ಈಕಡೆ ಸ್ವರ ಜಾರದಂತೆ ಎಚ್ಚರವಹಿಸಿ ಅದನ್ನು ನುಡಿಸಬೇಕು. ಹಾಗೆ ನುಡಿಸಲು ಸಾಕಷ್ಟು ಪೂರ್ವತಯಾರಿ ಬೇಕು.

ವಡವಾಟಿಯವರು ಹೇಳುತ್ತಾರೆ– "ನಿಜ ಹೇಳಬೇಕೆಂದರೆ ಅದು ಅಷ್ಟು ದೊಡ್ಡ ರಾಗ ಅಂತ ನನಗೆ ಆಗ ಗೊತ್ತಿರಲಿಲ್ಲ. ನಾನೊಂದು ರಾಗ ಆಯ್ದುಕೊಳ್ಳ ಬೇಕಾಗಿತ್ತು. ಮುಲ್ತಾನಿಯನ್ನು ಆಯ್ದುಕೊಂಡೆ ಅಷ್ಟೆ."

ಸಧ್ಯ! ಹಗ್ಗವೆಂದುಕೊಂಡು ಹಿಡಿದೆತ್ತಿದ ಹಾವು ಕಚ್ಚಲಿಲ್ಲ, ಇವರು ಹೇಳಿದಂತೆ ಕೇಳಿತ್ತು.

ಅರ್ಧತಾಸು ಕಾಲ ಮುಲ್ತಾನಿರಾಗವಿಸ್ತರಣೆ ಆಯಿತು. ಆಮೇಲೆ ಆಡಿಷನ್‌ಗೆ ಕುಳಿತಿದ್ದವರು ಇನ್ನೆರಡುಮೂರು ಬೇರೆ ಬೇರೆ ರಾಗಗಳನ್ನು ಸೂಚಿಸಿದರು. ಅದೂ ಆಯಿತು. ನರಸಿಂಹಲುರವರು ಹೊರಗೆ ಬಂದು ಆಡಿಷನ್ ಮುಗಿಸಿ ದವರೊಂದಿಗೆ ಕುಳಿತರು.

ಸಾಯಂಕಾಲದ ಹೊತ್ತಿಗೆ ಒಳಗಿನಿಂದ ಬಂದವರೊಬ್ಬರು, ಸಮಿತಿಯ ಸದಸ್ಯರು ಪರಿಕ್ಷಾರ್ಥಿಗಳನ್ನು ಒಬ್ಬೊಬ್ಬರಾಗಿ ಕರೆದು ಅವರಿಗೆ "ನಿಮಗೆ ಪತ್ರ ಬರುತ್ತೆ ಈಗ ಹೋಗಿ" ಎಂದು ಹೇಳಿದರು. ನರಸಿಂಹಲುರವರ ಹೆಸರು ಕರೆಯಲಿಲ್ಲ ಎಲ್ಲ ಮುಗಿಯುವ ತನಕ.

ಎಲ್ಲರೂ ಹೋದರು, ನರಸಿಂಹಲು ಒಬ್ಬರೇ ಉಳಿದಿದ್ದು.

ಒಹೋ! ತಾನು ಆಯ್ಕೆಯಾಗಿಲ್ಲ ಎಂದು ಕಾಣುತ್ತದೆ. ಆಯಿತು ಇಷ್ಟೇ ಭಾಗ್ಯ ನನ್ನ ಪಾಲಿಗೆ ಇಂದು!...... ನರಸಿಂಹಲುರವರ ಮನಸ್ಸಿನಲ್ಲಿ ಆಂದೋಳನ ತೊಡಗಿತ್ತು.

ಅವರು ನರಸಿಂಹಲುರವರ ಬಳಿಗೆ ಬಂದರು.

ಇನ್ನೇನು! ಜಡ್ಜ್ ಮುಂದೆ ಅಹವಾಲುಗಳು ವಾದ–ಪ್ರತಿವಾದಗಳು ಮುಗಿದವು – ಈಗ ತೀರ್ಪು.......

"ನೀವು ಲೋಕಲ್ ಆಡಿಷನ್‌ನಲ್ಲಿ ತೇರ್ಗಡೆಯಾಗಿದ್ದೀರಿ. ಫೈನಲ್ ಆಡಿಷನ್‌ಗೆ ನಾವು ನಿಮ್ಮ ರಾಗ ರಿಕಾರ್ಡ್‌ಮಾಡಿಕೊಂಡು ದಿಲ್ಲಿಗೆ ಕಳಿಸಬೇಕು. ನೀವು ಒಂದು ವಾರ ಬಿಟ್ಟುಕೊಂಡು ಮತ್ತೆ ಬನ್ನಿ."

ನರಸಿಂಹಲುರವರ ಎದೆಯ ಹೊರೆ ಇಳಿದು ಅವರು ನಿಡಿದಾಗಿ ಉಸಿರಾಡಿದರು. ಆದರೆ ಮತ್ತೆ ಒಂದು ವಾರಕ್ಕೆ ಮರಳಬೇಕೆ! ಏಕೆಂದರೆ ಈಗ ರಾಯಚೂರಿಗೆ ಹೋಗಲು ಬಸ್‌ಛಾರ್ಜ್ ಇದೆ. ಮತ್ತೆ ಒಂದು ವಾರಕ್ಕೆ ಇಲ್ಲಿಗೆ ಬಂದು ಹೋಗಲು ಹಣ ಹೊಂದಿಸುವುದು ಹೇಗಪ್ಪಾ!

"ಸಾರ್, ಮತ್ತೆ ಒಂದು ವಾರಕ್ಕೆ ಬರಬೇಕೆಂದರೆ ನನಗೆ ಸಮಸ್ಯೆಯಾಗುತ್ತಲ್ಲ!"

"ನಿಮಗೇನ್ರೀ ಸಮಸ್ಯೆ ? ಬಿಸಿರಕ್ತದ ಯುವಕರು ನೀವು! ನಿಮಗೆ ಗೊತ್ತ? ಬಂದ ಇಪ್ಪತ್ತು ಜನರಲ್ಲಿ ಹತ್ತೊಂಭತ್ತು ಜನ ಖಾಲಿ ಕೈಯಲ್ಲಿ ಮನೆಗೆ ವಾಪಸ್ ಹೋದರು. ನೀವೊಬ್ಬರೇ ಆಯ್ಕೆಯಾದವರು. ಅವರ ಎದುರಿಗೆ "ನೀವು ಆಯ್ಕೆಯಾಗಿಲ್ಲ" ಎಂದು ಹೇಳುವ ಬದಲು "ನಿಮಗೆ ಪತ್ರ ಬರುತ್ತೆ ಹೋಗಿ" ಅಂತ ಕಳಿಸಿದಿವಿ. ನಿಮ್ಮನ್ನ ಉಳಿಸಿಕೊಂಡಿವಿ ಯಾಕೆಂದರೆ ನೀವು ಪಾಸಾಗಿದ್ದೀರಿ".

ಅವರ ಹೆಸರು ಅಬ್ದುಲ್‌ಖಾದರ್ ಎಂದು.

"ಏನೇ ಆಗಲಿ ಸರ್, ಇವತ್ತು ಇಲ್ಲ ನಾಳೆಯೇ ಫೈನಲ್ ಆಡಿಷನ್ ಮಾಡಿಬಿಡಿ ತುಂಬಾ ತೊಂದರೆಯಿದೆ. ಬರಲಿಕ್ಕೆ ಕಷ್ಟ ಆಗುತ್ತೆ. ಏನಾದರೂ ಮಾಡಿ ಸರ್" ನರಸಿಂಹಲುರವರು ವಿನಂತಿಸಿಕೊಂಡರು.

"ಏನಪ್ಪಾ ನೀನು......ಸರಿ, ಆಯಿತು, ನಾಳೆ ಮಾಡಿಬಿಡೋಣ. ಎಲ್ಲಿ ಉಳಕೊಂಡಿದ್ದೀ ನೀನು ಧಾರವಾಡದಾಗ?"

ಉಳಕೊಳ್ಳೋದು ಎಲ್ಲಿ! ಧಾರವಾಡಕ್ಕೆ ಬಂದು ಹೋಗಲು ಹಣ ಹೊಂದಿಸಿದ್ದೇ ಒಂದು ಸಾಹಸ! ಇನ್ನು ಇಳಕೊಳ್ಳೋದು –ಉಳಕೊಳ್ಳೋದು........

"ಇಲ್ಲ ಸಾರ್, ಬೆಳಿಗ್ಗೆ ಹೊರಟು ಸೀದಾ ಇಲ್ಲಿಗೆ ಬಂದಿದ್ದೀನಿ."

ಅಬ್ದುಲ್‌ಖಾದರ್ ಸಾಹೇಬರಿಗೆ ಬಹುಶಃ ಅರ್ಥವಾಗಿದ್ದೀತು.

"ಸರಿ, ನೀನು ಬ್ಯಾರೆಲ್ಲೂ ಉಳಿಯೋದು ಬ್ಯಾಡ, ನಡಿ ನಮ್ಮ ಮನೀಗೆ"

ಅಂದು ರಾತ್ರಿ ನರಸಿಂಹಲುರವರ ವಾಸ್ತವ್ಯ ಅಬ್ದುಲ್‌ಖಾದರ್ ಸಾಹೇಬರ ಮನೆಯಲ್ಲಿ. ಈ ಅಬ್ದುಲ್‌ಖಾದರ್ ಸಾಹೇಬರು ಸಾಮಾನ್ಯರೇನಲ್ಲ. ಧಾರವಾಡದಲ್ಲಿ ಹೆಸರಾಂತ ಸಾರಂಗಿವಾದಕರು. ಬಹಳಷ್ಟು ಕಡೆ ಕಾರ್ಯಕ್ರಮ ನೀಡಿದ್ದಾರೆ. ಅವರ ಮಗ ಫೈಯಾಜ್ ಖಾನ್ ಈಗ ತನ್ನ ತಂದೆಯಿಂದ ಸಾರಂಗಿ ವಾದನ ಕಲೆಯನ್ನು ಬಳುವಳಿಯಾಗಿ ಪಡೆದು ಉಸ್ತಾದ್ ಬಾಲೇಖಾನರಲ್ಲಿ ಸಂಗೀತ ಕಲಿತಿದ್ದಾರೆ. ಸಾರಂಗಿವಾದನ ಹಾಗೂ ಗಾಯನ–ಎರಡರಲ್ಲೂ ನಿಷ್ಣಾತರಾಗಿದ್ದಾರೆ.

ಮರುದಿನವೇ ವಡವಾಟಿಯವರ ಫೈನಲ್ ಆಡಿಷನ್ ಆಯಿತು. ತುಂಬಾ ಚೆನ್ನಾಗಿ ರಾಗ ಮೂಡಿ ಬಂತು.

ನಂತರ ಕ್ಯಾಸೆಟ್ ನಿಲ್ಲದೆ ದಿಲ್ಲಿಗೆ ಪ್ರಯಾಣಿಸಿತು. ಅಲ್ಲಿ ಓಕೆ ಆಗಿ ಬಂದು ನರಸಿಂಹಲುರವರು ಆಕಾಶವಾಣಿಯಲ್ಲಿ "ಬಿ" ಗ್ರೇಡ್ ಕಲಾವಿದರಾಗಿ ಆಯ್ಕೆಯಾದರು. ಅಲ್ಲಿಂದ ಮುಂದೆ ಅನೇಕ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಇವರ ಕಛೇರಿ ರಿಕಾರ್ಡ್ ಆಯಿತು.ರಾಷ್ಟ್ರಮಟ್ಟದಲ್ಲಿ ವಡವಾಟಿಯವರು ಹೆಸರಾದರು. ಆ ಮಟ್ಟದಲ್ಲಿ ಕ್ಲಾರಿಯೋನೆಟ್ ವಾದಕರಾಗಿ ನುಡಿಸಿದವರಲ್ಲಿ ನರಸಿಂಹಲುರವರೇ ಮೊದಲಿಗರು. ಮುಂದೆ ದೂರದರ್ಶನದಲ್ಲೂ ನರಸಿಂಹಲುರವರು ಪ್ರದರ್ಶನ ನೀಡಿದರು.

ಗುರು ಜಂಬಲದಿನ್ನಿ ಬುವಾರವರಿಗೆ ತಮ್ಮ ಶಿಷ್ಯನ ಪುರೋಭಿವೃದ್ಧಿಯಿಂದ ಮನಃ ಪೂರ್ವಕವಾಗಿ ಖುಷಿಯಾಗಿ ಅದನ್ನು ಶಿಷ್ಯನ ಮುಂದೆ ಹೇಳಿಯೂ ಹೇಳುತ್ತಿದ್ದರು, ಹರಸುತ್ತಿದ್ದರು.

ಈಗ ನರಸಿಂಹಲುರವರು ಆಕಾಶವಾಣಿಯಲ್ಲಿ "ಎ"ಗ್ರೇಡ್ ಕಲಾವಿದರು.

ಆಕಾಶವಾಣಿಯ ಕಲಾವಿದನಾಗಿ ನಂತರ ನರಸಿಂಹಲುರವರ ಬದುಕಿನಲ್ಲಿ ಬೆಳಕು ಮೂಡಲಾರಂಭಿಸಿತು. ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸತೊಡಗಿತು. ಅವರು ನಂಬಿದ **"ಕರೀ ಕೊಳವಿ"** ಅವರ ಕೈ ಬಿಡಲಿಲ್ಲ. ಅದು ಅವರ ಆತ್ಮವಾಗಿತ್ತು. ಅದರೊಂದಿಗಿನ ನಂಟು ಅವಿನಾಭಾವ. ಮುಂದೆ ಈ ಕ್ಲಾರಿಯೋನೆಟ್ ಬಗ್ಗೆಯೇ ಒಂದು ಪ್ರಕರಣವಿದೆ. ತುಂಬಾ ಸ್ವಾರಸ್ಯಕರವಾದ ಪ್ರಸಂಗವದು. ಹಿಂದಿನದೊಂದು ಅಧ್ಯಾಯದಲ್ಲಿ ಈ ಬಗ್ಗೆ ಈಗಾಗಲೇ ಪೀಠಿಕೆ ಹಾಕಿದ್ದೇನೆ.

❑

ಚರಣ 12

# ಗೆಳತಿ ಕಾಣೆಯಾದಾಗ

ನರಸಿಂಹಲುರವರು ಸಂಗೀತ ಕಾರ್ಯಕ್ರಮ ನೀಡುವುದಕ್ಕಾಗಲಿ, ಇಲ್ಲದೆ ಇನ್ನಾವುದೇ ವೈಯಕ್ತಿಕ ಕಾರ್ಯಗಳಿಗಾಗಲಿ ಪ್ರಯಾಣ ಹೊರಟರೆಂದರೆ ಅವರೊಂದಿಗೆ ಎಂದೆಂದೂ ಸಹಚರನಾಗಿ, ಅವರ ಪ್ರೀತಿಯ ಕೂಸಾಗಿ ಟಿಕೆಟ್‌ಲೆಸ್ ಪ್ರಯಾಣಿಕನಾಗಿ-ಜೊತೆನೀಡುವ ಸಹಚರ ಅವರ ಸಣ್ಣ ಕಪ್ಪು ಬಣ್ಣದ ಪೆಟ್ಟಿಗೆ. ಆ ಪೆಟ್ಟಿಗೆಯಲ್ಲಿರುವುದು –

1) ಶೃಂಗೇರಿ ಜಗದ್ಗುರುಗಳು ಕಳಿಸಿದ ಮಾತಾ ಸರಸ್ವತಿಯ ಚಿತ್ರಪಟ.
2) ಗುರು ಸಿದ್ಧರಾಮ ಜಂಬಲದಿನ್ನಿಯವರ ಛಾಯಾಚಿತ್ರ
3) ನರಸಿಂಹಲುರವರ ಕ್ಲಾರಿಯೋನೆಟ್.

ಎಲ್ಲಿಗೇ ಹೋಗಲಿ, ಎಲ್ಲಿಯೇ ಇರಲಿ, ಮುಂಜಾನೆ ಎದ್ದು ಪ್ರಾತಃ ಕರ್ಮಗಳನ್ನು ಮುಗಿಸಿದ ನಂತರ ಮೊದಲ ಕೆಲಸ ವಾದ್ಯದೊಂದಿಗೆ ಸಂವಾದ — ಬಗೆಬಗೆಯ ರಾಗಗಳಲ್ಲಿ, ಪೆಟ್ಟಿಗೆಯನ್ನು ತೆರೆದ ಕೂಡಲೇ ಅವರಿಗೆ ಸರಸ್ವತಿಯ ಹಾಗೂ ಜಂಬಲದಿನ್ನಿಯವರ ರೂಪ ಕಾಣಬೇಕು. ಆಗ ಮನಸ್ಸು ತಿಳಿಯಾಗಿ ರಸಧಾರೆ ಸುಗಮ. ಒಂದೇ ಒಂದು ದಿನ ಕ್ಲಾರಿಯೋನೆಟ್ ನುಡಿಸದಿದ್ದರೆ ಅವರಿಗೆ ಸಮಾಧಾನವಿಲ್ಲ. ಅನೇಕ ವರ್ಷಗಳಿಂದ, ವೆಂಕಟಪ್ಪನವರಲ್ಲಿ ಬ್ಯಾಂಡ್‌ಗೋಷ್ಠಿಯಲ್ಲಿ ಸೇರಿದಾಗಿನಿಂದ, ಇಂದಿನವರೆಗೂ ಅದು ಅವರ ಜೊತೆಗಾತಿ, ಆಪ್ತಮಿತ್ರೆ, ಅಂತಹ ಮಿತ್ರೆ ಇದ್ದಕ್ಕಿದ್ದಂತೆ ಕಾಣೆಯಾದರೆ?

ಹಾಗೂ ಒಮ್ಮೆ ಆಯಿತು.

ಕೊಟ್ಟೂರಿನಲ್ಲಿ ಒಮ್ಮೆ ನರಸಿಂಹಲುರವರ ಕಾರ್ಯಕ್ರಮವಿತ್ತು. ಅದಕ್ಕಾಗಿ ಅವರು ನಿಗದಿತ ದಿನದಂದು ರಾಯಚೂರಿನಿಂದ ಕೊಟ್ಟೂರಿಗೆ ಹೊರಟರು. ಜೊತೆಯಲ್ಲಿ ಕ್ಲಾರಿಯೋನೆಟ್ ಸಾಥ್ ನೀಡಲು ಶಿಷ್ಯ ರಘುಪತಿ ಇದ್ದರು. ಪ್ರಯಾಣ ಬಸ್ಸಿನಲ್ಲಿ.

ಗುರು–ಶಿಷ್ಯರಿಬ್ಬರೂ ಅದು–ಇದು ಮಾತನಾಡುತ್ತಾ ಪ್ರಯಾಣ ಸಮಯ ವನ್ನು ಕೊಲ್ಲತೊಡಗಿದರು. ಜೊತೆಗೆ ಹೊರಗೆ ಹಿಂದಕ್ಕೋಡುವ, ರಿವರ್ಸ್‌ಗೇರ್‌ನಲ್ಲಿ ಚಲಿಸುವ ಗುಡ್ಡಬೆಟ್ಟಗಳು, ಮರಗಿಡಗಳು, ಮನೆ–ಮಠಗಳು ಇತ್ಯಾದಿಗಳ ಕಡೆಗೆ ಕಣ್ಣುಹಾಯಿಸುತ್ತಾ ಅಡಿಗಡಿಗೆ ಸಣ್ಣದೊಂದು ನಿದ್ದೆ ತೆಗೆಯುತ್ತಾ ಇದ್ದಂತೆ ಬಸ್ಸು ಹೊಸಪೇಟೆ ಬಸ್‌ಸ್ಟ್ಯಾಂಡ್‌ಗೆ ಬಂದು ನಿಂತಿತು. ಪ್ರಕೃತಿಯ ಕರೆಗೋ, ಸುಮ್ಮನೆ ಮೈಮುರಿದು ಸುಧಾರಿಸಿಕೊಳ್ಳಲಿಕ್ಕೋ ಇಬ್ಬರೂ ಎಲ್ಲರಂತೆ ಕೆಳಗಿಳಿದರು.

ಸ್ವಲ್ಪ ಹೊತ್ತಿಗೆ ಬಸ್ಸು ಮತ್ತೆ ಹೊರಡಲಣಿಯಾದಾಗ ಎಲ್ಲರೂ ದಡ–ಬಡ ಮಾಡುತ್ತಾ ಬಸ್ ಹತ್ತಿದರು. ನಮ್ಮ ಗುರು–ಶಿಷ್ಯರೂ ಸಹ. ಸೀಟಿನ ಕಡೆಗೆ ಇವರಿಬ್ಬರೂ ಚಲಿಸುತ್ತಿದ್ದಂತೆ ಬಸ್ ಹೊರಟೇ ಬಿಟ್ಟಿತು.

ಜನರ ಮಧ್ಯೆ ನುಸುಳಿಕೊಂಡು ಇಬ್ಬರೂ ತಮ್ಮ ಆಸನದ ಕಡೆಗೆ ಬಂದು ನೋಡುತ್ತಾರೆ. ವಡವಾಟಿಯವರ ಸಂಗೀತ ಸಂಗಾತಿ ಇಲ್ಲ! ಕೂಡಲೇ ಡ್ರೈವರ್‌ಗೆ ಹೇಳಿ ಬಸ್ ನಿಲ್ಲಿಸಿ ಅಲ್ಲಿ ಇಲ್ಲಿ ಹುಡುಕಿದರು. ಊಹೂಂ! ಸಿಗಲಿಲ್ಲ. ಈಗೇನು ಮಾಡುವುದು! ತನ್ನ ಅವಿಭಾಜ್ಯ ಅಂಗವೇ ಆಗಿದ್ದ ಕ್ಲಾರಿಯೋನೆಟ್ ಕಾಣದು ಎಂದರೆ!

ಕೂಡಲೇ ತನ್ನಲೆಟರ್‌ಹೆಡ್‌ನಿಂದ ಹಾಳೆಯೊಂದನ್ನು ಕಿತ್ತು ಶಿಷ್ಯನಿಗೆ ಕೊಟ್ಟರು. ಹೊಸಪೇಟೆ ಪೋಲಿಸ್ ಸ್ಟೇಷನ್‌ನಲ್ಲಿ ದೂರುಕೊಡಲು ರಘುಪತಿಗೆ ಹೇಳಿ, ಅಂದಿನ ಕಾರ್ಯಕ್ರಮಕ್ಕೆ ತಾತ್ಕಾಲಿಕವಾಗಿ ಶಿಷ್ಯನ ಕ್ಲಾರಿಯೋನೆಟ್ ತೆಗೆದುಕೊಂಡು ಪ್ರಯಾಣ ಮುಂದುವರಿಸಿದರು. ರಘುಪತಿ ಇತ್ತ ಪೋಲಿಸ್ ಸ್ಟೇಷನ್ ಕಡೆಗೆ ಕಾಲು ಹಾಕಿದರು.

ಅಲ್ಲಿಂದ ಮುಂದೆ ನರಸಿಂಹಲುರವರದು ತಿಳಿಗೊಳಕ್ಕೆ ಕಲ್ಲೆಸೆದಾಗ ಆಗುವಂತಹ ಮನಃಸ್ಥಿತಿ. ಕೊಟ್ಟೂರಿನ ಕಾರ್ಯಕ್ರಮವೇನೋ ಆಗಿಯೇ ಆಗುತ್ತದೆ. ಶಿಷ್ಯನ ಕ್ಲಾರಿಯೋನೆಟ್ ಇದೆ. ಆದರೆ ತನ್ನ ಬಹುಕಾಲದ ಒಡನಾಡಿ, ತನ್ನ ಜೊತೆ–ಜೊತೆಗೇ ಮಿಡಿಯುತ್ತಿದ್ದ ಜೀವನಾಡಿ ಈಗಿಲ್ಲವೆಂದರೆ! ಬಸ್ ಚಲಿಸುತ್ತಿತ್ತು. ಆದರೆ ಸಮಯ ನಿಂತಿತ್ತು –ಸ್ತಬ್ಧವಾಗಿ. ಏನು ಮಾಡಲೂ ಮನಸ್ಸಿಲ್ಲ. ಕೊಟ್ಟೂರಿನ ಕಾರ್ಯಕ್ರಮವನ್ನು ರದ್ದು ಪಡಿಸಿದರೆ ಅಲ್ಲಿ ನಿರ್ವಾಹಕರ ಗತಿಯೇನಾದೀತು! ಇಲ್ಲ, ಆ ಕಾರ್ಯಕ್ರಮ ನಿಲ್ಲಿಸುವುದು ಬೇಡ. ಅದು ಆಗಲೇ ಬೇಕು.

ಸಾಯಂಕಾಲ ಕಾರ್ಯಕ್ರಮ. ಸಮಯಕ್ಕೆ ಮುಂಚಿತವಾಗಿ ನರಸಿಂಹಲು ಅಲ್ಲಿಗೆ ಹೋದರು. ಆ ಹೊತ್ತಿಗಾಗಲೇ ಅಲ್ಲಿಯ ಜನರಿಗೆ ಕ್ಲಾರಿಯೋನೆಟ್ ಕಳೆದುಹೋದ ಸುದ್ದಿ ಬಹಳ ವೇಗವಾಗಿ ಹರಡಿ ತಿಳಿದುಬಿಟ್ಟಿತ್ತು. ಹೋ! ಹಾಗಾದರೆ ಈ ದಿನ ವಡವಾಟಿಯವರು ಮನಸ್ಸಿಟ್ಟು ಕಛೇರಿ ಮಾಡಲಿಕ್ಕಿಲ್ಲ. ತುಂಬಾ ಬೇಸರವಾಗಿರಲಿಕ್ಕೆ ಸಾಕು -- ಎಂದು ಅವರವರಲ್ಲೇ ಗುಸುಗುಸು.

ಆದರೆ ನರಸಿಂಹಲುರವರು ನರಸಿಂಹಲುರವರೇ! ಸಂಗೀತಕ್ಕೆ ಹಾಗೆಲ್ಲ ಕುಂದು ತರುವ ಕೆಲಸಮಾಡುವ ಜಾತಿಗೆ ಸೇರಿದವರಲ್ಲ, ನಾದಪೂಜೆ ನಡೆಯಲೇ ಬೇಕು.

ಮಧ್ಯಾಹ್ನ ಮಠದಲ್ಲಿ ಊಟವಿತ್ತು. ಮಠದ ಸ್ವಾಮಿಗಳು ನರಸಿಂಹಲುರವರಿಗೆ ಚೆನ್ನಾಗಿ ಉಣ್ಣಲು ಮಮತೆಯಿಂದ ಒತ್ತಾಯಿಸಿದರು. ಆದರೆ ಎದೆ ಸುಡುವ ಅಗ್ನಿಯ ಇದಿರು ಜಠರಾಗ್ನಿ ನಿಷ್ಕ್ರಿಯವಾಗಿತ್ತು. ಬಾಯಿಗೆ ಹಾಕಿದ ತುತ್ತು ಗಂಟಲೊಳಗೆ ಇಳಿಯಲು ಹರಸಾಹಸ ಮಾಡಬೇಕು!

ವ್ಯವಸ್ಥಾಪಕರಿಗೆ ನರಸಿಂಹಲುರವರ ಮನಃಸ್ಥಿತಿ ಅರ್ಥವಾಗಿತ್ತು. ಬೇಕಾದರೆ ಕಾರ್ಯಕ್ರಮ ರದ್ದುಪಡಿಸೋಣವೆಂದೂ ಹೇಳಿದರವರು. ಆದರೆ ನರಸಿಂಹಲು ಅದಕ್ಕೊಪ್ಪಲಿಲ್ಲ. ಈ ಕಾರ್ಯಕ್ರಮ ನಡೆಯಲೇಬೇಕು. ತಾನು ನಂಬಿದ ದೈವ, ಕೈಹಿಡಿದು ನಡೆಸಿದ ಗುರು – ಇಬ್ಬರನ್ನೂ ಸ್ಮರಿಸಿಕೊಂಡು ವೇದಿಕೆ ಹತ್ತಿದರು. ನರಸಿಂಹಲು ಕಣ್ತುಂಬಿ ಬರುತ್ತಿತ್ತು. ಆದರೆ ಮನಸ್ಸು ಗಟ್ಟಿಯಾಗಿತ್ತು. ತನ್ನ ಅಂತಃಶಕ್ತಿಗೆ ಶರಣಾಗಿ ಕುಳಿತು ಕ್ಲಾರಿಯೋನೆಟ್ ಸರಿಪಡಿಸಿಕೊಂಡು ಬಾಯಿಗೆ ಇಟ್ಟರು. ಕಣ್ಣುಗಳು ಮುಚ್ಚಿದವು. ನಾದಗಂಗೆ ಹರಿಯತೊಡಗಿತು.

ಹತ್ತು ನಿಮಿಷಗಳ ನಂತರ ಕಣ್ಣು ತೆರೆದ ನರಸಿಂಹಲುರವರಿಗೆ ಕಂಡಿದ್ದು ಶ್ರೋತೃಗಳ ತನ್ಮಯತೆ ತುಂಬಿದ ಮೆಚ್ಚುಗೆಯ ನೋಟ. ಸಧ್ಯ! ತನ್ನ ಕಾರ್ಯಕ್ರಮ ಕಳೆಗುಂದಲಿಲ್ಲವಲ್ಲ! ಮತ್ತೆ ಮುಂದುವರಿಯಿತು ಸಂಗೀತ.

ಕಛೇರಿ ಮುಕ್ತಾಯವಾದ ನಂತರ ಸ್ವಾಮಿಗಳು ಮಾತನಾಡಿದರು.

"ಈ ದಿನ ತಮ್ಮ ಪ್ರೀತಿಯ ವಾದ್ಯವನ್ನು ಕಳೆದುಕೊಂಡ ವಡವಾಟಿಯವರ ಹನಿಗಟ್ಟಿದ್ದ ಕಣ್ಣುಗಳನ್ನು ನೋಡಿದ ನಮಗೆ ಇಂದಿನ ಸಂಗೀತ ಕಾರ್ಯಕ್ರಮ ಅಷ್ಟು ಚೆನ್ನಾಗಿ ಮೂಡಲಾರದೇನೋ ಅನ್ನುವ ಸಂಶಯವಿತ್ತು ಆದರೆ ಹಾಗಾಗಲಿಲ್ಲ. ತಮ್ಮೆಲ್ಲ ತಳಮಳ-ದುಗುಡಗಳನ್ನು ಹತ್ತಿಕ್ಕಿಕೊಂಡು ಈ ದಿನ ವಡವಾಟಿಯವರು

ಎಂದಿನಂತೆಯೇ ಜೀವತುಂಬಿದ ಕಾರ್ಯಕ್ರಮ ನೀಡಿ ನಮಗೆಲ್ಲ ದೈವೀಕ ಅನುಭವ ನೀಡಿದರು. ಕಲೆಯಲ್ಲಿ ನಿಷ್ಠೆಯಿಂದ ಸಾಧನೆ ಮಾಡಿದ ಸಾಧಕರ ಪರಿಯೇ ಹೀಗೆ ಎಂಬ ಸತ್ಯದ ಅನುಭವ ಮತ್ತು ಅರಿವು ಇಲ್ಲಿ ಆಯಿತು."

–ಸಾಕಷ್ಟು ಕಲಾವಿದರು, ನಟರು ತಮ್ಮ ಆಪ್ತರನ್ನು ಕಳೆದುಕೊಂಡ ದಿನವೇ ತಾವು ಒಪ್ಪಿಕೊಂಡ ಕಾರ್ಯಕ್ರಮವನ್ನು ವ್ಯತ್ಯಯ ಬಾರದಂತೆ ತಮ್ಮ ಅಂತರಾಳದ ನೋವು ಕಾರ್ಯಕ್ರಮದ ಮೇಲೆ ಪರಿಣಾಮ ಬೀರದಂತೆ ಮಾಡಿರುವ ಉದಾಹರಣೆ ಗಳಿವೆ. ವೇದಿಕೆಯ ಮೇಲೆ ನಡೆಯುವುದು ಕಲೆಯ ಪೂಜೆ.

"ನಾಟಕದ ನಿಜವನರಿವುದು ನೇಪಥ್ಯಮಂ ಪೊಕ್ಕ ಮೇಲಲ್ತೆ!"–ಕುವೆಂಪು ರವರ 'ಶೂದ್ರತಪಸ್ವಿ' ನಾಟಕದ ಮೂರನೆಯ ದೃಶ್ಯದಲ್ಲಿ ಶ್ರೀರಾಮ ಅನ್ನುವ ಮಾತಿದು.

ನಾಟಕ ಮುಗಿದಿತ್ತು. ವೇದಿಕೆಯಿಂದ ನರಸಿಂಹಲುರವರು ನೇಪಥ್ಯಕ್ಕೆ ಮರಳಿದರು. ಮತ್ತೆ ಅಗಲಿದ ಗೆಳತಿಯ ನೆನಪು, ಚಡಪಡಿಕೆ.

ಊಟವಾಯಿತು, ತಮಗಾಗಿ ಸಿದ್ಧವಾಗಿದ್ದ ಕೋಣೆಗೆ ನರಸಿಂಹಲು ಮಲಗಲು ತೆರಳಿದರು. ಅತ್ತಿತ್ತ ಬೋನಿನೊಳಗಿನ ಹುಲಿಯಂತೆ ಅಡ್ಡಾಡಿದರು. ತಮಗಾಗಿ ಹಾಸಿದ ಹಾಸಿಗೆಯ ಮೇಲೆ ಕುಳಿತರು.... ಬಿದ್ದುಕೊಂಡರು. ಕಣ್ಣು ಮುಚ್ಚಿ ನಿದ್ದೆಮಾಡಲೆತ್ನಿಸಿದರು. ಆದರೆ ಅಲ್ಲಿ ನಿದ್ದೆ ಎಲ್ಲಿದೆ! ಮತ್ತೆ ಕಣ್ತೆರೆದು ಅಂಗಾತ ಮಲಗಿ ಸೂರಿನ ಕಡೆ ದಿಟ್ಟಿಸುತ್ತಾ ತಮ್ಮ ಕ್ಲಾರಿಯೋನೆಟ್ಟನ್ನು ಅಲ್ಲಿ ಹುಡುಕ ಲಾರಂಭಿಸಿದರು.

ಆ ಕೋಣೆಯಲ್ಲಿ ಇವರ ಜೊತೆಗೆ ಇನ್ನೊಬ್ಬ ವ್ಯಕ್ತಿ ಇದ್ದರು. ನರಸಿಂಹಲು ರವರ ಪರಿಚಿತರೇ. ಇವರು ನರಸಿಂಹಲುರವರ ತೊಳಲಾಟ, ಮಿಡುಕಾಟ, ಖಿನ್ನತೆ –ಎಲ್ಲವನ್ನೂ ಗಮಸುತ್ತಿದ್ದರು. ಎಷ್ಟು ಹೊತ್ತಾದರೂ ನರಸಿಂಹಲುರವರು ನಿದ್ರೆ ಬಾರದೆ ಚಡಪಡಿಸುತ್ತಿದ್ದುದನ್ನು ಕಂಡು ಅವರಿಗೆ ತಡೆಯಲಾಗಲಿಲ್ಲ.

"ನರಸಿಂಹಣ್ಣಾವ್ರೆ, ಏನಿದು! ಕಳೆದು ಹೋದ ಒಂದು ಕ್ಲಾರಿಯೋನೆಟ್ಟಿ ಗೋಸ್ಕರ ಇಷ್ಟೆಲ್ಲ ಒದ್ದಾಡ್ತಾ ಇದ್ದೀರಲ್ಲ! ಅಂಗಡಿಗೆ ಹೋಗಿ ಬೇರೆ ಕ್ಲಾರಿಯೋನೆಟ್ ಕೊಂಡುಕೊಂಡರಾಯಿತು. ಅದಕ್ಕೆ ಯಾಕೆ ಇಷ್ಟು ಚಿಂತೆ ಮಾಡಬೇಕು? ಈಗ ಆರಾಮಾಗಿ ಮಲಗಿ."

ಅವರ ಮಾತು ಕೇಳಿದ ನರಸಿಂಹಲುರವರಿಗೆ ಅದೆಂತಹ ಕೋಪ ಬಂತೋ! ತಿಮ್ಮ ಕವಿಯ ರಾಮಾಯಣದಲ್ಲಿ ವರ್ಣಿಸಿದಂತೆ "ಪೊರೆಯುಗಿದುರಗನಂತೆ" ಉರಿದೆದ್ದರು.

"ರೀ ಕುಂವೀಯವರೆ, ದುಡ್ಡು ಕೊಟ್ಟರೆ ಈ ಪ್ರಪಂಚದಲ್ಲಿ ಏನು ಬೇಕಾದ್ರೂ ಸಿಗುತ್ತೆ. ಇನ್ನೊಂದು ಕ್ಲಾರಿಯೋನೆಟ್ಟೂ ಸಿಗುತ್ತೆ. ಆದರೆ ನನ್ನ ಆ ಕಳೆದು ಹೋದ ವಾದ್ಯದ ಮೇಲಿನ ಪ್ರೀತಿ ಸಿಗುತ್ತೇನ್ರೀ? ಏನು ಮಾತಾಡ್ತೀರಿ ನೀವು! ಇಷ್ಟೂ ತಿಳಿಯಲ್ವಾ ನಿಮಗೆ? ಎಂಥಾ ಸಾಹಿತಿಗಳುರೀ ನೀವು?"

– ಗೊತ್ತಾಗಲಿಲ್ಲವೇ ಆ ವ್ಯಕ್ತಿ ಯಾರು ಎಂದು! ಸಾಹಿತ್ಯ ಲೋಕದಲ್ಲಿ ಕುಂವೀ ಎಂದು ಹೆಸರಾದ ಶ್ರೀ ಕುಂ.ವೀರಭದ್ರಪ್ಪನವರು, ವಡವಾಟಿಯವರ ಹತ್ತಿರದ ಗೆಳೆಯರಲ್ಲಿ ಒಬ್ಬರು.

ಕುಂವೀಯವರಿಗೆ ತಮ್ಮ ಪ್ರಮಾದದ ಅರಿವಾಗಿತ್ತು. ನರಸಿಂಹಲು ರೇಗಿದ್ದಕ್ಕೆ ಪ್ರತಿಯಾಗಿ ಅವರು ರೇಗಲಿಲ್ಲ, ಅವರಿಗೆ ಅರ್ಥವಾಗಿತ್ತು ಈ ತೊಳಲಾಟದ ಹಿಂದಿನ ಪ್ರೀತಿ.

ಬಹುಶಃ ಈ ಘಟನೆ ಕುಂವೀಯವರನ್ನು ತುಂಬಾ ಕಾಡಿರಬೇಕು. ಆ ಮನಮಂಥನದ ಫಲ ಸ್ವರೂಪವಾಗಿ ಅವರಿಂದ ಒಂದು ಕಥೆ ರೂಪುಗೊಂಡಿತು. ನುರಿತ ಕಥೆಗಾರರಲ್ಲವೇ ಅವರು! ಓದುಗರ ಮೆಚ್ಚುಗೆ ಪಡೆದದ್ದಷ್ಟೇ ಅಲ್ಲದೆ (ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು ಈ ಕಥೆ) ಈಗ ಮೈಸೂರು ವಿಶ್ವವಿದ್ಯಾಲಯದ ಎರಡನೆಯ ಬಿ.ಎ.ತರಗತಿಗೆ ಈ ಕಥೆ ಒಂದು ಪಠ್ಯವಾಗಿ ಇದೆ. ಅದರ ಹೆಸರು "ವಡವಾಟಿಯೂ ಕ್ಲಾರಿಯೋನೆಟ್ಟೂ" ಎಂದು.

ಈ ಕತೆಯಲ್ಲಿ ಅವರು ಮೇಲಿನ ಘಟನೆ ಹೇಳಿ, ವಡವಾಟಿಯವರು ತಮಗೆ ಬೈದದ್ದನ್ನೂ ವಿವರಿಸಿ ಕೊನೆಗೆ ಹೇಳುತ್ತಾರೆ. "ವಡವಾಟಿಯವರಿಂದ ಬೈಸಿಕೊಂಡ ಮೇಲೆಯೇ ನನಗೆ ದೇವನೂರರ (ಅಂದರೆ ದೇವನೂರು ಮಹಾದೇವರ) ಸಾಹಿತ್ಯ ಅರ್ಥವಾಗತೊಡಗಿದ್ದು"

ನಿಜ "ಒಡಲಾಳ"ದ ಸಾಕವ್ವನಿಗೆ ಅವಳ ಕೋಳಿಯೇ ಇಡೀ ಜಗತ್ತು ಎನ್ನಿಸಿದಂತೆ ವಡವಾಟಿಯವರ ಒಡಲಾಳದಲಿ ಕ್ಲಾರಿಯೋನೆಟ್ ಮನೆಮಾಡಿತ್ತು.

ಮುಂದೆ ಇನ್ನು ಪತ್ತೇದಾರ "ಪೀಪಿ" ಅಣ್ಣನ ಕಥೆ.

"ಪೀಪಿ" ಅಣ್ಣ ಎಂಬ ಹೆಸರು ಬೇರಾರದೂ ಅಲ್ಲ ವಡವಾಟಿಯವರದೇ. ಬೇರೆಯಾರು ಇಟ್ಟಿದ್ದೂ ಅಲ್ಲ, ಇದೀಗ ನಾನೇ ಒಂದು ಲಘು ಹಾಸ್ಯದ ಕ್ಷಣದಲ್ಲಿ ನನಗೆ ಸ್ಫುರಿಸಿ ಇಟ್ಟ ಹೆಸರದು. ಪೀಪಿ ಅಂದರೆ ಕ್ಲಾರಿಯೋನೆಟ್. ಈ ಹೆಸರು ನೆನಪಿಗೆ ಬರಲೊಂದು ಕಾರಣವಿದೆ.

ಬನಾರಸ್, ವಾರಾಣಾಸಿ ಅಥವಾ ಕಾಶಿ ವಿಶ್ವನಾಥನ ದೇವಾಲಯಕ್ಕಾಗಿ ಅಷ್ಟೇ ಅಲ್ಲ, ಅದ್ಭುತ ಶಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್ ಸಾಹೇಬರು ವಾಸಿಸುತ್ತಿದ್ದರು ಎಂಬುದಕ್ಕಾಗಿಯೂ ಸಹ ಪ್ರೇಕ್ಷಣೀಯ. ಖಾನ್ ಸಾಹೇಬರು ಬದುಕಿದ್ದಾಗ ಅವರನ್ನು ನೋಡಲು ವಿವಿಧ ಎಡೆಗಳಿಂದ ಜನ ಬರುತ್ತಿದ್ದರು. ಅಲ್ಲಿ ಒಂದು ಮುಸಲ್ಮಾನರ ಮೊಹಲ್ಲಾದಲ್ಲಿ ಖಾನ್ ಸಾಹೇಬರ ಮನೆ. ಅವರ ನೆರೆ ಹೊರೆಯವರಿಗೆ ಈ ಜಗತ್ಪ್ರಸಿದ್ಧ ವ್ಯಕ್ತಿಯ ಮಹತ್ವವೇ ತಿಳಿದಿರಲಿಲ್ಲ, ಅಥವಾ ತಿಳಿದೂ ಅಲಕ್ಷಿಸುತ್ತಿದ್ದರು. ಬಂದವರು ಉಸ್ತಾದರ ಪೂರ್ತಿ ಹೆಸರು ಹೇಳಿದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. "ಶಹನಾಯಿ ವಾದಕರು" ಎಂದು ತಿಳಿಹೇಳಿದರೆ "ವೋ ಪೀಪೀ ಬಜಾನೇವಾಲಾ!" ಎಂದು ಉದ್ಗರಿಸಿ ಮನೆ ತೋರಿಸುತ್ತಿದ್ದರಂತೆ.

ಮೇಲಿನ ಸಂಗತಿ ನೆನಪಾಗಿಯೇ ನರಸಿಂಹಲುರವರಿಗೆ "ಪೀಪಿ" ಅಣ್ಣ ಎಂದು ಹೆಸರಿಟ್ಟಿದ್ದು. ಇರಲಿ, ಈಗ ಅವರು ತಮ್ಮ ಕಳೆದುಹೋದ ಗೆಳತಿಯನ್ನು ಹುಡುಕಲು ಹೊರಟ ಕತೆ ಕೇಳಿ.

ಮೂರು ದಿನಗಳ ನಂತರ ಕೊಟ್ಟೂರಿನಿಂದ ಹೊರಡುವ ಮುನ್ನ ನರಸಿಂಹಲುರವರು ದೇವರ ದರ್ಶನಮಾಡಿದರು. "ನೋಡಪ್ಪಾ ದೇವರೆ, ನನ್ನ ಕ್ಲಾರಿಯೋನೆಟ್ ಸಿಗಲಿಲ್ಲ ಅಂದರೆ ನಿನ್ನಲ್ಲಿಗೆ ಬಂದು ಕಾರ್ಯಕ್ರಮ ನೀಡುವ ಸಂದರ್ಭದಲ್ಲಿ ಕಳಕೊಂಡೆ ಅಂತ ಎಲ್ಲರ ಹತ್ತಿರವೂ ಹೇಳಿಕೊಂಡು ಬರ್ತೀನಿ. ಅದೃಷ್ಟವಶಾತ್ ಸಿಕ್ಕಿದರೆ ಪುನಃ ನಿನ್ನಲ್ಲಿಗೆ ಬಂದು ಸಂಗೀತಸೇವೆ ಮಾಡ್ತೀನಿ" ..... ಒಂದೇ ಒಂದು ಸಂಭಾಷಣೆಯಲ್ಲಿ ಎಚ್ಚರಿಕೆ ಮತ್ತು ಬಹುಮಾನದ ಸೂಚನೆ –ಎರಡೂ ಇದ್ದವು. ಆ ದೇವರಿಗೆ ಎಚ್ಚರಿಕೆಯ ಭಯವೋ ಬಹುಮಾನದ ನಿರೀಕ್ಷೆಯೋ ತಿಳಿದಿಲ್ಲ ಈಗಲೂ. ಆದರೆ ಮುಂದೆ ಏನಾಯಿತು ಅಂದರೆ.....

ಅಲ್ಲಿಂದ ಹೊರಟ ವಡವಾಟಿಯವರು ರಾಯಚೂರಿಗೆ ಮರಳಲು ಬಸ್ ಹತ್ತಿದರು. ಜೊತೆಯಲ್ಲಿ ತಬಲಾವಾದಕರು ಹಾಗೂ ಶಿಷ್ಯನಾದ ರಘುಪತಿ. ಇಬ್ಬರಿಗೂ ನರಸಿಂಹಲುರವರ ಬಗ್ಗೆ ಕೌತುಕ. ಇವರೇನು ದೇವರ ಮುಂದೆ ಹಾಗೆ ಹೇಳಿದ್ದು! ಏನಾಗಿದೆ ಇವರಿಗೆ! ಪರಸ್ಪರ ಇಬ್ಬರೂ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ವಡವಾಟಿಯವರಿಗೆ ಇದ್ಯಾವುದರ ಪರಿವೆಯೂ ಇಲ್ಲ. ಅವರಾಯಿತು, ಅವರ "ಕ್ಲಾರಿಯೋನೆಟ್" ಜಪವಾಯಿತು.

ಹೊಸಪೇಟೆಗೆ ಬಸ್ ಬಂದು ನಿಂತಿತು. ಗುರು–ಶಿಷ್ಯರಿಬ್ಬರೂ ಇಳಿದು ಪೋಲೀಸ್ ಸ್ಟೇಷನ್‌ಗೆ ತೆರಳಿದರು. ಅಲ್ಲಿ ಸಬ್‌ಇನ್ಸ್‌ಪೆಕ್ಟರ್‌ನನ್ನು ವಿಚಾರಿಸಿದರು. ಪಾಪ! ಆತನಾದರೂ ಏನು ಮಾಡಿಯಾನು!

ಸಾರ್, ಬನ್ನಿ ಸಾರ್! ನಿಮ್ ಹೆಸರು ಕೇಳಿ ಬಲ್ಲೆ ನಾನು. ನಿಮ್ಮ ಕ್ಯಾಸೆಟ್‌ಗಳನ್ನು ಕೇಳಿದ್ದೀನಿ. ಕೂತ್ಕೊಳ್ಳಿ" – ಎಸ್ಸೈ ಹೇಳಿದರು.

– "ಸಾರ್, ಈ ಊರು ಇದ್ಯಲ್ಲ, ಅದ್ರಲ್ಲೂ ಬಸ್ ಸ್ಟ್ಯಾಂಡ್ ಇದ್ಯಲ್ಲ, ಕಳ್ಳಕಾಕರಿಗೆ ಇಡೀ ಹೊಸ್ಪೇಟೆಯಲ್ಲೇ ಜಗತ್ಪ್ರಸಿದ್ಧ. ಅಲ್ಲಿರುವ ಎಲ್ಲ ಕಳ್ಳರನ್ನೂ, ಅಂದರೆ ಸುಮಾರು ನಲವತ್ತು ಜನರನ್ನು ಠಾಣೆಗೆ ತಂದು ಹೊಡ್ದು ಬಡ್ದು ಮಾಡಿದ್ವಿ. ಆದ್ರೆ ಅವ್ರು ಯಾರೂ ನಿಮ್ಮ ಕ್ಲಾರಿಯೋನೆಟ್ ಕದ್ದಿಲ್ಲ ಅಂತ ನಮಗೆ ಖಾತ್ರಿಯಾಯ್ತು ಸಾರ್! ಮತ್ತಿನ್ಯಾರು ಕದ್ದಿರಬಹುದು ಅಂತ ಯೋಚ್ನೆ ಮಾಡ್ತಿದೀವಿ".

ಹೊಸಪೇಟೆಯೇ ಜಗತ್ತಾಗಿರುವ ಎಸ್ಸೈಗೆ ಆ ಕಳ್ಳರು ಜಗತ್ಪ್ರಸಿದ್ಧರಾಗಿರು ವುದೇನೊ ಅತಿಶಯವಲ್ಲ ಬಿಡಿ!

ನಲವತ್ತು ಜನ ಕಳ್ಳರೂ ನಿರಪರಾಧಿಗಳಾದರೆ ಈ ನಲವತ್ತೊಂದನೆಯ ಕಳ್ಳ ಯಾರಿರಬಹುದು! ನೋಡಿ, ಅವನು ಎಂಥವನಿರಬಹುದು! ಠಾಣೆಯಲ್ಲಿ ತನ್ನ ವಿವರ ನೀಡಿ ಹೆಸರು ವಿಳಾಸ ನೋಂದಾಯಿಸದೆ ಕಳ್ಳತನಕ್ಕಿಳಿದಿದ್ದಾನೆಂದರೆ!

"ಆಯ್ತು ಬಿಡಿ ಸಾಹೇಬರೆ! ನಿಮ್ಮ ಪ್ರಯತ್ನ ನೀವು ಮಾಡಿದಿರಿ ಇನ್ನು ಅವನಿಚ್ಛೆ! ಬರ್ತೀವಿ, ತುಂಬಾ ಥ್ಯಾಂಕ್ಸ್.

ನರಸಿಂಹಲುರವರು ಮರಳಿ ಬಸ್ ಸ್ಟಾಂಡಿಗೆ ಶಿಷ್ಯನೊಂದಿಗೆ ಬಂದರು. ಇಬ್ಬರಿಗೂ ಟಿಕೆಟ್ ಸಹ ತೆಗೆದುಕೊಂಡು ರಾಯಚೂರು ಬಸ್ ಹತ್ತಿದರು. ಸೀಟಿನ ಮೇಲೆ ಕುಳಿತು ಚಿಂತಿಸುತ್ತಿರುವಾಗ ಥಟ್ಟನೆ ಏನೋ ಒಂದು ಯೋಚನೆ ಹೊಳೆಯಿತು. ಮತ್ತೆ ಇಬ್ಬರೂ ಇಳಿದರು. ಕಂಡಕ್ಟರನನ್ನು ಟಿಕೇಟ್ ವಾಪಸ್ ತೆಗೆದುಕೊಂಡು ಹಣ ನೀಡಲು ಕೇಳಿದರು. ಅವನು ಒಪ್ಪಲಿಲ್ಲ.

"ಸರಿ, ಬೇಡಬಿಡು ನಿನ್ನ ಟಿಕೆಟ್ ಹಣ ಯಾರಿಗೆ ಬೇಕು"– ಟಿಕೆಟ್ ಹರಿದೆಂಗೆದರು. ಕಳೆದುಹೋದ ಕ್ಲಾರಿಯೋನೆಟ್‌ನ ಎದುರು ಈ ಹಣದ ಬೆಲೆಯೇನು! ಜುಜುಬಿ.

ಇಬ್ಬರೂ ಬಸ್‌ಸ್ಟಾಂಡಿನಿಂದ ಹೊರಬಂದು ಪೇಟೆಯ ಕಡೆ ಸಾಗಿದರು. ಅಲ್ಲಿ ಯಾರುಯಾರನ್ನೋ ವಿಚಾರಿಸಿದರು–

'ಏನಪ್ಪಾ, ಈ ಊರಲ್ಲಿ ಕ್ಲಾರಿಯೋನೆಟ್ ಬಾರಿಸೋರು ಯಾರಾದರೂ ಇದಾರಾ?".

ಒಬ್ಬ ಹುಡುಗ ಹೇಳಿದ–

"ಸಾರ್ ಇಲ್ಲಿ ಬ್ಯಾಂಡ್‌ಸೆಟ್‌ಗಳೂ ಬಹಳ ಇದೆ, ಕ್ಲಾರಿಯೋನೆಟ್ ಬಾರಿಸೋರೂ ಇದಾರೆ. ನಾಟಕಗಳಿಗೆ ಬಾರಿಸೋರೂ ಇದ್ದಾರೆ".

'ನಾಟಕಗಳಿಗೆ ಬಾರಿಸೋರು ಯಾರಿದ್ದಾರೆ ತಮ್ಮ?"

"ಇದ್ದಾರೆ ಸಾರ್, ಹನುಮಂತಪ್ಪ ಅಂತ" ಆ ಹುಡುಗ ಅವರು ಇದ್ದ ಬೀದಿ, ಮನೆಯ ಗುರುತು ಹೇಳಿದ.

ಹನುಮಂತಪ್ಪನವರ ಮನೆ ಪತ್ತೆಯಾಯಿತು. ಮನೆ ಬಾಗಿಲ ಬಳಿ ಒಬ್ಬ ತರುಣ ನಿಂತಿದ್ದ.

"ಏನಪ್ಪಾ, ಹನುಮಂತಪ್ಪನವರ ಮನೆ ಇದೇನಾ?"

"ಹೌದು ಸರ್".

"ಇದ್ದಾರಾ ಹನುಮಂತಪ್ಪನವರು?"

"ಇಲ್ಲ. ಅವರು ಊರಲಿಲ್ಲ. ಪರಸ್ಥಳಕ್ಕೆ ಹೋಗಿದ್ದಾರೆ".

ಏನು ಮಾಡುವುದು ಈಗ! ಇನ್ನೇನು ಸಿಕ್ಕಿತು...ಅನ್ನುವಾಗ ಮತ್ತೆ ನಿರೀಕ್ಷೆ ಸುಳ್ಳಾಗಬೇಕೇನು!...ನರಸಿಂಹಲು ಮತ್ತು ರಘುಪತಿ ನಿಂತಲ್ಲೇ ಯೋಚನಾ ಕ್ರಾಂತರಾದರು.

"ಯಾಕೆ ಸಾರ್, ಏನಾದರೂ ಕೆಲಸವಿತ್ತೇನು? ನಾನು ಅವರ ಮಗ, ಹೇಳಿ, ಏನು ಬೇಕಿತ್ತು?".

"ನನ್ನದೊಂದು ಕ್ಲಾರಿಯೋನೆಟ್ ಕಳವಾಗಿ ಬಿಟ್ಟಿದೆಯಪ್ಪ! ಬಸ್‌ನಲ್ಲಿ. ಈ ಊರಿನ ಬಸ್‌ಸ್ಟ್ಯಾಂಡ್‌ನಲ್ಲಿ ಅದು ಇನ್ಯಾರಿಗೆ ಉಪಯೋಗಕ್ಕೆ ಬಂದೀತು! ಆ ಕಳ್ಳ ಅದನ್ನ ಮಾರೋದಿದ್ರೆ –ಅದನ್ನ ಬಾರಿಸುವಂಥವ್ರಿಗೇ ಮಾರಿರಬೇಕು ಅಂದ್ಕೊಂಡು ಅಂಥವ್ರನ್ನ ಹುಡುಕ್ಕೊಂಡು ಬಂದೆ"

"ನಿಮ್ಮ ಹೆಸರೇನು ಸಾರ್?"

'ನರಸಿಂಹಲು ವಡವಾಟಿ"

ಹೆಸರು ಹೇಳಿದ ಮರುಕ್ಷಣವೇ ಆಹುಡುಗ ಥಟ್ಟನೆ ರಸ್ತೆಗಿಳಿದು ವಡವಾಟಿಯವರ ಮುಂದೆ ಸಾಷ್ಟಾಂಗವೆರಗಿದ್ದನು.

"ಅಯ್ಯೋ ಏನಪ್ಪಾ ಇದು! ಏಳು ಮೇಲೆ"

"ಸಾರ್ ನೀವು ನಮಗೆ ಗುರುಸಮಾನರು, ದೈವಸಮಾನರು. ನಿಮ್ಮ ಬಗ್ಗೆ ಬಂದ ಸುದ್ದಿಗಳ ಪೇಪರ್ ಕಟಿಂಗ್ಸ್ ಎಲ್ಲ ನಾನು ಸಂಗ್ರಹ ಮಾಡಿ ಇಟ್ಕೊಂಡಿದೀನಿ".

"ಅದು ಸರೀನಪ್ಪಾ! ನಿನ್ನ ಅಭಿಮಾನ ಮೆಚ್ಚಬೇಕಾದ್ದೇ. ಆದರೆ ನನ್ ಕ್ಲಾರಿಯೋನೆಟ್ ಸಮಸ್ಯೆ ತಲೆ ತಿನ್ತಾ ಇದ್ಯಲ್ಲಪ್ಪ! ಇದಕ್ಕೇನು ಮಾಡೋದು?".

"ಸಾರ್ ನಿಮ್ಮ ಕ್ಲಾರಿಯೋನೆಟ್ ನಮ್ಮ ಮನೆಯಲ್ಲಿದೆ. ನಾವು ಖರೀದಿ ಮಾಡಿದೀವಿ".

ನಂಬಬಹುದೇ ಇದನ್ನು! ಜಾನಪದ ಕಥೆಯೊಂದರಲ್ಲಿ ಶಾಪದಿಂದ ಕಲ್ಲಾಗಿದ್ದ ರಾಜಕುಮಾರನ ಮೇಲೆ ಅವನ ತಂಗಿ ಜೀವಜಲ ಸಿಂಪಡಿಸಿದಾಗ ಮರಳಿ ಚೈತನ್ಯ ಪಡೆದಂತೆ...ಇದು ಕಥೆಯೋ ಕನಸೋ ಅಲ್ಲ ತಾನೇ!

"ನಿಜವಾಗಿಯೂ!"

"ಹೌದು ಸಾರ್, ಬೇರೆ ಯಾರಾದ್ರೂ ಬಂದು ಕೇಳಿದ್ದರೆ ನಾನು ಹೇಳ್ತಾ ಇರ್ಲಿಲ್ಲ. ಆದ್ರೆ, ನೀವು, ದೊಡ್ಡೋರು ಮನೆಯ ಮುಂದೆ ನಿಂತು ಕೇಳಿದಾಗ ನನಗೆ ಸುಳ್ಳು ಹೇಳಕ್ಕೆ ಮನಸ್ಸಾಗಲಿಲ್ಲ ಸಾರ್, ನಮ್ಮ ಹತ್ತಿರ ಇದೆ ಅದು. ನಾವು ಅಂದುಕೊಂಡಿವಿ, ಇದು ಯಾರೋ ದೊಡ್ಡವರದ್ದೇ ಅಂತ. ಯಾಕಂದ್ರೆ ಪೆಟ್ಟಿಗೆ ತೆರೆದಕೂಡಲೆ ಒಳಗೆ ಅದನ್ನ ಇಟ್ಟಿದ್ದ ಅಚ್ಚುಕಟ್ಟು, ಫೋಟೋ – ಎಲ್ಲ ನೋಡಿ ಇದು ಸಾಮಾನ್ಯರ ವಾದ್ಯ ಅಲ್ಲ. ಇಂತಹ ವಾದ್ಯಕ್ಕೆ ನಾವು ಬಾಯಿ ಹಚ್ಚಬಾರದು–ಅಂತ ಹಂಗೇ ದೇವರ ಮುಂದೆ ಇಟ್ಟೇವಿ!."

ಹುಡುಗ ನರಸಿಂಹಲುರವರನ್ನು ಒಳಗೆ ಕರೆದೊಯ್ದು ಪೆಟ್ಟಿಗೆ ತೋರಿಸಿದನು. ನರಸಿಂಹಲುರವರು ಪೆಟ್ಟಿಗೆ ತೆರೆದುನೋಡಿದರು. ಅವರ ಗೆಳತಿ ಒಳಗಿನಿಂದ ಮೌನದ ಭಾಷೆಯಲ್ಲಿ "ಬಾ ಗೆಳೆಯ" ಅಂದಳು.

"ಏನಮ್ಮಾ ಣೀಮ! ನಾನು ಯಾವ ತಪ್ಪು ಮಾಡಿದೆ ಅಂತ ನನ್ನಿಂದ ಇಷ್ಟು ದಿನ ದೂರವಿದ್ದೆ!".

ಜೀವಂತ ವ್ಯಕ್ತಿಯೊಬ್ಬರನ್ನು ಕೇಳುವಂತೆ ಕಳಕಳಿಯಿಂದ ಕೇಳಿದರು ನರಸಿಂಹಲು ಕಣ್ಣುಗಳು ತುಂಬಿದ್ದವು.

ಹನುಮಂತಪ್ಪನವರ ಮನೆಯವರಿಗೆಲ್ಲ ದಿಗ್ಭ್ರಮೆ ಏನಿದು! ಒಂದು ಕ್ಲಾರಿಯೋನೆಟ್‌ನ ಸಲುವಾಗಿ ಈತ ಇಷ್ಟು ಭಾವುಕರಾಗಿದ್ದಾರಲ್ಲ!...

ಹನುಮಂತಪ್ಪನವರ ಮಗನ ಕಣ್ಣುಗಳಲ್ಲೂ ನೀರು, ಎಂಥಾ ದೊಡ್ಡ ಮನುಷ್ಯ, ಎಳೆಮಗುವಿನಂಥಾ ಮನಸ್ಸು! ಕಳೆದ ಆಟಿಗೆ ಮರಳಿಸಿಕ್ಕಾಗ ಅಳು ನಿಲ್ಲಿಸಿ ನಗುವ ಮಗುವಿನಂತೆ!

ಸಂಭ್ರಮದ ಉತ್ಕಟತೆಯ ಕ್ಷಣಗಳು ಕಳೆದ ನಂತರ ಹುಡುಗನನ್ನು ನರಸಿಂಹಲು ಕೇಳಿದರು–

"ಎಷ್ಟು ಕೊಟ್ಟೆಯಪ್ಪಾ ಇದಕ್ಕೆ?"

"ಸಾರ್, ನನ್ನ ಹೆಂಡತಿಯ ಬೆಂಡೋಲೆ ಮಾರಿ ಬಂದ ಹಣದಲ್ಲಿ ಈ ವಾದ್ಯ ಖರೀದಿ ಮಾಡಿದೆ. ಒಂದು ಸಾವಿರ ರೂಪಾಯಿಕೊಟ್ಟೆ, ಬೆಂಡೋಲೆ ಮಾರಿದ್ದಕ್ಕೆ ಬಿಲ್ ಇಲ್ಲಿಯೇ ಇದೆ ನೋಡಿ ಸಾರ್"– ಹುಡುಗ ಬಿಲ್ ತೋರಿಸಿದನು.

ನರಸಿಂಹಲುರವರು ಜೇಬಿನಿಂದ ಹಣತೆಗೆದರು ಎರಡು ಸಾವಿರ ರೂಪಾಯಿ ಎಣಿಸಿದರು.

'ಆಗಲಪ್ಪಾ ತಗೋ ಇದನ್ನ, ನನ್ನ ವಾದ್ಯ ತಗೊಂಡು ಹೋಗ್ತೀನಿ, ಕೊಟ್ಟು ಬಿಡು."

"ಸಾರ್, ಎರಡು ಸಾವಿರ ಯಾಕೆ? ನಾನು ಕೊಟ್ಟಷ್ಟು ಹಣ ನನಗೆ ಬಂದರೆ ಸಾಕು.... ಒಂದು ಸಾವಿರ ಕೊಡಿಸಾರ್, ಈ ವಾದ್ಯ ನಿಮ್ಮದೇ".

"ಇರಲಿ, ನನಗೆ ಈ ವಾದ್ಯ ಸಿಕ್ಕಿದ ಖುಷಿಯ ಮುಂದೆ ಎರಡು ಸಾವಿರ ರೂಪಾಯಿ ಏನೂ ಅಲ್ಲ....ಇಟ್ಟುಕೋ"

ಹಣವನ್ನು ಒತ್ತಾಯಪೂರ್ವಕವಾಗಿ ಅವನ ಕೈಗಿತ್ತು ವಾದ್ಯದ ಪೆಟ್ಟಿಗೆ ಕೈಗೆತ್ತಿಕೊಂಡು ಗುರುಶಿಷ್ಯರಿಬ್ಬರೂ ಹೊರಟರು.

ಇಷ್ಟು ಹೊತ್ತೂ ಇದ್ದ ಖಿನ್ನತೆ ನೀಗಿ ಈಗ ಅಲ್ಲಿ ಉಲ್ಲಾಸ ತುಂಬಿತ್ತು. ಗುರುವಿಗೆ ಸಂಭ್ರಮ, ಶಿಷ್ಯನಿಗೆ ಸಮಾಧಾನ.

ನರಸಿಂಹಲುರವರು ಅಡಿಗಡಿಗೆ ಆ "ಆಟಗಾರ" ನಿಗೆ ಮನದಲ್ಲೇ ನಮಿಸಿದರು. ಕಸಿದುಕೊಂಡಿದ್ದ ವಾದ್ಯವನ್ನು ಕೊಟ್ಟೂರೇಶ್ವರ ಮರಳಿ ಕೊಟ್ಟಿದ್ದನು.

ಗುರುಶಿಷ್ಯರಿಬ್ಬರೂ ಮರಳಿ ಬಸ್ ಸ್ಟ್ಯಾಂಡಿಗೆ ಬಂದರು. ಬಸ್ ಹತ್ತಿದರು.– ರಾಯಚೂರಿಗಲ್ಲ, ಮರಳಿ ಕೊಟ್ಟೂರಿಗೆ, ಕೊಟ್ಟ ಮಾತು ಉಳಿಸಿಕೊಳ್ಳಬೇಕಲ್ಲ!

ಒಂದು ಮಾತು–ಪೆಟ್ಟಿಗೆಯಲ್ಲಿ ಗುರು ಜಂಬಲದಿನ್ನಿಯವರ ಛಾಯಾ ಚಿತ್ರವಿತ್ತು. ಮಾತೆ ಶಾರದೆಯ ಪಟ ಕಾಣಲಿಲ್ಲ, ಅದು ಇರಲಿಲ್ಲ. ಶೃಂಗೇರಿ ಮಠಕ್ಕೆ ಮತ್ತೊಮ್ಮೆ ಹೋದಾಗ ಶಾರದಾಂಬೆಯ ಪಟವನ್ನು ಮರೆಯದೆ ತರಬೇಕೆಂದು ಅಂದುಕೊಂಡರು ನರಸಿಂಹಲು.

ರಾಯಚೂರಿಗೆ ಮರಳಿದ ಮರುದಿನ ಅವರಿಗಾಗಿ ಒಂದು ಲಕೋಟೆ ಕಾದಿತ್ತು. ಅದನ್ನು ತೆರೆದರೆ ಅದರಲ್ಲಿ ಶಾರದಾಂಬೆಯ ಚಿತ್ರ, ಜೊತೆಗೆ ಶೃಂಗೇರಿ ಮಠದಿಂದ ಸಣ್ಣದೊಂದು ಪತ್ರ– "ತಮ್ಮ ಅಭೀಷ್ಟದಂತೆ ಶಾರದಾಂಬೆಯ ಚಿತ್ರವನ್ನು ಮತ್ತು ಪ್ರಸಾದವನ್ನು ಕಳಿಸಿರುತ್ತೇವೆ."

ಮಠದ ಮನ್ನಣೆ ಪಡೆದ ಆಸ್ಥಾನ ಸಂಗೀತಗಾರ ವಡವಾಟಿಯವರಿಗೆ ಹೀಗೊಂದು ಪತ್ರ ಬಂದರೆ ಅವರ ಮನಃಸ್ಥಿತಿ ಹೇಗಾಗಿರಬೇಡ!

❑

# ಗುರುವಿಗಾಗಿ ಕಾಣಿಕೆ – ಒಂದು ಶಾಲೆ ಕಟ್ಟಿದ್ದು

ಚರಣ 13

15-05-1986 ಬಸವ ಜಯಂತಿಯ ದಿನ.

ರಾಯಚೂರಿನ ಇತಿಹಾಸದಲ್ಲಿ ನೆನಪಿಡಬೇಕಾದ ಒಂದು ಕಾಲ ಘಟ್ಟ.. ರಾಯರಾಳಿ ಅರಿರಾಯರನ್ನು ಚೂರು ಮಾಡಿದರೂ ಮೂಲೆ ಗುಂಪಾದ ರಾಯಚೂರು ಈ ಘಟನೆಯಿಂದಾಗಿ ಮುಂದೊಮ್ಮೆ ದರ್ಶನೀಯ ಸ್ಥಳವಾಗ ಬಹುದು, ಸಾಗರದ "ಹೆಗ್ಗೋಡು" ಎಂಬ ಸಣ್ಣದೊಂದು ಹಳ್ಳಿ ಒಂದು ಸಾಂಸ್ಕೃತಿಕ ಕೇಂದ್ರವಾದಂತೆ. ಅಂದು ರಾಯಚೂರಿಯಲ್ಲೊಂದು ಸಂಗೀತ ಶಾಲೆ ಹುಟ್ಟಿತು.

ತನಗೆ ಸಂಗೀತದಾನ ಮಾಡಿದ ಗುರುವಿಗೆ ತಾನೇನಾದರೂ ಮಾಡಬೇಕಲ್ಲ!

*ಉಳ್ಳವರು ಶಿವಾಲಯ ಮಾಡುವರು,*
*ನಾನೇನ ಕಟ್ಟಿಸಲಿ ಬಡವನಯ್ಯ!.*

ಆದರೆ ಏನಾದರೂ ಮಾಡಲೇಬೇಕೆಂಬ ಛಲವೊಂದಿದೆಯಲ್ಲ! ಅದೊಂದು ಇದ್ದಲ್ಲಿ ಏನೂ ಬೇಕಾದರೂ ಮಾಡಬಹುದು. ಅದಕ್ಕೆ ಸಂಕಲ್ಪ ಬೇಕು.

ನರಸಿಂಹಲುರವರು ಸಂಕಲ್ಪ ಮಾಡಿದರು –ತನ್ನ ಗುರುವಿನ ಹೆಸರನ್ನು ಶಾಶ್ವತವಾಗಿ ಉಳಿಸಲು ರಾಯಚೂರಿನಲ್ಲಿ ಒಂದು ಸಂಗೀತ ಶಾಲೆ ಮಾಡಬೇಕು. ಅಲ್ಲಿ ಗುರು–ಶಿಷ್ಯ ಪರಂಪರೆಯಲ್ಲಿ ವಿದ್ಯಾದಾನ ಆಗಬೇಕು. ಅದೊಂದು ವಸತಿಶಾಲೆಯಾಗಿರಬೇಕು. ಆಸಕ್ತಿಯಿರುವ ಮಕ್ಕಳಿಗೆ ಹಣವಿಲ್ಲದೆಯೂ ಸಂಗೀತ ದಕ್ಕಬೇಕು –ಎಂದು.

1976ರಿಂದ ಮುಂದೆ ನರಸಿಂಹಲುರವರ ಹೆಸರು ಮೆಲ್ಲಮೆಲ್ಲಗೆ ಅರಳುವ ಹೂವಿನ ಪರಿಮಳವಾಯಿತು. ಮನೆಯ ಆರ್ಥಿಕ ಪರಿಸ್ಥಿತಿಯೂ ಸುಧಾರಿಸ ತೊಡಗಿತು. ಒಂದು ಸಣ್ಣ, ಅಂದರೆ ತೀರಾ ಸಣ್ಣ ಮನೆಯೊಂದನ್ನು ಕೊಂಡರು. ಶೀಟ್ ಛಾವಣಿಯ ಮನೆ ಅದು. ರಾಯಚೂರು ನಗರದ ಒಳಗೇ. ಮಾಡಿದ್ದ

ಸಣ್ಣ ಪುಟ್ಟ ಸಾಲಗಳನ್ನು ತೀರಿಸಿ ಕೈಯಲ್ಲಿ ಸ್ವಲ್ಪ ಹಣ ಸೇರತೊಡಗಿತ್ತು. ಶಾಲೆ ಮಾಡುವ ಆಸೆ ಇತ್ತಲ್ಲ! ಎಲ್ಲೋ ಒಂದು ಕಡೆ ಆ ಆಸೆಗೆ ಮೂರ್ತರೂಪ ಸಿಗಬೇಕಲ್ಲ! ಮೇಲೆ ಹೇಳಿದ ದಿನದಂದು ತಮ್ಮ ಉದ್ದೇಶಿತ ಶಾಲೆಯ ನಾಮ ಫಲಕ ಬರೆಯಿಸಿ ಮನೆಯಲ್ಲೇ ಇಟ್ಟು ತಮ್ಮ ಗುರುಗಳಿಂದ ಅದಕ್ಕೆ ಕರ್ಪೂರ ದೀಪಾರತಿ ಬೆಳಗಿಸಿ ಪ್ರಾರ್ಥನೆ ಮಾಡಿಸುವ ಮೂಲಕ ಪೂಜೆ ಮಾಡಿಸಿದರು. ಪೌರೋಹಿತ್ಯ ಪಂಡಿತ್ ಹುಣಸಿಗಿ ರಾಮಾಚಾರ್ಯ ಎಂಬುವರದು. ಅಂದು ಹುಟ್ಟಿತು – "ಸ್ವರಸಂಗಮ ಸಂಗೀತ ವಿದ್ಯಾ ಸಂಸ್ಥೆ."

ಕೂಸು ಹುಟ್ಟಿತ್ತು ಅಂದು, ಗುರುಗಳು ಹರಸಿದರು. ಹುಟ್ಟಿದ ಕೂಸನ್ನು ತೊಟ್ಟಿಗೆ ಎಸೆಯುವಂತಾಗಬಾರದಲ್ಲ!. ಅದಕ್ಕೊಂದು ನೆಲೆಬೇಕು. ತಾನು ಹುಟ್ಟಿದ ಮನೆಯಲ್ಲಿ ಆ ಮಗು ಬೆಳೆದು ಸ್ವಂತ ನೆಲೆ ಸಿಗುವ ತನಕ ತವರಿನ ಕೃಪಾಶ್ರಯದಲ್ಲಿ ಬೆಳೆಯಬಹುದು. ಬೆಳೆಯುತ್ತಲೂ ಇತ್ತು, ಮನೆಯಲ್ಲೇ. ಆದರೆ ಎಷ್ಟುದಿನ? ಶಾಲೆಗೊಂದು ನಿವೇಶನ ಬೇಡವೇ?

ಶಾಲೆಯ ಆರಂಭದ ಪೂಜೆಯ ನಂತರ ಶಿಷ್ಯನ ಮನೆಯಲ್ಲಿ ಚಹಾ ಕುಡಿಯುತ್ತ ಕುಳಿತಿದ್ದ ಗುರುಗಳು ಅಂದರು –

"ಈಹೊತ್ತು ನಿನ್ನ ಈ ಶಾಲೆಗೆ ಪೂಜೆ ಮಾಡಿಸಿದೆಯಲ್ಲ ತಮ್ಮಾ, ನೋಡ್ತಿರು, ಇದು ಮುಂದೆ ದೊಡ್ಡದಾಗಿ ಬೆಳೀತೈತಿ".

ಮುಂದು ಬೆಳೆಯತ್ತದೆನ್ನುವ ಗುರುಗಳ ಮಾತಿನಲ್ಲಿ ಶಿಷ್ಯನಿಗೆ ಪೂರ್ಣ ವಿಶ್ವಾಸವಿತ್ತು. ಅಲ್ಲಿಯವರೆಗೆ ಮನೆಯಲ್ಲೇ ಹೇಳಿಕೊಡುವುದು. ಶುಲ್ಕ ಕೊಟ್ಟರೆ ತೆಗೆದುಕೊಳ್ಳುವುದು, ಇಲ್ಲದಿದ್ದರೆ ಹಾಗೇ ದಾನ ಮಾಡುವುದು. ಶಾರದೆಯೇನೂ ತನ್ನ ಅನುಗ್ರಹಕ್ಕೆ ಲಕ್ಷ್ಮಿಯ ಶಿಫಾರಸ್ಸು ಬೇಕೆಂದು ನಿಯಮ ಮಾಡಿಲ್ಲವಲ್ಲ! ಲಕ್ಷ್ಮಿಯ ಶಿಫಾರಸ್ಸು ಇದ್ದರೆ ಶಾರದೆ ಒಲಿದು ಬಿಡವಳೆಂತಲೂ ಇಲ್ಲ. ಕಲಿಯುವ ಶಿಷ್ಯರಿಗೆ ಆಂತರ್ಯದಲ್ಲಿ ಉತ್ಕಟ ದಾಹವಿರಬೇಕು, ಅವಿರತ ಶ್ರಮ ಇರಬೇಕು. ಹೀಗಾಗಿ ಇಲ್ಲಿ ಕೆಲವರು ಕಲಿತು ಬೆಳೆದು ಹೆಸರು ಮಾಡಿದರು, ಕಲಿಯದವರು ಕತ್ತಲೆಯಲ್ಲಿ ಕರಗಿ ಹೋದರು. ನರಸಿಂಹಲುರವರು ಮಾತ್ರ ಹಣದ ಕಡೆಯಷ್ಟೇ ಮುಖ ಮಾಡಿ ಕೂರದೆ ಎಲ್ಲರಿಗೂ ಸಮಾನ ರೀತಿಯಲ್ಲಿ ಸಂಗೀತ ಕಲಿಸಿದರು. ಜಂಬಲದಿನ್ನಿ ಬುವಾರಿಗೂ ಶಿಷ್ಯನ ಬಗ್ಗೆ ಅಭಿಮಾನ. ಆಗಾಗ ಬಂದು ಶಿಷ್ಯನನ್ನು ನೋಡಿ ಹೋಗುತ್ತಿದ್ದರು. ಕಾಲೇಜಿನಿಂದ ನಿವೃತ್ತರಾದ ಮೇಲಂತೂ

ತಾವೇ ಆಗಾಗ ರಾಯಚೂರಿಗೆ ಬಂದು ಶಿಷ್ಯನಿಗೆ ಹೊಸಹೊಸ ರಾಗಗಳನ್ನ ಕಲಿಸುತ್ತಿದ್ದರವರು.

1988 ಡಿಸೆಂಬರ್ 31

ಗುರುಗಳು ಮಹಾಪ್ರಸ್ಥಾನ ಮಾಡಿದರು, ಶಿವೈಕ್ಯರಾದರು, ಸ್ವರ್ಗಸ್ಥರಾದರು – ಏನಾದರೂ ಆದೀತು. ಒಟ್ಟಿನಲ್ಲಿ ಈ ನೆಲತೊರೆದು ತೆರಳಿದರು. ಅಂತಿಮದಿನಗಳಲ್ಲಿ ಅವರು ಗದುಗಿನಲ್ಲಿ ವಾಸಿಸುತ್ತಿದ್ದರು. ಆ ಸಜ್ಜನ ಕೊನೆಗಾಲದಲ್ಲಿ ಗಂಟಲಿನ ಕ್ಯಾನ್ಸರಿನಿಂದ ತುಂಬಾ ಅಂದರೆ ತುಂಬಾ ನರಳಿದರು. ಕ್ಯಾನ್ಸರ್ ಎಂಬ ಕಾಯಿಲೆ ಇದೆಯಲ್ಲ, ಅದು ಅಂತಕನ ಮಹಾಕ್ರೂರಿ ದೂತ. "ಅಂತಕನ ದೂತರಿಗೆ ಕಿಂಚಿತ್ತೂ ದಯೆಯಿಲ್ಲ" ಎಂಬಂತೆ ಅದಕ್ಕೆ ಎಲ್ಲರೂ ಒಂದೇ. ಜಗತ್ತಿನಲ್ಲಿ ನಿಷ್ಪಕ್ಷಪಾತ ನೀತಿ ತನ್ನದಾಗಿಸಿಕೊಂಡಿರುವ ಯಾರಾದರೂ, ಯಾವುದಾದರೂ ಇದ್ದರೆ ಅದು ಕ್ಯಾನ್ಸರಿನಂತಹ ರೋಗ ಮಾತ್ರ, ಅದಕ್ಕೆ ಸಣ್ಣ ಮಗುವೂ ಒಂದೇ ಜಂಬಲದಿನ್ನಿ ಬುವಾರವರೂ ಒಂದೇ.

1989 ಜನವರಿ 1, ಬೆಳಿಗ್ಗೆ.

ನರಸಿಂಹಲುರವರು ಎದ್ದು ತಮ್ಮ ಎಂದಿನ ಪ್ರಾತಃಕರ್ಮಗಳನ್ನು ತೀರಿಸಿ ಸಂಗೀತ ಅಭ್ಯಾಸ ಮಾಡಿದರು. ಮನಸ್ಸು ಯಾಕೋ ಗುರುಗಳನ್ನು ತುಂಬಾ ನೆನೆಯುತ್ತಿತ್ತು. ಅವರಿಗೆ ಖಾಯಿಲೆ ಇದ್ದದ್ದು ಶಿಷ್ಯನಿಗೆ ಗೊತ್ತಿತ್ತು. ಎಷ್ಟೋ ಬಾರಿ ಅವರಲ್ಲಿಗೆ ಹೋಗಿದ್ದರು. ಅಂತಹ ಸಮಯದಲ್ಲಿ ಗುರುಗಳು ಶಿಷ್ಯನಿಗೆ ಅದುವರೆಗೂ ನೀಡದಿದ್ದ ಹೊಸ ರಾಗಗಳನ್ನು ನೀಡುತ್ತಿದ್ದರು.

ಮನೆಯಲ್ಲಿ ಪತ್ರಿಕೆ ಇರಲಿಲ್ಲ. ಸುದ್ದಿ ಕೇಳಲು ಎಂದಿನಂತೆ ನರಸಿಂಹಲು ರವರು ರೇಡಿಯೋ ಹಾಕಿದರು. ಜೀವ ಬಂದ ರೇಡಿಯೋದಲ್ಲಿ ಬಂದ ಮೊದಲ ಸುದ್ದಿಯೇ – ಆ ಹಿರಿಯ ಜೀವ ತಿರುಗಿ ಬಾರದತ್ತ ಹೋದದ್ದು.

ನರಸಿಂಹಲುರವರು ಕೂಡಲೆ ಮನೆಯಲ್ಲಿ ಹೇಳಿ ತಾವು ತಯಾರಾಗಿ ಬಸ್ ಸ್ಟ್ಯಾಂಡಿಗೆ ಹೊರಟೇ ಬಿಟ್ಟರು. ಅಲ್ಲಿ ಬಸ್ ಸಿಗಲಿಲ್ಲ. ಯಾವುದೋ ಟೆಂಪೋ ಹತ್ತಿದರು ನರಸಿಂಹಲು. ಮಾತಿರದ ನೀರವ ಮನಸ್ಸು.

ಗದಗ ತಲುಪಿದಾಗ ಸಂಜೆ ನಾಲ್ಕು ಘಂಟೆ. ಗುರುವಿನ ಮನೆಗೆ ತೆರಳಿದಾಗ ಶವ ತನ್ನ ಅಂತಿಮ ಯಾತ್ರೆಗೆ ಸಿದ್ಧವಾಗಿತ್ತು.

ಚಿರಶಾಂತ ಮುಖ, ನೋವಿಗೊಂದು ಕೊನೆ ಸಿಕ್ಕಿತ್ತು.

ನರಸಿಂಹಲು ಗುರುವಿಗೆ ಕೈ ಮುಗಿದರು. ತನಗೆ ದಾರಿ ತೋರಿಸಿ ಎಂದು ಕೇಳಿಕೊಂಡರು.

ಗುರುವಿನ ಅಂತ್ಯ ಸಂಸ್ಕಾರ ಮುಗಿದೊಡನೆ ಮರಳಿ ಹೊರಟ ಶಿಷ್ಯನ ಮನಸ್ಸು ಭಾರವಾಗಿತ್ತು. ಹಾದಿಯುದ್ದಕ್ಕೂ ತನ್ನ ಮತ್ತು ಗುರುವಿನ ಇಪ್ಪತ್ತೆರಡು ವರ್ಷಗಳಿಗೂ ಮೀರಿದ ಸಾಹಚರ್ಯ, ಅವರು ತನ್ನೊಡನೆ ನಡೆದುಕೊಂಡ ಬಗೆ–ಎಲ್ಲ ಒಂದೊಂದಾಗಿ ನಾಟಕದ ದೃಶ್ಯಾವಳಿಯಂತೆ ಮನದ ತೆರೆಯಮೇಲೆ ಹಾದು ಹೋಗುತ್ತಿತ್ತು. ಕೆಲವು ದಿನಗಳೇ ಬೇಕಾಯಿತು ಈ ಮನಸ್ಥಿತಿಯಿಂದ ಅವರಿಗೆ ಹೊರಬರಲು. ತಾಯಿ–ತಂದೆಯರನ್ನು ಕಳೆದುಕೊಂಡಾಗ ಎಳೆವಯಸ್ಸಾದ್ದರಿಂದ ವಿಯೋಗದ ನೋವೆಂದರೇನೆಂದು ಸರಿಯಾಗಿ ಅರಿವಾಗಿರಲಿಲ್ಲ. ಆದರೆ ಮಾತಾಪಿತೃಸ್ವರೂಪರಾಗಿದ್ದು ದೀರ್ಘಕಾಲ ಜೊತೆಯಲ್ಲಿದ್ದು ವಿದ್ಯಾದಾನ ಮಾಡಿದ ಗುರು ಅಗಲಿದಾಗ ನರಸಿಂಹಲುರವರಿಗೆ ನಡುವಯಸ್ಸು. ನೋವಿನ ಗಾಢತೆ, ಆಳವರಿಯದ ಅಗಾಧತೆ ಅಂತರಾಳವನ್ನು ತಟ್ಟುವುದು ತಿಳಿಯುತ್ತಿತ್ತು.

ಸೃಜನಶೀಲರಿಗೆ, ಸಾಧಕರಿಗೆ ನೋವು ನಲಿವುಗಳನ್ನು ಯಾವುದು ತಟ್ಟಿದರೂ ಅದು ರಚನಾತ್ಮಕವಾಗಿ ಪರಿವರ್ತಿತವಾಗುತ್ತದೆ. ಬೇಂದ್ರೆಯವರು ತನ್ನ ಒಂದು ಕೂಸನ್ನು ಕಳೆದುಕೊಂಡಾಗ ಹೆಂಡತಿಯ ಮುಖವನ್ನು ದಿಟ್ಟಿಸಿ ನೋಡಲಾಗದೆ ನೊಂದಿದ್ದು ಸುಂದರ ಕವನವಾಗಲಿಲ್ಲವೆ –

*ನೀ ಹಿಂಗ ನೋಡಬ್ಯಾಡ ನನ್ನ*
*ನೀ ಹಿಂಗ ನೋಡಿದರೆ ನನ್ನ*
*ನಾ ಹ್ಯಾಂಗ ನೋಡಲೀ ನಿನ್ನ!...*

ನರಸಿಂಹಲುರವರಿಗೆ ಗುರುವಿನ ನೆನಪನ್ನುಳಿಸುವುದೊಂದೇ ಧ್ಯೇಯ ವಾಯಿತು. ತನ್ನ ಸಂಗೀತ ಶಾಲೆಗೊಂದು ನಿವೇಶನ ಪಡೆದು ಅಲ್ಲೊಂದು ಕಟ್ಟಡ ಕಟ್ಟುವುದು. ಬಹುದೊಡ್ಡ ಆಸೆ. ಆದರೆ ಅದಕ್ಕೆ ಬೇಕಾದ ಹಣ? ಊರವರೇನೂ ಅಂತಹ ಕೈ ಜೋಡಿಸುವ ಪ್ರವೃತ್ತಿಯವರಲ್ಲ, ಅವರಿಗೇನಾಗಬೇಕು! ಹೀಗಾಗಿ ನರಸಿಂಹಲುರವರದು ಏಕಾಂಗಿ ಸಾಹಸ. ಸಂಪಾದಿಸಿದ ಹಣ ಹಾಸಲಿಕ್ಕಿದ್ದರೆ ಹೊದೆಯಲು ಇಲ್ಲ. ಇನ್ನು ಶಾಲೆ ಕಟ್ಟಲು ಅಷ್ಟು ಹಣ ಎಲ್ಲಿಂದ ಬರಬೇಕು? ಆದರೆ ಬಂಡವಾಳವಿಲ್ಲದಿದ್ದರೂ ಅವರಲ್ಲಿ "ಭಂಡತನ" ಇತ್ತು. ಛಲ ಇತ್ತು.

ಇದೇ ಸುಮಾರಿಗೆ, ಅಂದರೆ 1987–88ರ ಆಸುಪಾಸಿನಲ್ಲಿ ಸರ್ಕಾರದಿಂದ ಕಲಾವಿದರಿಗೆ ನಿವೇಶನಗಳನ್ನು ನೀಡಬೇಕೆಂಬ ಘೋಷಣೆ ಆಗಿತ್ತು. ಗುರುಗಳ ನಿಧನಾನಂತರ ನರಸಿಂಹಲುರವರು ಒಮ್ಮೆ ರಾಯಚೂರು ಜಿಲ್ಲಾಧಿಕಾರಿಯವರ ಕಛೇರಿಗೆ ಹೋದರು. ತಮಗೊಂದು ನಿವೇಶನ ಬೇಕೆಂಬ ಅಹವಾಲು ಅವರ ಮುಂದಿಟ್ಟರು. ಜಿಲ್ಲಾಧಿಕಾರಿಗಳ ಸೂಚನೆಯಂತೆ ಒಂದು ಅರ್ಜಿ ಗುಜರಾಯಿಸಿದರು. ಅದು ಒಂದು ಆಯ್ಕೆ ಸಮಿತಿಯ ಮುಂದೆ ಮಂಡಿಸಲ್ಪಟ್ಟು ತೀರ್ಮಾನವಾಗಬೇಕಿತ್ತು.

ಸಮಿತಿ ಸಭೆ ಸೇರುವ ದಿನ ನರಸಿಂಹಲು ಜಿಲ್ಲಾಧಿಕಾರಿಗಳ ಕಛೇರಿಗೆ ಹೋದರು. ಸಮಿತಿಯಲ್ಲಿ ಅವರ ಪರಿಚಯಸ್ಥರೊಬ್ಬರಿದ್ದು ಅವರಿಗೆ ನರಸಿಂಹಲುರವರ ವಿದೇಶಯಾತ್ರೆ, ಖ್ಯಾತಿ–ಎಲ್ಲವೂ ತಿಳಿದಿತ್ತು. ಅವರು ರಾಯಚೂರಿನಲ್ಲಿ ನರಸಿಂಹಲುರವರಿಗೊಂದು 30' X 40' ನಿವೇಶನ ಮಂಜೂರು ಮಾಡಬೇಕೆಂದು ಒತ್ತಾಯ ಮಾಡಿದರು.

ಅಲ್ಲಿಯೇ ಕುಳಿತಿದ್ದ ನರಸಿಂಹಲುರವರು ಎದ್ದು ನಿಂತು ಹೇಳಿದರು. "ಸ್ವಾಮಿ, ನನಗೆ 30' X 40' ನಿವೇಶನ ಬೇಕಾಗಿಲ್ಲ. ಕೊಡುವುದಿದ್ದಲ್ಲಿ 40' X 60'ರ ನಿವೇಶನ ಮಂಜೂರು ಮಾಡಬೇಕು.

ಸಮಿತಿಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿಗಳು ನರಸಿಂಹಲುರವರಿಗೆ – "ಅಲ್ಲರೀ, ಈಗ ಸದ್ಯಕ್ಕೆ 30' X 40' ನಿವೇಶನ ತಗೊಳ್ರಿ, ಮನೆಕಟ್ಟಿ, ಆಮೇಲೆ ಬೇಕಾದರೆ ನೋಡೋಣ"– ಎಂದರು.

"ನನಗೆ ಮನೆ ಕಟ್ಟಲಿಕ್ಕೆ ನಿವೇಶನ ಬೇಡ ಸ್ವಾಮಿ, ಮುಂದೆಂದಾದರೂ ಸಾಧ್ಯವಾದಾಗ ಮನೆ ಕಟ್ಟುವುದರ ಬಗ್ಗೆ ಯೋಚಿಸುತ್ತೇನೆ, ಈಗ ನಾನು ನಿವೇಶನ ಕೇಳ್ತಾ ಇರೋದು ರಾಯಚೂರಿನಲ್ಲೊಂದು ಸಂಗೀತ ಶಾಲೆ ನಡೆಸಲಿಕ್ಕೆ ಒಂದು ಕಟ್ಟಡ ಕಟ್ಟಬೇಕು ಅಂತ".

"ವಡವಾಟಿಯವರೆ, ನಿಮಗೆ ಇರಲಿಕ್ಕೆ ಸರಿಯಾದ ಒಂದು ಮನೆ ಇಲ್ಲ, ಮೊದಲು ಅದನ್ನ ಮಾಡಿಕೊಳ್ಳಿ, ಆ ಶಾಲೆ–ಗೀಲೆ ತಗೊಂಡು ಏನು ಮಾಡ್ತೀರಿ?"

"ಇಲ್ಲ ಸ್ವಾಮಿ, ಈ ಊರಲ್ಲಿ ಸಂಗೀತಕ್ಕೆ ಅಂತ ಒಂದು ಶಾಲೆ ಯಾರೂ ತೆರೆಯಲಿಲ್ಲ. ಈಗ ನಾನೊಬ್ಬ ಕಲಾವಿದನಾಗಿ ಆ ಬಗ್ಗೆ ಯೋಚಿಸಲಿಲ್ಲ ಅಂದರೆ ಹೇಗೆ? ಮನೆ ನನಗೊಬ್ಬನಿಗೆ, ಆದರೆ ಶಾಲೆ? ಇಡೀ ರಾಯಚೂರು, ಸುತ್ತಮುತ್ತಲಿನ ಸಂಗೀತ ಪ್ರೇಮಿಗಳಿಗೆ."

ಸಮಿತಿಗೆ ಇದೊಂದು ವಿಚಿತ್ರ ಎನ್ನಿಸಿದ್ದೀತು. ಎಲ್ಲ ಕಲಾವಿದರೂ ಮನೆ-ಮನೆ ಎಂದರೆ ಈತ ಶಾಲೆ-ಶಾಲೆ ಅಂತಾರಲ್ಲ! ಅವರೆಲ್ಲ ಬಗೆಬಗೆಯಾಗಿ ನರಸಿಂಹಲುರವರಿಗೆ ತಿಳಿಹೇಳುವ ಪ್ರಯತ್ನ ಮಾಡಿದರು, ಊಹೂಂ!

"ಸರಿ, ಆಯಿತು. ನಿಮಗೆ 60' X 40' ನಿವೇಶನವನ್ನೇ ಮಂಜೂರು ಮಾಡುವ ಬಗ್ಗೆ ವಿಚಾರಿಸೋಣ ಆದರೆ ಸದ್ಯಕ್ಕೆ ಅಂತಹ ದೊಡ್ಡ ನಿವೇಶನ ಇಲ್ಲ, ಮುಂದೆ ನೋಡೋಣ" ಎಂದಿತು ಸಮಿತಿ.

ಮುಂದೆ ಒಂದು ವರ್ಷವಾಯಿತು. ಮಂಜೂರಾತಿಯ ಸುದ್ದಿಯೇ ಇಲ್ಲ. ನರಸಿಂಹಲುರವರಿಗೆ ಈ ಜನರಿಗೆ ಶಾಲೆ ಯಾಕೆ ಅಗತ್ಯ ಎಂಬುದರ ಬಗ್ಗೆ ತಿಳುವಳಿಕೆ ನೀಡಬೇಕೆನ್ನಿಸಿತು. ಈಗಾಗಲೇ ಕೆಲವು ಮಕ್ಕಳು ಅವರಲ್ಲಿ ಕಲಿಯುತ್ತಿದ್ದರಲ್ಲವೆ! ಒಂದುದಿನ ಸ್ವರಸಂಗಮ ಸಂಗೀತ ವಿದ್ಯಾಲಯ ಫಲಕದಡಿ ಕರ್ನಾಟಕ ಸಂಘದಲ್ಲಿ ಆ ಹುಡುಗರಿಂದಲೇ ಕಾರ್ಯಕ್ರಮ ನಡೆಸಿದರು. ಆ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಗಳು, ಸಮಿತಿಯ ಸದಸ್ಯರು, ನಗರಸಭೆಯ ಅಧ್ಯಕ್ಷರೇ ಮುಂತಾದ ಗಣ್ಯವ್ಯಕ್ತಿಗಳನ್ನು ಕರೆದಿದ್ದರು. ಕಾರ್ಯಕ್ರಮ ಎಲ್ಲರಿಂದಲೂ ಮೆಚ್ಚುಗೆ ಗಳಿಸಿತು. ಗಣ್ಯರ ಭಾಷಣದಲ್ಲಿ ಶ್ವಾಸದ ತುಂಬಾ ಆಶ್ವಾಸನೆಯೇ ತುಂಬಿತ್ತು. ನಮ್ಮಲ್ಲಿ ಏನಿಲ್ಲದಿದ್ದರೂ ಅದೊಂದು ಮಾತ್ರ ಎಂದಿಗೂ ಬತ್ತದ ಹೊಳೆ. ಅದರಿಂದಲೇ ದೊಡ್ಡವರು ನಮಗೆಲ್ಲ ನೀರು ಕುಡಿಸುವುದು, ಅಲ್ಲವೆ!

ಇನ್ನೊಂದು ವರ್ಷ ಕಳೆಯಿತು. ನರಸಿಂಹಲುರವರು ಸಿನಿಮಾಸ್ಕೋಪ್‌ನಲ್ಲಿ ಕನಸು ಕಾಣುತ್ತಲೇ ಇದ್ದರು. ರಾಜ್‌ಕಪೂರ್‌ನ "ಮೇರಾ ನಾಮ್ ಜೋಕರ್" ಸಿನಿಮಾದ ರೀಲುಗಳಿಗಿಂತ ಉದ್ದದ ಕನಸು.

ಮತ್ತೊಂದು ಸಂಗೀತ ಕಾರ್ಯಕ್ರಮ ಹಮ್ಮಿಕೊಂಡು ನರಸಿಂಹಲು ರವರು ಮತ್ತೆ ಎಲ್ಲ ಗಣ್ಯರನ್ನು ಕರೆದರು. ಅಂದಿನ ಸಭೆಯಲ್ಲಿ ಅವರು ಪ್ರಾಸ್ತಾವಿಕ ಭಾಷಣ ಮಾಡುವಾಗ ಆ ಗಣ್ಯರನ್ನು ಉದ್ದೇಶಿಸಿ ಹೀಗೆಂದರು.

"ಈಗಾಗಲೇ ಎರಡು ವರ್ಷಗಳಾದವು ನಾನು ಒಂದು ನಿವೇಶನಕ್ಕಾಗಿ ಸರ್ಕಾರಕ್ಕೆ ಅರ್ಜಿ ಗುಜರಾಯಿಸಿ. ಏನೂ ಆಗಲಿಲ್ಲ ಇದುವರೆಗೆ! ಈಗ ನಾನು ತಮ್ಮ ಮುಂದೆ ಕೇಳುತ್ತೇನೆ. ನನಗೆ ಒಂದು ಶಾಲೆ ಕಟ್ಟಲಿಕ್ಕೆ 40' X 60' ನಿವೇಶನ ನೀಡುವುದು ನಿಮಗೆ ಶಕ್ಯವಿದ್ದರೆ ಕೊಟ್ಟುಬಿಡಿ. ಅದು ಆಗದು ಎಂದಲ್ಲಿ ಪ್ರಾಮಾಣಿಕವಾಗಿ ಹಾಗೆಂದೇ ಹೇಳಿರಿ, ಆದರೆ ದಯವಿಟ್ಟು ಆಶ್ವಾಸನೆಗಳನ್ನು

ಮಾತ್ರ ಕೊಡಬೇಡಿ. ನಾನು ಹೇಗಾದರೂ ಮಾಡಿ ನಮ್ಮ ಕನಸನ್ನು ಸಾಧಿಸುತ್ತೇನೆ. ದಯವಿಟ್ಟು ತಪ್ಪು ಭಾವಿಸದಿರಿ."

ಮಾತು ನೇರವಾಗಿ ಬಾಣದಂತೆ ಜಿಲ್ಲಾಧಿಕಾರಿಗಳ ಕೋಟನ್ನು ದಾಳಿ ಅವರ ಎದೆಯೊಳಗೆ ನಾಟಿತು.

"ವಡವಾಟಿಯವರೆ, ನಾವು ನಿಮ್ಮನ್ನು ಎರಡು ವರ್ಷಗಳಿಂದ ತುಂಬಾ ಓಡಾಡಿಸಿ ಬಿಟ್ಟೆವು. ನಮ್ಮ ನಡುವೆ ಇರುವ ಕಲಾವಿದನೊಬ್ಬನಿಗೆ ಎಷ್ಟು ಬೆಲೆ ಕೊಡಬೇಕು ಅನ್ನುವುದು ನಮಗೆ ತಿಳಿಯದೆ ಇರುವುದು ನಿಜಕ್ಕೂ ನಾಚಿಕೊಳ್ಳ ಬೇಕಾದ ವಿಷಯ. ನಿಮಗೆ ನಿವೇಶನ ಸಿಗುತ್ತೆ" ಎಂದರವರು.

– "ಸಿಗುತ್ತೆ ಅನ್ನೋದು ಗೊತ್ತು ಸ್ವಾಮಿ, ಆದರೆ ಯಾವಾಗ?"

– "ಎರಡು ತಿಂಗಳು ಸಮಯ ಕೊಡಿ"

– "ಆಗಲಿ ಸ್ವಾಮಿ"

ಎರಡು ತಿಂಗಳು ಕಳೆಯುವ ಹೊತ್ತಿಗೆ ಸ್ವರಸಂಗಮ ಸಂಗೀತ ವಿದ್ಯಾಲಯಕ್ಕೆ ಒಂದು ನಿವೇಶನ ನೀಡಬೇಕು ಎನ್ನುವ ಠರಾವು ಪಾಸಾಯಿತು. ನೀಡೋದು ಸರಿ. ಆದರೆ ನಿವೇಶನ ಎಲ್ಲಿ?

ಸುಡುಗಾಡಿನಲ್ಲಿ!

ತಮಾಷೆಯಲ್ಲ, ಊರ ಹೆಣಗಳನ್ನು ಸುಡುವ ಒಂದು ಬಯಲು, ಅದು ಸುಡುಗಾಡು ತಾನೆ! ಅಲ್ಲಿ ಬೇರೆ ಯಾವ ಕಟ್ಟಡವೂ ಇಲ್ಲ. ಅಲ್ಲಿ ಶಾಲೆಗೊಂದು ನಿವೇಶನ! ನರಸಿಂಹಲುರವರು ಮತ್ತೆ ಸರಕಾರ ಯಾತ್ರೆ ಮಾಡಿದರು.

"ಏನು ಸ್ವಾಮಿ, ಸುಡುಗಾಡಿನಲ್ಲಾ ಸೈಟು ಕೊಡೋದು!"

"ಸುಡುಗಾಡು ಈಗ ಸ್ವಾಮಿ, ಮುಂದೆ ಆ ಪ್ರದೇಶ ಅಭಿವೃದ್ದಿ ಆಗುತ್ತೆ, ಮನೆಮಾರುಗಳು, ಅಂಗಡಿ ಮುಂಗಟ್ಟುಗಳು ಎದ್ದಾಗ ಅದು ಸುಡುಗಾಡಾಗಿತ್ತು ಎಂಬ ಗುರುತೂ ಇರುವುದಿಲ್ಲ".

"ಮುಂದೆ ಆಗೋದು ಕಂಡವರು ಯಾರು ಸ್ವಾಮಿ? ಅದು ಇರೋದು ಈಗ ಊರ ಹೊರಗೆ. ಶಾಲೆ ಮಕ್ಕಳದ್ದು, ಕಲಿಯುವ ಮಕ್ಕಳು ಸುಡುಗಾಡಿಗೆ ಹೇಗೆ ಬರುತ್ತಾರೆ? ಅವರ ಪೋಷಕರು ಆ ಮಕ್ಕಳನ್ನು ಹೇಗೆ ಕಳಿಸಿಯಾರು?

ಸುಡುಗಾಡಿನಲ್ಲಿ, ಸುಡುಗಾಡಿನಿಂದ ಕಲಿಯೋದು, ಕಲಿಯಬೇಕಾದ್ದು ಆ ಮಕ್ಕಳಲ್ಲ ಸ್ವಾಮಿ, ನಾವು. ಅದು ದೊಡ್ಡವರ ಶಾಲೆ"

"ಏನು ಮಾಡೋಣ ವಡವಾಟಿಯವರೆ, ಊರಿನೊಳಗೆ ಅಂತಹ ನಿವೇಶನ ಎಲ್ಲೂ ಇಲ್ಲವಲ್ಲ!".

ಅದು ಸರಿಯೆ. ಹಣವಿರುವ ರಣಹದ್ದುಗಳು ಊರ ಒಳಗೊಂದು ಖಾಲಿ ನಿವೇಶನ ಕಂಡರೆ ಸಾಕು! ನೊಣಗಳಾಡುವ ಹೆಣದ ಮೇಲೆ ಎರಗುವಂತೆ ಒಂದು ಕ್ಷಣವೂ ತಡಮಾಡದೆ ಎರಗುತ್ತವೆ. ಇನ್ನು ಇವರಿಗೆ ಎಲ್ಲಿ ಸಿಕ್ಕೀತು ನಿವೇಶನ ಊರಿನೊಳಗೆ! ಮನುಷ್ಯರಿಗೆ!

ಇನ್ನು ಸರಕಾರ? ಅದೊಂದು ದೇವಾಲಯ. ಅದರ ಗರ್ಭಗುಡಿಯಲ್ಲಿ ವರದಹಸ್ತದರ್ಶನ ಮಾಡುತ್ತ ಪೀಠವನ್ನಲಂಕರಿಸಿರುವ (ವಿ) ನಾಯಕರು. ಅವರ ಸುತ್ತ-ಮುತ್ತ ಬಾಲಬಡಕ ಮೂಷಿಕಗಳು. ಪೂಜೆ ಪ್ರಸಾದ ಅರ್ಪಿಸಿದರೆ ಕೈಎತ್ತಿ ಅನುಗ್ರಹಿಸುತ್ತಾರೆ. ಇಲ್ಲವಾದಲ್ಲಿ ಸುಮ್ಮನೆ ಕೈ ಎತ್ತುತ್ತಾರೆ.

ಆದರೆ ಅಲ್ಲೂ ಸಹ ದೇವರುಗಳ ಮಧ್ಯೆ ಹೆಗ್ಗಣಗಳ ನಡುವೆ ಮನುಷ್ಯರಿದ್ದಾರೆ. ಅಂಥವರಿಂದಲೇ ಶ್ರೀ ಸಾಮಾನ್ಯನಿಗೆ ಸರಕಾರಿ ಕಛೇರಿಗಳು ಸಹನೀಯವಾಗುತ್ತದೆ. ಹಾಗೊಬ್ಬರು ಆ ಕಛೇರಿಯಲ್ಲೂ ಇದ್ದರು. ಅಕ್ಬರ್ ಎಂಬಾತ, ಒಬ್ಬ ಹಿರಿಯ ಗುಮಾಸ್ತರು.

"ವಡವಾಟಿಜೀ, ಏಕ್ ಕಾಮ್ ಕರೇಂಗೆ, ಮೇರೆ ಸಾಥ್ ಚಲಿಯೆ" ಎಂದು ಅವರು ನರಸಿಂಹಲುರವರನ್ನು ತಮ್ಮ ಸ್ಕೂಟರಿನಲ್ಲಿ ಕೂರಿಸಿಕೊಂಡು ಹೊರಟರು. ಅಲ್ಲಿಂದ ಸೀದಾ ಈಗ ಬ್ರಹ್ಮಕುಮಾರಿಯರ ಆಶ್ರಮದ ಕಟ್ಟಡದ ಬಳಿ ಕರೆದು ಕೊಂಡು ಬಂದು ಗಾಡಿನಿಲ್ಲಿಸಿದರು.

"ವಡವಾಟಿಯವರೆ ನಾನು ನೀವು ಇಲ್ಲಿ ಮಾತಾಡುವಾಗ ನೀವು ಅತ್ತಿತ್ತ ಕೈತೋರಿಸಬೇಡಿ, ಜೋರಾಗಿ ಮಾತನಾಡಬೇಡಿ. ನೋಡಿ ಇಲ್ಲಿ ಒಂದು ಖಾಲಿ ಸೈಟು ಇದೆ. ನಿಮಗೆ ಆಗುತ್ತ ನೋಡಿ."

ಕಣ್ಣ ಸನ್ನೆಯಲ್ಲೇ ಖಾಲಿನಿವೇಶನ ತೋರಿಸಿದರು ಆಲಿ ಅಕ್ಬರ್. ಒಂದು ಖಾಲಿ ನಿವೇಶನ. ಅದರ ಅಕ್ಕ ಪಕ್ಕಗಳಲ್ಲಿ ಕಟ್ಟುವ ಕೆಲಸ ನಡೆದಿತ್ತು. ಅದೊಂದು ಮಾತ್ರ ಖಾಲಿ. ಸಾಕಷ್ಟು ವಿಶಾಲ. 40' X 60' ಕ್ಕಿಂತ ವಿಶಾಲ. ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರ ರಸ್ತೆಯಲ್ಲಿ, ಹೆದ್ದಾರಿಯಿಂದ ಅರ್ಧ ಕಿಲೋಮೀಟರ್

ಸಹ ಇಲ್ಲ. ಸೈಟನ ಹಿಂಭಾಗದಲ್ಲಿ ರೈಲ್ವೆ ಕ್ರಾಸಿಂಗ್. ಅಲ್ಲಿಂದ ಸ್ವಲ್ಪ ದೂರ ಮರಳಿ ನಡೆದರೆ ಎಡದಿಕ್ಕಿಗೆ ಬಸ್‌ಸ್ಟ್ಯಾಂಡ್‌ಗೆ ಹೋಗುವ ದಾರಿ, ಬಲ ದಿಕ್ಕಿಗೆ ರೈಲ್ವೆ ಸ್ಟೇಷನ್, ಪೇಟೆಗೆ ತುಂಬಾ ಹತ್ತಿರ. ಯೋಗ್ಯ ಸ್ಥಳ ಇದು.

"ಇದಾದರೆ ಆದೀತು" ನರಸಿಂಹಲುರವರು ತೃಪ್ತಿಯಿಂದ ಹೇಳಿದರು.

"ಆದೀತು ಸರಿ ಉಸ್ತಾದರೆ, ಆದರೆ ಇದರ ಮೇಲೆ ಊರಿನ ದೊಡ್ಡ ಕುಳವೊಂದರ ಹಿಡಿತ ಇದೆ. ಕಾನೂನುಬದ್ಧವಾಗಿ ಇದು ಅವರಿಗೆ ಮಂಜೂರು ಆಗಿಲ್ಲ. ಆದರೆ ಇದರ ಮೇಲೆ ತಮ್ಮ ಹೊರತು ಯಾರಿಗೂ ಕಬ್ಜಾ ತೆಗೆದುಕೊಳ್ಳಲಿಕ್ಕೆ ಬಿಡ್ತಾ ಇಲ್ಲ."

"ಹೌದ! ಮತ್ತೆ ಈಗೇನು ಮಾಡೋದು?"

"ನೋಡಿ, ನಿಮ್ಮ ಧೈರ್ಯ, ನಿಮ್ಮ ನಸೀಬು. ಇದರ ಕಬ್ಜಾ ತಾವು ತಗೊಂಡರೆ ನಾವು ಮುಂದೆ ಹೋಗಬಹುದು. ಹೆಸರಿಗೆ ಇದು ಸರಕಾರದ್ದೇ ಜಾಗ."

ನರಸಿಂಹಲುರವರು ಲೆಕ್ಕ ಹಾಕಿದರು. ಜಾಗ ಚೆನ್ನಾಗಿದೆ, ಆದರೆ ಯಾರದ್ದೋ ಕಾನೂನುಬಾಹಿರ ಹಿಡಿತದಲ್ಲಿದೆ. ಕಾನೂನಿನ ಮೊರೆ ಹೋದರೆ ಆದರೆ ಆದೀತು ಇಲ್ಲದಿದ್ದಲ್ಲಿ ಇಲ್ಲ. ಒಂದೇ ದಾರಿ ಎಂದರೆ ತಾನು ಸಹ ಅದೇ ದಾರಿಯಲ್ಲಿ, ಅಂದರೆ ವಕ್ರಮಾರ್ಗದಲ್ಲಿ ನಡೆಯುವುದು. ಆ ಕುಳದ್ದು ಮೃಗಬಲ ಎಂದು ಹಿಂಜರಿದರೆ ತನ್ನ ಕನಸು ಬರೀ ಮೃಗಜಲ!

ತನ್ನ ಉದ್ದೇಶ್ಯ ಒಳ್ಳೆಯದು. ಸೈಟು ಕಬ್ಜಾ ತೆಗೆದುಕೊಂಡವನ ಹೆಸರಿನಲ್ಲಿಲ್ಲ. ಅದು ಸರಕಾರದ್ದು. ಅದನ್ನು ತನ್ನದಾಗಿಸಿಕೊಂಡರೆ ಕನಸು ನನಸಾಗುತ್ತದೆ. ಸರಿ, ಏನಾದರಾಗಲಿ, ಈ ಜಾಗ ಬಿಟ್ಟು ಕೊಡಬಾರದು.

ಮಾರನೆಯ ದಿನ ಬೆಳಿಗ್ಗೆ ಆ ಸೈಟಿನಲ್ಲಿ ಸ್ವರಸಂಗಮ ಸಂಗೀತ ವಿದ್ಯಾಲಯದ ಫಲಕ ಎದ್ದು ನಿಂತಿತ್ತು.

ಮರುದಿನ ಬೆಳಿಗ್ಗೆ ಹಿಂದಿನ ದಿನ ಎದಿದ್ದ ಫಲಕ ಸುಟ್ಟುಕೊಂಡು ಮಲಗಿತ್ತು. ರಾತ್ರಿ ಯಾರೋ ಅದನ್ನು ಕಿತ್ತುಹಾಕಿದ್ದರು.

ನರಸಿಂಹಲುರವರು ದೊಡ್ಡದೊಡ್ಡ ಸೈಜುಗಲ್ಲುಗಳನ್ನು ತರಿಸಿ ಒಂದು ಮೋಟುಗೋಡೆ ಎಬ್ಬಿಸಿದರು. ಅದಕ್ಕೆ ಇನ್ನೊಂದು ಫಲಕವನ್ನು ಕೀಳಲೂ ಬಾರದಂತೆ, ಸುಡಲೂ ಬಾರದಂತೆ "ಫಿಕ್ಸ್" ಮಾಡಿಸಿದರು.

ಕೀಳಲಾಗದ, ಸುಡಲಾಗದ ಆ ತಗಡಿನ ಬೋರ್ಡು ಮರುದಿನ ವಿರೂಪ ಗೊಂಡು ಗುರುತು ಕಳೆದುಕೊಂಡಿತ್ತು. ಕಿಡಿಗೇಡಿಗಳು ಕಲ್ಲಿನಿಂದ ಅದನ್ನು ಜಜ್ಜಿ ಬಿಟ್ಟಿದ್ದರು.

ಕಾಳಗಕ್ಕೆ ರಂಗೇರುತ್ತಿತ್ತು.

ನರಸಿಂಹಲುರವರು ಅಲ್ಲಿ ಅಡಿಪಾಯ ಹಾಕುವುದೊಂದೇ ದಾರಿಯೆಂದು ತೀರ್ಮಾನಿಸಿ ಪರಿಚಯದ ಇಂಜಿನಿಯರೊಬ್ಬರನ್ನು ಸಂಪರ್ಕಿಸಿದರು. ಕಲ್ಲು, ಸಿಮೆಂಟು ಎಲ್ಲ ಬಂದು ಬಿದ್ದವು. ಬುನಾದಿಗೆ ಗುದ್ದಲಿಪೂಜೆ ಆಯಿತು. ತಳಪಾಯ ಕಟ್ಟಿಯೂ ಆಯಿತು. ಇಂಜಿನಿಯರ್ ಸ್ವಲ್ಪ ಭಯಸ್ತ. ನೀಲಿನಕ್ಷೆ ಇಲ್ಲದೆ ತಳಪಾಯ! ಆದರೆ ನರಸಿಂಹಲು ಅವರಿಗೆ ಇವೆಲ್ಲದರ ಹೊಣೆ ತನ್ನದೇ ಎಂದು ಹೇಳಿದರು. ಹೀಗೆ, ತಳಪಾಯ ಮುಗಿದ ನಂತರ ನೀಲಿನಕ್ಷೆ ಸಿದ್ಧವಾಯಿತು. ಕಟ್ಟಡ ಪ್ರಾರಂಭವಾಯಿತು.

ಈಗ ಶುರುವಾಯಿತು ನೋಡಿ ಬೆಂಬಿಡದ ಭೂತಗಳ ಕಾಟ. ಇವು ಬೇರೆ ಯಾವುದಕ್ಕಲ್ಲದಿದ್ದರೂ ಕಾಟ ಕೊಡಲಷ್ಟೇ ನಮ್ಮ ಹಿಂಬಾಲಕರಾಗುತ್ತವೆ. ಬುದ್ಧಿ ಕಲಿಯಲು ಅಲ್ಲ, ಕಲಿಸಲು! ಎಲ್ಲರೂ ಆ ಕುಳದ ಬಾಡಿಗೆ ಬಂಟರು. ಕುಳ ಮಾತ್ರ ಕಾಣವಲ್ಲ.

ನರಸಿಂಹಲುರವರ ಬತ್ತಳಿಕೆಯಲ್ಲಿ ಇತ್ತು ರಾಮಬಾಣ. ಆ ಸಮಯದಲ್ಲಿ ಶ್ರೀನಿವಾಸ್ ಎಂಬೊಬ್ಬರು ಅಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಇದ್ದರು. ಅವರ ಬಳಿಗೆ ನರಸಿಂಹಲುರವರು ಹೋದರು.

"ಸ್ವಾಮಿ, ನಾನು ಒಂದು ವಿದ್ಯಾಸಂಸ್ಥೆ ಕಟ್ಟುತ್ತಿದ್ದೇನೆ. ಅಲ್ಲಿಗೆ ತಾವು ಈ ದಿನ ಒಮ್ಮೆ ಬಂದು ಹೋಗಿ."

ಎಸ್.ಪಿ.ಯವರಿಗೆ ಅರ್ಥವಾಗಲಿಲ್ಲ

"ಯಾಕೆ ವಡವಾಟಿಯವರೆ? ಏನಾದರೂ ತೊಂದರೆ ಆಗುತ್ತಿದೆಯೇ?"

"ತೊಂದರೆ ಏನೂ ಇಲ್ಲ ಸಾರ್ ತಾವು ದೊಡ್ಡವರು. ಒಂದು ಅರ್ಧಗಂಟೆ ಅಲ್ಲಿಗೆ ಬಂದು ಹೋದರೆ ನಮಗೂ ಖುಷಿ, ತಮ್ಮಂಥವರು ನಮಗೆ ನೈತಿಕ ಬಲ ಕೊಡುತ್ತಿದ್ದೀರಿ ಅಂತ."

"ಸರಿ ನಡೀರಿ ಹೋಗೋಣ."

ಎಸ್.ಪಿ.ಯವರು ತಮ್ಮ ಸರಕಾರಿ ವಾಹನದಲ್ಲಿ ಕುಳಿತು ಹೊರಟರು. ಸಾಹೇಬರು ಹೊರಟರೆಂದರೆ ಅವರ ಸಿಬ್ಬಂದಿ ಜೊತೆ ಇರಬೇಕಲ್ಲ. ಅವರೂ ಹೊರಟರು. ಆ ಮೆರವಣಿಗೆ ನಿವೇಶನದ ಬಳಿಗೆ ಬರುವ ಹೊತ್ತಿಗೆ ಹತ್ತಿರದ ಠಾಣೆಗೆ ಸುದ್ದಿ ತಲುಪಿ ಅಲ್ಲಿಯ ಇನ್ಸ್‌ಪೆಕ್ಟರ್ ತನ್ನ ಸಿಬ್ಬಂದಿಯೊಂದಿಗೆ ಅಲ್ಲಿ ಹಾಜರು.

ಬಂದವರೆಲ್ಲರೂ ನಿವೇಶನ ನೋಡಿದರು. ಅವರಿಗೆ ಅಲ್ಲಿ ಕಾಫಿ ಸರಬರಾಜಾಯಿತು. ಎಲ್ಲರೂ ನರಸಿಂಹಲುರವರ ಸಾಹಸವನ್ನು ಮೆಚ್ಚಿ ಅವರ ಪುಣ್ಯಕಾರ್ಯಕ್ಕೆ ಜಯಸಿಗಲಿ ಎಂದು ಹಾರೈಸಿ ಹಿಂತಿರುಗಿದರು. ಅಷ್ಟೇ ಅಲ್ಲ. ಅವರವರಲ್ಲೇ ಶಕ್ಯವಿದ್ದಷ್ಟು ದೇಣಿಗೆ ಸಂಗ್ರಹಿಸಿ ಶಾಲೆಗೆ ಅನುದಾನ ನೀಡಿದರು.

ಪೋಲಿಸರಿಗೆ ಅರ್ಥವಾದದ್ದು ಶಾಲೆ ಕಟ್ಟುವ ಸಾಹಸ ಮಾತ್ರ, ತಮ್ಮನ್ನು ಕರೆಸುವ ನಿರ್ಧಾರ ಮಾಡಿದ್ದೇ ಈ ಚಾಣಾಕ್ಷನ ದೊಡ್ಡ ಸಾಹಸ ಎನ್ನುವುದು ಕೊನೆಯ ತನಕವೂ ಪತ್ತೆಯಾಗಲಿಲ್ಲ.

ರಾಯಚೂರಿನ ಹುಲಿಗಳು ಅಂದಿನಿಂದ ರೂಪಾಂತರಗೊಂಡು ಹುಳುಗಳಾಗಿ ಬಿಟ್ಟಿದ್ದವು.

ನೀಲಿ ನಕ್ಷೆಗೆ ಅಧಿಕಾರಯುತ ಮುದ್ರೆ ದೊರೆಯುವ ಮೊದಲು ಆ ನಿವೇಶನ ಕಾನೂನು ಬದ್ಧವಾಗಿ ವಿದ್ಯಾಲಯದ ಟ್ರಸ್ಟ್‌ನ ಹೆಸರಿಗಾಯಿತು. ನೀಲಿನಕ್ಷೆ ಮಂಜೂರಾಯಿತು. 1994ರಲ್ಲಿ ಕಟ್ಟಡ ಪೂರ್ಣವಾಯಿತು. ಹಣ!? ಬ್ಯಾಂಕ್‌ನಿಂದ ಸಾಲ, ತಮ್ಮ ಕೂಡಿಟ್ಟ ಹಣ –ಎಲ್ಲವೂ ಸೇರಿ ಉಪಯೋಗವಾಯಿತು. ಪೂಜ್ಯ ಪುಟ್ಟರಾಜ ಗವಾಯಿಯವರಿಂದ ಉದ್ಘಾಟನೆಯಾಯಿತು ಶಾಲೆ.

ಈಗ ರಾಯಚೂರು ರೈಲ್ವೆ ನಿಲ್ದಾಣದಿಂದಿಳಿದರೆ ಅಲ್ಲಿಂದ ಎಡಕ್ಕೆ ತಿರುಗಿ, ಅಥವಾ ಬಸ್ಸಿನಲ್ಲಿ ಬಂದರೆ ಬಸ್‌ಸ್ಟಾಂಡಿನಿಂದ ಹೆದ್ದಾರಿಯ ಕಡೆಗೆ ಬಂದು ಎಡಕ್ಕೆ ತಿರುಗಿ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದ ಬಳಿಗೆ ಬಂದರೆ ಅದರ ಪಕ್ಕದಲ್ಲಿರುವ ರಸ್ತೆಗೆ ತಿರುಗಿ ಸ್ವಲ್ಪ ದೂರ ಹೋದಲ್ಲಿ ಶಾಲೆಕಾಣುತ್ತದೆ. ಸರಳವಾದ, ಆಶ್ರಮದಂತಹ ಕಟ್ಟಡ. ಪ್ರವೇಶದ್ವಾರದೊಳಗೆ ಪ್ರವೇಶಿಸಿದರೆ ಎದುರಿನಲ್ಲಿ ಎಡಭಾಗದಲ್ಲಿ ಬುವಾರವರ, ಅಂದರೆ ಜಂಬಲದಿನ್ನಿಯವರ ಮೂರ್ತಿ. ಒಳಗೆ ಕಾಲಿಟ್ಟರೆ ನಿಮ್ಮ ಮನದಲ್ಲಿ ಝೇಂಕರಿಸುತ್ತಾ ಹೊರಗೆ ಮೌನವಾಗಿ ನಿಂತಿರುವ ವಾದ್ಯ ಪರಿಕರಗಳು, ಕಲಿಯುವ ಮಕ್ಕಳು; ಒಂದು ಸಣ್ಣ ವೇದಿಕೆ – – ಹಾಡಲು......ನಗರ ಮಧ್ಯದಲ್ಲೊಂದು ದಿವ್ಯಾನುಭವ ನೀಡುವ ಗುರುಕುಲ!

ಇನ್ನು ಬ್ಯಾಂಕಿನ ಸಾಲ. ಕಛೇರಿಗಳಿಂದ ಸಂಪಾದಿಸಿದ ಹಣ ಆಕಾಶ ವಾಣಿಯ ಸಂಭಾವನೆಗಳಿಂದ ಕಂತುಗಳನ್ನು ತೀರಿಸುತ್ತಾ ಇದ್ದ ನರಸಿಂಹಲುರವರಿಗೆ "ಹಾಥಿ" ಫ್ರೆಂಚ್ ಚಲನಚಿತ್ರದ ಸಂಗೀತ ಸಂಯೋಜನೆಯಿಂದ ಬಂದ ದೊಡ್ಡ ಮೊತ್ತ ಸಾಲದ ಭಾರವನ್ನು ಸಾಕಷ್ಟು ಇಳಿಸಿತು.

ಕೊನೆಗೂ ಈ ಶಾಲೆ ಪೂರ್ತಿಯಾದ ಮೇಲೆಯೇ ಈ ಹಟವಾದಿ ರಾಯಚೂರಿನ ದೇವರು ಕಾಲೋನಿಯಲ್ಲಿ ತನಗಾಗಿ ಒಂದು ದೊಡ್ಡ ಮನೆ ಕಟ್ಟಿಕೊಂಡಿದ್ದು.

*ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ!*
*ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ॥*

ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದವನ ಕಣ್ಣುಗಳನ್ನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ತೆರೆಯಿಸುವ ಆ ಗುರುವಿಗೆ ನಾನು ನಮಸ್ಕರಿಸುತ್ತೇನೆ – ಸುಭಾಷಿತ.

ತನಗೆ ಸಂಗೀತದ ಬೆಳಕು ನೀಡಿ ಬದುಕನ್ನೂ ಬೆಳಗಿಸಿದ ಗುರು ಪಂಡಿತ್ ಸಿದ್ಧರಾಮ ಜಂಬಲದಿನ್ನಿಯವರ ಹೆಸರನ್ನು ಉಳಿಯುವಂತೆ ಮಾಡಿದ ನರಸಿಂಹಲುರವರು ಇದಕ್ಕಿಂತ ಮಿಗಿಲಾದ ಗುರುಕಾಣಿಕೆ ಇನ್ನೇನು ಕೊಡಬಹುದು! ಶಾಲೆಯ ಬಗ್ಗೆ ಅಂದು ಗುರುವು ಉದ್ಗರಿಸಿದ ಭವಿಷ್ಯವಾಣಿ ಸಾಕಾರವಾಗಿತ್ತು. ರಾಯಚೂರು ಈಗ ಸಂಗೀತ ಪ್ರೇಮಿಗಳ ಯಾತ್ರಾಸ್ಥಳ!.

❑

ಚರಣ 14

# ಮನಸೂರ ಬುವಾರ ಸನ್ನಿಧಿ

ಈ ಹಿಂದೆ ನಾನಾಗಲೇ ನರಸಿಂಹಲುರವರು ಮಲ್ಲಿಕಾರ್ಜುನ ಮನಸೂರರ ಸೇವೆ ಮಾಡುತ್ತಿದ್ದುದನ್ನು ಪ್ರಸ್ತಾಪ ಮಾಡುತ್ತಿದ್ದೆ. ಮನಸೂರ ಬುವಾರಿಗೆ ನರಸಿಂಹಲು ನೇರ ಶಿಷ್ಯರಲ್ಲ. ಅವರ ಶಿಷ್ಯರ ಶಿಷ್ಯ. ನೇರವಾಗಿ ಕಲಿಯುತ್ತಿದ್ದುದು ಜಂಬಲದಿನ್ನಿ ಗುರುವಿನಿಂದಲೇ. ಆದರೆ ಮನಸೂರರ ಸೇವೆ ಮಾಡುವಾಗ ಅವರ ಆಲಾಪ್‌ಗಳನ್ನು ಆಲಿಸುತ್ತಾ ಆಲಿಸುತ್ತಾ ತಮ್ಮ ಜ್ಞಾನವನ್ನು ನರಸಿಂಹಲುರವರು ಇನ್ನು ಹರಿತಗೊಳಿಸಿಕೊಂಡರು.

ಮನಸೂರ ಬುವಾರವರು ಜಂಬಲದಿನ್ನಿ ಗುರುಗಳಿಗಿಂತ ಹತ್ತು ವರ್ಷ ದೊಡ್ಡವರು. ಶಿಷ್ಯನಿಗಿಂತ ದೀರ್ಘಾಯುವಾಗಿ ಬಾಳಿದರು.



ಗುರುಗಳ ಗುರುಗಳಾದ ಡಾ॥ ಮಲ್ಲಿಕಾರ್ಜುನ್ ಮನ್ಸೂರ್ ಅವರ ಗಾಯನದ ಸಾಥಿಯಲ್ಲಿ

ಮನಸೂರರು ಪ್ರತಿವರ್ಷ ಅಥಣಿಯಲ್ಲಿ ಮಹಾಶಿವರಾತ್ರಿಯ ದಿನ ತಪ್ಪದೆ ತಮ್ಮ ಸಂಗೀತಸೇವೆ ಸಲ್ಲಿಸುತ್ತಿದ್ದರು. ಆದಿನ ಜಗತ್ತಿನ ಯಾವುದೇ ಮೂಲೆಯಿಂದ ಸಂಗೀತಕ್ಕಾಗಿ ಎಂಥದ್ದೇ ಲಾಲಸಾಭರಿತ ಕರೆ ಬಂದರೂ ಮನಸೂರರು ಸಮ್ಮತಿಸುತ್ತಿರಲಿಲ್ಲ.

ಮನಸೂರರೇ ಒಂದು ಕಡೆ ಹೇಳಿಕೊಂಡಿದ್ದರಂತೆ (ವಡವಾಟಿಯವರು ಹೀಗೊಮ್ಮೆ ನನಗೆ ಹೇಳಿದ್ದರು) –ತಾವು ಹರೆಯದಲ್ಲಿ ತುಂಬಾ ಹುಂಬರಿದ್ದರೆಂದು ಹಾಗೂ ಅಥಣಿಯ ದೈವ ತನ್ನನ್ನು ಹುಲಿಯನ್ನು ಪಳಗಿಸುವಂತೆ ಪಳಗಿಸಿತೆಂದು. ಅದೇಕೆ ಅವರು ಹಾಗೆ ಹೇಳಿದ್ದರೆಂಬುದು ನನಗಂತೂ ತಿಳಿದಿಲ್ಲ. ಆದರೆ ಅಥಣಿಯ ದೈವಕ್ಕೆ ಅವರು ತುಂಬಾ ತುಂಬಾ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು ಎಂಬುದು ಸತ್ಯ.

ಧಾರವಾಡಕ್ಕೆ ಆಕಾಶವಾಣಿ ಕಾರ್ಯಕ್ರಮಕ್ಕಾಗಿ ರಾಯಚೂರಿನಿಂದ ಬಂದಿಳಿದ ನರಸಿಂಹಲು ವಡವಾಟಿಯವರು ಬೃಂದಾವನ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಅಲ್ಲಿ ತಮ್ಮ ಚೀಲವನ್ನು ಇಟ್ಟು ನೆಟ್ಟಗೆ ಮನಸೂರ ಬುವಾರ ಮನೆಗೆ ಹೋಗುತ್ತಿದ್ದರು. ಬಾಗಿಲು ತಟ್ಟಿದರೆ ಅವರ ಮಗಳು ಅಕ್ಕಮಹಾದೇವಿ ಬಾಗಿಲು ತೆರೆದು ಸ್ವಾಗತಿಸಿ ಒಳಗೆ ಅಪ್ಪನಿಗೆ ಸುದ್ದಿ ಮುಟ್ಟಿಸುತ್ತಿದ್ದರು. – "ಅಪ್ಪಾ ವಡವಾಟಿ ಅಣ್ಣಾ ಬಂದಾನ."

ಮಲಗಿರುತ್ತಿದ್ದ ಬುವಾರವರು ಧಡಕ್ಕನೆದ್ದು ಕೂರುತ್ತಿದ್ದರು.

"ಹಾಂ! ವಡವಾಟಿ ಬಂದಾನ? ಬಂದೆ. ಕೂರಾಕ ಹೇಳು"

ನಂತರ ಅವರು ಬರುತ್ತಿದ್ದರು. ನರಸಿಂಹಲು ಅವರಿಗೆ ಎಣ್ಣೆ ಹಚ್ಚಿ ಕೈ–ಕಾಲುಗಳು, ಬೆನ್ನು –ಎಲ್ಲ ಕಡೆ ಮಾಲೀಷು ಮಾಡುತ್ತಿದ್ದರು. ಈ ರೀತಿ ಶಿಷ್ಯ ಗುರುಸೇವೆ ಮಾಡುವುದು ಗುರುಕುಲದ ಪದ್ಧತಿ. ಯಾವ ಗುರುವೇ ಆಗಲಿ ತನ್ನ ಶಿಷ್ಯರಲ್ಲಿ ಯಾರ‍್ಯಾರಿಂದಲೋ ಆ ರೀತಿ ಸೇವೆ ಮಾಡಿಕೊಳ್ಳುತ್ತಿರಲಿಲ್ಲ. ತನಗೆ ಪ್ರಿಯನಾದ, ಉತ್ತಮನಾದ ಶಿಷ್ಯನಿಗೆ ಮಾತ್ರ ಅಂತಹ ಅವಕಾಶ ನೀಡುತ್ತಿದ್ದರು. ಆ ಸೇವೆಯ ಸಮಯದಲ್ಲಿ ಶಿಷ್ಯನಿಗೆ ಜ್ಞಾನದಾನವೂ ಆಗುತ್ತಿತ್ತು, ಗುರುವಿನರಿವಿಲ್ಲದೆಯೆ.

ನರಸಿಂಹಲು ಅವರ ಶಿಷ್ಯನ ಶಿಷ್ಯನಲ್ಲವೆ! ಆದ್ದರಿಂದ ಅವರಿಗೆ ಈ ವಿಶೇಷ ಸವಲತ್ತು.

"ಚೆನ್ನಾಗಿ ಸೇವಾ ಮಾಡ್ತೀಯೋ ವಡವಾಟಿ, ಸಿದ್ಧರಾಮ ನಿನಗ ಛಲೋ ಹೇಳಿಕೊಟ್ಟಾನ."

ಇಷ್ಟು ಸೇವೆ ಮಾಡಿಯೂ ಸಹ ನರಸಿಂಹಲು ಎಂದೂ ಮನಸೂರ ಬುವಾರನ್ನು ಇಂಥಾ ಚೀಜ್ ಹಾಡಿರೆಂದು ಕೇಳಿಕೊಳ್ಳಲಿಲ್ಲ. ಸೇವೆ ಮಾಡುವ ದೊಂದೇ ಉದ್ದೇಶ ಎನ್ನುವಂತೆ ಮನಸ್ಸಿಟ್ಟು ಗುರುಸೇವೆ ಮಾಡುತ್ತಿದ್ದರು. ಬುವಾರವರು ಇದನ್ನೆಲ್ಲ ಗಮನಿಸಿದ್ದರು. ಈತ ಕೇಳದೆಯೆ ಅವರು ಹಾಡುತ್ತಿದ್ದರು ಆಲಾಪಮಾಡುತ್ತಿದ್ದರು. ರಾಗದೊಂದಿಗೆ ನಲಿಯುತ್ತಿದ್ದರು. ನರಸಿಂಹಲು ಕಿವಿ–ಮನಸ್ಸು ಎರಡನ್ನೂ ತೆರೆದಿಟ್ಟುಕೊಂಡು ಎಲ್ಲವನ್ನೂ ಬಾಚಿಕೊಳ್ಳುತ್ತಿದ್ದರು. ಜಂಬಲದಿನ್ನಿ ಬುವಾರಿಂದ ಕಲಿತ ಜಯಪುರ ಘರಾಣೆಯ ಶೈಲಿ ಮನಸೂರ ಬುವಾರ ಸನ್ನಿಧಿಯಲ್ಲಿ ಪುಟವಿಟ್ಟ ಚಿನ್ನವಾಯಿತು.

ಅಥಣಿಯ ಶಿವಯೋಗಿಗಳ ಮಠದಲ್ಲಿ ಮನಸೂರರು ಸೇವೆ ಮಾಡುತ್ತಿದ್ದ ರೆಂಬುದನ್ನು ಹೇಳಿದನಲ್ಲವೆ! ನರಸಿಂಹಲುರವರು ಬುವಾರವರ ಮನೆಗೆ ಆಗಾಗ ಹೋಗಿ ಬುವಾರ ಸೇವೆ ಮಾಡುತ್ತಿದ್ದ ಪರಿಗೆ ಬುವಾರಿಗೆ ಈತ ಆತ್ಮೀಯನೆನಿಸಿ ಬಿಟ್ಟಿದ್ದರು. ಸೇವೆ ಮಾಡಲು ಅಥಣಿಗೆ ನರಸಿಂಹಲುರವರನ್ನು ಕರೆದೊಯ್ಯಲಾ ರಂಭಿಸಿದರು, ತಂಬೂರಿಯ ಸಾಥ್ ನೀಡಲು –ಪ್ರತಿ ವರ್ಷವೂ. ಇದು ನರಸಿಂಹಲುರವರಿಗೆ ಅನಿರೀಕ್ಷಿತ ಲಾಟರಿ.

ಸತತವಾಗಿ ನಾಲ್ಕು ವರ್ಷ ಹೀಗೆ ಮನಸೂರರು ನರಸಿಂಹಲುರವರನ್ನು ಅಥಣಿಗೆ ಸೇವೆಗೆ ಕರೆದೊಯ್ಯುತ್ತಿದ್ದರು. ನಾಲ್ಕನೆಯ ವರ್ಷದ ಸೇವೆಯ ನಂತರ ಅವರಿಗೆ ಏನೆನ್ನಿಸಿತೋ!.

"ಏ ವಡವಾಟಿ, ಮುಂದಿನ ವರ್ಷದಿಂದ ನೀನು ಇಲ್ಲಿ ಸೇವಾ ಮಾಡೋ!" – ಅಂದರು.

"ಆಗಲಿ ಅಪ್ಪಾಜಿ!"

ಬುವಾರನ್ನು ನರಸಿಂಹಲು ಕರೆಯುತ್ತಿದ್ದುದೇ ಹಾಗೆ. ಅಪ್ಪಾಜಿಯ ಆಣತಿ ಅವರಿಗೆ ತಲೆಯ ಮೇಲಿಟ್ಟುಕೊಂಡ ಆತ್ಮಲಿಂಗವಾಯಿತು.

ಸರಿಯಾಗಿ ಮುಂದಿನ ವರ್ಷ ಮನಸೂರ್ ಬುವಾರವರು ನಿಧನರಾದರು. ನನಗೆ ಪವಾಡಗಳಲ್ಲಿ ನಂಬಿಕೆ ಹಿಂದೂ ಇರಲಿಲ್ಲ, ಇಂದೂ ಇಲ್ಲ, ಮುಂದೂ ಇರುವುದಿಲ್ಲ. ಆದರೆ ಬುವಾರಿಗೆ ತಾವು ಮುಂದಿನ ವರ್ಷ ಅಥಣಿಗೆ ಬರುವ

ಸಂಭಾವ್ಯತೆ ಇಲ್ಲವೆಂಬ ಪೂರ್ವ ಸೂಚನೆಯಿತ್ತೆ? ಅಥವಾ ಈ ಎರಡು ಘಟನೆಗಳು ಕಾಗೆ-ಕೊಂಬೆಯ ಕಥೆಯಂತೆ ಆಕಸ್ಮಿಕವೆ? ಯಾವುದಾದರೂ ಇದ್ದೀತು. ಅದನ್ನು ತಿಳಿಹೇಳಲು ಆ ಮಹಾನ್ ಗಾಯಕ ಇಲ್ಲಿಲ್ಲ.

ಗುರುವಿನ ಗುರುವಿನಾಜ್ಞೆಯಂತೆ ವಡವಾಟಿಯವರು ಅಂದಿನಿಂದಲೂ ಅವಿರತವಾಗಿ ಪ್ರತಿವರ್ಷವೂ ಮಹಾಶಿವರಾತ್ರಿಯ ದಿನ ತಪ್ಪದೆ ಅಥಣಿಯ ಶಿವಯೋಗಿಗಳ ಮಠದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಎಂಥದ್ದೇ ಬೇರೆ ಕಾರ್ಯಕ್ರಮಕ್ಕೂ ಅವರು ಆ ದಿನವನ್ನು ಬೇರೆಯವರಿಗೆ ಕೊಡುವದಿಲ್ಲ. ಹಾಗೆಯೇ ಅಥಣಿಯಲ್ಲಿ ನರಸಿಂಹಲುರವರಿಗೆ ಮನಸೂರ ಬುವಾರಿಗೆ ಸಿಗುತ್ತಿದ್ದ ಗೌರವವೇ ಸಿಗುತ್ತದೆ. ಗುರುಪರಂಪರೆಯಿಂದ ಬಂದ ಶಿಷ್ಯನಲ್ಲವೆ!.

❑

ಚರಣ 15

# ಸಪ್ತಪದಿ ತುಳಿದ ಸಹಧರ್ಮಿಣಿ



1949 ಶಿವರಾತ್ರಿ ಜಾಗರಣೆಯ ದಿನ ವೀರಣ್ಣನವರೊಂದು ಹೆಣ್ಣುಮಗುವಿನ ತಂದೆಯಾದರು. ವೀರಣ್ಣನವರು ಅಂದರೆ ನರಸಿಂಹಲುರವರ ಸೋದರ ಮಾವ. ತಂಗಿ ರಂಗಮ್ಮ ತನ್ನ ಅತ್ತಿಗೆಯ ಬಾಣಂತನ ಮತ್ತು ಮಗುವಿನ ಆರೈಕೆ ಮಾಡಿದರು. ಈ ಮೊದಲೇ ಹೇಳಿದ್ದಂತೆ ಆಗಲೇ ಅವರು ತನ್ನ ಮಗ ನರಸಿಂಹನಿಗೆ ಈಕೆಯೇ ವಧು ಎಂದು ನಿಶ್ಚಯಿಸಿ ಬಿಟ್ಟಿದ್ದರು.

ಗತಿಸಿದ ತಂಗಿಯ ಮಾತುಗಳನ್ನು ಶಿರಸಾವಹಿಸಿ ವೀರಣ್ಣನವರು ನರಸಿಂಹನಿಗೆ ಮಗಳನ್ನು ಕೊಟ್ಟು ಅಳಿಯನ ಇಷ್ಟದಂತೆ ವಡವಾಟಿಯ ದೇವಸ್ಥಾನದಲ್ಲಿ ಸರಳವಾಗಿ ವಿವಾಹ ಮಾಡಿಕೊಟ್ಟರು.

ಮದುವೆಯ ವಿಷಯವನ್ನು ಈಗಾಗಲೇ ಹೇಳಿದ್ದೇನೆ.

ಭಾರತೀಯ ಸಂಸ್ಕೃತಿಯಲ್ಲಿ ವಿವಾಹ ಎನ್ನುವುದು ಒಂದು ಸುಂದರವಾದ ವಿಧ್ಯುಕ್ತ ಕ್ರಮ-ಬೆಳಕು ತೋರಿಸುವ ಬೆಂಕಿ ಪ್ರಜ್ವಲಿಸುತ್ತಿರುವ ಹೋಮ ಕುಂಡದ ಸುತ್ತಲೂ ವಧೂವರರು ಸೀರೆಯ ಸೆರಗು ಮತ್ತು ಉತ್ತರೀಯಗಳನ್ನು ಗಂಟು ಹಾಕಿಕೊಂಡು ಪ್ರದಕ್ಷಿಣೆ ಹಾಕುವುದು, "ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ" ಎಂದು ಪರಸ್ಪರ ವಚನ ನೀಡುವುದು, ನಾಗೋಲಿ-ಇತ್ಯಾದಿ. ವಿವಾಹವಾದ ಮೇಲೆ ಎಷ್ಟು ಜನ ದಂಪತಿಗಳು ಕಾಯಾ ವಾಚಾ ಮನಸಾ ಒಬ್ಬರಿಗೊಬ್ಬರು ನಿಷ್ಠರಾಗಿರುವರು ಎಂಬುದು ಅವರವರಿಗೆ ಬಿಟ್ಟಿರುವ ವಿಷಯ. ಆದರೆ ನಿಜವಾಗಿಯೂ ಹಾಗೆ ನಿಷ್ಠರಾಗಿದ್ದು ಒಬ್ಬರಿಗೊಬ್ಬರು ಸಹವರ್ತಿಯಾಗಿರು ವುದನ್ನು ಕಂಡಾಗ, ಅಂಥದ್ದೊಂದು ಬದುಕಿನ ಬಗ್ಗೆ ಕೇಳಿದಾಗ ಮನಸ್ಸಿನಲ್ಲಿ ಏನೋ ಹೇಳುಲಾಗದ ಅನುಭಾವ.

ನರಸಿಂಹಲುರವರ ತಂದೆಯ ಮನೆಯ ಕಡೆ ಸಾಕಷ್ಟು ಸ್ಥಿತಿವಂತರೆ. ಆದರೆ ನರಸಿಂಹನ ಮನಸ್ಸಿನಲ್ಲಿ ತಾನು ಸ್ವತಂತ್ರ-ಸ್ವಾವಲಂಬಿಯಾಗಿರಬೇಕೆಂಬ ತುಡಿತ ಆತನನ್ನು ಮನೆಯಿಂದ ಹೊರಗೆಳೆದು ತಂದಿತು.

ಶಿವಮ್ಮಳ ತವರು, ಅಂದರೆ ವೀರಣ್ಣನವರ ಮನೆಯಲ್ಲೂ ಪರಿಸ್ಥಿತಿ ಚೆನ್ನಾಗಿತ್ತು. ಮದುವೆಯಾದಾಗ ಆಕೆಯ ವಯಸ್ಸು ಸುಮಾರು ಹದಿನೈದು - ಹದಿನಾರು ಇದ್ದೀತು. ಆಕೆಯ ಇಷ್ಟ-ಅಇಷ್ಟಗಳನ್ನು ಮದುವೆಯ ಬಗ್ಗೆ ಯಾರೂ ಕೇಳಿರಲಾರರು ಆದರೆ ಆಕೆಗೆ ಮಾತ್ರ ತಾನು ನರಸಿಂಹಲುರವರನ್ನು ವಿವಾಹ ವಾದದ್ದಕ್ಕೆ ಯಾವುದೇ ಕೊರಗಿಲ್ಲ.

ಇಷ್ಟೇ ಆದರೆ ಅದು ಅಂಥಾ ವಿಶೇಷವೇನೂ ಅಲ್ಲ. ಆದರೆ ನರಸಿಂಹ ಶಾಸ್ತ್ರೀಯ ಸಂಗೀತವನ್ನು ಕಲಿಯ ತೊಡಗಿದ್ದು ಯಾವಾಗ? ಮದುವೆಯಾದ ಮೇಲೆ !

ಒಂದು ನಿರ್ದಿಷ್ಟ ದುಡಿಮೆ ಇಲ್ಲ, ಸಂಸಾರ ರಥ ಚಲಿಸಲಾರಂಭಿಸಿದೆ. ಗಂಡನಿಗೆ ಸಂಗೀತ ಕಲಿಯುವ ಗೀಳು,ಅದಕ್ಕೆ ಓಡಾಡಲು ಹಣಬೇಕು. ಸಂಪಾದನೆ!? ಈ ಕರೀಕೊಳವಿ ಮಾಸ್ತರ ನಾಟಕಗಳಲ್ಲಿ ವಾದ್ಯ ಊದಿ ಗಳಿಸಿದ್ದು! ಅದೇನು ವರ್ಷವಿಡೀ ಅನುದಿನವೂ ಗಳಿಸುವ ಹಣವೆ ? ನಾಟಕಗಳೇನು, ಸಿನಿಮಾಗಳ ತರಹ ಪ್ರತಿದಿನ ನಡೆಯುವಂಥವೆ?-ಅಂತಹ ಸ್ವರ್ಣಯುಗವಿನ್ನೂ ಇದುವರೆಗೆ ಬಂದಿಲ್ಲ. ಅಂದರೇನು? ಬಂದರೆ ಉಂಟು, ಬಾರದಿದ್ದರಿಲ್ಲ. ಇಂಥ ಪರಿಸ್ಥಿತಿಯಲ್ಲೂ ಗಂಡನ ಮರುಳು! ಸಂಗೀತದ ಮರುಳು!

*ಪ್ರತಿಯೊಬ್ಬ ಸಾಧಕನ ಸಾಧನೆಯ ಹಿಂದೆ*
*ನಾರಿಯಿರುವಳು ದಾರಿದೀಪವಾಗಿ.*

ಶಿವಮ್ಮನವರ ಕೌಟುಂಬಿಕ ಸಂಸ್ಕೃತಿ ಉನ್ನತ ಮಟ್ಟದ್ದು. ಆಕೆಯ ತವರಿಗೆ ಸಂಗೀತ ಹೊಸದಲ್ಲ, ಅದನ್ನು ಕಲಿಯುವ ಹಪಹಪಿಯೂ ವಿಚಿತ್ರವಲ್ಲ. ಆಗಲೇ ಹೇಳಿದಂತೆ ಆಕೆಯ ತಂದೆ ವೀರಣ್ಣನವರು ಶಹನಾಯಿವಾದಕರಾಗಿ ಮಟಮಾರಿಯ ಸುತ್ತಮುತ್ತಲೂ ಹೆಸರಾದ ವ್ಯಕ್ತಿ. ಅಲ್ಲಿಯ ವೀರಭದ್ರೇಶ್ವರ ಸ್ವಾಮಿಯ ದೇಗುಲದಲ್ಲಿ ಸಂಗೀತಸೇವೆ ನಡೆಸುತ್ತಿದ್ದವರು. ಅಂಥವರ ಮಗಳಿಗೆ ತನ್ನ ಗಂಡನ ಮನಸ್ಸು ಅರ್ಥವಾಗದೆ! ನಿಂತರವರು ತನ್ನ ಬಾಳಸಂಗಾತಿಯ ತಪಸ್ಸಿಗೆ ನೆರವಾಗಿ, ನೆರಳು ನೀಡುವ ಮರವಾಗಿ------ಜಂಜಾಟದ ಉರಿಬಿಸಿಲಿನ ಝಳದ ಬಹುಪಾಲನ್ನು ತಾನೇ ಹೀರಿ ಅನಿವಾರ್ಯವೆನಿಸಿದಷ್ಟು ಮಾತ್ರ ಗಂಡನಿಗೆ ಉಳಿಸಿದ ಸಹನಾ ಶೀಲೆಯಾಗಿ. ಸ್ವಲ್ಪ "ಅತಿ" ಎನ್ನಿಸಿರಬಹುದಲ್ಲವೆ ಈ ಉಪಮೆಗಳು! ಆದರೆ ಈ ತಾಯಿಯನ್ನು ಕಂಡು, ಮಾತನಾಡಿಸಿ ಗುರುತಾದವರಿಗೆ ಗೊತ್ತು-ಅತಿಶಯವೇನಿಲ್ಲ ಇದರಲ್ಲಿ-ಎಂದು.

ಈಗಾಗಲೇ ಬರೆದಿರುವೆ-ಗಂಡ ಮೊದಲ ಬಾರಿ ಗುಲ್ಬರ್ಗಕ್ಕೆ ಹೊರಟಾಗ ತನ್ನ ಕಾಲಗೆಜ್ಜೆಗಳನ್ನು ಕಳಚಿ ಗಂಡನಿಗಿತ್ತು ಅವುಗಳನ್ನು ಮಾರಲು ಹೇಳಿದರು ಈಕೆ ಎಂದು.

ಇಲ್ಲ, ಇಲ್ಲಿಗೇ ಮುಗಿಯಲಿಲ್ಲ. ನರಸಿಂಹಲು ತನಗೆ ಗುರುಗಳು ಕಲಿಸಿದ ರಾಗಗಳ ರಿಯಾಜ಼್ ಮಾಡಲು ಕುಳಿತರೆ ಶಿವಮ್ಮನವರದು ತಾನ್‌ಪುರಾ ಸಾಥ್. ಹಗಲಿಡೀ ಮನೆಗೆಲಸ, ಮಕ್ಕಳ ಬಗ್ಗೆ ಕಾಳಜಿ, ಸಂಸಾರದ ಸಮಸ್ಯೆಗಳ ಸಿಕ್ಕುಗಳನ್ನು ಬಿಡಿಸುವುದು-ಇವೆಲ್ಲದರ ಜೊತೆಗೆ ಗಂಡನ ಜೊತೆಗೆ ನಾದಸಹಚರ್ಯೆ! ಈ ಕಾಯಕವನ್ನು ಆಕೆ ತಾನು ತುಂಬು ಗರ್ಭಿಣಿಯಾಗಿದ್ದು ಮನೆ ಗೆಲಸ ಪೂರೈಸಿ ದಣಿದಿದ್ದಾಗಲೂ ಬಿಡಲಿಲ್ಲ. ಮುಖದಲ್ಲಿ ನಗೆ ಮಾಸುತ್ತಿರಲಿಲ್ಲ . ಕೆಲವೊಮ್ಮೆ ರಾತ್ರಿ ಎರಡು ಗಂಟೆಯವರೆಗೂ ರಿಯಾಜ಼್ ನಡೆಯುತ್ತಿತ್ತು. ಆಗಲೂ ಸಹ ಆಕೆಯದು ಅದೇ ಶ್ರದ್ಧೆ. ಗಂಡನಿಗೆ ಸಂಗೀತ ಒಂದು ಧರ್ಮ. ಈಕೆಗೂ ಸಹ ಅದು ಧರ್ಮವೇ. ನಿಜ ಅರ್ಥದಲ್ಲಿ ಈಕೆ ಸಹಧರ್ಮಿಣಿ.

ಇಷ್ಟೆಲ್ಲ ಕಷ್ಟ-ಕಾರ್ಪಣ್ಯಗಳನ್ನು ಎದುರಿಸಿದ ನಂತರ ತನ್ನ ಗಂಡ ಸಾಧಕನಾಗಿ ಮೆರೆದ ಕ್ಷಣಗಳಲ್ಲಿ ಆಕೆಗೆ ಆದದ್ದು ಸಾರ್ಥಕತೆಯ ಅನುಭವ.

ನರಸಿಂಹಲುರವರು ತಮ್ಮ ಬಗ್ಗೆ ಮಾತನಾಡುವಾಗಲೆಲ್ಲ ತಪ್ಪದೆ ತನ್ನ ಸಂಗಾತಿಯನ್ನು ನೆನೆಯುತ್ತಾರೆ. ಆಕೆಯಲ್ಲಿ ತನ್ನ ತಾಯಿಯನ್ನೇ ಕಾಣುತ್ತಾರೆ, ಧನ್ಯರಾಗುತ್ತಾರೆ.

ಈಗಲೂ ಸಹ ಶಿವಮ್ಮನ ಮೈ ಮೇಲೆ ಸ್ವರ್ಣಾಭರಣಗಳಿಲ್ಲ, ನರಸಿಂಹಲು ಮಾಡಿಸಿಕೊಟ್ಟಿಲ್ಲ. ಆಕೆ ಅವು ಬೇಕೆಂದು ಎಂದೂ ಗಂಡನನ್ನು ಕಾಡಲಿಲ್ಲ.

ಜಂಬಲದಿನ್ನಿ ಬುವಾರವರು ಆಗಾಗ ನರಸಿಂಹಲುರವರ ಮನೆಗೆ ಭೇಟಿ ನೀಡುತ್ತಿದ್ದರು. ಶಿವಮ್ಮನ ಗುಣಧರ್ಮಗಳಿಗೆ ಅವರು ಮಾರು ಹೋಗಿದ್ದರು.

"ಎಂಥಾ ಪುಣ್ಯವಂತನಪ್ಪಾ ನೀನು ! ಶಿವಮ್ಮನಂಥಾ ಹೆಂಡತಿ ಸಿಕ್ಕಾಳ ನಿನಗ! ನಿಜವಾಗೂ ಆಕೆ ಶಿವಮ್ಮನ್ಸ ! ಶಿವನ ಅಮ್ಮ ಆಕಿ" -ಎಂದು ಉದ್ಗರಿಸಿದ್ದರೊಮ್ಮೆ ಅವರು.

❑

ಚರಣ 16

# ಹಾದಿ ತೋರಿ ಹೋದವರು

ಅಮ್ಮ -

**ತಂ**ದೆಯನ್ನು ಕಂಡ ನೆನಪೇ ಇಲ್ಲ ನರಸಿಂಹಲುರವರಿಗೆ. ಅವರ ರೂಪ ಹೇಗಿತ್ತು, ಆಕೃತಿ ಹೇಗಿತ್ತು, ಹೇಗೆ ನಡೆದುಕೊಳ್ಳುತ್ತಿದ್ದರು ----- ಎಲ್ಲವೂ ಸಗಟಾಗಿ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ, ಉತ್ತರವಿಲ್ಲದೆ ಉಳಿದು ಹೋಗಿವೆ. ಹಾಗಿದ್ದಿರಬಹುದು, ಹೀಗಿದ್ದಾರು -- ಕಲ್ಪನೆಯ ಕುದುರೆ ನಡೆಯುವ ದಾರಿಯಷ್ಟೆ

ಆದರೆ ತಾಯಿ.... ?

ಖಂಡಿತ ಆಕೆಯ ನೆನಪಿದೆ ನರಸಿಂಹಲುರವರಿಗೆ. ಈತ ಸ್ವತಃ ವಯೋವೃದ್ಧ ನಾಗಿದ್ದು ವಯಸ್ಸಿನ ಗೆರೆಗಳು ಮುಖದಲ್ಲಿ ಮೂಡಿವೆ ಆದರೆ, ತಾಯಿಯ ನೆನಪಾದಾಗ ಈತ ಮತ್ತೆ ಅದೇ ಎಳೆಯ ಏಳು ವರ್ಷ ವಯಸ್ಸಿನ, ಮಾಸಿದ ಚಡ್ಡಿ ಧರಿಸಿದ, ಮಲಗಿರುವ ತಾಯಿಯನ್ನು ಅರ್ಥವಾಗದೆ ಮಿಕಿಮಿಕಿ ದಿಟ್ಟಿಸುವ ಪೋರ ನರಸಿಂಹನಾಗಿಬಿಡುತ್ತಾರೆ. ಮತ್ತೆ ಮಲಗಿರುವ ಆ ತಾಯಿ ! ಆಕೆಗೆ ಮುಂದೆ ವಯಸ್ಸೇ ಆಗುವುದಿಲ್ಲ. ಅದೇ ಇಪ್ಪತ್ತೆರಡು ಇಪ್ಪತ್ಮೂರು ವರ್ಷದ ಹರೆಯ ಆಕೆಗೆ -----ಈಗಲೂ ಸಹ.

ಸಾವಿನತ್ತ ಸರಿದವರಿಗೆ, ಹೋಗಿ ಮರಳಿ ಬಂದರೆನ್ನಲಾದ ಪುರಾಣದ ಪಾತ್ರಗಳಿಗೆ ಸಹ ಮುಂದೆ ವಯಸ್ಸಾಗುವುದೇ ಇಲ್ಲ. ಮಾರ್ಕಂಡೇಯ, ನಚಿಕೇತ ಅಭಿಮನ್ಯು ---- ಯಾರೂ ನಮ್ಮ ಕಲ್ಪನೆಯಲ್ಲೂ ಮುದುಕರಾಗರು. ಇನ್ನು ಸತ್ತು, ಎಳೆಯ ಜೀವನ ನೆನಪಿನಲ್ಲಿ ಮಾತ್ರ ಉಳಿದ ಆಪ್ತರು ! ಅವರಿಗೆ ವಯಸ್ಸು ಹೇಗಾದೀತು!

*ಸ್ಥಾವರಕ್ಕಳಿವುಂಟು,*
*ಜಂಗಮಕ್ಕಳಿವಿಲ್ಲ.*

ಅವರು ಜಂಗಮರು, ಹೃದಯಂಗಮರು, ಅಮರರು, ವಯಸ್ಸು ಇನ್ನು ಅವರ ಬಳಿ ಸುಳಿಯದು.

ಆಕೆ ಸಾಯುವಾಗ ನಸುಕು ಆಗಷ್ಟೇ ಹರಿದು ಜಗಕ್ಕೆ ಬೆಳಕು ಮೂಡುತ್ತಿತ್ತು. ಸಾಯುವ ಮುನ್ನ ಮಾತು ನಿಂತಿದ್ದರೂ ಆಕೆಗೆ ಪೂರ್ಣವಾಗಿ ಪ್ರಜ್ಞೆ ಇತ್ತು. ಕಣ್ಣುಗಳಲ್ಲಿ ಧಾರಾಕಾರ ನೀರು, ಮಗನ ಗತಿಯೇನು! ಮಗನನ್ನು ಮಡಿಲಲ್ಲಿ ಕೂರಿಸಿಕೊಂಡು ಉಡಿಯಿಂದೊಂದಷ್ಟು ಪುಡಿಗಾಸು ತೆಗೆದು ಆತನ ಕೈಯಲ್ಲಿ ಟ್ಟಳಾಕೆ. ಸನ್ನೆ ಮಾತಿನಲ್ಲೇ ಮನೆಯವರೆಲ್ಲರಿಗೂ "ಈ ಹುಡುಗ ಇನ್ನು ನಿಮ್ಮವನು" ಎಂದು ಸಂದೇಶ ನೀಡಿ ಅವನನ್ನು ಅವರಿಗೊಪ್ಪಿಸಿ ಹಾಗೇ, ಕಣ್ಣುಗಳನ್ನು ತೆರೆದಿದ್ದಂತೆಯೇ, ನಡೆದೇ ಬಿಟ್ಟರು ತಾಯಿ. ಮಗ--- ನೋಡುತ್ತಿದ್ದ.

ತಾಯಿಯ ಅಂತಿಮ ಯಾತ್ರೆಗೆ ಸಿದ್ಧತೆ ನಡೆಯುತ್ತಿದ್ದಾಗ ಅಷ್ಟು ಹೊತ್ತು ಹುಡುಗನಿಗೇನು ಕೆಲಸ ಅಲ್ಲಿ! ಯಾರದ್ದೂ ಮಾತಿಲ್ಲ, ಕತೆಯಿಲ್ಲ. ಎಲ್ಲೆಲ್ಲೂ ಮೌನ. ಹುಡುಗನಿಗೆ ಹಸಿವು ಕಾಡತೊಡಗಿತ್ತು. ಆದರೆ ಕೇಳುವುದು ಯಾರನ್ನು? ಸರಿ, ಹುಡುಗ ಮನೆಯಿಂದ ಹೊರಗೆ ನಡೆದ, ಹತ್ತಿರದೊಂದು ಅಂಗಡಿಗೆ ಹೋದ. ಕೈಲಿ-ಕಾಸು ಇತ್ತಲ್ಲವೆ! ಒಂದರೆಡು ನಾಣ್ಯಗಳನ್ನು ಅಂಗಡಿಗೆ ನೀಡಿ ಪುಠಾಣಿ, ಬೆಲ್ಲ ಹಾಗೂ ಮಂಡಾಳು (ನಮ್ಮ ಕಡೆಯ ಮಂಡಕ್ಕಿ) ಕೊಂಡ, ತಿಂದ, ಮರಳಿ ಮನೆಗೆ ಬಂದು ನೀರು ಕುಡಿದ--- ---------

ಎರಡು ವರ್ಷಗಳ ಮಗುವಾಗಿದ್ದಾಗಿನಿಂದಲೂ ನರಸಿಂಹನಿಗೆ ಹಸಿವೇ ಇರುತ್ತಿರಲಿಲ್ಲ. ಇದು ಅಮ್ಮನಿಗೆ ಚಿಂತೆಗೆ ಕಾರಣವಾಗಿತ್ತು. ಹೊಟ್ಟೆಯಲ್ಲಿ ಎಡಭಾಗದಲ್ಲೊಂದು ಗಡ್ಡೆಯಿದ್ದು ತುತ್ತು ಬೀಳುವ ಜಾಗವನ್ನು ಒತ್ತರಿಸಿಕೊಂಡಿತ್ತು. ತುತ್ತಿಗೆ ಎಡೆಯೆಲ್ಲಿ? ತಾಯಿ ಅಳುತ್ತಿದ್ದಳಾಗ. ಈಗ! ಹುಡುಗನ ಹಸಿವನ್ನು ಕಂಡು ಆಕೆಯ ಆತ್ಮ ನಗುತ್ತಿರಬಹುದೆ!

ತಾಯಿ ರಂಗಮ್ಮ ಸ್ವತಃ ಹಾಡುಗಾತಿ. ಮನೆಗೆಲಸ ಮಾಡುವಾಗ, ದೇವರ ಪೂಜೆ ನಡೆದಾಗ ಸೊಗಸಾಗಿ ಹಾಡುತ್ತಿದ್ದರಾಕೆ. ಹುಡುಗ ಕೇಳುತ್ತಿದ್ದ ಅದನ್ನು. ಹೃದಯದಲ್ಲಿ ಸಂಗೀತದ ಬಿತ್ತನೆಯಾಗುತ್ತಿತ್ತು.

ಆ ಸದಭಿರುಚಿಯ ಬೀಜ ಮೊಳಕೆಯೊಡೆದು, ಚಿಗುರಿ, ಮುಂದೆ ಹುಡುಗನನ್ನು ಸಂಗೀತರಸಯಾತ್ರೆಗೆ ತಯಾರು ಮಾಡಿತ್ತು. ವಡವಾಟಿ ಗ್ರಾಮದ, ತಾಯಿ ತಂದೆಯರನ್ನು ಕಳೆದುಕೊಂಡಿದ್ದ ಆ ಬಾಲಕನಿಗೆ ಶಾರದೆ ಒಲಿದಳು.

ಈಗಲೂ ನರಸಿಂಹಲುರವರಿಗೆ ಅನಿಸುತ್ತದೆ-ತನ್ನ ಅಮ್ಮ ಸದಾ ತನ್ನ ಬೆನ್ನು ಹಿಂದಿದ್ದು ಕಾಯುತ್ತಿದ್ದಳು, ತನ್ನ ಪುಟ್ಟ ಬೆರಳುಗಳನ್ನು ಆಕೆ ಹಿಡಿದು ಮುನ್ನಡೆಸುತ್ತಿದ್ದಳೆಂದು.

ನರಸಿಂಹಲು ಹೇಳುತ್ತಾರೆ.

"ನನ್ನ ಅಮ್ಮ ಕಾಯ ಕಳೆದ ಮೇಲೂ ಬಹಳಷ್ಟು ವರ್ಷಗಳ ಕಾಲ ನನಗೆ ಕನಸಿನಲ್ಲಿ ಬಂದು ಮೈದೋರುತ್ತಿದ್ದಳು ನಾನು – 'ಯಾಕಮ್ಮ ಹಾಗೆ ದೂರ ನಿಂತಿದ್ದೀ, ಬಾರಮ್ಮ !' --ಅಂತ ಕರೆಯುತ್ತಿದ್ದೆ. ಆಕೆ ಬರುತ್ತಿರಲಿಲ್ಲ, ಸುಮ್ಮನೆ ಹೂನಗೆ ಚೆಲ್ಲುತ್ತಿದ್ದಳು. ಆಮೇಲೆ ಹಾಗೇ ಕರಗಿ ಹೋಗುತ್ತಿದ್ದಳು. ನನ್ನ ಕನಸು ಕರಗುತ್ತಿತ್ತು. ಆದರೆ ಇತ್ತೀಚೆಗೆ ಒಂದು ಐದಾರು ವರ್ಷಗಳಿಂದ ನನ್ನ ಕನಸುಗಳಲ್ಲಿ ಬರುತ್ತಿಲ್ಲ. ಬಹುಶಃ ಅಕಾಲ ಮೃತ್ಯುವಿಗೀಡಾದ ಆಕೆಗೆ ಅಷ್ಟು ಆಯಸ್ಸು ಇತ್ತೋ ಏನೋ ಅಂತ ಅನ್ನಿಸುತ್ತದೆ ನನಗೆ."

ಅವರ ನಂಬಿಕೆ ಮತ್ತು ನನ್ನ ನಂಬಿಕೆ ಒಂದೇ ಇರಬೇಕಾಗಿಲ್ಲ, ಆದರೆ ಆ ಮಾತುಗಳಲ್ಲಿ ಒಂದು ಸಂವೇದನೆ ಇದೆಯಲ್ಲ! ಅದು ನನಗೆ, ಬಹುಶ: ಈ ಪುಸ್ತಕ ಓದುವ ನಿಮಗೂ ಅರ್ಥವಾಗುತ್ತದೆ, ಅಲ್ಲವೇ!

**– ಗುರು –**

***ಗುರು ಗೋವಿಂದ ದೋವು ಖಡೇ ಕಾಕೆ ಲಾಗೂ ಪಾಯ್।***
***ಬಲಿಹಾರೀ ಗುರು ಆಪನೇ ಜಿನ ಗೋವಿಂದ ದಿಯೋ ಬತಾಯ್।***

ಗುರು ಮತ್ತು ಗೋವಿಂದ –ಅಂದರೆ ದೇವರು – ಇಬ್ಬರೂ ಎದುರಿಗೆ ಬಂದು ನಿಂತಲ್ಲಿ ಯಾರ ಪಾದಗಳನ್ನು ಮೊದಲು ಮುಟ್ಟಬೇಕು? ಉತ್ತರ ಸುಲಭ-- ಗುರುವಿನ ಪಾದಗಳು, ಏಕೆಂದರೆ ಗುರುವಿನ ಕೃಪೆಯಿಂದಲೇ ಪರಮಾತ್ಮನ ಸಾಕ್ಷಾತ್ಕಾರವಾದದ್ದು, ಅಲ್ಲವೇ!

ಅಂದು ಸಂತಕಬೀರರು ಆಡಿದ ನುಡಿಮುತ್ತುಗಳಿವು, ನರಸಿಂಹಲುರವರಿಗೆ ಕಬೀರರ ಈ ದೋಹಾ ನಾನು ಹೇಳುವತನಕ ಗೊತ್ತಿರಲಿಲ್ಲವೆಂದು ಕಾಣಿತ್ತದೆ. ಆದರೆ ಈ ತತ್ವವನ್ನು ಅವರಾಗಲೇ ಹೃದ್ಗತ ಮಾಡಿಕೊಂಡಿದ್ದರು, ಅದರಂತೆಯ ಈಗಲೂ ನಡೆದು ಕೊಳ್ಳುತ್ತಿದ್ದಾರೆ.

ತಾಯಿ ತಂದೆಯರ ಸೇವೆಯಲ್ಲಿ ನಿರತನಾದ ಪುಂಡಲೀಕನಿಗೆ ವಿಠಲ ಪ್ರತ್ಯಕ್ಷನಾಗಿ ತಾನು ಬಂದಿದ್ದೇನೆಂದು ಸೂಚನೆ ಕೊಟ್ಟನಂತೆ. ಪುಂಡಲೀಕ ಏನು

ಮಾಡಿದನಂತೆ ಗೊತ್ತೆ? ಬಹಳ ಹೊತ್ತು ನೆಲ ಮುಟ್ಟದೆ ಗಾಳಿಯಲ್ಲಿ ನಿಂತಿದ್ದ ವಿಠಲನ ಕಡೆ ಒಂದು ಇಟ್ಟಿಗೆ ಎಸೆದು ತಾನು ತನ್ನ ಕಾಯಕ ಮುಗಿಸಿ ಬರುವತನಕ ಅದರ ಮೇಲೆ ನಿಲ್ಲಲು ಹೇಳಿ ತನ್ನಷ್ಟಕ್ಕೆ ತಾನು ಕರ್ತವ್ಯ ನಿರತನಾದನಂತೆ. ವಿಠಲ ಆ ಇಟ್ಟಿಗೆಯ ಮೇಲೆ ನಿಂತು ಸುಂದರ ಶಿಲ್ಪವಾಗಿ ನೆಲೆಸಿದನಂತೆ.

ಕತೆ!----ಆದರೆ ಎಷ್ಟುಸುಂದರ! ಕತೆ ತೋರಿದ ಬೆಳಕು ಎಷ್ಟು ನಿಚ್ಚಳ !

ನರಸಿಂಹಲುರವರದ್ದು ಅದೇ ನಿಷ್ಠೆ. ತಾಯಿ ತಂದೆಯರ ಪ್ರೀತಿ ಕಾಳಜಿಗಳಿಂದ ವಂಚಿತನಾದ ಹುಡುಗನಿಗೆ ಅಂಥ ಪ್ರೀತಿ, ಕಾಳಜಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಾರ್ಗದರ್ಶನ ಮಾಡಬಲ್ಲ ಒಬ್ಬರು ಬೇಕಿತ್ತು. ಹುಡುಕಿ ಕೊನೆಗೆ ಸಿಕ್ಕಿದ್ದು ಕಲ್ಪವೃಕ್ಷ.

"ನೋಡಿ, ಹರಿಯವರೆ!"

ಇದು ನರಸಿಂಹಲುರವರು ಮಾತಿಗೆ ತೊಡಗುವ ರೀತಿ--ನಮ್ಮ ಮಾತುಕತೆಗಳಲ್ಲಿ. ತಮ್ಮ ಗುರುಗಳ ಬಗ್ಗೆ ಮಾತನಾಡಲೂ ಸಹ ಇದೇ ರೀತಿ ಆರಂಭಿಸಿದರು. ಮುಂದೆ ಒಂದರ್ಧ ನಿಮಿಷ ಕಾಲ ಮೌನ. ಅವರ ಕಣ್ಣುಗಳು ಎದುರು ಸೂರು ಮತ್ತು ಗೋಡೆಗಳ ಕೂಡು ಜಾಗವನ್ನು ದಿಟ್ಟಿಸುತ್ತಿದ್ದವು. ಆ ಕಣ್ಣುಗಳ ಅಂಚಿನಲ್ಲಿ ಹೊರಬೀಳಲು ಅಪ್ಪಣೆ ಬೇಡಿ ಕಾಯುತ್ತಿದ್ದವು ಹನಿಗಳು --- ಒಂದೊಂದೇ ಹನಿಯಷ್ಟೇ.

ಗುರುಗಳಿಂದ ಕೇಳಿದ ಕತೆಯನ್ನು ನರಸಿಂಹಲುರವರು ತಮ್ಮ ನೆನಪಿನ ಸುರುಳಿ ಬಿಚ್ಚಿಡುತ್ತಾ ಹೇಳುತ್ತಾ ಹೋದರು---

ಪಂಡಿತ ಸಿದ್ಧರಾಮ ಜಂಬಲದಿನ್ನಿಯವರ ತಂದೆ-ಚನ್ನಪ್ಪನವರೆಂದು ಅವರ ಹೆಸರು-ಜಂಬಲದಿನ್ನಿಯ ಸುತ್ತಮುತ್ತ ಖ್ಯಾತರಾಗಿದ್ದ ಮದ್ದಳೆವಾದಕರಾಗಿದ್ದರು. ಸಂಗೀತದ ಬಗ್ಗೆ ತುಂಬಾ ಆಸಕ್ತಿ ಇತ್ತು ಅವರಿಗೆ. ತನ್ನ ಹಾಗೆ ತನ್ನ ಮಗ ಸಿದ್ಧರಾಮನೂ ಸಂಗೀತಗಾರನಾಗಬೇಕೆಂಬ ಆಸೆ. ಸಿದ್ಧರಾಮ ಹತ್ತು ಹದಿನೆರಡು ವಯಸ್ಸಿನ ಎಳೆಯ ಹುಡುಗನಾಗಿದ್ದ. ಅವನಿಗೆ ಅದೆಲ್ಲ ಏನು ತಿಳಿದೀತು! ಅಪ್ಪನ ಮದ್ದಳೆಯನ್ನು ಬಾರಿಸಲು ಕಲಿಯಲಿಲ್ಲ.

"ಏ ಸಿದ್ಧಾ, ಮುಸಿ ಬಿಟ್ಟು ನಡಿ ನೀ ಇನ್ನ, ಏನರೇ ಕಲ್ತು ದೊಡ್ಡಾವ ಆಗೂತನಾ ಮನೀಗೆ ಬರಬ್ಯಾಡ"-

ಒಮ್ಮೆ ಅಸಹನೆಯಿಂದ ಸಿಡುಕಿದ ಅಪ್ಪ ಮಗನನ್ನು ಮನೆಯಿಂದ ಹೊರಗೆ ಅಟ್ಟಿಯೇ ಬಿಟ್ಟರು—ಮನೆಯವರ ಮಾತಿಗೂ ಸೊಪ್ಪು ಹಾಕದೆ. ಬರಿದೇ ಅಟ್ಟಿದ್ದಲ್ಲ, ಬಡಿಗೆಯಿಂದ ಬಡಿದಟ್ಟಿದರವರು.

ಪರದೇಸಿಯಾಗಿ ದಿಕ್ಕೆಟ್ಟ ಸಿದ್ಧರಾಮನನ್ನು ಪರಿಚಯಸ್ಥರೊಬ್ಬರು ಯಾದಗಿರಿಯಲ್ಲಿ ಯಾರೋ ಒಬ್ಬ ಮೇಷ್ಟರ ಮನೆಯಲ್ಲಿ ಬಿಟ್ಟರು. ಹುಡುಗ ಅಲ್ಲಿ ಸಂಗೀತದ ಬದಲಿಗೆ ಅಕ್ಷರಸ್ತನಾಗಲು ಪ್ರಯತ್ನಿಸಿದನು. ಮೇಷ್ಟರ ಮನೆಯಲ್ಲಿ ಸಣ್ಣ ಪುಟ್ಟ ಕೆಲಸಗಳು, ಸಮಯಸಿಕ್ಕಾಗ ಓದು-ಬರಹ.

ವಯಸ್ಸು ಹದಿನೆರಡಾದರೂ ಹುಡುಗ ಮುಗ್ಧ. ಮೇಷ್ಟರು ಹೇಳಿದ್ದನ್ನು ಅಕ್ಷರಶಃ ಬಿಡದೆ ಮಾಡುವ ವಿಧೇಯತೆ ಆತನದು.

ಮೇಷ್ಟರು ಒಮ್ಮೆ ಸಿದ್ಧರಾಮನಿಗೆ ಹೇಳಿದರು. "ಸಿದ್ದಣ್ಣ ,ಈ ಬಟ್ಟೆಯೆಲ್ಲ ತಗಂಡು ಬಾವಿಗೆ ನಡಿ. ಒಕ್ಕೊಂಡು ಬರೋಣ. ನಾ ಹಿಂದ್ಕ ಬರ್ತೀನಿ".

ಅಂದು ಬೆಳಿಗ್ಗೆ ಹುಡುಗ ಅವರು ಹೇಳಿದಂತೆ ಬಟ್ಟೆ ಗಂಟು ಎತ್ತಿಕೊಂಡು ಬಾವಿಗೆ ನಡೆದ. ಮನೆಯಿಂದ ಸಾಕಷ್ಟು ದೂರವಿತ್ತದು. ಹುಡುಗ ಬಾವಿಯ ಬಳಿ ತಲುಪಿ ಬಟ್ಟೆಯ ಗಂಟು ಇಟ್ಟುಕೊಂಡು ಮೇಷ್ಟರಿಗಾಗಿ ಕಾದುಕುಳಿತನು.

ಸೂರ್ಯನೇನು ಹುಡುಗನನ್ನು ನೋಡುತ್ತಾ ನಿಲ್ಲುವ ಜಾಯಮಾನದವನೆ! ಅವನ ತೇರು ಆಕಾಶದಲ್ಲಿ ನಡುನೆತ್ತಿಗೇರಿತು. ಮಧ್ಯಾಹ್ನ, ಹುಡುಗ ಕಾಯುತ್ತಲೇ ಇದ್ದನು, ಹಸಿದ ಹೊಟ್ಟೆ. ಆದರೆ ಮೇಷ್ಟರು ಹೇಳಿದ್ದಾರಲ್ಲ, ಇಲ್ಲಿರು ಎಂದು!

ಸೂರ್ಯ ಅಲ್ಲಿಂದ ಮುಂದೆ ಸರಿಯುತ್ತಾ ಸರಿಯುತ್ತಾ ಪಡುವಣ ದಿಗಂತವನ್ನು ತಲುಪಿದನು. ಆಕಾಶದಲ್ಲಿ ಅಲ್ಲಿ-ಇಲ್ಲಿ ಚೆದರಿದ್ದ ಮೋಡಗಳ ಮೇಲೆಲ್ಲಾ ಕೆಂಬಣ್ಣ, ಹುಡುಗ ನೋಡುತ್ತಲೇ ಇದ್ದನು. ಕಾಯುತ್ತಲೇ ಇದ್ದನು.

ಸೂರ್ಯ ಮನೆಗೆ ನಡೆದನು. ಅವನಿಗೆ ಮೇಷ್ಟರೇನೂ "ಇಲ್ಲಿಯೇ ಇರು" ಎಂದು ಹೇಳಿರಲಿಲ್ಲವಲ್ಲ! ಹೇಳಿದ್ದರೂ ಆತ ಈ ಹುಡುಗನಷ್ಟು ವಿಧೇಯನೇ ಅವರ ಮಾತು ಕೇಳಲು! ತಾನಾಯಿತು, ತನ್ನ ಕೆಲಸವಾಯಿತು ಅವನಿಗೆ. ಅವನ ಪಾಳಿ ಮುಗಿದಿತ್ತು.

ಸಿದ್ಧರಾಮನ ಪಾಳಿ ಮುಗಿದಿರಲಿಲ್ಲವಲ್ಲ! ಅಲ್ಲಿಯೇ ಕುಳಿತಿದ್ದ. ಕತ್ತಲು ಆವರಿಸುತ್ತಿತ್ತು.

ಮೇಷ್ಟರು ಅವನ ಬಗ್ಗೆ ಮರೆತೇ ಬಿಟ್ಟಿದ್ದರು. ಅವರ ಕುಟುಂಬವೂಸಹ – ಹುಡುಗ ಇಲ್ಲೇ ಎಲ್ಲೋ ಹೋಗಿದ್ದಾನು, ಬರುತ್ತಾನೆ ಎಂದು ಕಾಯುತ್ತಿದ್ದರು. ಆದರೆ ರಾತ್ರಿ ಊಟದ ಸಮಯ ಬಂದರೂ ಹುಡುಗ ಬರುವ ಲಕ್ಷಣ ಕಾಣಲಿಲ್ಲ.

ಮನೆಯವರಿಗೆ ಕಳವಳ ಶುರುವಾಯಿತು. ಮೇಷ್ಟರ ಬಳಿಬಂದು ಹೇಳಿದರು–" ಸಿದ್ಧ ಯಾಕೋ ಕಾಣ್ತಾ ಇಲ್ಲ, ಎಲ್ಲಿ ಹೋಗಿದ್ದಾನು! ಮುಂಜಾನೆ ಹೋದಾಂವ !"

ಮೇಷ್ಟರಿಗೆ ಛಕ್ಕನೆ ನೆನಪಾಯಿತು ಆಗ ತಮ್ಮ ಪ್ರಮಾದ. ಕೂಡಲೇ ಅವರು ಎದ್ದು ಒಂದು ಲಾಟೀನು ಹೊತ್ತಿಸಿ ಹಿಡಿದುಕೊಂಡು ಬಾವಿಯ ಕಡೆಗೆ ನಡೆದರು. ಕರೆದರು "ಸಿದ್ಧಣ್ಣಾ"

ಉತ್ತರವಿಲ್ಲ.

ಬಾವಿಯ ಬಳಿಗೆ ಬಂದು ನೋಡಿದರೆ--- ಹುಡುಗ ಅಲ್ಲಿಯೇ ಬಟ್ಟೆಯ ಗಂಟಿನ ಮೇಲೆ··ತಲೆ ಇಟ್ಟುಕೊಂಡು ನಿದ್ದೆ ಹೋಗಿದ್ದಾನೆ. "ಛೇ! ಎಂತಹ ಕೆಲಸ ಆಗಿ ಹೋಯಿತಲ್ಲ" ಮೇಷ್ಟರು ಕಳವಳಿಸಿದರು.

ಸಿದ್ಧರಾಮನನ್ನು ಎಬ್ಬಿಸಿಕೊಂಡು ಮನೆಗೆ ಕರೆದುಕೊಂಡು ಬಂದದ್ದಾಯಿತು. ಅಂದಿನಿಂದ ಹುಡುಗ ಮನೆ ಬಿಡುವವರೆಗೂ ಮೇಷ್ಟರು ಅವನನ್ನು ಒಂಟಿಯಾಗಿ ಬಾವಿಯ ಬಳಿಗೆ ಕಳಿಸಲಿಲ್ಲ.

ಹಿಂದೆ ಈಗಾಗಲೇ ನರಸಿಂಹಲುರವರು ಹೀಗೆ ಗುರುವಿನಾಜ್ಞೆ ಎಂದು ಮಳೆಯಲ್ಲಿ ನೆನೆಯುತ್ತಾ ಅವರ ಗುರುಮನೆಯ ಮುಂದೆ ನಿಂತಿದ್ದ ಪ್ರಸಂಗ ಹೇಳಿದ್ದೆನಲ್ಲವೇ? ಗುರುಪತ್ನಿ ಶಿಷ್ಯನಿಗೆ ಬೈದಾಗ ಗುರು ತಡೆದಿದ್ದರು. ಅವರಿಗೆ ಶಿಷ್ಯನ ಮನಸ್ಸು ಅರ್ಥವಾಗಿತ್ತು ಅವನಲ್ಲಿ ತಮ್ಮನ್ನೇ ಕಂಡಿದ್ದರವರು!

ಮುಂದೆ ಮೇಷ್ಟರೇ ನಿರ್ಧರಿಸಿದರು – ಸಾಕಿನ್ನು ಇಲ್ಲಿ ಈ ಹುಡುಗ ಇರುವುದು–ಎಂದು. ಊರವರಿಂದ ಹತ್ತು ಹನ್ನೆರಡು ರೂಪಾಯಿ ಚಂದಾ ಸಂಗ್ರಹ ಮಾಡಿ ಅವರು ಸಿದ್ಧರಾಮನನ್ನು ಗದುಗಿನ ಪಂಚಾಕ್ಷರಿ ಗವಾಯಿಯವರ ಬಳಿಗೆ ಕಳಿಸಿಕೊಟ್ಟರು.

ಪಂಚಾಕ್ಷರಿ ಗವಾಯಿಯವರ ಗುರುಕುಲ ಈಗಾಗಲೇ ಹೇಳಿದಂತೆ ಸಂಗೀತ ಶಾಲೆ. ಅಲ್ಲಿಗೆ ಸಾಕಷ್ಟು ಬಾಲಕರು ಕಲಿಯಲು ಬರುತ್ತಿದ್ದರು, ಸಿದ್ಧರಾಮ ಸಹ ಅವರಲ್ಲಿ ಒಬ್ಬನಾದನು, ಆದರೆ ಸಂಗೀತ!

ಹುಡುಗನಿಗೆ ಉಗ್ಗು (ಗುಕ್ಕು ಎನ್ನುತ್ತಾರೆ ರಾಯಚೂರಿನ ಭಾಗದಲ್ಲಿ) ಇತ್ತು, ಜೊತೆಗೆ ತೊನ್ನು ಸಹ. ಉಳಿದ ಹುಡುಗರು ಸಿದ್ಧರಾಮನನ್ನು ಅಸ್ಪೃಶ್ಯನಂತೆ ದೂರವಿಡುತ್ತಿದ್ದರು. ಉಗ್ಗಿನಿಂದಾಗಿ ಸಂಗೀತ ಪ್ರಾರಂಭ ಇನ್ನೂ ಆಗಿರಲಿಲ್ಲ, ಜೊತೆಯ ಹುಡುಗರಿಗೆ ಸಿದ್ಧರಾಮ ಆಗ ಗೇಲಿಗೆ, ಅಸಹ್ಯಕ್ಕೆ ವಸ್ತುವಾಗಿದ್ದನು.

ಬಸವರಾಜ ರಾಜುಗುರು ಸಹ ಆಗ ಸಿದ್ಧರಾಮನ ಸಹಪಾಠಿ ಯಾಗಿದ್ದರು. ಹುಡುಗ ಬಸವರಾಜ ಸಹ ಸಿದ್ಧರಾಮನನ್ನು ದೂರವಿಟ್ಟಿದ್ದನು. ಊಟಕ್ಕೆ ಆತನೂ ಸೇರಿ ಎಲ್ಲ ಮಕ್ಕಳೂ ಸಿದ್ಧರಾಮನಿಂದ ಬೇರೆಯಾಗಿಯೇ ಕುಳಿತು ಉಣ್ಣುತ್ತಿದ್ದರು. ಒಮ್ಮೆ ಗವಾಯಿಗಳು ಸಿದ್ಧರಾಮನನ್ನು ಕರೆದು ಕೇಳಿದರು.

"ಯಾಕಪ್ಪಾ ಸಿದ್ದಣ್ಣಾ, ಅವರ ಜೊತೆ ಉಣ್ಣುದಿಲ್ಲ?"

ಹುಡುಗ ಹೇಳಿದನು

"ಗು–ಗು–ಗುರುಗಳೇ, ನನನಗ ತೊನ್ನೈತಿ. ಅದಕ್ಕ ಅವರು ಯಾರೂ ನನನನ್ನ ಜತಿ ಸೇೀರಿಸಿಕೊಳ್ಳೊದಿಲ್ಲ."

ಗುರುಗಳು ಅವನನ್ನು ಹತ್ತಿರ ಕರೆದು ಮೈಮುಟ್ಟಿ ಸವರಿ ಹೇಳಿದರು–

"ಅದೇನಾಕ್ಕೈತಿ, ಹೋಗ್ತದ ಬಿಡು. ನೀ ಇನ್ನು ಮುಂದ ಗಾಯನಾ ಕಲೀ."

"ಗುರುಗಳೇ ನನಗ ಗುಗುಕ್ಕೈತಿ, ಗಾಗಾಗಾ ಗಾಯನಾ ಹ್ಯಾಂಗ ಕಲೀಲಿ?"

"ಅದೇನಾಗ್ತದೋ? ನೀ ಗಾಯನಾ ಕಲಿ, ಆ ಗುಕ್ಕು ತನ್ತಾನ್ಕ ಹೋಗ್ತೈತಿ"

ಅಂದಿನಿಂದ ಸಿದ್ಧರಾಮನ ಸಂಗೀತ ಪಾಠ ಶುರುವಾಯಿತು. ಗ್ವಾಲಿಯರ್ ಘರಾಣದ ಸಂಗೀತಾಭ್ಯಾಸ. ಶ್ರದ್ಧೆ–ಪರಿಶ್ರಮಗಳಿಂದ ಹುಡುಗ 14ವರ್ಷ ಸಂಗೀತ ಕಲಿತನು. ಮುಂದೆ ಪಂಚಾಕ್ಷರಿಗವಾಯಿಯವರು ಶಿವೈಕ್ಯರಾದ ನಂತರ ಪಂಡಿತ ಮಲ್ಲಿಕಾರ್ಜುನ ಮನ್ಸೂರರಲ್ಲಿ 10 ವರ್ಷ ಕಲಿತು ಜಯಪುರ ಘರಾಣೆಯಲ್ಲೂ ಪರಿಣಿತರಾದರು ಸಿದ್ಧರಾಮ ಜಂಬಲದಿನ್ನಿಯವರು.

ಪಂಡಿತ್ ಭೀಮಸೇನ ಜೋಷಿಯವರು ಪುಣೆಗೆ ವಾಸಸ್ಥಳ ಬದಲಾಯಿಸಿ ದವರು ಮಹಾರಾಷ್ಟ್ರದ ವೈಶಿಷ್ಟ್ಯವಾದ ಅಭಂಗಗಳನ್ನು ಹಾಡುವುದರ ಮೂಲಕ ಅಲ್ಲಿ ಜನಪ್ರಿಯರಾದರು. ಅವರು ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾಗಿರುವುದು ವಿಶೇಷವಾಗಿ ಅಭಂಗಗಳ ಗಾಯನದ ಮೂಲಕ. ಅಭಂಗಗಳು ಅಲ್ಲಿಯವರಿಗೆ

ಧಮನಿಗಳಲ್ಲಿ ಹರಿಯುವ ನೆತ್ತರಿನಷ್ಟೇ ಆತ್ಮೀಯ. ಹೀಗಾಗಿ ಶಾಸ್ತ್ರೀಯ ಸಂಗೀತದಲ್ಲಿ ಅಪ್ರತಿಮರಾದ ಪಂಡಿತ ಜೋಷಿಯವರು ಅಲ್ಲಿ ಜನಪ್ರಿಯರಾಗಲು ಕಾರಣ ಅಭಂಗಗಳೇ.

ಇದೇ ರೀತಿ ಪಂಡಿತ ಜಂಬಲದಿನ್ನಿಯವರಲ್ಲೂ ಒಂದು ವೈಶಿಷ್ಟ್ಯವಿತ್ತು-– ಅವರ ವಚನಗಾಯನ.

ವಚನಗಳನ್ನು ಹಾಡುವುದರಲ್ಲಿ ಪಂಡಿತ್ ಜಂಬಲದಿನ್ನಿಯವರು ಉಳಿದೆಲ್ಲರಿಗಿಂತಲೂ ಭಿನ್ನ. ಹಿಂದುಸ್ತಾನಿ ರಾಗಗಳ ಚೀಸ್‌ಗಳ ಬಂದಿಶ್‌ಗಳನ್ನು ವಚನಗಳಿಗೆ ಕಟ್ಟಿಕೊಟ್ಟು ಹಾಡುತ್ತಿದ್ದರವರು. ಉಳಿದವರು ಮೂರು---ಹೆಚ್ಚೆಂದರೆ ನಾಲ್ಕೈದು ನಿಮಿಷಗಳಲ್ಲಿ ಹಾಡಿ ಮುಗಿಸುವ ವಚನಗಳನ್ನು ಅವರು ಆಲಾಪ್. ಬಂದಿಶ್, ತಾನ್-ಬೋಲ್‌ತಾನ್ ಗಳೊಂದಿಗೆ ಸುಮಾರು ಮೂವತ್ತು ನಿಮಿಷಗಳವರೆಗೂ ಹಾಡುತ್ತಿದ್ದರು. ಯಮನ್ ರಾಗದ ಚೀಸ್ ಒಂದಿದೆ.

*"ಏರೀ ಆಲೀ ಪಿಯಾ ಬಿನಾ-ಸಖೀ---"*

ಈ ಚೀಸ್‌ನ ಬಂದಿಶ್ ಅನ್ನು ಅವರು-

*'ನೀನೊಲಿದರೆ ಕೊರಡು ಕೊನರುವುದಯ್ಯ"*

ಈ ವಚನಕ್ಕೆ ಅಳವಡಿಸಿ ಹಾಡುತ್ತಿದ್ದರು, ಇಂಥವು ಅನೇಕ. ಆದರೆ ಏಕೆ?

ಉತ್ತರ ಕರ್ನಾಟಕದ ಕಡೆ ವೀರಶೈವ ಮಠಗಳಲ್ಲಿ ಪಂಡಿತ್ ಜಂಬಲದಿನ್ನಿಯವರ ಕಾರ್ಯಕ್ರಮಗಳು ಬಹಳ ಇರುತ್ತಿದ್ದವು. ಅಲ್ಲಿ ಸೇರುವ ಜನರಿಗೆ ಹಿಂದಿ ಅಥವಾ ಕನ್ನಡೇತರ ಯಾವುದೇ ಭಾಷೆಯ ಹಾಡುಗಳೂ ಅರ್ಥವಾಗದವು.

ಎರಡನೆಯದಾಗಿ ಮಠಗಳಲ್ಲಿ ಪ್ರೇಮಕ್ಕೆ, ವಿರಹಕ್ಕೆ, ಪ್ರತೀಕ್ಷೆಗೆ ಸಂಬಂಧಿಸಿದ ಚೀಜ್‌ಗಳು ಅರ್ಥವಾದರೂ ಸಹ-ಅಲ್ಲಿ ಪ್ರಸ್ತುತವಾಗಿರುವುದಿಲ್ಲ. ಅಲ್ಲಿ ವೀರಶೈವರ ಶರಣರ ವಚನಗಳಿಗೆ ಪ್ರಾಮುಖ್ಯ ಹೆಚ್ಚು. ಹೀಗಾಗಿ ಈ ವಚನಗಳಿಗೆ ಸಾಧಾರಣವಾದ ಲಘುಧಾಟಿ ಅಳವಡಿಸುವ ಬದಲು ರಾಗಗಳ ಬಂದಿಶ್‌ಗಳನ್ನೇ ಹಚ್ಚಿ ಹಾಡಿದರೆ! ವಚನಗಳು ಹಾಗೂ ಹಿಂದುಸ್ತಾನೀ ರಾಗಗಳು ಜೊತೆಜೊತೆಗೆ ಜನಪ್ರಿಯರಾಗಬಲ್ಲವು. ಇದು ಜಂಬಲದಿನ್ನಿ ಗುರುಗಳ ಉದ್ದೇಶ.

ಪಂಡಿತ್ ಭೀಮಸೇನ ಜೋಷಿಯವರು ಪುಣೆಗೆ ವಾಸ್ತವ್ಯ ಬದಲಿಸಿದಾಗ ಪಂಡಿತ್ ಸಿದ್ಧರಾಮ ಜಂಬಲದಿನ್ನಿಯವರೂ ಅವರಂತೆ ಮಾಡಿದ್ದಲ್ಲಿ

ವಚನಗಾಯನದ ಜೊತೆಗೆ ಗ್ವಾಲಿಯರ್-ಜಯಪುರ ಘರಾಣೆಗಳನ್ನೂ ಜನಪ್ರಿಯಗೊಳಿಸಬಹುದಿತ್ತು. ಆದರೆ ಹಾಗಾಗಲಿಲ್ಲ.

ಪುಣೆಯಂತಹ ಸ್ಥಳಗಳಲ್ಲಿ ಸಂಗೀತಗಾರ ಪಕ್ಕದ ಮನೆಯವನೇ ಆಗಿದ್ದರೂ ಆತನ ಬೈಠಕ್ ನಡೆದಲ್ಲಿ ಆತನಿಗೆ ಸಲ್ಲಬೇಕಾದ ಸಂಭಾವನೆಗೆ ಏನೂ ಕೊರೆ ಮಾಡುವುದಿಲ್ಲ. ಕರ್ನಾಟಕದಲ್ಲೇ ಉಳಿದ ಪಂಡಿತ್ ಜಂಬಲದಿನ್ನಿಯವರು ಆರ್ಥಿಕವಾಗಿ ಅಂಥಾ ಸುಧಾರಣೆಯೇನೂ ಕಾಣಲಿಲ್ಲ

ಅಲ್ಲದೆ ಪಂಡಿತ ಜಂಬಲದಿನ್ನಿಯವರು ಹೆಚ್ಚಾಗಿ ವಚನಗಳ ಗಾಯಕರೆಂದು ಪ್ರಸಿದ್ಧರಾದರೇ ಹೊರತು ಜನರು ಅವರನ್ನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಪ್ರವೀಣರೆಂದು ಗುರುತಿಸಲಿಲ್ಲ, ಇದೊಂದು ವಿಪರ್ಯಾಸ.

ಯಾರ ಮನಸ್ಸನ್ನೂ ನೋಯಿಸಲಿಚ್ಛಿಸದ ಸರಳ ಜೀವ ಅವರು. ಜೊತೆಗೆ ತಮಗೆ ಪರಿಚಯವಾದವರ ಗುಣ ಅವಗುಣಗಳನ್ನು ಬಹುಬೇಗ ಗುರುತಿಸುತ್ತಿದ್ದರು. ತಮಗೆ ಸರಿಹೊಂದದ ಪರಿಚಯಸ್ಥ ಯಾರಾದರೂ ಎದುರು ಬಂದರೆಂದರೆ ಬಳಿಯಿದ್ದ ಛತ್ರಿ ಅರಳಿ ಅವರ ಮುಖವನ್ನು ಮರೆಮಾಡುತಿತ್ತು. ಹಾಗೂ ಅಂಥವರು ಗುರುತು ಹಿಡಿದು ಮತನಾಡಿಸಿದರೆ ದೇಶಾವರಿ ನಾಲ್ಕು ಮಾತುಗಳನ್ನಾಡಿ ಕಳಿಸುತ್ತಿದ್ದರು. ಅಂಥವರು ಇವರನ್ನು ಮನೆಗೇನಾದರೂ ಆಹ್ವಾನಿಸಿದರೆ ಏನಾದರೊಂದು ಕಾರಣ ಹೇಳಿ ತಪ್ಪಿಸಿಕೊಳ್ಳುವದರಲ್ಲಿ ನಿಪುಣರು.

ಪಂಡಿತ ಜಂಬಲದಿನ್ನಿಯವರಲ್ಲಿ ಕಲಿಯಲು ಬಹಳ ಜನ ಬಂದರು, ಹೋದರು. ಆದರೆ ಕೊನೆತನಕ ಘಟ್ಟಿಯಾಗಿ ಉಳಿದವರೆಂದರೆ ನರಸಿಂಹಲುರವರೊಬ್ಬರೇ ಹತ್ತು ಹೆಕ್ಕುವ ಬದಲು ಒಂದು ಮುತ್ತು ಹೆಕ್ಕಿದ್ದರು ಜಂಬಲದಿನ್ನಿಯವರು.

ನರಸಿಂಹಲುರವರು ತಮ್ಮ ಗುರುಗಳಿಂದ ಸಂಗೀತವನ್ನಷ್ಟೇ ಪಡೆಯಲಿಲ್ಲ, ಬದುಕಿನ ರೀತಿ-ನೀತಿಗಳನ್ನು ಸದ್ಗುಣಗಳನ್ನು ಪಡೆದರು. ಗುರುಗಳು ಗುಣಗ್ರಾಹಿಗಳು ಎಂದಿದ್ದೆನಲ್ಲವೆ? ತಮಗೆ ಹಿಡಿಸದ ಜನರಿಗೆ ಅವರು "ಬಿಳಿಬಂಟರು" ಎಂದು ಹೆಸರಿಟ್ಟಿದ್ದರು. ಒಳಗೆ ಇರುವ ಕಪ್ಪನ್ನು ತೊಡೆಯದೆ ಬರಿದೆ ಮರೆಮಾಡಿ ಮೇಲೆ ಸುಣ್ಣ-ಬಣ್ಣ ಬಳಿದುಕೊಂಡವರು ಇವರು.

'ತಮ್ಮಾ, ಯಾವಾಗಲೂ ಹೆಬ್ಬೆಟ್ಟಿಂದ ಹೊರಗೆ ಇಟ್ಟುಕೋ' ಅನ್ನುತ್ತಿದ್ದರವರು. ಅಂದರೆ ಯಾವುದೇ ಕೆಲಸಕ್ಕೆ ಕೈಹಾಕಿದರೂ ಹೊರಗೆ ಬರಲು ಸಾಧ್ಯವಾಗುವಷ್ಟು ಎಚ್ಚರ ಇರಬೇಕು ಎಂಬುದು ಅವರ ಸೂಚನೆ.

"ಕಳ್ಳನ ಮನೀಮುಂದಃ ಮಂಚ ಹಾಕ್ಕೊಂಡು ಮಲಗು" –ಇನ್ನೊಂದು ನುಡಿ.

ಊರಿಗೆಲ್ಲ ಕಳ್ಳ ಎಂದು ಗೊತ್ತಿದ್ದರೂ ಅವನಿಂದ ದೂರವಿರದೆ ಅವನೆದುರಲ್ಲೆ ಇರು. ಆಗ ಆತ ನಿನಗೇನೂ ಮಾಡಲಾರ, ಪರಿಚಯದ ಮುಖವಲ್ಲವೇ!

ಇಂತಹ ಎಷ್ಟೋ ಹಿತನುಡಿಗಳು ಶಿಷ್ಯನಿಗೆ ಗುರುಗಳಿಂದ ನರಸಿಂಹಲುರವರು ಮತ್ತೆ ಮತ್ತೆ ಅವರನ್ನು ಅವರ ಹಿತನುಡಿಗಳನ್ನು, ಅವರ ಜೊತೆ ಕಳೆದ ದಿನಗಳನ್ನು, ತನ್ನನ್ನು ಅವರು ಪರಿಗ್ರಹಿಸಿದ್ದನ್ನು ನೆನೆಯುತ್ತಾರೆ. ಅವರ ನೆನಪಿನಲ್ಲಿ ಸಂಗೀತ ಶಾಲೆ ಕಟ್ಟಿಸಿದ್ದಾರೆ, ಗುರುವಿನಿಂದ ಸಂದ ವಿದ್ಯೆಯನ್ನು ಶಿಷ್ಯರಿಗೆ ದಾನಮಾಡುತ್ತಾ ಧನ್ಯರಾಗುತ್ತಿದ್ದಾರೆ.

ಪಂಡಿತ ಜಂಬಲದಿನ್ನಿಯವರ ಮಕ್ಕಳಲ್ಲಿ ಯಾರೂ ಕೂಡ ತಂದೆಯ ಸಂಗೀತವನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಎಲ್ಲರೂ ಬೇರೆ–ಬೇರೆ ದಾರಿ ಹಿಡಿದು ಇಂಜಿನಿಯರು–ಡಾಕ್ಟರುಗಳಾಗಿ ತಂತಮ್ಮ ಸಂಸಾರಗಳನ್ನು ಸಾಗಿಸುತ್ತಿದ್ದಾರೆ. ಅವರ ಸಂಗೀತವೆಂಬ ಆಸ್ತಿಗೆ ನಿಜವಾದ ಉತ್ತರಾಧಿಕಾರಿಯಾಗಿ ಹಕ್ಕುದಾರನಾಗುವ ಭಾಗ್ಯ ದೊರಕಿದ್ದು ನರಸಿಂಹಲುರವರಿಗೆ ಮಾತ್ರ, ಅದನ್ನು ನರಸಿಂಹಲು ಜತನದಿಂದ ಉಳಿಸಿಕೊಂಡು ಬೆಳೆಯಿಸಿ ಅದರ ಹಣ್ಣುಗಳನ್ನು ತಿನ್ನಬಲ್ಲವರಿಗೆ ಹಂಚುತ್ತಿದ್ದಾರೆ.

ರಾಯಚೂರಿನ, ಜಂಬಲದಿನ್ನಿಯವರ ಗೆಳೆಯರ ಗುಂಪೊಂದು ಅವರ ಗಾಯನದ ಧ್ವನಿಸುರಳಿಗಳನ್ನು ಹೊರತರುವ ಪ್ರಸ್ತಾಪ ಮಾಡಿತ್ತು ಒಮ್ಮೆ. ಶಿಷ್ಯನಿಗೆ ಈಗಾಗಲೇ ಚನ್ನೈನ "ಸಂಗೀತಾ" ಕಂಪೆನಿಯ ಮಹೇಶ್‌ರವರ ಪರಿಚಯವಾಗಿತ್ತು. ಸರಿ, ಅವರೊಡನೆ ಮಾತುಕತೆ ಹೂಣೆ ಹೊತ್ತು ನರಸಿಂಹಲು ರಿಕಾರ್ಡಿಂಗ್‌ಗೆ ಏರ್ಪಾಡು ಮಾಡಿದರು.

ಇತ್ತ ಈ ಗೆಳೆಯರ ಗುಂಪು ಕೊನೆಯ ಕ್ಷಣಗಳಲ್ಲಿ "ಹಣದ ಮುಗ್ಗಟ್ಟು" ಎಂದು ಹೇಳಿ ಹಿಂದೆ ಸರಿಯಿತು. ಏನು ಮಾಡುವುದೀಗ? ಇದೇ ಪ್ರಶ್ನೆಯನ್ನು ಗುರುಗಳು ಶಿಷ್ಯನನ್ನು ಕೇಳಿದರು. ನರಸಿಂಹಲು ತಮ್ಮ ಆರ್ಥಿಕ ತಾಪತ್ರಯಗಳನ್ನೂ ಲೆಕ್ಕಿಸದೆ ಚನ್ನೈನಲ್ಲಿ ಗುರುಗಳ ಗಾಯನದ ಧ್ವನಿಸುರುಳಿಯನ್ನು ಮುದ್ರಿಸಿ ಹೊರತಂದೇ ಬಿಟ್ಟರು. ಅದೊಂದು ಬಿಟ್ಟರೆ, ಬಹುಶಃ ದೂರದರ್ಶನದಲ್ಲಿ ಹಾಡಿದ್ದು ಮಾತ್ರ ಉಳಿದಿವೆ. ಇನ್ನಾವ ಧ್ವನಿಸುರುಳಿಯೂ ಇಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ವತಿಯಿಂದ ಪಂಡಿತ ಜಂಬಲದಿನ್ನಿಯವರು ಸಂಯೋಜಿಸಿದ ಎಲ್ಲ ವಚನಗಳನ್ನೂ ಧ್ವನಿ-ಮುದ್ರಿಸುವ ಪ್ರಸ್ತಾಪದ ಪತ್ರವೊಂದು ಜಂಬಲದಿನ್ನಿಯವರಿಗೆ ಬಂತು. ಅದನ್ನು ಅವರು ಮಕ್ಕಳಿಗೆ ಹೇಳಿ ಹರಿಯಿಸಿ ಕಸದ ಬುಟ್ಟಿಗೆ ಹಾಕಿದರು. ಹೇಳುವುದಕ್ಕೆ ದನಿಯಿರಲಿಲ್ಲ. ಸನ್ನೆಯಲ್ಲಿ ಸೂಚಿಸಿದ್ದರು. ಅದು ಅವರ ಕೊನೆಯ ದಿನಗಳು ಅವರಿಗೆ ಗಂಟಲಿನ ಕ್ಯಾನ್ಸರ್ ಆಗಿತ್ತು.

ಮುಂದೆ ಡಿಸೆಂಬರ್ 31, 1988 ರಂದು ಆ ಮಹಾನ್ ಗಾಯಕ ಈ ನೆಲ ತೊರೆದು ಹೊರಟು ಹೋದರು.

ಕಾಯ ಕಳೆದ ಗುರುವಿನ ಹೆಸರನ್ನು ಉಳಿಸಿದ್ದಕ್ಕಾಗಿ ಜಂಬಲದಿನ್ನಿಯ ಜನರಿಗೆ ನರಸಿಂಹಲುರವರೆಂದರೆ ತುಂಬಾ ಅಭಿಮಾನ.

❑

ಚರಣ 17

# ಕೆಲವು ಮೆಲುಕುಗಳು

ಬದುಕಿನಲ್ಲಿ ನರಸಿಂಹಲುರವರಿಗೆ ಕೆಲವು ಸವಿ, ಕೆಲವು ಕಹಿಯಾದ ಅನುಭವ ನೀಡುವ ಘಟನೆಗಳು ಸಂಭವಿಸಿವೆ. ಅವುಗಳಲ್ಲೊಂದು ಜೋಳದರಾಶಿ ದೊಡ್ಡನ ಗೌಡರ ಜೊತೆ ನಡೆದಿದ್ದು,

ದಿ॥ ದೊಡ್ಡನಗೌಡರು ಉತ್ತಮ ನಟ ಮತ್ತು ಗಮಕಿಗಳಾಗಿದ್ದರು. ವ್ಯಕ್ತಿತ್ವದಷ್ಟೇ ವ್ಯಕ್ತಿಯೂ "ಮೇರು ಗಾತ್ರ". ಬಳ್ಳಾರಿಯ ಸುತ್ತಮುತ್ತಲೂ ಜೋಳದ ರಾಶಿ ದೊಡ್ಡನ ಗೌಡರೆಂದರೆ ಜನರೆಲ್ಲ ತಲೆಬಾಗುತ್ತಿದ್ದಂತಹ ಕೀರ್ತಿ ಅವರದ್ದು.

ಚೇಳ್ಳಗುರಕಿ ಎಂಬ ಒಂದು ಊರು. ಅಲ್ಲಿ ಎರಿಸ್ವಾಮಿಗಳ ಮಠ ಎಂಬೊಂದು ಮಠವಿದೆ. ಆ ಮಠದಲ್ಲಿ ನರಸಿಂಹಲುರವರು ಪ್ರತಿ ವರ್ಷವೂ ಸೇವೆ ನಡೆಸುತ್ತಾರೆ. ದೊಡ್ಡನ ಗೌಡರು ಅಲ್ಲಿ ಅವರ ಬದುಕಿನ ಕಾಲದಲ್ಲಿ ಪ್ರತಿ ವರ್ಷವೂ "ಶಿವಾನುಭವ" ಜಾತ್ರೆ ನಡೆಸುತ್ತಿದ್ದರು. ಮೂರು ದಿನಗಳ ಜಾತ್ರೆ ಅದು. ಜಾತ್ರೆಯಲ್ಲಿ ತೇರು, ಶಿವನ ಬಗ್ಗೆ ಪ್ರವಚನ, ಗಮಕ ಹಾಗೂ ಸಂಗೀತಗಳ ಕಾರ್ಯಕ್ರಮಗಳಿರುತ್ತಿದ್ದವು. ಪಂಡಿತ್ ಜಂಬಲದಿನ್ನಿಯವರೂ ಸಹ ಆ ಕಾರ್ಯಕ್ರಮಗಳಲ್ಲಿ ಸಾಕಷ್ಟು ಬಾರಿ ಭಾಗವಹಿಸಿದ್ದರು. ಎರಿತಾತನವರ ಬಗ್ಗೆ ಹಾಡುಗಳನ್ನು ಸಂಯೋಜಿಸಿ ಹಾಡಿದ್ದರು. ನರಸಿಂಹಲು ಸಹ ಗುರುಗಳೊಂದಿಗೆ ಆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಗುರುಗಳ ನಂತರ ಶಿಷ್ಯ ನರಸಿಂಹಲು ಅವರ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರು.

ಒಮ್ಮೆ ಯಥಾಪ್ರಕಾರ ಇಂತಹ ಜಾತ್ರೆಯ ಕಾರ್ಯಕ್ರಮದಲ್ಲಿ ಎರಡನೆಯ ದಿನ ನರಸಿಂಹಲುರವರ ಕಾರ್ಯಕ್ರಮವಿತ್ತು. ಆದರೆ ಆ ದಿನ ಅವರು ಇನ್ನೊಂದು ಕಡೆ ಕಾರ್ಯಕ್ರಮಕ್ಕೆ ಆಗಲೇ ಒಪ್ಪಿಕೊಂಡು ಬಿಟ್ಟಿದ್ದರು. ಆದ್ದರಿಂದ ಮೊದಲನೆಯ ದಿನವೇ ಕಾರ್ಯಕ್ರಮ ಹಾಕಿಸಿಕೊಂಡು ಮುಗಿಸುವ ಉದ್ದೇಶ್ಯದಿಂದ ಅವರು ಮೊದಲ ದಿನ ಕಾರ್ಯಕ್ರಮ ವೇಳೆಗೆ ಆ ಸ್ಥಳಕ್ಕೆ ಹೋಗಿ ಗೌಡರಲ್ಲಿ ವಿನಂತಿಸಿ ಕೊಂಡರು. "ಆ ಸ್ಥಳ" ಅಂದರೆ ಮಠದ ಬಲಭಾಗದಲ್ಲಿದ ಒಂದು ಸಭಾಂಗಣ.

"ಅಲ್ಲಯ್ಯಾ, ನಿನ್ನ ಕಾರ್ಯಕ್ರಮ ನಾಳೆ ಐತಿ. ಇವತ್ತು ಬಂದು ಇವತ್ತೇ ಮಾಡ್ತೀನಂತೀಯಲ್ಲ ? ಅದು ಪದ್ಧತಿ ಅಲ್ಲ. ಇವತ್ತು ಬೇರೆ ಕಾರ್ಯಕ್ರಮ ಗಳಿದಾವೆ. ಇವತ್ತು ಕೊಡಕ್ಕಾಗೂದಿಲ್ಲ" ಗತ್ತಿನಿಂದ ಗೌಡರು ಹೇಳಿದರು.

"ಅಪ್ಪಾವ್ರೆ, ನಾಳೆ ನನಗೆ ಬೆಂಗಳೂರಾಗೆ ಕಾರ್ಯಕ್ರಮ ಇದೇರೀ. ಅದಕ್ಕೋಸ್ಕರ ಇವತ್ತೇ ಬಂದಿದೀನಿ. ಇಲ್ಲಂದ್ರೆ ನಾಳೇನೇ ಬರ್‍ತಿದ್ದೆ". ನರಸಿಂಹಲು ವಿನಮ್ರವಾಗಿ ಕೇಳಿಕೊಂಡರು.

"ನಾಳೆ ನೀನು ಬೆಂಗಳೂರಾಗೆ ಬೇಕಾದ್ರೂ ಇರು, ಎಲ್ಲಾದ್ರೂ ಇರು, ಇವತ್ತಂತೂ ನಿನಗೆ ಟೈಂ ಕೊಡಕ್ಕಾಗೋದಿಲ್ಲ. ನಾಳೇನೇ ನೀನು ಕಾರ್ಯಕ್ರಮ ಕೊಡಬೇಕು. ನಾಳೆ ಜನ ನಿನ್ನ ಕಾರ್ಯಕ್ರಮ ಎಲ್ಲಿ ಅಂಕ ಕೇಳಿದರೆ ನಾವೇನು ಹೇಳಬೇಕು ?"

"ಅಪ್ಪಾವ್ರೆ, ಕ್ಷಮಿಸಿ, ಜನಕ್ಕೇನು ಬಿಡಿ. ಜನ ಬರ್‍ತಾರೆ, ಹೋಗ್ತಾರೆ. ಅವರಿಗೋಸ್ಕರ ನಾನು ಕಾರ್ಯಕ್ರಮ ಕೊಡುತ್ತಿಲ್ಲ. ಅದು, ಮಾತ್ರ ನಿಜ."

ಸುತ್ತಲೂ ನೆರೆದ ಜನರಿಗೆ ಇದು ಅನಿರೀಕ್ಷಿತ. ಗೌಡರ ಎದುರು ಮಾತನಾಡುವ ಧಾರ್ಷ್ಟ್ಯವೇ ಇವನಿಗೆ !

"ಏ ! ಹೆಚ್ಚು ಕಡಿಮೆ ಮಾತಾಡಬೇಡ" ಗೌಡರೆಂದರು.

"ನಾಯೇನೂ ಹೆಚ್ಚು ಕಡಿಮೆ ಮಾತನಾಡಿಲ್ಲ. ನಿಮಗೆ ಈವತ್ತು ಕಾರ್ಯ ಕ್ರಮಕ್ಕೆ ನನಗೆ ಅವಕಾಶ ಮಾಡಿಕೊಡಲಿಕ್ಕಾಗದಿದ್ದರೆ ಬಿಟ್ಟುಬಿಡಿ. ನಾನು ಮಠದೊಳಗಡೆ ಎರಿತಾತನ ಮುಂದೆ ನನ್ನ ಸೇವಾ ಮಾಡಿ ಹೋಗ್ತೀನಿ."

ಸುತ್ತಲ ಜನರಲ್ಲಿ "ಇಂದೇನೋ ಆಗಬಾರದ್ದು ಆದೀತು" ಎಂಬ ಆತಂಕ, ಕುತೂಹಲ ತುಂಬಿತ್ತು.

"ಸೇವಾ ಮಾಡಿ ಹೋಗ್ತೀನಿ" ಅಂದ ನರಸಿಂಹಲು ಅಲ್ಲಿ ನಿಲ್ಲಲಿಲ್ಲ. ತಮ್ಮ ವಾದ್ಯದ ಪೆಟ್ಟಿಗೆಯೊಂದಿಗೆ ಹೊರಟೇ ಬಿಟ್ಟರು.

"ಏ, ನಿಲ್ಲಪ್ಪಾ, ನಿಲ್ಲು ! ಭಾಳ ಮಾಡ್ತೀ ಬಿಡು ನೀನು !" ಗೌಡರ ಅಳಿಯ ಚನ್ನವೀರೇಗೌಡರು ಅವರನ್ನು ತಡೆದರು.

"ಏನು ಭಾಳ ಮಾಡೋದರೀ? ನನಗೆ ಇವತ್ತು ಸಮಯ ಕೊಡಲಿಲ್ಲಂದ್ರೆ ನಾ ಯಾಕೆ ಇಲ್ಲಿರಬೇಕು? ನಾ ಹೋಗ್ತೀನರಿ."

"ಸುಮ್ಮನೆ ಬಂದು ಇಲ್ಲಿ ಕುಂದ್ರೋ ಮಾತಾಡಬ್ಯಾಡ." ಚನ್ನ ವೀರೇಗೌಡರು ಪುಸಲಾಯಿಸಿ ಅವರನ್ನು ಒಂದು ಕಡೆ ಕೂರಿಸಿದರು.

ಮೊದಲು ಗೌಡರ ಗಮಕ ಕಾರ್ಯಕ್ರಮ. ಸ್ವಲ್ಪ ಹೊತ್ತು ಗಮಕ ನಡೆಯಿತು. ನಂತರ ಗೌಡರು ನರಸಿಂಹಲುರವರನ್ನು ವೇದಿಕೆಗೆ ಕರೆದರು.

"ಏ, ಬಾ ಇಲ್ಲಿ, ಕುಂದ್ರು, ನಿನ್ದು ಸುರು ಹಚ್ಚು" ನರಸಿಂಹಲು ವೇದಿಕೆ ಹತ್ತಿ ಕುಳಿತರು. ಎಪ್ಪತ್ತು-ಎಪ್ಪತ್ತೈದು ವಯಸ್ಸಿನ ಗೌಡರು ವೇದಿಕೆಯ ಒಂದು ಬದಿ ಲೋಡಿಗೆ ಆತುಕೊಂಡು ಕುಳಿತರು. ನಲವತ್ತು ವಯಸ್ಸಿನ ನರಸಿಂಹಲು ಸಂಗೀತ ಸುರು ಹಚ್ಚಿದರು-ಪೂರ್ಯೆಯಾ ಕಲ್ಯಾಣಿ.

ಕೇಳುತ್ತಾ ಕೇಳುತ್ತಾ, ಜನರಿರಲಿ, ದೊಡ್ಡನಗೌಡರೆ ಮೈಮರೆತರು. ಅದೆಷ್ಟು "ವಾಹ್ ವಾಹ್" ಗಿರಿಗಳನ್ನು ನೀಡಿದರೋ ಬಹುಶಃ ಗೌಡರಿಗೇ ತಿಳಿದಿರಲಿಲ್ಲ. ಸುಮಾರು ನಲವತ್ತೈದು ನಿಮಿಷಗಳು ಸರಿದದ್ದೇ ತಿಳಿಯಲಿಲ್ಲ ಅವರಿಗೆ.

"ಬೇಷಲೇ ತಮ್ಮಾ, ಛಲೋ ಬಾರಿಸಿದೀ. ಛಲೋ ಪ್ರಾಕ್ಟೀಸು ಮಾಡಿದೀ ಬಿಡು" - ಗೌಡರು ನುಡಿದರು.

"ಇದೆಲ್ಲ ಜ಼ಂಬಲದಿನ್ನಿ ಗುರುಗಳ ಆಶೀರ್ವಾದರೀ" ನರಸಿಂಹಲು ರವರು ಗರುಗಳನ್ನು ನೆನೆದರು.

"ಹೇ! ಸಿದ್ದಣ್ಣ ನಿನಗೆ ಛಲೋ ಕಲಿಸ್ಯಾನೆ ಬಿಡು, ನೀನೂ ಛಲೋ ಕಲಿತಿದ್ದೀ. ಆದರೆ ಒಂದು ಸ್ವಲ್ಪ ದೊಡ್ಡೋರಿಗೆ ಹೆಂಗೆ ಮಾತಾಡಬೇಕು ಕಲಿಯೋ ತಮ್ಮ !"

"ನಾನೇನಾದ್ರೂ ನಿಮಗೆ ಅವಮಾನ-ನೋವು ಮಾಡುವಂಥಾ ಮಾತಾಡಿದ್ರೆ ಬಾರಸ್ರೀ ನನಗೆ ! ಆದರೆ ಅಂಥ ಮಾತು ನಾನೇನೂ ಆಡಿಲ್ಲ ಅಂತ ನಾ ಅಂದುಕೊಡಿದ್ದೀನಿ"

"ಹೋಗ್ಲಿ ಬಿಡೋ, ತಗೋ ಇದನ್ನ"-

-ನೂರು ರೂಪಾಯಿ ನೋಟು ಆಯಾರವಾಯಿತು ಗೌಡರಿಂದ. ಒಳ್ಳೆಯ ಗಳಿಕೆ ಅದು ಆ ಕಾಲದಲ್ಲಿ !

ವಾಗ್ಯುದ್ಧದ ಸಮಯದಲ್ಲಿ ಸಹಕಲಾವಿದ ತಬಲಾಪಟು ತಿಮ್ಮಯ್ಯನವರು ಮೊದಲು ಹೆದರಿದ್ದವರು ಈಗ ನೀಳವಾಗಿ ಉಸಿರಾಡಿದರು.

ಮುಂದೆ ನರಸಿಂಹಲುವರನ್ನು ಗೌಡರು ಮನೆಗೆ ಕರೆದುಕೊಂಡು ಹೋಗಿ ಪುಷ್ಕಳವಾಗಿ ಊಟದ ಹಾಕಿ ಉಪಚರಿಸಿದರು. ಸಾಧು ಜನರ ಮನಸಲ್ಲವೆ !.... ವಜ್ರಕ್ಕಿಂತ ಕಠಿಣ, ಹೂವಿಗಿಂತ ಮೃದು !

ಮುಂದಿನ ವರ್ಷಗಳಲ್ಲಿ ಈ ಜಾತ್ರೆ ನಡೆಯುವಾಗ ಗೌಡರ ಎದುರಿಗೆ ನರಸಿಂಹಲು ಬಂದರೆ –

"ಏ ತಡೀರೋ, ನರಸಿಂಹ ಬಂದಾನ, ಮೊದ್ಲು ಅವನ ಕಾರ್ಯಕ್ರಮ ಮುಗೀಲಿ. ಆಮ್ಯಾಲೆ ನನ್ದು"

– ಎಂದು ಹೇಳಿ ನರಸಿಂಹಲುರವರನ್ನು ಕೂಡಿಸುತ್ತಿದ್ದರು, ತಾವು ಎಂದಿನಂತೆ ಲೋಡಿಗಾತು ಕುಳಿತು ರಸಗ್ರಹಣ ಮಾಡುತ್ತಿದ್ದರು.

* * * *

ಇನ್ನೊಂದು ಘಟನೆ ನಾರದಗಡ್ಡೆ ಎಂಬಲ್ಲಿ ನಡೆದದ್ದು. ಇದು ಸವಿಯಾದ ಪ್ರಸಂಗವಲ್ಲ, ಆದರೆ ನೆನಪಿನಲ್ಲಿ ಉಳಿದು ಕಾಡುವ ಅಚ್ಚರಿಯ ಪ್ರಸಂಗ.

ನಾರದಗಡ್ಡೆ ರಾಯಚೂರಿನಿಂದ 20–25 ಕಿಲೋಮೀಟರ್ ದೂರದಲ್ಲಿರುವ ಒಂದು ಕ್ಷೇತ್ರ. ನಾರದಮುನಿ ಅಲ್ಲಿ ತಪಸ್ಸು ಮಾಡಿದ್ದರು ಎಂದು ಅಲ್ಲಿಯ ಸ್ಥಳ ಪುರಾಣ. ಶ್ರೀ ಚನ್ನಬಸವ ಮಹಾಸ್ವಾಮಿಯವರ ಕ್ಷೇತ್ರ ಎಂದು ಸುತ್ತಮುತ್ತಲೂ ಜನಪ್ರಿಯವಾಗಿ ಅದು ಯಾತ್ರಾ ಸ್ಥಳವಾಗಿತ್ತು. ಅದೊಂದು ದ್ವೀಪ. ಕೃಷ್ಣಾನದಿಯು ಹರಿಯುವಲ್ಲಿ ನಡುವೆ ಇರುವ ಒಂದು ನಡುಗಡ್ಡೆ ಈ ನಾರದ ಗಡ್ಡೆ. ಅಲ್ಲಿ ಮುನೇಶ್ವರ ದೇವಸ್ಥಾನವೆಂಬ ಗುಡಿ ಪುರಾತನ ಕಾಲದಿಂದಲೂ ಇದೆಯಂತೆ. ಅಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗೆ ದೂರದೂರದಿಂದ ಜನರು ದೋಣಿಯ ಮೂಲಕ ನದಿಯನ್ನು ದಾಟಿ ಬಂದು ಸೇರಿ ಸಂಭ್ರಮಿಸುತ್ತಿದ್ದರು. ಈ ಜಾತ್ರೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು.

ನರಸಿಂಹಲುವರು ಬ್ಯಾಂಡ್‌ಸೆಟ್‌ನಲ್ಲಿ ಇದ್ದಾಗ ಅವರು ಗುರು ಶ್ರೀ ವೆಂಕಟಪ್ಪನವರ ಜೊತೆ ಇಲ್ಲಿಗೆ ಬಂದು ಮೆರವಣಿಗೆಯಲ್ಲಿ ಅನೇಕ ಬಾರಿ ವಾದ್ಯ ನುಡಿಸಿದ್ದರು. ಮುಂದೆ ಬ್ಯಾಂಡ್‌ಸೆಟ್ ಬಿಟ್ಟ ನಂತರವೂ ನರಸಿಂಹಲುರವರು ಪ್ರತಿ ವರ್ಷ ಅಲ್ಲಿಗೆ ಹೋಗಿ ಗದ್ದುಗೆಯ ಮುಂದೆ ರಾತ್ರಿ ತಮ್ಮ ವಾದ್ಯ ನುಡಿಸಿ, ಅಲ್ಲಿಯೇ ರಾತ್ರಿ ಕಳೆದು, ಮತ್ತೆ ಮರುದಿನ ಬೆಳಿಗ್ಗೆ ಇನ್ನೊಮ್ಮೆ ಸೇವೆ ಮಾಡಿ

ಪ್ರಸಾದ ತೆಗೆದುಕೊಂಡು ಅಲ್ಲಿಂದ ಮರಳುತ್ತಿದ್ದರು. ಇದು ಅನೂಚಾನವಾಗಿ 25-26 ವರ್ಷಗಳ ಕಾಲ ನಡೆಯಿತು.

ಮಠದ ಸ್ವಾಮಿಗಳು ಸೇವೆ ಮಾಡುವ ಕಲಾವಿದರಿಗೆಲ್ಲ ಅಲ್ಲಿ ಭೂಮಿ-ಕಾಣಿ ನೀಡಿ ಅವರ ಜೀವನೋಪಾಯಕ್ಕೆ ದಾರಿ ಮಾಡಿಕೊಟ್ಟಿದ್ದರು. ಅದರಂತೆ ನರಸಿಂಹಲುರವರಿಗೂ ಹೀಗೊಂದು ಅನುಕೂಲ ಮಾಡಿಕೊಡುವ ಇಂಗಿತವನ್ನು ಅವರು ನರಸಿಂಹಲುರವರಿಗೆ ಸೂಚಿಸಿದರೊಮ್ಮೆ. ಆದರೆ ನರಸಿಂಹಲುರವರು ಅದನ್ನು ವಿನಯಪೂರ್ವಕ ನಿರಾಕರಿಸಿದ್ದರು. ಸೇವೆಗೆ ಪ್ರತಿಫಲ ನಿರೀಕ್ಷಿಸುವುದು ಅವರ ಜಾಯಮಾನವಲ್ಲ.

"ದಯವಿಟ್ಟು ನನಗೆ ಆಸೆ ಹಚ್ಚಬೇಡಿ ಸ್ವಾಮಿ" ಎಂದರು ನರಸಿಂಹಲುರವರು.

ಅವರ ಸಂಗೀತದಿಂದ ಪ್ರಭಾವಿತರಾಗಿದ್ದ ಸ್ವಾಮೀಜಿ ಅವರಿಗೊಂದು ಬೆಳ್ಳಿಯ ಕ್ಲಾರಿಯೋನೆಟ್ ಮಾಡಿಸಿಕೊಡುವ ಪ್ರಸ್ತಾಪವನ್ನು ಮುಂದಿಟ್ಟರು. ಅದನ್ನೂ ಸಹ ನರಸಿಂಹಲುರವರು ಸವಿನಯವಾಗಿ ನಿರಾಕರಿಸಿದರು. ನುಡಿಸಲಾಗದ ಬೆಳ್ಳಿ ವಾದ್ಯದಲ್ಲೇನು ಸೊಗಸು !

ನರಸಿಂಹಲುರವರು ಜಾತ್ರೆಯ ಗದ್ದಲದ ದಿನಗಳಲ್ಲಿ ಗದ್ದುಗೆಯ ಮುಂದೆ ತಮ್ಮ ಸಂಗೀತ ನೀಡುತ್ತಿರಲಿಲ್ಲ. ಗದ್ದಲ ಮುಗಿದ ನಂತರ ಒಂದು ದಿನ ತಮ್ಮ ಸೇವೆಯನ್ನು ರಾತ್ರಿ ಸಾಕಷ್ಟು ಹೊತ್ತು ಮಾಡುತ್ತಿದ್ದರು.

ಆ ಮಠಕ್ಕೆ ಒಬ್ಬ ಪಾರುಪತ್ತೆದಾರರು -- ಅವರ ಹೆಸರು ಇಲ್ಲಿ ಬೇಡ. ಮಹಾ ಅಹಂಕಾರದ ವ್ಯಕ್ತಿ. ಇಡೀ ಮಠ ತನ್ನದೇ ಸ್ವತ್ತು ಎಂಬಂತೆ ಅವರ ನಡವಳಿಕೆ. ಅವರಿಗೆ ನರಸಿಂಹಲುರವರು ಜಾತ್ರೆಯ ನಂತರ ಸಂಗೀತ ಸೇವೆ ಮಾಡುವುದು ಇಷ್ಟವಾಗಲಿಲ್ಲ.

'ಏನಯ್ಯಾ ? ನೀನು ಸಂಗೀತ ಸೇವಾ ಮಾಡಬೇಕೆಂದರೆ ಜಾತ್ರೆಯ ದಿವಸ ಬರಬೇಕು. ಆಮೇಲೆ ಬಂದರೆ ಉಪಯೋಗವಿಲ್ಲ ಗೊತ್ತಾಯಿತ?" - ಎಂದವರೊಮ್ಮೆ ನರಸಿಂಹಲುರವರನ್ನು ದಬಾಯಿಸಿದರು.

"ಸ್ವಾಮಿ, ನನಗೆ ಈ ರೀತಿ ಹೇಳುವ ಅಧಿಕಾರ ನಿಮಗೇನಿದೆ ? ಇದು ಮಠ, ಸೇವಾ ಮಾಡುವವರು ಯಾವಾಗ ಬೇಕಾದರೂ ಬಂದು ಸೇವಾ ಮಾಡಬಹುದು. ಜಾತ್ರೆಯ ದಿನವೇ ಬರಬೇಕಂತ ಇಲ್ಲ. ನಾನು ಜಾತ್ರೆಯ

ದಿನಗಳಲ್ಲಿ ಬಂದು ಸೇವಾ ಮಾಡೋದೂ ಇಲ್ಲ. ನಿಮ್ಮ ಅಪ್ಪಣೆಯ ಪ್ರಕಾರ ನಡೆಯಲಿಕ್ಕೆ ನಾನೇನೂ ಮಠದಿಂದ ಭೂಮಿಕಾಣಿಯಾಗಲಿ ಅಥವಾ ಇನ್ನೇನೇ ಆಗಲಿ ಪಡಕೊಂಡಿಲ್ಲ. ನನ್ನ ಇಷ್ಟ ಪ್ರಕಾರವೇ ನಾನು ನಡೆಯೋದು" – ನರಸಿಂಹಲು ಅಂದರು.

"ಏನು ದೊಡ್ಡ ಮನುಷ್ಯನಾ ನೀನು? ಜಬ್ರ್ಜ್ ಮಾಡ್ತೀಯಲ್ಲ?" ಪಾರು ಪತ್ತೇಗಾರರು ಕೆರಳಿದರು.

"ನಾನು ದೊಡ್ಡ ಮನುಷ್ಯ ಅಲ್ಲದಿರಬಹುದು, ಆದರೆ ಸಣ್ಣ ಮನುಷ್ಯ ಅಲ್ಲ. ನೀವು ಹಾಗೆಲ್ಲ ಮಾತನಾಡಬೇಡಿ" ನರಸಿಂಹಲುರವರೂ ಕೆರಳಿದರು.

"ಹೌದ! ಮುಂದಿನ ವರ್ಷದಿಂದ ಜಾತ್ರೆಯ ದಿನಗಳ ಹೊರತು ಬ್ಯಾರೆ ದಿನ ಗದ್ದುಗೆಯ ಮುಂದೆ ಸಂಗೀತ ನಡೆಸಾಕ ಬಿಡೂದಿಲ್ಲ. ಅದ ಹೇಗೆ ಬಾರಿಸ್ತೀಯೋ ನೋಡ್ತೀನಿ." ಎಂದರು ಪಾರು ಪತ್ತೇದಾರರು.

ನರಸಿಂಹಲುರವರಿಗೂ ಇದೆಲ್ಲ ಕೇಳಿ ಮನಸ್ಸು ಕಲಕಿ ಹೋಗಿತ್ತು.

"ಅಲ್ರೀ, ಮುಂದಿನ ವರ್ಷ ನನಗೆ ಇಲ್ಲಿಗೆ ಬರಲಿಕ್ಕೆ ಬಿಡೋದು ಮಾಡೋದು ನಿಮ್ಮ ಕೈಲೇನಿದೆ ? ಮುಂದಿನ ವರ್ಷ ನೀವು ಇದ್ದರಲ್ಲವ! ನೋಡೋಣ!" ಅಂದು ಬಿಟ್ಟರು.

ಕಾಗೆ ಕೊಂಬೆಯ ಮೇಲೆ ಕುಳಿತಿತು, ಕೊಂಬೆ ಲಟ್ಟನೆ ಮುರಿಯಿತು. ..... ಮುಂದಿನ ವರ್ಷದ ಜಾತ್ರೆ ಬರುವುದಕ್ಕೆ ಮೊದಲೇ ಆ ಪಾರು ಪತ್ತೇದಾರರು ಮೇಲೆ ತೆರಳಿದ್ದರು. ನರಸಿಂಹಲುರವರಿಗೆ ಅವರ ಸಾವಿನ ಸುದ್ದಿ ಕೇಳಿ ಆಘಾತ ವಾಯಿತು. "ದೇವರೆ ! ಏನು ನುಡಿಸಿದೆ ನನ್ನ ಬಾಯಿಂದ! " ಎಂದುಕೊಂಡರು.

❑

ಚರಣ 18

# - ಮರೇತೇನೆ ಇವರನ್ನು !

ಇವರು ಸಂಗೀತದ ಸೆಲೆಯನ್ನು, ಅದರ ಬೆಲೆಯನ್ನು ಗುರುತಿಸಿ ನರಸಿಂಹಲು ರವರ ಮತ್ತು ಅವರ ಕ್ಲಾರಿಯೋನೆಟ್‌ನ ಹೆಸರನ್ನು ದೇಶದ ಉದ್ದಗಲಕ್ಕೆ ಹರಡುವಲ್ಲಿ ತಮ್ಮ ಪಾತ್ರವನ್ನಾಡಿ ಪ್ರೀತಿ ಪಾತ್ರರಾದವರು. ಅವರೆಂದರೆ ಶ್ರೀ ಆರ್. ನಾಗೇಶ್ ಶ್ರೀ ಎ.ಎಂ. ವಿಠಲಮೂರ್ತಿ, ಶ್ರೀ ಅ.ರಾ. ಚಂದ್ರಹಾಸಗುಪ್ತರು ಹಾಗೂ ಶ್ರೀ ಸಂತೋಷಕುಮಾರ ಗುಲ್ವಾಡಿಯವರು.

## - ಆರ್ ನಾಗೇಶ್ -

ರಂಗಭೂಮಿಗೆ ಸಂಬಂಧಿಸಿದ ಎಲ್ಲರಿಗೂ ಆರ್. ನಾಗೇಶ್ ಎಂದರೆ ಚಿರಪರಿಚಿತರಾದ್ದ ವ್ಯಕ್ತಿ. ರಂಗಭೂಮಿಯಲ್ಲಿ ಈತ ಕೈಹಾಕದ ಒಂದೇ ಒಂದು ಕ್ಷೇತ್ರವೆಂದರೆ ಬಹುಶಃ ರಂಗಸಂಗೀತವೊಂದೇ. ಈತನೊಬ್ಬ ಒಳ್ಳೆಯ ನಿರ್ದೇಶಕ, ನಟ, ಹಿನ್ನೆಲೆ, ರಂಗ ಕರ್ಮಿ, ಸಂಘಟಕ.. ಇನ್ನೂ ಏನೇನೋ. ಬರಿಯ ಇಷ್ಟೇ ಅಲ್ಲ, ಬಹಳಷ್ಟು ಪ್ರತಿಭಾವಂತ ಕಲಾವಿದರು, ನಿರ್ದೇಶಕರು ನಾಟಕಕಾರರು ಇವರಿಂದ ರಂಗಭೂಮಿಯಲ್ಲಿ ನೆಲೆಯೂರಿ ಹೆಸರಾದರು. ಇಂದು ರಂಗಭೂಮಿ ಯಲ್ಲಿ ಸಕ್ರಿಯವಾಗಿರುವ ಯಾರನ್ನೇ ಕೇಳಿದರೂ ಅವರು ಒಂದಲ್ಲ ಒಂದು ರೀತಿಯಲ್ಲಿ ಆರ್. ನಾಗೇಶ್‌ರನ್ನು ನೆನೆಯುತ್ತಾರೆ. ಏನೇನೋ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಅವುಗಳಲ್ಲಿ ಮುಖ್ಯವಾದವು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ. ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಉತ್ತಮವಾಗಿ ಕೆಲಸ ನಿರ್ವಹಿಸಿ ನಿರ್ಗಮಿಸಿದರು. ಅರವತ್ತೈದರ ಆರ್. ನಾಗೇಶ್ ಇನ್ನೂ ಆರಿಲ್ಲ, ತುಂಬು ಚಟುವಟಿಕೆಯಿಂದಿದ್ದಾರೆ.

ಆರ್. ನಾಗೇಶ್‌ರಿಗೆ ರಂಗಭೂಮಿ ಬರಿಯ ಪ್ರವೃತ್ತಿ ಆಗಿರಲಿಲ್ಲ. ಅದು ಅವರ ವೃತ್ತಿಯೂ ಆಗಿತ್ತು. ಸರಕಾರದ ಕನ್ನಡ-ಸಂಸ್ಕೃತಿ ಇಲಾಖೆಯ ವಾರ್ತಾ

ಪ್ರಚಾರ ವಿಭಾಗದಲ್ಲಿ ಸಂಗೀತ ಮತ್ತು ನಾಟಕ ಘಟಕದಲ್ಲಿ ನೌಕರರಾಗಿದ್ದು 1999 ರಲ್ಲಿ ನಿವೃತ್ತಿ ತೆಗೆದುಕೊಂಡರು.

1976-80 ರಲ್ಲಿ ನಾಟಕ ಪ್ರದರ್ಶನದ ಸಂಬಂಧದಲ್ಲಿ ನಾಗೇಶ್‌ರವರು ರಾಯಚೂರಿಗೆ ಬಂದಿದ್ದರು. ಒಂದು ನಾಟಕಕ್ಕೆ ಅವರಿಗೆ ಕೊಳಲು ವಾದನ ಬೇಕಾಗಿತ್ತು. ಕೊಳಲು ವಾದಕರನ್ನು ಅನ್ವೇಷಿಸುತ್ತಾ ಅವರು ಕೊನೆಗೆ ಪ್ರೊ॥ ಶಾಂತರಸರನ್ನು ಕೇಳಿದರು.

"ಈ ಕಡೆ ಕೊಳಲು ಬಾರಿಸುವವರು ಯಾರೂ ಇಲ್ಲಪ್ಪ, ಆದರೆ ನರಸಿಂಹಲು ವಡವಾಟಿ ಅಂತ ಒಬ್ಬ ಇದ್ದಾನೆ, ಕ್ಲಾರಿಯೋನೆಟ್ ಬಾರಿಸ್ತಾನೆ, ಬೇಕಾದರೆ ನೋಡಿ" ಅಂದರು ಶಾಂತರಸ ಕವಿಗಳು. ಶಾಂತರಸರು ಆಗ ಹಮ್‌ದರ್ದ್ ಪ್ರೌಢಶಾಲೆಯಲ್ಲಿ ಪ್ರಾಂಶುಪಾಲರಾಗಿದ್ದರು. ಸರಿ,-ಶಾಲೆಗೇ ನರಸಿಂಹಲುರವರಿಗೆ ಬರಲು ಕರೆ ಕಳಿಸಿದರು. ನರಸಿಂಹಲುರವರು ಅದರಂತೆ ಶಾಲೆಗೆ ಬಂದರು.

ಮೊದಲ ಭೆಟ್ಟಿಗೇ ನಾಗೇಶರು ಮಾತನಾಡಿಸಿದ ರೀತಿಯಿಂದ ನರಸಿಂಹಲು ಪ್ರಭಾವಿತರಾದರು. ಹಳೆಯ ಗೆಳೆಯನನ್ನು ಮರಳಿ ಕಂಡಾಗ ಮಾತಾಡಿಸುವಂತೆ ನಗುನಗುತ್ತಾ ಪ್ರೀತಿಯಿಂದ ನಲುಮಾತನಾಡಿದ್ದು ನರಸಿಂಹಲುರವರಿಗೆ ಖುಷಿ ಕೊಟ್ಟಿತ್ತು. ಪರಸ್ಪರ ಪರಿಚಯ ಶಾಂತರಸರ ಮೂಲಕ ಆಯಿತು.

"ಬರ್ತೀರಾ, ರೂಮಿಗೆ ಹೋಗೋಣ?" - ನಾಗೇಶ್ ಕೇಳಿದರು, ನರಸಿಂಹಲು ಅವರ ಜೊತೆಗೆ ಹೊರಟರು.

ಅಲ್ಲೊಂದು ಹಳೆಯ ಆಸ್ಪತ್ರೆ, ಅಲ್ಲಿ ತಾಲೀಮಿಗಾಗಿ ಒಂದು ಹಾಲ್ ನಾಗೇಶ್‌ರ ತಂಡಕ್ಕಾಗಿ ಬಿಟ್ಟು ಕೊಡಲಾಗಿತ್ತು. ಅದೇ ಅವರ "ರೂಮು". ಅಲ್ಲಿ ಸ್ವಲ್ಪ ಹೊತ್ತು ಕುಶಲೋಪರಿಯ ನಂತರ ಸಂಜೆ ಕ್ಲಾರಿಯೋನೆಟ್ ಸಮೇತ ಬರಲು ಹೇಳಿದರು.

ಸಂಜೆ ನಿರ್ಧರಿತ ಸಮಯಕ್ಕೆ ಮೊದಲೇ ನರಸಿಂಹಲು "ರೂಂ" ತಲುಪಿದರು. ನಾಗೇಶ್‌ರವರಾಗಲೇ ಐದಾರು ಧ್ವನಿಸುರುಳಿಗಳನ್ನು ತಂದಿಟ್ಟುಕೊಂಡಿದ್ದರು - ರಿಕಾರ್ಡ್ ಮಾಡಲೋಸುಗ.

"ನುಡಿಸಿ" - ನಾಗೇಶ್‌ರವರು ರಿಕಾರ್ಡಿಂಗ್‌ಗೆ ಸಿದ್ಧರಾಗಿ ಹೇಳಿದರು. ಸರಿ ಶುರುವಾಯಿತು, ತಬಲಾರಹಿತ ವಾದನ.

ಎಂಟು–ಒಂಭತ್ತು ಘಂಟೆ ರಾತ್ರಿಯಲ್ಲಿ ಶುರು ಹಚ್ಚಿದ ವಾದನ ನಡೆದದ್ದೇ ನಡೆದದ್ದು. ಒಂದಾದ ಮೇಲೊಂದು ಕ್ಯಾಸೆಟ್‌ನಂತೆ ತಂದಿದೆಲ್ಲವೂ ಮುಗಿದೇ ಹೋಯಿತು. ಆದರೂ ನಾಗೇಶರಿಗೆ ಸಾಲದು ಕೇಳಿದ್ದು. ವಾದನ ಕೊನೆಗೆ ಮುಗಿದಾಗ ಮುಂಜಾನೆ ಮೂರು ಗಂಟೆ.

ಮಾತು ಆಡಲು ಸರಿಯಾದ ಶಬ್ದಗಳು ಸಿಗದೆ ತಡಕಾಡಿದರು ನಾಗೇಶ್. ಕೊನೆಗೆ ಹೇಳಿದರು – " ಅದ್ಭುತ ! ತುಂಬಾ ಚೆನ್ನಾಗಿತ್ತು! ಏನು ನುಡಿಸಿದಿರಪ್ಪ, ಎಷ್ಟು ಹೊತ್ತು ನುಡಿಸಿದ್ದು !" ........ ಬದುಕಿನಲ್ಲಿ ಪ್ರಥಮಬಾರಿಗೆ "ಸರ್ಟಿಫಿಕೇಟ್" ನಂತಹ ನುಡಿಗಳು ಕೇಳಿದ್ದೂ ನಾಗೇಶ್‌ರವರಿಂದಲೇ.

ಅಲ್ಲಿಂದ ಸಂಗೀತ–ನಾಟಕ ಘಟಕದ ಬಹಳಷ್ಟು ಕಾರ್ಯಕ್ರಮಗಳಲ್ಲಿ ನರಸಿಂಹಲುವರಿಗೆ ಅವಕಾಶ ದೊರೆಯಿತು. ಹೋದಲ್ಲೆಲ್ಲಾ ಅವರ ವಾದನಕ್ಕೆ ಮೆಚ್ಚುಗೆ ಸಿಗುತ್ತಿತ್ತು. ಇಲ್ಲಿಯೂ ಸಹ ಪ್ರತಿ ಕಾರ್ಯಕ್ರಮದಲ್ಲೂ ಆರಂಭಕ್ಕೆ ನರಸಿಂಹಲು ಮತ್ತು ತಂಡದ ಸಂಗೀತ. ಪ್ರತಿಬಾರಿಯೂ 30 ರಿಂದ 45 ನಿಮಿಷಗಳ ಕಾಲ ಅವರಿಗಾಗಿ ಮೀಸಲು. ಅಷ್ಟೊಂದು ಕಾಳಜಿ ವಹಿಸುತಿದ್ದರು ಶ್ರೀ ನಾಗೇಶ್. ಮನುಷ್ಯ ರಸಗ್ರಾಹಿ ಹಾಗೂ ನಿಜ ಅರ್ಥದಲ್ಲಿ ಕಲಾಪೋಷಕ.

ಆದರೆ ಅವರಲ್ಲೊಂದು ಪ್ರಮುಖ ದೌರ್ಬಲ್ಯವಿತ್ತು. ಅದೆಂದರೆ ಅವರ ಸಿಟ್ಟು. ಅದೇನೂ ಅಂತಿಂಥದ್ದಕ್ಕೆ ಬರುವುದಿಲ್ಲ. ತಮ್ಮ ಎಣಿಕೆಯಂತೆ ಕಾರ್ಯ ಆಗದಿದ್ದಲ್ಲಿ ಕಸಿವಿಸಿ, ಆತಂಕ ತೊಡಗಿ ಸಿಟ್ಟು ಉದ್ಭವವಾಗುತ್ತದೆ. ಅಂಥ ಸಿಟ್ಟು ಬಂದಾಗ ಆತನಿಂದ ಪ್ರತಿಕಕ್ಷಿಗೆ ಸಾಕಷ್ಟು ಪುಷ್ಪಾರ್ಚನೆ ಆಗುತ್ತದೆ. ಮುಂದೆ ಆ ಕ್ಷಣಗಳು ಕಳೆದು ಕಾರ್ಯಕ್ರಮ ಮುಗಿದ ನಂತರ ಮತ್ತು ಆತ "ಪ್ರಶಾಂತ ಗಣಪತಿ" (A very calm team leader)

ಒಮ್ಮೆ ದಿಲ್ಲಿಯಲ್ಲಿ "ಫಿಕ್ಕಿ" (FICCI) ಪ್ರೇಕ್ಷಾ ಗೃಹದಲ್ಲೊಮ್ಮೆ ಸಂಗೀತ–ನಾಟಕ ಘಟಕದ ಒಂದು ಕಾಯಕ್ರಮವಿತ್ತು. ಯಥಾಪ್ರಕಾರ ನರಸಿಂಹಲು ವಡವಾಟಿ ಮತ್ತು ತಂಡದವರ ಸಂಗೀತ ಕಾರ್ಯಕ್ರಮದಿಂದಲೇ ಅದು ಆರಂಭ ವಾಗುವುದಿತ್ತು. ನಾಗೇಶ್ ಮತ್ತು ಉಳಿದ ಕಾರ್ಯಕರ್ತರು ಫಿಕ್ಕಿಗೆ ಬೆಳಿಗ್ಗೆ ಹತ್ತು ಗಂಟೆಗೆ ಹೋಗಿದ್ದರು. ನರಸಿಂಹಲುರವರಿಗೆ ಸಾಯಂಕಾಲ ಸಮಯಕ್ಕೆ ಸರಿಯಾಗಿ ಕಾರು ಕಳಿಸುವದೆಂದು ಹೇಳಿದ್ದರವರು.

ಸಾಯಂಕಾಲ ಆರಕ್ಕೆ ಕಾರ್ಯಕ್ರಮವೆಂದರೆ ಐದು ಗಂಟೆಗೆ ಕಾರು ಬರಬೇಕಲ್ಲವೆ ! ಕೆಲಸದ ಮಧ್ಯೆ ನಾಗೇಶ್‌ರವರು ಈ ವಿಷಯ ಮರೆತೇ

ಬಿಟ್ಟಿದ್ದರು. ಐದಾಯಿತು, ಐದೂವರೆ ಆಯಿತು. ನರಸಿಂಹಲುರವರಿಗೆ ಕಸಿವಿಸಿ ತೊಡಗಿತು. –ಕಾರು ಬರಲಿಲ್ಲ!

ಐದೂವರೆಗೆ ಘಂಟೆಗೆ "ಇನ್ನು ಕಾಯುವುದು ತರವಲ್ಲ" ಎಂದು ಯೋಚಿಸಿ ಕೂಡಲೆ ಟ್ಯಾಕ್ಸಿ ಮಾಡಿ "ಫಿಕ್ಕಿ ಕೋ ಚಲ್ನಾ" ಎಂದು ಹೇಳಿ ಗೆಳೆಯರೊಂದಿಗೆ ಹತ್ತಿದರು. ದಿಲ್ಲಿ ಇವರೆಲ್ಲರಿಗೂ ಹೊಸದು.

ಅಲ್ಲಿಂದ ಹೊರಟ ಟ್ಯಾಕ್ಸಿ ಚಾಲಕ ಫಿಕ್ಕಿಯ ವಿಳಾಸವನ್ನು ತಪ್ಪಾಗಿ ತಿಳಿದು ಇನ್ನೆಲ್ಲೋ ಕರೆದುಕೊಂಡು ಹೋದನು. ಅದು ಸರಿಯಾದ ಸ್ಥಳವಲ್ಲ ಎಂದು ಅಲ್ಲಿಂದ ಮತ್ತೆ ಹೊರಡುವ ಹೊತ್ತಿಗೆ ಆರು ಆಗಲೇ ಹೊಡೆದಿತ್ತು. ಸಂಜೆ, ಸಖತ್ ವಾಹನ ಸಂಚಾರ !

ಹಾಗೂ ಹೀಗೂ ಮಾಡಿ 6–20 ಕ್ಕೆ "ಫಿಕ್ಕಿ" ತಲುಪಿದರು. ನಾಗೇಶ್‌ರವರು ಆಗಲೇ ಕೆಂಡದ ಮೇಲೆ ಕಾಲಿಟ್ಟವರಂತಾಗಿ ಬಿಟ್ಟಿದ್ದರು.

"ಏನ್ರೀ ? ಏನು ಕತ್ತೆಗಳು ನೀವು ? ಸ್ವಲ್ಪಾನೂ ಸಮಯ ಪ್ರಜ್ಞೆ ಬೇಡವಾ? ಎಷ್ಟು ಟೈಮು ಈಗ ಗೊತ್ತಾ ? ಕಾರ್ಯಕ್ರಮ ಶುರು ಆಗಬೇಕಾದ್ದು ಎಷ್ಟು ಹೊತ್ತಿಗೆ?" ನಾಗೇಶ್‌ರವರು "ಬೆಂಕಿ ನವಾಬ" ನಾಗಿದ್ದರು.

ನರಸಿಂಹಲುರವರಿಗೂ ಸಿಟ್ಟು ಏರುತ್ತಿತ್ತು, ಆದರೆ ಅವರು ತಡೆದುಕೊಂಡರು. ಸಹನೆ ಕೆಟ್ಟು ಕಾರ್ಯಕ್ರಮ ಕೆಟ್ಟರೆ ! ಸೀದಾ ಒಳಗೆ ನಡೆದು ವೇದಿಕೆ ಹತ್ತಿದರು. ಗೆಳೆಯರೊಂದಿಗೆ, ತಬಲಾ ಶೃತಿ ಸರಿಪಡಿಸಿ ಹಾರ್ಮೋನಿಯಂ, ತಾನಪುರ ಸಜ್ಜುಗೊಳಿಸಿಕೊಂಡು ಶುರು ಮಾಡಿದರು – ಮಾರವಾ ರಾಗ.

ಸಂಗೀತದ ಅಲೆ ಒಂದರ ಮೇಲೊಂದು ಉಕ್ಕಿ ಬಂದಂತೆ ಸಭೆ ಅದರಲ್ಲಿ ಮುಳುಗಿ ಹೋಯಿತು – ಅಥವಾ ತೇಲಿ ಹೋಯಿತೆ? ಗೊತ್ತಿಲ್ಲ. ಒಟ್ಟಿನಲ್ಲಿ ಇಡೀ ಪ್ರೇಕ್ಷಾಗೃಹ ಒಂದು ಅನಿರ್ವಚನೀಯ ಆನಂದವನ್ನು ಅನುಭವಿಸಿತು.

ನಾಗೇಶ್‌ರವರ ಕೋಪ ರೆಫ್ರಿಜಿರೇಟರ್‌ನೊಳಗೆ ತಣ್ಣಗೆ ಕುಳಿತಿತ್ತು.

ಸಂಗೀತ ಕಾರ್ಯಕ್ರಮ ಮುಗಿದಾಗ ಕಿವಿಗಡಚಿಕ್ಕುವ ಚಪ್ಪಾಳೆ. ಅಂದು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ವೇದಿಕೆ ಏರಿ ಮನಸಾ ಈ ಸಂಗೀತಗಾರನನ್ನು ಹೊಗಳಿದರು.

ಕಾರ್ಯಕ್ರಮ ಮುಗಿದ ಕೂಡಲೇ ನರಸಿಂಹಲು ತಮ್ಮ ಗೆಳೆಯರೊಂದಿಗೆ ತಾವು ಇಳಿದುಕೊಂಡಿದ್ದ ಸ್ಥಳಕ್ಕೆ ವಾಪಸ್ ಬಂದರು — ಯಾರಲ್ಲೂ ಹೇಳದೆಯೆ. ಊಟವನ್ನೂ ಮಾಡದೆ ಮಲಗಿದರವರು.

ನಾಗೇಶ್‌ರವರು ಎಲ್ಲ ಕಾರ್ಯಕ್ರಮ ಮುಗಿದ ನಂತರ ಅತ್ಯಂತ ಖುಷಿಯಿಂದ ಗೆಳೆಯರೊಂದಿಗೆ ಪಾರ್ಟಿ ಮಾಡಿದರು — ಕರ್ನಾಟಕ ಸಂಘದ ಠಿಕಾಣಿಯಲ್ಲಿ – ಅಲ್ಲಿಯೇ ಇಳಿದುಕೊಂಡಿದ್ದು ಎಲ್ಲರೂ. ಪಾರ್ಟಿಯ ಮಧ್ಯದಲ್ಲಿ ಇದ್ದಕ್ಕಿದ್ದಂತೆ ಅವರಿಗೆ ನರಸಿಂಹಲುರವರ ನೆನಪಾಯಿತು. ಕೂಡಲೇ ಅವರಿಗಾಗಿ ಕರೆ ಕಳುಹಿಸಿದರು ನಾಗೇಶ್.

ನರಸಿಂಹಲುರವರಿಗೆ ಆ ಗುಂಪಿನಲ್ಲಿ ಸೇರಲು ಇಷ್ಟವಾಗದ್ದರಿಂದ ಏನೋ ನೆವ ಹೇಳಿ ತಪ್ಪಿಸಿಕೊಂಡರು.

ಮರುದಿನ ಇಬ್ಬರೂ ಭೆಟ್ಟಿಯಾಗಲೇ ಬೇಕಲ್ಲ !

"ವಡವಾಟಿಯವರೆ, ನಿಮ್ಮ ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ನಾನು ನಿಮ್ಮ ಮೇಲೆ ಹಾರಾಡಿದ್ದಕ್ಕೆ ಏನೂ ತಿಳಿದುಕೊಳ್ಳಬೇಡಿ"

ಕಾರ್ಯಕ್ರಮ ಏರ್ಪಾಡು ಮಾಡುವ ಗಡಿಬಿಡಿಯಲ್ಲಿ ನಾಗೇಶ್‌ರವರಿಗೆ ಕಾರ್ ಕಳಿಸಬೇಕಾದ್ದು ಮರೆತು ಹೋಗಿತ್ತು. ಮತ್ತೆ ಇದ್ದಕ್ಕಿದ್ದಂತೆ ನೆನಪಾಗಿ ಕಾರ್ ಕಳಿಸಿದ್ದರು. ಚಾಲಕ ಅಲ್ಲಿಗೆ ಹೋದವನು ಅವರು ಇಲ್ಲದ್ದಕ್ಕೆ ಖಾಲಿ ಹಿಂತಿರುಗಿದ್ದ.

"ಏನು ತಿಳಿದುಕೊಳ್ಳೋದು ಸ್ವಾಮಿ ? ತಪ್ಪು ನಿಮ್ಮ ಕಡೆ ಇಟ್ಟುಕೊಂಡಿದ್ದು ನನಗೇ ಬೈದು ಬಿಟ್ಟಿರಲ್ಲ, ಸರಿಯಾ ಇದು ? ನೀವು ಕಾರು ಕಳಿಸದೇ ಇದ್ದದ್ದಕ್ಕೆ ನಾನು ಟ್ಯಾಕ್ಸಿ ಮಾಡಿಕೊಂಡು ಬರಬೇಕಾಯಿತು. ದಿಲ್ಲಿ ನಮಗೆ ಹೊಸತು ಬೇರೆ ! ಆರು ಗಂಟೆಗೆ ಕಾರ್ಯಕ್ರಮ ಅಂದರೆ ಐದಕ್ಕಲ್ಲವಾ ಕಾರು ಬರ ಬೇಕಾದ್ದು ? ಹೋಗಲಿ, ಏನೋ ತೊಂದರೆ ಆಗಿದೆ ಎಂದು ನಾನು ಒಳ್ಳೆಯ ಉದ್ದೇಶದಿಂದ ನಿರ್ಧಾರ ತೆಗೆದುಕೊಂಡೆ. ಫಿಕ್ಕಿಗೆ ಕರಕೊಂಡು ಬರೋದು ಬಿಟ್ಟು ಆ ಟ್ಯಾಕ್ಸಿ ಡ್ರೈವರ್ ತಪ್ಪಾಗಿ ಬೇರೆ ಕಡೆ ಕರಕೊಂಡು ಹೋದ. ಈಗ ಹೇಳಿ ನನ್ನ ತಪ್ಪೇನು ? ನೀವು ನಮ್ಮನ್ನ ಕತ್ತೆಗಳು ಅಂದಿದ್ದು ಸರಿಯಾ ?"

"ಹೌದು ವಡವಾಟಿಯವರೆ, ನಾನು ಆ ರೀತಿ ಮಾಡಬಾರದಾಗಿತ್ತು" – ಅಲ್ಲಿಗೆ, ಪ್ರಕರಣಕ್ಕೊಂದು ತೆರೆ ಬಿತ್ತು.

ನರಸಿಂಹಲುರವರಿಗೆ ಇದೊಂದು, ಪಾಠವಾಯಿತು. ಮೊದಲೇ ಸಮಯ ನಿಷ್ಠರಾದ ಇವರಿಗೆ ಈ ಪ್ರಸಂಗ ತಮ್ಮ ಈ ಗುಣವನ್ನು ಇನ್ನೂ ಗಟ್ಟಿಗೊಳಿಸಲು ದಾರಿ ಮಾಡಿಕೊಟ್ಟಿತು.

ಮುಂದೆ ಸಂಗೀತ ನಾಟಕ ವಿಭಾಗದಿಂದ ಹೈದರಾಬಾದ್ ಕರ್ನಾಟಕದ ಪ್ರಸಿದ್ಧ-ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಡಾಕ್ಯುಮೆಂಟರಿ ಮಾಡಲು ಹೋದ ನಾಗೇಶ್ ರವರು ಬಿಜಾಪುರದ ಗೋಲಗುಂಬಜ಼್, ಗುಲಬರ್ಗಾದ ಖ್ವಾಜಾ ಬಂದೇನವಾಜ಼್ ದರ್ಗಾ, ಚನ್ನಬಸವೇಶ್ವರ ದೇವಸ್ಥಾನಗಳಲ್ಲದೆ ನರಸಿಂಹಲು ಮತ್ತು ಅವರ ವಿದ್ಯಾಲಯದ ಬಗ್ಗೆಯೂ ಡಾಕ್ಯುಮೆಂಟರಿ ಮಾಡಿದರು.

ಇಂದಿಗೂ ನರಸಿಂಹಲುರವರು ನಾಗೇಶ್‌ರನ್ನು ಹಿರಿಯಣ್ಣನಂತೆ ಕಾಣುತ್ತಾರೆ. ಅದೇನು ಕಾಕತಾಳೀಯವೋ- ನಾಗೇಶ್‌ರವರಿಗೆ ಸಂಬಂಧಿಸಿದ, ಅಂದರೆ ವೈಯಕ್ತಿಕವಾಗಲಿ, ಸನ್ಮಾನ ಸಮಾರಂಭಗಳೇ ಆಗಲಿ, ನರಸಿಂಹಲುರವರು ತಮಗೇ ಗೊತ್ತಿಲ್ಲದಂತೆ ಅಲ್ಲಿ ಹಾಜರ್. ಅದರ ಫಲವಾಗಿ ಆ ಕಾರ್ಯಕ್ರಮಗಳಲ್ಲಿ ಅವರ ಸಂಗೀತದ ಕನಿಷ್ಠ ಅರ್ಧ ಗಂಟೆಯ ಕಾರ್ಯಕ್ರಮವನ್ನು ಅವರು ಕೊಟ್ಟೇ ಕೊಡುತ್ತಾರೆ.

* * *

– ಐ.ಎಂ. ವಿಠ್ಠಲಮೂರ್ತಿ –

ನರಸಿಂಹಲುರವರ ಮೊದಲ ಮಗಳು ಹೀರಾಬಾಯಿಯ ವಿವಾಹದ ದಿನ ನರಸಿಂಹಲುರವರಿಗೊಂದು ತಂತಿ ಬಂದಿತು. ಆಗಿನ ಕಾಲದಲ್ಲಿ ಈಗಿನಂತೆ ಈ ಮೇಲು ಆ ಮೇಲು, ಕೊರಿಯರು – ಇತ್ಯಾದಿ ಸಂಪರ್ಕ ಸಾಧನಗಳಿರಲಿಲ್ಲ. ಇನ್ನು ದೂರವಾಣಿ –– ಮೊಬೈಲು ಬಿಡಿ, ಅದು ಈಗಿನ ಕಾಲದ್ದು –– ಫೋನ್ ಇನ್ನೂ ಈ ಸಂಗೀತಗಾರನ ಮನೆಗೆ ಬಂದಿರಲಿಲ್ಲ.

ತಂತಿಯಲ್ಲಿ ಇದ್ದ ಸಂದೇಶ – "ತಾವು ಇಂಗ್ಲೆಂಡಿನ ಕಾರ್ಯಕ್ರಮಕ್ಕೆ ಆಯ್ಕೆಯಾಗಿದ್ದೀರಿ..... You are selected for programme in Eagland". ಎಂದು.

"ಅಯ್ಯೋ! ಯಾರಿಗೋ ಕಳಿಸಬೇಕಾದ ತಂತಿ ನನಗೆ ಕಳಿಸಿದ್ದಾರೆ ಈ ಸರ್ಕಾರದ ಮಂದಿ! ನಾನೆಲ್ಲಿ, ಇಂಗ್ಲೆಂಡು ಎಲ್ಲಿ ? ಇದು ಬಹುಶಃ ನನ್ನದಲ್ಲ" ಎಂದು ಕೊಂಡರು ಇವರು. ಹಾಗೆ ಅಂದುಕೊಂಡಿದ್ದು ಇವರಿಗೆ ಸಹಜ.

ಇಂಥದ್ದೊಂದು ಅವಕಾಶವನ್ನು ಇವರು ಸರಕಾರದಿಂದ ನಿರೀಕ್ಷಿಸುವುದಾದರೂ ಹೇಗೆ !

ಆದರೆ ಆ ದಿನಗಳಲ್ಲಿ ಸರಕಾರದ ಅಧಿಕಾರಿ ಹುದ್ದೆಗಳಲ್ಲಿ ನಿಜವಾದ ಕಲೋಪಾಸಕರಿದ್ದರು. ಅಂಥವರನ್ನು ಹುಡುಕಿ ಹುಡುಕಿ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಿರ್ದೇಶಕರಾಗಿ ನೇಮಿಸುತ್ತಿತ್ತು. ಇತ್ತೀಚೆಗೆ ನನಗೆ ಈ ಬಗ್ಗೆ ಹೆಚ್ಚು ಗೊತ್ತಿಲ್ಲ, ಏಕೆಂದರೆ ನಾನು ಈಚೆಗೆ ಆ ಇಲಾಖೆಯೊಂದಿಗೆ ಸಂಪರ್ಕ ಹೊಂದಿಲ್ಲ.

ಆ ತಂತಿಯನ್ನು ನರಸಿಂಹಲುರವರಿಗೆ ಕಳಿಸಿದ ದಿನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದವರು ಶ್ರೀ ಐ.ಎಂ. ವಿಟ್ಠಲಮೂರ್ತಿ ಯವರು. ಇವರ ಬಗ್ಗೆ ಈ ಹಿಂದೆ ಆಗಲೇ ಪ್ರಸ್ತಾಪ ಮಾಡಿದ್ದೇನೆ.

ಆರ್. ನಾಗೇಶ್ ರವರು ದೇಶದ ಎಲ್ಲ ಮಹಾನಗರಗಳಲ್ಲೂ ನರಸಿಂಹಲು ರವರನ್ನು ಪರಿಚಯಿಸಿದ್ದರು. ವಿಠ್ಠಲಮೂರ್ತಿಯವರು ಈ ನಾಗೇಶ್‌ರವರ ಮೇಲಧಿಕಾರಿ. ನಮ್ಮ ಕಥಾನಾಯಕನ ಕ್ಲಾರಿಯೋನೆಟ್ ವಾದನದ ಸವಿಯನ್ನು ಸಾಕಷ್ಟು ಬಾರಿ ಆಸ್ವಾದಿಸಿದ್ದರು. ಮ್ಯಾಂಚೆಸ್ಟರ್‌ನಲ್ಲಿ "ಅಕ್ಕನ ಬಳಗ"ದವರು ಏರ್ಪಡಿಸಿದ್ದ "ಕಾರ್ಯಕ್ರಮಕ್ಕೆ ಕಲಾವಿದರ ಆಯ್ಕೆ ಮಾಡಬೇಕಾದ ಹೊಣೆ ಇವರ ಹೆಗಲೇರಿದಾಗ ಇವರಿಗೆ ಹೊಳೆದ ಮೊದಲ ಹೆಸರು ನರಸಿಂಹಲು ವಡವಾಟಿ.

ಮಗಳ ಮದುವೆ ಮುಗಿಸಿ ಬೀಗರನ್ನು ವಧುವಿನೊಂದಿಗೆ ಕಳಿಸಿಕೊಟ್ಟ ನಂತರ ಮರುದಿನ ಸರಕಾರದಿಂದ ಇವರಿಗೊಂದು ಪತ್ರ ಬಂದಿತು. ಆ ಪತ್ರ ಓದಿದ ಮೇಲೆಯೇ ನರಸಿಂಹಲುವರಿಗೆ ಈ ಹಿಂದೆ ಬಂದಿದ್ದ ತಂತಿ ಮಿಡಿದದ್ದು, ನುಡಿದದ್ದು ತನ್ನ ಹೆಸರನ್ನೇ ಎಂದು. ಆ ಪತ್ರದಲ್ಲಿ ವಿಷಯ ವಿವರವಾಗಿದ್ದು ನಿರ್ದೇಶಕರನ್ನು ಸಂಪರ್ಕಿಸಲು ಸೂಚಿಸಲಾಗಿತ್ತು.

ಅದರಂತೆ ನರಸಿಂಹಲುರವರು ಬೆಂಗಳೂರಿಗೆ ಬಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ವಿಠ್ಠಲಮೂರ್ತಿಯವರನ್ನು ಕಂಡರು.

– "ವಡವಾಟಿಯವರೆ, ನೀವು ಮ್ಯಾಂಚೆಸ್ಟರ್‌ನ ಕಾರ್ಯಕ್ರಮಕ್ಕೆ ಹೋಗುತ್ತಿದ್ದೀರಿ." ವಿಠ್ಠಲಮೂರ್ತಿಯವರೆಂದರು.

"ತಾವೇ ಅಲ್ಲವೇ ಸ್ವಾಮಿ ಕಳಿಸ್ತಾ ಇರೋದು !" ನರಸಿಂಹಲು ರವರದ್ದು ಅದೇ ವಿನಯ !

ಮುಂದೆ ಇಂಗ್ಲೆಂಡಿನ ಕಾರ್ಯಕ್ರಮವಾದ ಬಗ್ಗೆ ಈಗಾಗಲೇ ವಿವರವಾಗಿ ಬರೆದಿರುವೆ. ತಮ್ಮ ಸತ್ವವನ್ನು ಗುರುತಿಸಿ ಸೂಕ್ತ ಸಂದರ್ಭದಲ್ಲಿ ಯೋಗ್ಯ ಪ್ರೋತ್ಸಾಹ ನೀಡಿದ ಶ್ರೀ. ಐ.ಎಂ. ವಿಠ್ಠಲ ಮೂರ್ತಿಯವರನ್ನು ನರಸಿಂಹಲುರವರು ಸದಾ ನೆನೆಯುತ್ತಾರೆ. ಜೊತೆಗೆ ಶ್ರೀಮತಿ ವಿಠ್ಠಲಮೂರ್ತಿಯವರು ನರಸಿಂಹಲು ರವರ ಧರ್ಮಪತ್ನಿ ಶಿವಮ್ಮನವರಿಗಾಗಿ ಖರೀದಿ ಮಾಡಿ ತೆಗೆಸಿಕೊಟ್ಟ ಸೀರೆಯನ್ನೂ ಸಹ !

ಈ ಸಂಬಂಧ ಇಷ್ಟಕ್ಕೇ ನಿಲ್ಲಲಿಲ್ಲ, ಅವಕಾಶ ಸಿಕ್ಕಿದಾಗಲೆಲ್ಲ ನರಸಿಂಹಲು ರವರನ್ನು ನೆನಪಿಸಿಕೊಳ್ಳುವುದು ವಿಠ್ಠಲಮೂರ್ತಿಯವರಿಗೆ ಅಭ್ಯಾಸವಾಗಿ ಬಿಟ್ಟಿತ್ತು. ಅವರಿದ್ದಲ್ಲಿ ನರಸಿಂಹಲುರವರು ಬಂದ, ಇರಬೇಕಾದ ಸಂದರ್ಭ ಬಂದಾಗ ಬೆಳಗಿನ ಉಪಾಹಾರಕ್ಕೆ ಅವರು ಇವರನ್ನು ಕರೆಯುವುದು ಪರಿಪಾಠವಾಗಿ ಬಿಟ್ಟಿತ್ತು.

ಬಿಜಾಪುರದಲ್ಲೊಮ್ಮೆ ಗೋಲಗುಂಬಜ್ ಆವರಣದಲ್ಲಿ ಮಾಜಿ ಕ್ರಿಕೆಟ್ ತಾರೆ ಶ್ರೀ. ಜಿ.ಆರ್.ವಿಶ್ವನಾಥ್ ಹಾಗೂ ನಮ್ಮ ನರಸಿಂಹಲುರವರನ್ನು ಒಟ್ಟಿಗೇ ಸನ್ಮಾನ ಮಾಡಿದ ಸಂದರ್ಭದಲ್ಲಿ ಆಗ ಅಲ್ಲಿ ಜಿಲ್ಲಾಧಿಕಾರಿಯಾಗಿದ್ದ ವಿಟ್ಠಲಮೂರ್ತಿ ಯವರು ಅವರಿಬ್ಬರನ್ನೂ "ಕರ್ನಾಟಕದ ಎರಡು ರತ್ನಗಳು"ಎಂದು ಶ್ಲಾಘಿಸಿದ್ದರು.

ಎಂದಿನಂತೆ ಆಗಲೂ ಸಹ ವಿಟ್ಠಲಮೂರ್ತಿಯವರು "ವಡವಾಟಿಯವರೇ ನಾಳೆ ಬೆಳಿಗ್ಗೆ ತಿಂಡಿಗೆ ಮನೆಗೆ ಬಂದು ಬಿಡಿ" ಎಂದರು.

ಗೋಲಗುಂಬಜ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾನ್‌ಪುರ ಸಾಥ್ ನೀಡಲು ನರಸಿಂಹಲುರವರೊಂದಿಗೆ ಒಬ್ಬ ಹುಡುಗ ಬಂದಿದ್ದನು. ಸಂಗೀತ ಕಲಿತಿದ್ದ ಬಡ ಹುಡುಗ ಆತ.

"ಸಾರ್, ನಿಮಗೆ ಡಿ.ಸಿ. ಸಾಹೇಬರ ಪರಿಚಯ ಚೆನ್ನಾಗಿದೆ, ಅವರಿಗೆ ಹೇಳಿ ನನಗೆ ಒಂದು ನೌಕರಿಕೊಡಿಸ್ತೀರಾ! ನಮ್ಮ ಊರ ಹತ್ತಿರದ ಶಾಲೆಯಲ್ಲಿ ಸಂಗೀತ ಮೇಷ್ಟ್ರ ನೌಕರಿಗೆ ಕರೆದಿದ್ದಾರೆ. ನಾನು ಅರ್ಜಿ ಹಾಕಿದ್ದೇನೆ. ನೌಕರಿ ನೀಡುವ ಅಧಿಕಾರ ಡಿ.ಸಿ.ಸಾಹೇಬರು ಕೈಯಲ್ಲಿದೆ" –ಆ ಹುಡುಗ ಕೇಳಿಕೊಂಡನು.

"ಆಗಲಪ್ಪ, ಹೇಳ್ತೀನಿ. ಈಗಬೇಡ, ಕಾರ್ಯಕ್ರಮದ ಸಮಯದಲ್ಲಿ ನಾನು ಕಾರ್ಯಕ್ರಮದ ಬಗ್ಗೆ ಮಾತ್ರ ಯೋಚನೆಮಾಡೋದು ಬೇರೇನೂ ಅಲ್ಲ., ನೋಡೋಣ"–ಎಂದರು ನರಸಿಂಹಲು.

ಮರುದಿನ ಉಪಾಹಾರದ ಸಂದರ್ಭದಲ್ಲಿ ಮಾತಿನ ನಡುವೆ ನರಸಿಂಹಲು ರವರು ಈ ವಿಷಯ ಪ್ರಸ್ತಾಪ ಮಾಡಿದರು.

"ನೋಡೋಣ ಆತನನ್ನು ನನ್ನ ಬಳಿ ಕಳಿಸಿ" ವಿಠ್ಠಲ ಮೂರ್ತಿಯವರು ಅಂದರು.

ಫಲ ಸ್ವರೂಪವಾಗಿ ಆ ಹುಡುಗನಿಗೆ ಆತ ಆಸೆಪಟ್ಟಿದ್ದ ನೌಕರಿ ಸಿಕ್ಕಿತ್ತು.

ಗೊತ್ತಿತ್ತಲ್ಲವೆ ವಿಠ್ಠಲಮೂರ್ತಿಯವರಿಗೆ ನರಸಿಂಹಲುರವರು ತನಗಾಗಿ ಈ ರೀತಿಯ ಬೇಡಿಕೆಗಳನ್ನು ಇಡುವುದಿಲ್ಲ ಎಂಬುದು. ಹೃದಯವಂತರಿಗೆ ಮಾತ್ರ ಈ ರೀತಿಯ ಸತ್ಕಾರ್ಯ ಮಾಡಲು ಸಾಧ್ಯ

**– ಅ.ರಾ. ಚಂದ್ರಹಾಸ ಗುಪ್ತ –**

80 ರ ದಶಕದ ಮೊದಲ ಭಾಗ. ಮುಂಬೈಯಲ್ಲಿ ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮ ನಡೆದ ಒಂದು ಸಂದರ್ಭದಲ್ಲಿ ನರಸಿಂಹಲುರವರ ಕ್ಲಾರಿಯೋನೆಟ್ ಕಾರ್ಯಕ್ರಮವೂ ಇತ್ತು. ಅಂದು ಅವರು ಸಂಜೆಯ ರಾಗವಾದ ಶಾಂ ಕಲ್ಯಾಣ್ ವಾದಿಸಿದರು.

ಆ ಕಾರ್ಯಕ್ರಮಕ್ಕೆ ಓರ್ವ ಸಂಗೀತಗಾರರು ಶ್ರೋತೃವಾಗಿ ಬಂದಿದ್ದರು– — ಅವರು ಹೆಸರನ್ನು ನರಸಿಂಹಲುರವರಿಗೆ ನೆನಪಿಸಿಕೊಳ್ಳಲಾಗುತ್ತಿಲ್ಲ. ರಾಗವನ್ನು ನುಡಿಸಿ ಮುಗಿಸಿದ ನಂತರ ಆ ಸಂಗೀತಗಾರರು ಸೀದಾ ವೇದಿಕೆಗೆ ಹೋಗಿ ನರಸಿಂಹಲುರವರ ಮುಂದೆ ನೆಲಕ್ಕೆ ಹಣೆಹಚ್ಚಿ ವಂದಿಸಿದರು. ಗುಣಕ್ಕೆ ಮತ್ಸರವೆಲ್ಲಿ!

ಆ ಕಾರ್ಯಕ್ರಮವನ್ನು ಆಸ್ವಾದಿಸಿ ಮೆಚ್ಚಿಕೊಂಡ ಇನ್ನೊಬ್ಬ ವ್ಯಕ್ತಿ ಕನ್ನಡ– ಸಂಸ್ಕೃತಿ ಇಲಾಖೆಯ ಆಗಿನ ನಿರ್ದೇಶಕರಾಗಿದ್ದ ಶ್ರೀ.ಅ.ರಾ.ಚಂದ್ರಹಾಸ ಗುಪ್ತರವರು. ಮೇಲಿನ ಘಟನೆ ನಡೆದಾಗ ಅವರೂ ವೇದಿಕೆಯ ಮೇಲಿದ್ದರು. ಅವರಿಗೆ ಅದೊಂದು ಅಪೂರ್ವ ದೃಶ್ಯ

"ಏನು ವಡವಾಟಿಯವರೆ! ಎಂತಹ ಅದ್ಭುತ ಸಾಧನೆ ನಿಮ್ಮದು! ಅಂತಹ ನುರಿತ ಕಲಾವಿದರೇ ನಿಮಗೆ ತಲೆಬಾಗಿದರೆಂದರೆ, ಅವರೇ ನಿಮಗೆ ಗೌರವ



ದಸರಾ ಮಹೋತ್ಸವದಲ್ಲಿ ಡಾ॥ ವಡವಾಟಿಯವರ ಕ್ಲಾರಿಯಾನೆಟ್
ಹಾಗು ಸ್ಯಾಕ್ಸಾಫೋನ್‌ನಲ್ಲಿ ಡಾ॥ ಕದ್ರಿಗೋಪಾಲ್‌ನಾಥ್
ಜುಗಲ್ ಬಂದಿಯ ಸಂದರ್ಭದಲ್ಲಿ ಮಗ್ನರಾಗಿರುವುದು.




ಬಾನ್ಸುರಿ ವಾದಕ ಶ್ರೀ ರೋಣು ಮೊಜುಮ್‌ದಾರ್ ಹಾಗು
ಕ್ಯಾರಿಯೋನೆಟ್ ವಾದಕ ಡಾ॥ ವಡವಾಟಿಯವರೊಂದಿಗಿನ
ಜುಗಲ್ ಬಂದಿಯ ಗುಂಗಿನಲ್ಲಿ ಸಂಗೀತದ್ವಯರು

ತೋರಿಸಬೇಕಾದರೆ ಎಷ್ಟು ಎತ್ತರಕ್ಕೆ ಏರಿದ್ದೀರಿ ನೀವು, ಅಬಾಬಾಬಾ!" ಗುಪ್ತರವರು ಉದ್ಗರಿಸಿದರು.

"ಎಲ್ಲಾ ತಮ್ಮಂತಹವರ ಪ್ರೋತ್ಸಾಹ ಸ್ವಾಮಿ!" – ನರಸಿಂಹಲು ರವರ ನಿಗರ್ವಿ ಉತ್ತರ.

"ಪ್ರೋತ್ಸಾಹ ಏನ್ರೀ! ಯಾರಾದರೂ ಕೊಡುತ್ತಾರೆ. ಇಂತಹ ಪ್ರತಿಭೆಗೆ ಅಲ್ಲದೆ ಇನ್ನೂ ಎಂತಹದಕ್ಕೆ ಪ್ರೋತ್ಸಾಹ ಕೊಡುವುದು! ಈ ರೀತಿಯ ಪ್ರತಿಭೆ ಕಾಣಬೇಕಲ್ಲವೇ!"

---- ಆಗಿನಿಂದಲೇ ಅವರಿಗೆ ನರಸಿಂಹಲುರವರ ಬಗ್ಗೆ ಅಭಿಮಾನ ಹೆಚ್ಚಾಯಿತು. ಅವಕಾಶ ಸಿಕ್ಕಿದಾಗಲೆಲ್ಲಾ ಅವರು ಈ ಕಲಾವಿದನಿಗೆ ಪ್ರೋತ್ಸಾಹ ನೀಡುತ್ತಲೇ ಇದ್ದರು.

ಒಮ್ಮೆ ಇದ್ದಕ್ಕಿದ್ದಂತೆ ಅವರಿಗೊಂದು ಯೋಚನೆ ಹೊಳೆಯಿತು. ಅಂಥಿಂಥ ಯೋಚನೆಯಲ್ಲ, ಅದೊಂದು ದೊಡ್ಡ ಯೋಜನೆಯಾಗಿ ಕಾರ್ಯರೂಪಕ್ಕೆ ಬಂದ ಮೇಲೆ ಹಿಂದುಸ್ತಾನಿ ಕ್ಯಾಸೆಟ್/ಸಿ.ಡಿ. ಲೋಕಕ್ಕೊಂದು ಹೊಸ ಆಯಾಮ ಸಿಕ್ಕಿತು.

ಗುಪ್ತರವರಿಂದ ನರಸಿಂಹಲುರವರಿಗೆ ಕರೆ ಬಂದಿತು. ನರುಸಿಂಹಲುರವರು ಬೆಂಗಳೂರಿಗೆ ಬಂದು ಗುಪ್ತರವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿದರು.

"ವಡವಾಟಿಯವರೆ, ನಿಮ್ಮ ಹಿಂದುಸ್ತಾನಿ ಕ್ಲಾರಿಯೋನೆಟ್ ಮತ್ತು ಕದ್ರಿಯವರ ಕರ್ನಾಟಕ ಸ್ಯಾಕ್ಸೊಫೋನ್ ವಾದನದ ಜುಗುಲಬಂದಿ ಮಾಡಿದರೆ ಹೇಗೆ?" ಗುಪ್ತರವರ ಯೋಚನೆ ಪ್ರಕಟವಾಯಿತು.

ವಿದ್ವಾನ್ ಕದ್ರಿಗೋಪಾನಾಥರದ್ದು ಕರ್ನಾಟಕ ಸಂಗೀತದಲ್ಲಿ ಒಳ್ಳೆಯ ಹೆಸರು. ಅವರ ಪರಿಣತಿ ಸ್ಯಾಕ್ಸೋಫೋನ್‌ನಲ್ಲಿ. ಈ ವಾದ್ಯವೂ ಸಹ ಕ್ಲಾರಿಯೋನೆಟ್ ನಂತೆಯೇ ವಿದೇಶಿವಾದ್ಯ. ಹಿಂದುಸ್ತಾನಿಯಲ್ಲಿ ನರಸಿಂಹಲುವರಂತೆಯೆ ಸ್ಯಾಕ್ಸೋ ಫೋನ್‌ನಲ್ಲಿ ಕದ್ರಿಯವರದ್ದು ಅನುಪಮ ಪರಿಣತಿ. ಗುಪ್ತರವರಿಗೆ ಈ ಯೋಚನೆ ಹೊಳೆದದ್ದು ಸಹಜ.

"ಮಾಡಬಹುದು ಸಾರ್, ಆದರೆ ಅದಕ್ಕೆ ನಾವಿಬ್ಬರೂ ಕೂತು ತಾಲೀಮು ಮಾಡಬೇಕು. ತಬಲಾ ಮೃದಂಗ ವಾದಕರೂ ಬೇಕು. ತಂಬೂರದವರೂ ಬೇಕು. ಎಲ್ಲರೂ ಒಟ್ಟಾಗಿ ಒಂದು ತಿಂಗಳು ಶ್ರಮ ಪಡಬೇಕು" –ನರಸಿಂಹಲುರವರು ಉತ್ತರಿಸಿದರು.

"ಮಾಡಿ. ನಾನೀಗಾಗಲೇ ಕದ್ರಿಯವರಿಗೆ ಹೇಳಿದ್ದೇನೆ. ನೀವು, ಅವರು ಮಾತಾಡಿ. ಒಟ್ಟಿಗೇ ತಾಲೀಮು ಮಾಡಿ. ಹೋಟೆಲ್‌ನ ರೂಂ ಬಿಲ್ಲು, ಊಟ-ತಿಂಡಿ--- ಎಲ್ಲ ಖರ್ಚು ನೋಡ್ಕೋತೀವಿ. ಅದರ ಬಗ್ಗೆ ಯೋಚನೆ ಬೇಡ." ಗುಪ್ತರವರು ಭರವಸೆ ನೀಡಿದರು.

ಇಬ್ಬರು ಕಲಾವಿದರೂ ಮಾತನಾಡಿಕೊಂಡರು. ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದರೆ ಉಳಿದ ಗ್ರಾಹಕರಿಗೆ ತೊಂದರೆಯಾಗಬಹುದು, ಬೇಡ-ಎಂಬ ತೀರ್ಮಾನವಾಯಿತು. ಮಲ್ಲೇಶ್ವರಂ 18ನೇ ಅಡ್ಡರಸ್ತೆಯಲ್ಲಿ ಇರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ಕದ್ರಿಯವರಿಗೆ ಪರಿಚಯವಿದ್ದ ಪದ್ಮಾನಂದ ಗುರೂಜಿ ಎಂಬುವವರನ್ನು ಸಂಪರ್ಕ ಮಾಡಿದಾಗ ಅವರು ಸಂತೋಷದಿಂದ ತಮ್ಮ ಮಠದಲ್ಲಿ ತಾಲೀಮು ನಡೆಸಲು ಸಮ್ಮತಿಸಿದರು.

ಸತತ ತಾಲೀಮಿನ ನಂತರ ಜುಗಲಬಂದಿ ಕಾರ್ಯಕ್ರಮ ನಡೆಯಿತು. 1982ರಲ್ಲಿ ಗುರುನಾನಕ್ ಭವನದಲ್ಲಿ ಅಂದು ನಡೆದ ಕಾರ್ಯಕ್ರಮದಲ್ಲಿ ಪಕ್ಕವಾದ್ಯದ ಸಾಥ್ ನೀಡಿದ್ದು ತಬಲಾ ಸಾಥಿ ರವೀಂದ್ರ ಯಾವಗಲ್ಲರು ಹಾಗೂ ಮೃದಂಗದ ಜೊತೆಯಾಗಿ ರಾಜ್ ಕೇಸರಿಯವರು. ಪ್ರೇಕ್ಷಾಗೃಹದಲ್ಲಿ ಉತ್ತಮ ಮಟ್ಟದ ರಸಿಕರು --ಇನ್ನೇನು! ಕಲಾವಿದರಿಗೂ ಹೊಸ ಸಾಹಸದ ಹುರುಪು. ಸೊಗಸಾದ ಕಾರ್ಯಕ್ರಮ ಎರಡು ಘಂಟೆಗಳ ಕಾಲ ನಡೆಯಿತು. ಶ್ರೋತೃಗಳು ಆಶ್ಚರ್ಯಾನಂದದಲ್ಲಿ ತೇಲಿದರು, ಮುಳುಗಿದರು.

ಕರ್ನಾಟಕಕ್ಕೆ ಪೂರ್ವೋತ್ತರ ಭಾಗಕ್ಕೆ ರಾಯಚೂರು ಜಿಲ್ಲೆ ಒಂದು ಗಡಿ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಒಂದು ಗಡಿ. ಆ ಎರಡು ಪ್ರದೇಶಗಳಿಂದ ಬಂದ ಈ ಕಲಾವಿದರನ್ನು ಗುಪ್ತರವರು "ಕರ್ನಾಟಕದ ಎರಡು ನಕ್ಷತ್ರಗಳು" ಎಂದು ಕರೆದರು.

ಮುಂದೆ ಇವರಿಂದ ಸಾಕಷ್ಟು ಜುಗಲಬಂದಿಗಳು ನಡೆದವು. ಜನಪ್ರಿಯವೂ ಆದವು. ಫಲತಃ ಈ ಜುಗಲಬಂದಿಗಳ ಕ್ಯಾಸೆಟ್/ಸಿ.ಡಿ ರೂಪದಲ್ಲೂ ಮಾರುಕಟ್ಟೆಯನ್ನೂ ಪ್ರವೇಶಿಸಿ ಹೆಸರುಮಾಡಿದವು.

ಯಾರಾತ, ಎಲ್ಲಿದ್ದಾನೆ ಆತ ಮರೆಯಲ್ಲಿ-- ಗುಪ್ತರ ತಲೆಯೊಳಗೆ ಈ ಅಮೋಘ ಯೋಚನೆಯನ್ನು ಬಿತ್ತಿದಾತ!

## -ಸಂತೋಷ ಕುಮಾರ ಗುಲ್ವಾಡಿ-

1979 ರಲ್ಲಿ ನಾರದಗಡ್ಡೆಯಲ್ಲಿ ರಥೋತ್ಸವ ಸಮಯದಲ್ಲಿ ರಾತ್ರಿ ಒಂಭತ್ತು ಘಂಟೆಯಿಂದ ನಡುರಾತ್ರಿ ಮೂರು ಘಂಟೆಯ ವರೆಗೆ ನರಸಿಂಹಲುರವರ ಸಂಗೀತ ಕಛೇರಿ ನಡೆಯಿತು. ಅಂದು ಅಲ್ಲಿದ್ದ ಶ್ರೋತೃಗಳಲ್ಲಿ ಪ್ರಮುಖರು ಪ್ರೋ॥ ಶಾಂತರಸರು ಹಾಗೂ "ತರಂಗ" ವಾರಪತ್ರಿಕೆಯ ಆಗಿನ ಸಂಪಾದಕರಾದ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರು.

ನರಸಿಂಹಲುರವರ ಸಂಗೀತದಿಂದ ಪ್ರಭಾವಿತರಾದ ಗುಲ್ವಾಡಿಯವರು ಆ ವರ್ಷ ರಾಮನವಮಿಯಂದು ಮಂಗಳೂರಿನ ಗುಲ್ವಾಡಿ ರಾಮಮಂದಿರದಲ್ಲಿ ಅವರ ಕಾರ್ಯಕ್ರಮವನ್ನು ಏರ್ಪಡಿಸಿದರು.

ಜೊತೆಗೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಮನೆಯಲ್ಲಿ ಸಹ ಗುಲ್ವಾಡಿಯವರ ಶಿಫಾರಸ್ಸಿನಿಂದ ನರಸಿಂಹಲುರವರ ಕಾರ್ಯಕ್ರಮ ನಡೆಯಿತು. ಹೆಗ್ಗಡೆಯವರಷ್ಟೇ ಅಲ್ಲ ಅದನ್ನು ಮೆಚ್ಚಿದ್ದು, ಅಲ್ಲಿಗೆ ಬಂದಿದ್ದ ಹೆಸರಾಂತ ಬಾನ್ಸುರಿ ವಾದಕ ಪಂಡಿತ್ ಪನ್ನಾಲಾಲ್ ಘೋಷ್ ರವರ ಶಿಷ್ಯ ಮತ್ತು ಅಳಿಯಂದಿರಾದ ಪಂಡಿತ್ ದೇವೇಂದ್ರ ಮುರುಡೇಶ್ವರವರೂ.

ಹೇಳುತ್ತಾ ಹೋದರೆ ಪಟ್ಟಿ ಉದ್ದವಾದೀತು. ಮರೆಯಲಾದೀತೇ ಇವರನ್ನೆಲ್ಲ!

❑

ಚರಣ 19

# ಜಗ್ಗದೆ ನಡೆದಾಗ ಹಿಗ್ಗಿದ ಹಿರಿಯರು

**ಒ**ಮ್ಮೆ ಖ್ಯಾತ ಚಿತ್ರಕಲಾವಿದರಾದ ಬೆಟ್ಟದೂರು ಶಂಕರೇಗೌಡರು ಗುಲಬರ್ಗಾದ ಚನ್ನಬಸಪ್ಪ ಅಪ್ಪಾರ ಪೀಠಾಧಿಪತಿಗಳಾದ ದೊಡ್ಡಪ್ಪ ಅಪ್ಪಾರವರ ಮುಂದೆ ನರಸಿಂಹಲುರವರ ಸಂಗೀತ ಸೇವೆ ಏರ್ಪಡಿಸಿದ್ದರು. ವಾದನ ಕೇಳಿದ ಅಪ್ಪನವರು ಕಾಜಣ್ಣ ಮತ್ತು ಸಬ್ಜಣ್ಣ ಎಂಬಿಬ್ಬರು ಸೋದರರನ್ನು ನೆನಪಿಸಿಕೊಂಡರು. ಕಾಜಣ್ಣನೊಬ್ಬ ಗಾಯಕರು ಹಾಗೂ ಸಬ್ಜಣ್ಣ ಒಬ್ಬ ಪಿಟೀಲು ವಾದಕರು. ಗುರು ಜಂಬದಿನ್ನಿಯವರಿಗೂ ಹಿಂದಿನವರಾದ ಅವರು ಕರ್ನಾಟಕ ಸಂಗೀತದಲ್ಲಿ ನಿಷ್ಣಾತರಾಗಿದ್ದು ಹೈದರಾಬಾದು ಕರ್ನಾಟಕದಲ್ಲಿ ಆಗ ಸಾಕಷ್ಟು ಹೆಸರು ಮಾಡಿದ್ದ ಗಂಧರ್ವ ಜೋಡಿ.

* * * *

ಸಹೃದಯಿ ಪಂಡಿತ್ ಮನಸೂರಬುವಾರವರು ಒಮ್ಮೆ ಧಾರವಾಡದಲ್ಲಿ ತಮ್ಮ ಗುರು ಉಸ್ತಾದ ಅಲ್ಲಾದಿಯಾಖಾನರ ನೆನಪಿನಲ್ಲಿ ನಡೆಸಿದ ಸಂಗೀತೋತ್ಸವ ದಲ್ಲಿ ನರಸಿಂಹಲುರವರಿಗೆ ಅವಕಾಶ ನೀಡಿದ್ದರು. ನರಸಿಂಹಲುರವರ ವಾದನವನ್ನುಕೇಳಿ ಬುವಾರವರು "ಇಂವಾ ಭಾಳ ಸುರೀಲೀ ಬಾರಿಸ್ತಾನ" ಅಂದಿದ್ದರು. ಬುವಾರ ಮುಖದಿಂದ ಬಂದ ಈ ಹೊಗಳಿಕೆ ಯಾವುದೇ ಉಚ್ಚತಮ ಪ್ರಶಸ್ತಿ –ಪಾರಿತೋಷಕಕ್ಕೂ ಕಡಿಮೆಯದಲ್ಲ. ಅಲ್ಲಿಗೆ ಬುವಾರವರ ಗುರುಗಳ ಮೊಮ್ಮಗ ಬಾಬಾಖಾನ ಸಾಹೇಬರು ಬಂದಿದ್ದರು,

"ಬೇಟಾ, ಆಪಕೇ ಸ್ವರಕಾ ಅಂದಾಜ್ ಅಚ್ಛಾ ಹೈ" (ಮಗು ನಿನ್ನ ಸ್ವರದ ಹಿಡಿತ ಚೆನ್ನಾಗಿದೆ)– ಎಂದಿದ್ದರವರು.

* * * *

1981ರಲ್ಲಿ ನರಸಿಂಹಲುರವರಿಗೆ ಬಂದ "ಸುರಮಣಿ" ಪ್ರಶಸ್ತಿಯನ್ನು ಹರಿದಾಸ ಸಮ್ಮೇಳನದಲ್ಲಿ ನೀಡಲಾಯಿತು. ಪ್ರದಾನ ಮಾಡಿದವರು ಸಂಗೀತದ ಮೇರು ಶಿಖರಪ್ರಾಯರಾದ ಪಂಡಿತ್ ಶ್ರೀಮತಿ ಪದ್ಮಾವತಿ ಸಾಲಿಗ್ರಾಮ್ ರವರು ಹಾಗೂ




ಸೂರ್ ಸಿಂಗಾರ್ ಸಂಸ್ಥೆ ಬಾಂಬೆಯು ಸೂರ್‌ಮಣಿ ಪ್ರಶಸ್ತಿ ಪ್ರದಾನ
ಮಾಡುವ ಸಂದರ್ಭದಲ್ಲಿ ಸಂಗೀತ ವಿದೂಷಿ
ಪದ್ಮಾವತಿ ಸಾಲಿಗ್ರಾಮ್ ಹಾಗು ಮುಂತಾದವರೊಂದಿಗೆ

ಪಂಡಿತ್ ಶ್ರೀಮತಿ ಮೋಗೂಬಾಯಿ ಬುರ್ಡೀಕರ್ (ಪಂಡಿತ್ ಕಿಶೋರಿ ಅಮೋನ್‌ಕರರ ತಾಯಿ) ಅವರು. ಅಂದು ನರಸಿಂಹಲುರವರು ಜೈಜಯವಂತಿ ರಾಗ ನುಡಿಸಿದರು.

"ಬಾಗೇಶ್ರೀ ರಾಗದ ಅಂಗವಾದ ಜೈಜಯವಂತಿ ರಾಗವನ್ನು ಪಾಶ್ಚಾತ್ಯ ವಾದ್ಯವಾದ ಕ್ಲಾರಿಯೋನೆಟ್‌ನಲ್ಲಿ ಕೇಳುತ್ತಿರುವುದು ಒಂದು ಆನಂದದ ಅನುಭವ" ಎಂದು ಶ್ರೀಮತಿ ಸಾಲಿಗ್ರಾಮ್‌ರವರು ಉದ್ಗರಿಸಿದರು.

* * * *

ಕೊಲ್ಹಾಪುರದಲ್ಲೊಮ್ಮೆ ಅಲ್ಲಿಯ ವಿಶ್ವವಿದ್ಯಾಲಯದವರು ಸಂಗೀತ ವಿಭಾಗದ ಡೀನ್‌ರವರಾಗಿದ್ದ ಶ್ರೀಮತಿ ಭಾರತಿ ವೈಶಂಪಾಯನರವರ ನೇತೃತ್ವದಲ್ಲಿ ಶಾಹು ಸಂಗೀತ ಸಮ್ಮೇಳನ ಏರ್ಪಡಿಸಿದ್ದರು. ಉಸ್ತಾದ್ ರಶೀದ್‌ಖಾನ್, ಪಂಡಿತ್ ರಾಜನ್-ಸಾಜನ್ ಮಿಶ್ರಾ ಸೋದರರು, ಸಂತೂರ್ ವಾದಕರಾದ ಪಂಡಿತ್ ಸತೀಶ್ ವ್ಯಾಸರವರು – ಮುಂತಾದವರು ಇದರಲ್ಲಿ ಭಾಗವಹಿಸಿದ್ದರು. ವಡವಾಟಿಯವರ ಕ್ಲಾರಿಯೋನೆಟ್ ವಾದನವೂ ಇತ್ತು. ಶ್ರೋತೃಗಳಲ್ಲಿ ಹೆಚ್ಚಿನವರು ಸಂಗೀತ

ಗಾರರೇ. ಆರಂಭಕ್ಕೆ ಕ್ಲಾರಿಯೋನೆಟ್ ಕಾರ್ಯಕ್ರಮ ಇತ್ತು. ನರಸಿಂಹಲುರವರು ಆಗ ಮಾರೊಬಿಹಾಗ್ ರಾಗ ನುಡಿಸಿದರು. ಅದನ್ನು ಕೇಳಿದ ಸುಪ್ರಸಿದ್ಧ ಹಾರ್ಮೋನಿಯಂ ವಾದಕರಾದ ಪಂಡಿತ್ ಪುರುಷೋತ್ತಮ್ ವಾಲವಾಲ್ಕರ್ ವೇದಕೆಯೇರಿ ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದರು.

"ಮಾರೇಬಿಹಾಗ್ ಕಾ ಸಹೀ ಗಾಂಧಾರ್ ಮೈನೇ ಅಜ್ ವಡವಾಟೀಜೀ ಸೇ ಸುನಾ."

* * * *

2006 ರಲ್ಲಿ ಮುಂಬೈನಲ್ಲಿ ದಿವಂಗತ ಪಂಡಿತ್ ಹೀರಾಬಾಯಿ ಬಡೋದೇಕರರ ಮಗಳು ಸ್ಥಾಪಿಸಿದ್ದ ಶಾರದಾ ಸಂಗೀತ ವಿದ್ಯಾಲಯದವರು ಮಲ್ಹಾರ್ ಮಹೋತ್ಸವವನ್ನು ಆಚರಿಸಿದರು. ಅಂದು ನರಸಿಂಹಲುರವರು ವಾದಿಸಿದ್ದು ಮಿಯಾಮಲ್ಹಾರ್. "ಕ್ಲಾರಿಯೋನೆಟ್‌ನಲ್ಲಿ ಮಿಯಾಮಲ್ಹಾರ್!" ಎಂದು ಕೊಂಡು ಬಂದವರಿಗೆ ಅದು ವಿಲಕ್ಷಣ ಅನುಭವ ಅದನ್ನು ಕೇಳಿದ ಪಂಡಿತ್ ತುಲಸೀದಾಸ್ ಬೋರ್ಕ್‌ರ್ ಎಂಬ ಇನ್ನೊಬ್ಬ ನಿಷ್ಣಾತ ಹಾರ್ಮೋನಿಯಂ ವಾದಕರು ಮೆಚ್ಚಿ ಮನದುಂಬಿ ನರಸಿಂಹಲುರವರನ್ನು ಹೊಗಳಿ ಹರಸಿದರು.

———ಹೀಗೆ ಸುತ್ತಲೂ ಚೆಲ್ಲಿ ಹರಡಿದ ಮುತ್ತುಗಳೆಷ್ಟೋ! ಎತ್ತಿ ಕೊಂಡಷ್ಟೂ ಮತ್ತಷ್ಟು ಉಳಿದಿರುತ್ತವೆ.

❑

ಚರಣ 20

# ನರಸಿಂಹಲು ಡಾಕ್ಟ್ರಾಗಿದ್ದು

ನರಸಿಂಹಲು ಡಾಕ್ಟ್ರ ಆಗಿಬಿಟ್ಟರು!

ಬರಿಯ ಮೂರನೇ ತರಗತಿ ಓದಿದ ಹುಡುಗ ಒಂದು ವಿಶ್ವವಿದ್ಯಾಲಯದ ಡಾಕ್ಟರೇಟ್ ಗೌರವ ಗಳಿಸಿದ ಉದಾಹರಣೆಗಳಲ್ಲಿ ನನಗೆ ಕಂಡಂತೆ ಮೊದಲಿನವರು ಕರ್ನಾಟಕದ ಮೆಚ್ಚಿನ ಮೇರುನಟ ಶ್ರೀ ರಾಜಕುಮಾರ್‌ರವರು, ಎರಡನೆಯವರು ಪಂಡಿತ್ ನರಸಿಂಹಲು ವಡವಾಟಿಯವರು. 2007ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ್‌ಗಾಗಿ ಆರಿಸಿದ್ದು ಹೆಸರಾಂತ ಸಾಹಿತಿ ಶ್ರೀ ಎಸ್. ಎಲ್. ಭೈರಪ್ಪ ಹಾಗೂ ಪಂಡಿತ್ ನರಸಿಂಹಲು ವಡವಾಟಿಯವರನ್ನು.



**ಗುಲ್ಬರ್ಗಾ ವಿಶ್ವವಿದ್ಯಾಲಯ 2007ರ ಜನವರಿ 18 ರಂದು ಗೌರವ ಡಾಕ್ಟರೇಟ್ ನೀಡುತ್ತಿರುವ ರಾಜ್ಯಪಾಲರಾದ ಟಿ.ಎನ್. ಚತುರ್ವೇದಿಯವರೊಂದಿಗೆ**

ಈ ಪದವಿಯನ್ನು ಸ್ವೀಕರಿಸಲು ನರಸಿಂಹಲುರವರು ಗುಲಬರ್ಗಾಕ್ಕೆ ಹೋಗುವ ರೈಲು ಹತ್ತಿದರು ––– ಎಂದಿನಂತೆ ಎರಡನೇ ದರ್ಜೆಯ ಪ್ರಯಾಣ.

ಬಹಳಷ್ಟು ಜನರು ಈ ಘಟಿಕೋತ್ಸವಕ್ಕಾಗಿ ಆ ರೈಲಿನಲ್ಲಿ ಹೊರಟ್ಟಿದ್ದರು ಅವರಿಗೆ ನರಸಿಂಹಲುರವರನ್ನು ಅಲ್ಲಿ ನೋಡಿದ್ದು ಒಂದು ಅಚ್ಚರಿ. ಅರೆ! ಎ.ಸಿ. ದರ್ಜೆಯಲ್ಲಿ ಪ್ರಯಾಣಿಸಬೇಕಾದ ಇವರು ಇಲ್ಲಿ! ತಡೆಯಲಾರದೆ ಅವರು ನರಸಿಂಹಲುರವರನ್ನು ಕೇಳಿಯೇಬಿಟ್ಟರು. ನರಸಿಂಹಲುರವರು ನಕ್ಕುಬಿಟ್ಟರು.

ಗುಲಬರ್ಗಾದಲ್ಲೂ ಅಷ್ಟೇ ! ದೊಡ್ಡ ಹೋಟಿಲ್‌ನಲ್ಲೇನೂ ಇಳಿದು ಕೊಳ್ಳದೆ ತಮ್ಮ ಗೆಳೆಯರೊಂದಿಗೆ ಒಂದು ಸಾಧಾರಣ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದರು.

ಘಟಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಿದಾಗ ಅದನ್ನು ಸ್ವೀಕರಿಸಿದ ನರಸಿಂಹಲುರವರು ಪ್ರೇಕ್ಷಕರ ಮುಂದೆ ನಿಂತು ಅವರಿಗೆ ಕೈಯತ್ತಿ ನಮಸ್ಕಾರ ಮಾಡಿದಾಗ ಪ್ರೇಕ್ಷರಿಗೆ ಅದೊಂದು ಅನಿರೀಕ್ಷಿತ ರೋಮಾಂಚಕರ ಅನುಭವ. ಅದನ್ನು ಅವರು ಪ್ರಚಂಡ ಕರತಾಡನದ ಮೂಲಕ ಸ್ವಾಗತಿಸಿದರು.

ಈ ಡಾಕ್ಟು ತಮ್ಮ ಮಕ್ಕಳಿಗಾಗಿ ಏನು ಆಸ್ತಿ ಮಾಡಿದರು? ಸಾಕಷ್ಟು ಸಂಗೀತಗಾರರು ಬುದ್ಧಿವಂತಿಕೆಯಿಂದ ಹಣ ಕೂಡಿಟ್ಟು ಕೈಯ ಹತ್ತು ಬೆರಳುಗಳಿಗೆ ಚಿನ್ನದುಂಗುರ, ಕೂತು ಉಣ್ಣವಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಹಾಗೇ ಏನೇನೂ ಇಲ್ಲದೆ ದಟ್ಟದರಿದ್ರರಾಗಿ ದಿನಕಳೆದವರೂ ಇದ್ದಾರೆ. ಆದರೆ ನರಸಿಂಹಲು ರವರು ಈ ಎರಡೂ ಪಂಗಡಗಳಿಗೆ ಸೇರಲಿಲ್ಲ,

ಶ್ರೀಮಂತಿಕೆಯ ಅಸಹ್ಯಕರ ಪ್ರದರ್ಶನ ಮಾಡುವಷ್ಟು ಶ್ರೀಮಂತರೂ ಆಗಲಿಲ್ಲ, ಕಂಡವರ ಮುಂದೆ ಕೈಚಾಚುವಷ್ಟು ದರಿದ್ರರೂ ಆಗಲಿಲ್ಲ.

*ಯೋಲ್ಕೊಳ್ಯಾಕ್ ಒಂದೂರು,*
*ತಲೀಮ್ಯಾಗ್ ಒಂದ್ಸೂರು,*
*ಮಲಗಾಕೆ ಬೂಮ್ತಾಯಿ ಮಂಚ–*
*ಕೈಯಿಡದೋಳ್ ಪುಟ್ನಂಜಿ,*
*ನೆಗ್ ನೆಗ್ತಾ ಉಪ್ಗಂಜಿ*
*ಕೊಟ್ರಾಯ್ತು ರತ್ನನ್ ಪರ್ಪಂಚ!* *(ದಿ|| ಶ್ರೀ ಜಿ.ಪಿ. ರಾಜರತ್ನಂ)*

ಸ್ವಂತ ಮನೆ ಮಾಡಿದರು, ಮಕ್ಕಳನ್ನು ಓದಿಸಿದರು, ಎಲ್ಲರಿಗೂ ಮದುವೆ ಮಾಡಿ ತಂದೆಯ ಕರ್ತವ್ಯ ನಿಭಾಯಿಸಿದರು. ಮೊದಲನೆಯ ಮಗಳು

ಹೀರಾಬಾಯಿ, ಎರಡನೆಯ ಮಗಳು ವಿಜಯಲಕ್ಷ್ಮಿ ತಂತಮ್ಮ ಗಂಡ – ಮಕ್ಕಳೊಂದಿಗೆ ಹಾಯಾಗಿದ್ದಾರೆ.

ಶಾರದೆ ಮೂರನೆಯ ಮಗಳು. ತಂದೆಯ ಹೆಸರನ್ನು ಬೆಳಗ ಬಲ್ಲ ಪ್ರತಿಭೆ. ಕಿನ್ನರ ಕಂಠದ ಹಿಂದುಸ್ತಾನಿ ಗಾಯಕಿ. ಪುಣೆಯ ಪಂ|| ಭಾರತೀ ವೈಶಂಪಾಯನ ರಲ್ಲಿ ಗುರು ಶಿಷ್ಯಪರಂಪರೆಯಲ್ಲಿ ಸಂಗೀತ ಕಲಿತಾಕೆ. ಜೊತೆಗೆ ಸಂಗೀತದಲ್ಲಿ ಎಂ.ಎ. ಸಹ ಮಾಡಿದ್ದಾಳೆ.

ಇನ್ನೊಬ್ಬ ಮಗಳು ಭಾರತಿ ಸಹ ಪದವೀಧರೆ ಹಾಗೂ ಗಾಯಕಿ. ಮಗ ವೆಂಕಟೇಶರಾಯ ತಬಲಾ ವಾದನದಲ್ಲಿ ಎಂ.ಎ ಮಾಡಿದ್ದಾನೆ. ಜೊತೆಗೆ ತಂದೆಯಿಂದ ಕ್ಲಾರಿಯೋನೆಟ್ ವಾದನವನ್ನೂ ಕಲಿಯುತ್ತಿದ್ದಾನೆ.

ಇದಕ್ಕಿಂತ ದೊಡ್ಡ ಆಸ್ತಿ ಎಂದರೆ ಗುರುವಿನ ಹೆಸರಿನಲ್ಲಿ ಶಿಷ್ಯ ಕಟ್ಟಿಸಿದ ಸ್ವರಸಂಗಮ ಸಂಗೀತವಿದ್ಯಾಲಯ. ಇದರಲ್ಲಿ ಮಕ್ಕಳು ದುಡಿಯಬೇಕು, ಬದುಕಬೇಕು, ತಿನ್ನಬೇಕು, ಉಡಬೇಕು.

ಇನ್ನೆಂತಹ ಆಸ್ತಿ ಬೇಕು !—— ಜ್ಞಾನ ಸಂಜೀವನಿಯನ್ನು ಬೇಡಿ ಬಂದವರಿಗೆ ನೀಡುವ ಈ ಡಾಕ್ಟರರಿಗೆ!

❑

ಚರಣ 21

# ಆಪ್ತರು, ಗೆಳೆಯರು

## – ಶ್ರೀ ಡಿ. ಸಿದ್ದಪ್ಪ –

ವಿದ್ಯೆ ಕಲಿಯಬೇಕೆಂಬ ತಹತಹ ಇರುವ ವಿದ್ಯಾರ್ಥಿಗಳಿಗೆ ಸಾಕಷ್ಟು ವಿದ್ಯಾರ್ಥಿನಿಲಯಗಳು – ಕೆಲವು ಉಚಿತ ಹಾಗೂ ಕೆಲವು ಕೈಗೆಟುಕುವ ದರದಲ್ಲಿ – ಇವೆ. ಇಂತಹ ವಿದ್ಯಾರ್ಥಿನಿಲಯಗಳಲ್ಲಿದ್ದು ಓದಿ ವಿದ್ಯಾವಂತರಾಗಿ ಮುಂದೆ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದವರು ಸಾಕಷ್ಟು ಪ್ರತಿಭಾವಂತರಿದ್ದಾರೆ. ಆದರೆ ಅಂತಹ ಒಬ್ಬ ವಿದ್ಯಾರ್ಥಿಗೆ ಒಂದು ಮನೆಯನ್ನೇ ವಾಸಕ್ಕಾಗಿ, ಉಚಿತವಾಗಿ ಎರಡು ವರ್ಷಗಳ ಕಾಲ ಬಿಟ್ಟುಕೊಟ್ಟ ವ್ಯಕ್ತಿ ಇದ್ದರೆಂದರೆ ಅದೊಂದು ವಿಶೇಷ ಸಂಗತಿ.

ನರಸಿಂಹಲುರವರು ಸಂಗೀತ ಕಲಿಯುವ ಹೊತ್ತಿಗೆ ವಿವಾಹಿತರಾಗಿದ್ದರೆಂದು ಈಗಾಗಲೇ ಹೇಳಿರುವೆ. ರಾಯಚೂರಿನ ಮಡ್ಡಿಪೇಟೆ ಎಂಬಲ್ಲಿ ಒಂದು ಸಣ್ಣ ಮನೆಯಲ್ಲಿ ಸಂಸಾರ ನೆಲೆಸಿತ್ತು. ಕೆಲವು ಕಾಲದ ನಂತರ ಅಲ್ಲಿಯ ಪರಿಸರದಲ್ಲಿ ವಾಸ ಮುಂದುವರಿಸುವುದು ನರಸಿಂಹಲುರವರಿಗೆ ಅಸಹನೀಯವೆನ್ನಿಸಿತು. ತನ್ನಿಂದ ಬೇರೆಯೇ ಆದ ಮಟ್ಟದ ಸಂಸ್ಕೃತಿಯ ನೆರೆಹೊರೆ ಅದು. ಆದರೆ ಮನೆ ಬಿಡಬೇಕೆಂದರೆ ಬೇರೆ ಮನೆಗೆ ಬಾಡಿಗೆ ತೆರಲು ಬೇಕಾದಷ್ಟು ಹಣ ಇವರಲ್ಲಿರಬೇಕಲ್ಲವೆ ! ಏನು ಮಾಡುವುದು ?

ಆಗ ಇವರಿಗೆ ನೆನಪಾದ ವ್ಯಕ್ತಿ ಸಿದ್ದಪ್ಪನವರು.

ಡಿ. ಸಿದ್ದಪ್ಪನವರು ನರಸಿಂಹಲುರವರ ಸಮವಯಸ್ಕರು. ಬೆಂಗಳೂರಿನ ಐ.ಟಿ.ಐ.ನಲ್ಲಿ ತರಬೇತುದಾರರಾಗಿದ್ದು ನಿವೃತ್ತರಾಗಿದ್ದಾರೆ. ಅಧ್ಯಾತ್ಮ ಪ್ರವೃತ್ತಿಯ ವ್ಯಕ್ತಿ, ಯೋಗಾಸನ ಶಿಕ್ಷಕರು – ಇನ್ನೂ ಏನೇನೋ ಆಗಿದ್ದಾರೆ ಇವರು. ನರಸಿಂಹಲುರವರಿಗೆ ಇವರು ಅತಿ ಆಪ್ತರು.

ನರಸಿಂಹಲುರವರ ಕಷ್ಟವನ್ನು ಕೇಳಿ ತಿಳಿದ ಸಿದ್ದಪ್ಪನವರು ಅವರ ಅಗತ್ಯವನ್ನು ಮನದ ಮೂಲೆಯಲ್ಲಿ ನೆನಪಿಟ್ಟುಕೊಂಡಿದ್ದರು.

ಸಿದ್ದಪ್ಪನವರದು ರಾಯಚೂರಿನ ಕೋಟೆ ಪ್ರದೇಶದಲ್ಲಿ ಎರಡು ಮೂರು ಬಾಡಿಗೆಗೆ ನೀಡಿದ ಮನೆಗಳಿದ್ದವು. ಕೆಲವು ದಿನಗಳಲ್ಲೇ ಅವುಗಳಲ್ಲೊಂದು ಖಾಲಿಯಾಯಿತು. ಕೂಡಲೆ ಆ ಮನೆಯನ್ನು ನರಸಿಂಹಲುರವರಿಗೆ ವಾಸ್ತವ್ಯಕ್ಕಾಗಿ ನೀಡಿದರು. ದೊಡ್ಡದಾಗಿತ್ತು ಮನೆ. ಅಷ್ಟು ದೊಡ್ಡ ಮನೆಗೆ ಬಾಡಿಗೆ !

"ಸ್ವಾಮಿ, ಸಿದ್ದಪ್ಪನವರೆ, ಈ ಮನೆಗೆ ತುಂಬಾ ಬಾಡಿಗೆ ಬರುತ್ತೆ. ಅಷ್ಟು ಕೊಡುವ ತಾಕತ್ತು ನನ್ನಲ್ಲಿಲ್ಲವಲ್ಲ" – ನರಸಿಂಹಲು ಹೇಳಿದರು.

"ಬೇಡ, ಬಾಡಿಗೆ ಕೊಡುವುದು ಬೇಡ. ಇರಿ ಈ ಮನೆಯಲ್ಲಿ". – ಸಿದ್ದಪ್ಪನವರು ಮಾರುತ್ತರ ನೀಡಿದರು.

ನರಸಿಂಹಲುರವರು ವಿಸ್ಮಯಮೂಕರಾದರು. ಇದು ವಾಸ್ತವವೆ !

ಆದರೆ ಸಿದ್ದಪ್ಪನವರಿಗೆ ನರಸಿಂಹಲುರವರ ಸಂಗೀತದಾಹದ ಪರಿಚಯವಿತ್ತು. ಅವರ ತಾಪತ್ರಯಗಳ ಅರಿವೂ ಇತ್ತು. ತಾನೋ ಬ್ರಹ್ಮಚಾರಿ, ಈ ಎಲ್ಲ ಸಂಪತ್ತು ಕಟ್ಟಿಕೊಂಡು ಎಲ್ಲಿಗೆ ಹೋಗಬೇಕು ! ನರಸಿಂಹಲುರವರಂತಹ ವ್ಯಕ್ತಿಗೆ ತನ್ನಿಂದ ಸಹಾಯವಾದರೆ ಅದೊಂದು ಸತ್ಕಾರ್ಯವಲ್ಲವೆ !

ಆ ಮನೆಯಲ್ಲಿ ಎರಡು ವರ್ಷಕಾಲ ವಾಸ ಮಾಡಿದರು ನರಸಿಂಹಲು ತನ್ನ ಹೆಂಡತಿ-ಮಕ್ಕಳೊಂದಿಗೆ. ಆಮೇಲೆ ಹತ್ತಿರದಲ್ಲೇ ಒಂದು ಸಣ್ಣ ಮನೆ ಖರೀದಿಸಿ ಆ ಸ್ವಂತ ಮನೆಗೆ ವಾಸ್ತವ್ಯ ಬದಲಾಯಿಸಿದರು.

ಸ್ವಾರ್ಥರಹಿತವಾಗಿ ಆಸರೆ ನೀಡಿದ ಆ ಕರುಣಾಳುವನ್ನು ಈ ಕಲಾವಿದ ಈಗಲೂ ನೆನೆಯುತ್ತಾರೆ.

## – ಶ್ರೀ ಅಯ್ಯಪ್ಪ ತುಕಾಯಿ –

ನರಸಿಂಹಲುರವರ ಇನ್ನೊಬ್ಬ ಗೆಳೆಯ ಶ್ರೀ ಅಯ್ಯಪ್ಪ ತುಕಾಯಿ. ಇವರು ರಾಯಚೂರಿನ ಟ್ಯಾಗೋರ್ ಕಾಲೇಜ್ ಆಫ್ ಜರ್ನಲಿಸಂನಲ್ಲಿ ಉಪನ್ಯಾಸಕ ರಾಗಿದ್ದು ಈಗ ನಿವೃತ್ತರಾಗಿದ್ದಾರೆ. ರಾಯಚೂರಿನ ವರ್ತಮಾನ ಪತ್ರಿಕೆಗಳಿಗೆ ಅಂಕಣಕಾರರಾಗಿದ್ದಾರೆ.

ಸಿದ್ದಪ್ಪನವರು ಹಾಗೂ ತುಕಾಯಿಯವರೊಂದಿಗೆ ನರಸಿಂಹಲುರವರ ಗೆಳೆತನ ಗಾಢವಾದದ್ದು. ಅವಕಾಶ ಸಿಕ್ಕಿದಾಗಲೆಲ್ಲ ಈ ಗೆಳೆಯುರು ಒಂದು ಕಡೆ ಸೇರಿ ವಿಚಾರವಿನಿಮಯ ಮಾಡಿಕೊಳ್ಳುತ್ತಾರೆ. ಇಂತಹ ಕೆಲವು ಪ್ರಸಂಗಗಳಲ್ಲಿ ನರಸಿಂಹಲುರವರಿಂದ ಅವರ ಬದುಕಿನ ಬಗ್ಗೆ ವಿಷಯ ಸಂಗ್ರಹಣೆ ಮಾಡಿದ ಅಯ್ಯಪ್ಪ ತುಕಾಯಿಯವರು "ರಾಯಚೂರು ವಾಣಿ" ದಿನ ಪತ್ರಿಕೆಯಲ್ಲಿ ಮೊಟ್ಟಮೊದಲು ಈ ಕಲಾವಿದನ ಬಗ್ಗೆ ಒಂದು ಲೇಖನ ಬರೆದರು. ಆಗಲೇ ಇಡೀ ರಾಯಚೂರಿಗೆ ಅರಿವಾದದ್ದು ತಮ್ಮ ನಡುವೆ ಒಬ್ಬ ಅಂತರ್ರಾಷ್ಟ್ರೀಯ ಮಟ್ಟದ ಕಲಾವಿದನಿದ್ದಾನೆಂಬುದು.

ಅಲ್ಲಿಂದ ಮುಂದೆ ತುಕ್ಕಾಯಿಯವರು ಅವಕಾಶ ಸಿಕ್ಕಾಗಲೆಲ್ಲ ಈ ಕಲಾವಿದನಿಗೆ ರಾಯಚೂರು ಮತ್ತು ಸುತ್ತಮುತ್ತ ಸೂಕ್ತ ಪ್ರಚಾರ ಸಿಗುವಂತೆ ನೋಡಿಕೊಳ್ಳುತ್ತಿರುತ್ತಾರೆ.

❑

ಚ
ರ
ಣ
22

# ಉಪಸಂಹಾರ

ನಾನು ಹುಟ್ಟಿ ಬೆಳೆದದ್ದು ಶಿವಮೊಗ್ಗ-ತೀರ್ಥಹಳ್ಳಿಯಲ್ಲಿ. ವಿದ್ಯಾರ್ಥಿ ದೆಸೆಯಲ್ಲಿ ನನ್ನನ್ನು ಆಕರ್ಷಿಸಿದ್ದು ನನ್ನೂರಿನ ರಸಋಷಿಯ "ಬೊಮ್ಮನ ಹಳ್ಳಿಯ ಕಿಂದರಿ ಜೋಗಿ" ನೀಳ್ಗವನ. ಜೋಗಿಯ ಕಿಂದರಿ ಊರಿನ ಇಲಿಗಳನ್ನು ಸೆಳೆಯಿತು, ಊರಿನ ಮುಗ್ಧ ಮಕ್ಕಳನ್ನೂ ಸೆಳೆದೊಯ್ಯಿತು. ಓದಿದ ನನ್ನನ್ನು ಅದು ಸ್ವಪ್ನಲೋಕಕ್ಕೆ ಒಯ್ದಿತ್ತು.

ಕವಿತೆಗಳಲ್ಲಿ ಮಾತ್ರ ಕಾಣಬಲ್ಲ ಕಿಂದರಿಜೋಗಿ ನನ್ನೆದುರೇ ಬಂದು ನಿಂತರೆ, ಮಾತನಾಡಿಸಿದರೆ, ಒಡನಾಡಿದರೆ ! .....

2002 ರಲ್ಲಿ ನಾನು ನಾಟಕ ಅಕಾಡೆಮಿ ಕಛೇರಿಯಲ್ಲಿ ಆಗಿನ ಅಧ್ಯಕ್ಷ ಶ್ರೀ ಆರ್ ನಾಗೇಶ್‌ರವರೊಂದಿಗೆ ಮಾತನಾಡುತ್ತಿದ್ದಾಗ ನರಸಿಂಹಲು ವಡವಾಟಿ ಯವರು ಅವರನ್ನು ಭೆಟ್ಟಿ ಮಾಡಿದರು. ಅವರ ಬಯೋಡೇಟಾವನ್ನು ಕನ್ನಡದಿಂದ ಇಂಗ್ಲಿಷಿಗೆ ಅನುವಾದ ಮಾಡಬಲ್ಲ ವ್ಯಕ್ತಿಗಾಗಿ ನಾಗೇಶರ ಸಹಾಯವನ್ನವರು ಕೇಳಿದರು. _ ಈ ನಾಗೇಶ್ ಒಬ್ಬ ಕಿಡಿಗೇಡಿ.

"ಯಾರ್‍ಯಾರನ್ನೋ ಯಾಕೆ ತೋರಿಸಲಿ ವಡವಾಟಿಯವರೆ, ಇಲ್ಲೇ, ಇದ್ದಾರಲ್ಲ ಇಂಗ್ಲಿಷ್ ಪ್ರೊಫೆಸರ್ರು, ಇವರು ಹರಿಕೃಷ್ಣ ಅಂತ, ನನ್ನ ಗೆಳೆಯರು."... ಒಂದು ಸುಳ್ಳನ್ನವರು ಪ್ರಾಮಾಣಿಕರಂತೆ ಹೇಳಿದರು.

ವಡವಾಟಿಯವರು ಅದನ್ನು ನಂಬಿದರು...... ಇದು ನನಗೆ ನಂತರ ಅರಿವಾದದ್ದು. ಸರಳ, ಮುಗ್ಧ ಮನುಷ್ಯ ಈ ಸಾಧಕ.

ವಡವಾಟಿಯವರ ಹೆಸರನ್ನು ನಾನು ಕೇಳಿದ್ದೆ, ನೋಡಿಯೂ ಇದ್ದೆ ಅವರನ್ನು, ಆದರೆ ಸಾಮೀಪ್ಯದ ಅವಕಾಶ ಇನ್ನೂ ಬಂದಿರಲಿಲ್ಲ. ನನ್ನದು ನಾಟಕರಂಗ, ಅವರದು ಸಂಗೀತಲೋಕ.

ಅವರಿಂದ ಕನ್ನಡದ ಬ್ರೋಷರ್ ತೆಗೆದುಕೊಂಡು ಇಂಗ್ಲೀಷಿಗೆ ಅನುವಾದ ಮಾಡಿಕೊಟ್ಟೂ ಆಯಿತು. ಅದು ಗೌಣ. ಆದರೆ ಮುಂದೆ ನಡೆದದ್ದು!

ನರಸಿಂಹಲುವರು ತಮ್ಮ ಗುರು ಜಂಬಲ ದಿನ್ನೆಯವರ ನೆನಪಿಗೆ ಪ್ರತಿ ವರ್ಷ ಡಿಸೆಂಬರ್ 31 ರಂದು ನಡೆಸುವ ಸಂಗೀತ ಕಾರ್ಯಕ್ರಮಕ್ಕೆ 2002 ರಲ್ಲಿ ನನ್ನನ್ನು ಕರೆದರು. ನಾನು ಹೋದೆ, ರಸಾನುಭವ ಪಡೆದೆ. ಅಲ್ಲಿ ಬಂದಿದ್ದ ಸಂಗೀತಗಾರನಿಗೆ ನನ್ನನ್ನು ಪರಿಚಯ ಮಾಡುವಾಗ "ಇಂಗ್ಲಿಷ್ ಪ್ರೊಫೆಸರ್" ಎಂದೇ ಪರಿಚಯಿಸಿದಾಗ ನನಗೆ ಮುಜುಗರ. ಅಲ್ಲಿಯೇ ನಾನು ಅದನ್ನು ಅಲ್ಲಗಳೆದೆ. ಬ್ಯಾಂಕ್ ಮ್ಯಾನೇಜರನಾದ ನಾನು ಇಂಗ್ಲಿಷ್ ಪ್ರೊಫೆಸರ್ ಹೇಗಾದೇನು ! .... ವಿಷಯ ಅದಲ್ಲ.

ನನಗೆ ಮುಂಚೆನಿಂದಲೂ ಸಂಗೀತ ಕಲಿಯುವ ಹುಚ್ಚಿತ್ತು, ಆದರೆ ಆಗಲಿಲ್ಲ. ಈ ಕೊರಗು ನನ್ನಲ್ಲಿ ಉಳಿದಿತ್ತು.

ಅಂದು ಆ ಉತ್ಸವದಲ್ಲಿ ಭಾಗವಹಿಸಿದವನಿಗೆ ಮತ್ತೆ ಅನ್ನಿಸಿತು – "ಈ ವಯಸ್ಸಿನಲ್ಲಿ ಸಂಗೀತ ನಾನು ಕಲಿಯಬಹುದೆ !"

ವಡವಾಟಿಯವರಲ್ಲಿ ನನ್ನ ಆಸೆ ತೋಡಕೊಂಡೆ.

"ಯಾಕಿಲ್ಲ ಹರಿಕೃಷ್ಣ ಅವರೆ, ಬನ್ನಿ, ನಾನು ಹೇಳಿಕೊಡುತ್ತೇನೆ. ಕಲಿಯಲಿಕ್ಕೆ ವಯಸ್ಸು ಅಡ್ಡ ಬರೋದಿಲ್ಲ."

"ಫೀಸು!?"

"ಫೀಸು ನೀವು ಏನೂ ಕೊಡಬೇಡಿ, ಬನ್ನಿ, ಕಲೀರಿ. ನಾನು ಕೊಡ್ತಾ ಹೋಗ್ತೀನಿ. ನೀವು ತಗೋತಾ ಹೋಗಿ".

ಅವರು ನೀಡುತ್ತಿದ್ದಾರೆ. ನಾನು ಕೈಚಾಚುತ್ತಿದ್ದೇನೆ, ಸಿಕ್ಕಿದಷ್ಟು ಬಾಚುತ್ತಿದ್ದೇನೆ, ಬೇರೆಯವರಿಗೆ ಹೇಳಿಕೊಡುವಾಗ ಕೇಳಿಸಿಕೊಂಡು ದೋಚುತ್ತಿದ್ದೇನೆ, ಸಿರಿವಂತ ನಾಗುತ್ತಿದ್ದೇನೆ.

ಗುರೂಜಿ, ನೀವು ನನ್ನಿಂದ ಗುರುದಕ್ಷಿಣೆ ಎಂದು ಏನೂ ಕೇಳಲಿಲ್ಲ ಆದರೆ ನಾನು ಕೊಡಬೇಕೆಂದಿದ್ದೆ.

*"ಉಳ್ಳವರು ಶಿವಾಲಯ ಮಾಡುವರು*
*ನಾನೇನ ಕಟ್ಟಿಸಲಿ ಬಡವನಯ್ಯಾ"*

ಹಾಗೆಂದುಕೊಂಡಿದ್ದೆ ನಾನು. ಆದರೆ ಅವಕಾಶ ಒದಗಿಬಂತು. ಗುರೂಜಿ, ಇದೋ ನಿಮ್ಮ ಮುಂದೆ ಇಟ್ಟಿರುವೆ ನಾನು ನಿಮ್ಮ ಬದುಕಿನ, ನಿಮ್ಮ ತಪಸ್ಸಿನ, ನಿಮ್ಮ ಸಾಧನೆಯ ಕತೆಯನ್ನು. ನೀವು ಒರೆದದ್ದು, ನಾನು ಬರೆದದ್ದು.

❑

# ಪ್ರಶಸ್ತಿಗಳ ಪಟ್ಟಿ

## ಜುಗಲಬಂದಿ ಕಛೇರಿಗಳು

1. ಪಂಡಿತ್ ರೋನೋ ಮಜುಂದಾರ್ ಮುಂಬೈ, ಇವರ ಬಾನ್ಸುರಿಯೊಂದಿಗೆ,
2. ವಿದ್ವಾನ್ ಎ.ಕೆ.ಸಿ ನಟರಾಜನ್, ಚನ್ನೈ ಇವರ ಕರ್ನಾಟಕ ಸಂಗೀತ ಹಾಗೂ ವಿಲಿಯಂ ಪೋವೆಲ್, ಅಮೆರಿಕಾ (ಪಾಶ್ಚಿಮಾತ್ಯ ಸಂಗೀತ) ಇವರ ಕ್ಲಾರಿಯೋನೆಟ್ ವಾದನದೊಂದಿಗೆ,
3. ವಿದ್ವಾನ್ ಕಾರೈಕುಡಿ ಸುಬ್ರಹ್ಮಣ್ಯಂ ರವರ ವಯೋಲಿನ್ ಕರ್ನಾಟಕ ಸಂಗೀತದೊಂದಿಗೆ,
4. ವಿದ್ವಾನ್ ಕದ್ರಿ ಗೋಪಾಲನಾಥ್ ರವರ ಸ್ಯಾಕ್ಸೋಫೋನ್ (ಕರ್ನಾಟಕ ಸಂಗೀತ)ಒಂದಿಗೆ,
5. ವಿದ್ವಾನ್ ಮಂಜುನಾಥ್ ಹಾಗೂ ವಿದ್ವಾನ್ ನಾಗರಾಜ್ ರವರ ವಯೋಲಿನ್ ವಾದನ ( ಕರ್ನಾಟಕ ಸಂಗೀತ) ದೊಂದಿಗೆ.

## ಸಂದ ಗೌರವ, ಸನ್ಮಾನ, ಪ್ರಶಸ್ತಿಗಳು

1) ಸುರಸಿಂಗಾರ್ ಸಂಸದ್, ಮುಂಬೈ ಇವರಿಂದ **ಸುರಮಣಿ** ಬಿರುದು.
2) ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯಿಂದ **ಕರ್ನಾಟಕ ಕಲಾ ತಿಲಕ** ಬಿರುದು.
3) ಶೃಂಗೇರಿ ಮಠದ ಶ್ರೀ ಶಾರದಾಪೀಠದ ಜಗದ್ಗುರುಗಳಾದ ಶ್ರೀ ಮದ್ ಭಾರತೀ ತೀರ್ಥ ಸ್ವಾಮೀಜಿಯವರಿಂದ **ಸ್ವರ್ಣಪದಕ** ಮತ್ತು **ಆಸ್ಥಾನ ವಿದ್ವಾನ್** ಬಿರುದು.
4) 1996–97 ರಲ್ಲಿ ಇಂಜಿನಿಯರಿಂಗ್ ಪ್ರತಿಷ್ಠಾನ, ಬೆಂಗಳೂರು ಇವರಿಂದ ಭಾರತ ರತ್ನ ವಿಶ್ವೇಶ್ವರಯ್ಯ ಪ್ರಶಸ್ತಿ.

5) 1997–98 ರಲ್ಲಿ **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.**

6) ಇಂಟರ್‌ನ್ಯಾಷನಲ್ ಬಯೋಗ್ರಾಫಿಕಲ್ ಸೆಂಟರ್, ಕೇಂಬ್ರಿಜ್ – ಇವರಿಂದ **20ನೇ ಶತಮಾನ ವಿಶಿಷ್ಟ ಕಲಾವಿದ** ಎಂಬ ಗೌರವ.


7) ಬಾಗಲಕೋಟೆಯಲ್ಲಿ ನಡೆದ 68ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

8) ಸರ್ಕಾರಿ ಸಂಗೀತ ಮಹಾವಿದ್ಯಾಲಯ, ಕೊಯಂಬತ್ತೂರು, (ತಮಿಳುನಾಡು ಸರ್ಕಾರ) ಇವರಿಂದ **ಹಿಂದುಸ್ತಾನಿ ಕ್ಲಾರಿಯೋನೆಟ್ ಸಂಗೀತ ರತ್ನ** ಬಿರುದು ಮತ್ತು ಸನ್ಮಾನ.


9) 2007 ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ **ಗೌರವ ಡಾಕ್ಟರೇಟ್** ಪದವಿ.

10) 1998 ರಲ್ಲಿ **"ಹಾಥಿ"** ಫ್ರೆಂಚ್ ಚಲನಚಿತ್ರಕ್ಕಾಗಿ ಸಂಗೀತ ನಿರ್ದೇಶನ.

11) ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಚಾರ್ಯ (Visiting Professor) ರಾಗಿ ನೇಮಕ.



**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು "ಕರ್ನಾಟಕ ಕಲಾತಿಲಕ" ಪ್ರಶಸ್ತಿಯನ್ನು ಖ್ಯಾತ ನೃತ್ಯಗಾರ್ತಿ ಮಾಯಾರಾವ್ ನೀಡಿ ಗೌರವಿಸುತ್ತಿರುವುದು.**




ಮದ್ರಾಸಿನಲ್ಲಿ 'ಕ್ಲಾರಿಯೋನೆಟ್ ರತ್ನ' ಬಿರಿದು ನೀಡಿ ಗೌರವಿಸಿದ ಸಂದರ್ಭದಲ್ಲಿ

12) 1998ರಲ್ಲಿ ಕ್ಯಾಲ್‌ಆರ್ಟ್ಸ್ ಯು.ಎಸ್.ಎ.ನಲ್ಲಿ ಕ್ಲಾರಿಯೋನೆಟ್ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದು.
13) 1997 ರಲ್ಲಿ ಯು.ಎಸ್.ಎ. ನಲ್ಲಿ ಕನ್ನಡ ಕೂಟ ಸಮ್ಮೇಳನದಲ್ಲಿ ಭಾಗವಹಿಸಿದ್ದು.
14) ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ತಜ್ಞರ ಸಮಿತಿಯ ಮಾಜಿ ಸದಸ್ಯರು.
15) ಕರ್ನಾಟಕ ಸರ್ಕಾರದ ಸಂಗೀತ – ನೃತ್ಯ ಅಕಾಡೆಮಿಯ ಮಾಜಿ ಸದಸ್ಯರು.

## ಹೊರತಂದ ಧ್ವನಿಸುರುಳಿಗಳು

1) ಪ್ರಭಾತರಾಗಗಳು ( ಸಂಸ್ಥೆ – ಸಂಗೀತಾ)
2) ಕ್ಲಾರಿಯೋನೆಟ್ ( ಸಂಸ್ಥೆ – ಸಂಗೀತಾ)
3) ಕಲ್ಯಾಣ ಮಂಗಲನಾದ ( ಸಂಸ್ಥೆ – ಸಂಗೀತಾ)
4) ಕ್ಲಾರಿಯೋನೆಟ್ ಮತ್ತು ಸ್ಯಾಕ್ಸೊಫೋನ್ (ಸಂಸ್ಥೆ – ಸಂಗೀತಾ)
5) ಬ್ರೀಜ಼್ ವಿಥ್ ವಿದ್ವಾನ್ ಕದ್ರಿ ಗೋಪಾಲನಾಥ್ (ಸಂಸ್ಥೆ–ಡ್ರೀಂಸ್ ಆಡಿಯೋ)
6) ರಾಗ ಡಿಲೈಟ್ (ಸಂಸ್ಥೆ–ಸಾಗರ್)

### ಸಿ.ಡಿ. ಗಳು

1) ಮಂಗಲಧ್ವನಿ (ಸಂಸ್ಥೆ–ಲಹರಿ)
2) ಜುಗಲಬಂದಿ ವಿಥ್ ಕದ್ರಿ ಗೋಪಾಲನಾಥ್ (ಸಂಸ್ಥೆ–ಮ್ಯಾಗ್ನ ಸೌಂಡ್)
3) ಜುಗಲಬಂದಿ ವಿಥ್ ಪಂಡಿತ್ ಉತ್ಪಲ್ ಚಕ್ರವರ್ತಿ ವಯೋಲಿನ್ (ಸಂಸ್ಥೆ–ಲಹರಿ)

## ದೊಡ್ಡವರು ಹೇಳಿದ್ದು

His tune fullness and performance on this difficult instrument touched me immensely. He proves his excellence of Raga and Tala in all aspects.

**-A.K.C. Natarajan**
*Clarionet Player - Carnatic Classical.*

I was first struck with the beauty of your Clarionet sound, such a wonderful fullness, yet mellow and flexible. Your control of the dynamics was formidable and your display a marvelous sensitivity and most artistic.

**-William Powel,** *California, USA, 24-Dec-1994.*

I was personally moved by his mellifluous music. The means are not easy to manipulate on this keyed instrument.

**-Dr. Karaikudi Subramanian,** *Madras. 24-Dec-1994.*

His instrumental tune is smooth and wholesome and the performance often reminded a Shehanai at play.

**-Deccan Herald,** *04-Mar-1980.*

Wadavati's style of playing reminds one of the Tanbaazi of Bismilla Khan's Shehanai and alaps of Pannalal Ghosh's Bansuri.

**-Indian Express,** *15-Nov-1995.*

Vidwan Narasimhalu Wadavati's enjoyable Clarionet rendering of Raga MaruBihag based on Gayaki style was superb of its own kind.

*-**The Hindu,** Bangalore, 08-Jan-1988.*

ಸುರೀಲಿ ಬಾರಿಸ್ತಾನ


-ಡಾ ॥ ಮಲ್ಲಿಕಾರ್ಜುನ ಮನ್ಸೂರ್

(ಧಾರವಾಡ ಕಲಾ ಭವನದಲ್ಲಿ ನಡೆದ ಉಸ್ತಾದ್ ಅಲ್ಲಾದಿಯಾ ಖಾನ್ ಸಾಹೇಬ್ ಸಂಗೀತೋತ್ಸವದಲ್ಲಿ)

ವಡನಾಟಿಯ ಪಾಶ್ಚಾತ್ಯ ವಾದ್ಯಕ್ಕೆ ಭಾರತೀಯ ಸಂಗೀತ ತುಂಬಿ ಜೀವ ಕೊಟ್ಟಿದ್ದ. -ಡಾ॥ ಗಂಗೂಬಾಯಿ ಹಾನಗಲ್

(ಕುಂದಗೋಳದ ಸವಾಯಿ ಗಂಧರ್ವ ಸಂಗೀತೋತ್ಸವದಲ್ಲಿ)


❑



ಡಾ॥ ವಡವಾಟಿಯವರ ಸಾಧನೆಯ ಕುರಿತು ಡಾ॥ ರಾಜ್‌ಕುಮಾರ್ ಸಮಾಲೋಚಿಸುತ್ತಿರುವ ಸಂದರ್ಭ.



ಪಂಡಿತ್ ಕೆ.ಜಿ. ಗಿಂಡೆ, ಪಂಡಿತ್ ರಾಮಾರಾವ್ ನಾಯಕ್, ಪಂಡಿತ್ ಆರ್.ಕೆ. ಬಿಜಾಪುರೆ ಅವರು ಕಾರ್ಯಕ್ರಮ ಒಂದರ ಭೇಟಿ ಸಂದರ್ಭದಲ್ಲಿ.



ಡಾ॥ ಪ್ರಭಾ ಅತ್ರೆಯವರು ವಡವಾಟಿಯವರ ಜೊತೆ ಬಾಂಬೆಯಲ್ಲಿ



ಸಂತೂರ್ ವಿದ್ವಾನ್ ಪಂಡಿತ್ ಶಿವಕುಮಾರ ಶರ್ಮಾರವರೊಂದಿಗೆ
ಮಹಾರಾಷ್ಟ್ರದ ನಾಗಪುರ್ ಸಂಗೀತ ಸಮ್ಮೇಳನದಲ್ಲಿ.



ಮಾಜಿ ಮುಖ್ಯಮಂತ್ರಿ ಡಾ॥ ನಿಜಲಿಂಗಪ್ಪನವರ ಹುಟ್ಟುಹಬ್ಬದ
ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ವಡವಾಟಿಯವರ ಗಾಯನದ ವಿನಿಕೆಯಲ್ಲಿ
ನಿರತರಾಗಿರುವ ನಿಜಲಿಂಗಪ್ಪನವರು, ಶಿವರಾಂ ಕಾರಂತರು ಮುಂತಾದ ಗಣ್ಯರು.



ಕಾರ್ಗಿಲ್ ಯುದ್ಧದ ಸಮಯದಲ್ಲಿ ಜಿಲ್ಲಾಡಳಿತ ವತಿಯಿಂದ ವಡವಾಟಿಯವರ ಕಾರ್ಯಕ್ರಮ ಏರ್ಪಡಿಸಿ ಸಂಗ್ರಹವಾದ ಹತ್ತು ಲಕ್ಷ ರೂಪಾಯಿಗಳನ್ನು ಕಾರ್ಗಿಲ್ ಯೋಧರಿಗೆ ಸಮರ್ಪಣೆ ಮಾಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕುಮಾರ್ ನಾಯಕ್, ವಡವಾಟಿಯವರಿಗೆ ಕೃತಜ್ಞತೆ ಸಲ್ಲಿಸುತ್ತಿರುವುದು.




ಬಿಸ್ಮಿಲ್‌ಖಾನ್ ಅವರನ್ನು ವಡವಾಟಿಯವರು ಭೇಟಿ ಮಾಡಿದ ಸಂದರ್ಭದಲ್ಲಿ.



ವಿದ್ವಾನ್ ಶ್ರೀ ವೀಣೆ ದೊರೆಸ್ವಾಮಿ ಅಯ್ಯಂಗಾರ್ ಮತ್ತು
ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿಗಳು ವಡವಾಟಿಯವರ ಸಂಗೀತ
ಕಛೇರಿ ಸಂದರ್ಭದಲ್ಲಿ ಕೆನ್ ಸ್ಕೂಲ್ ಆಫ್ ಆರ್ಟ್‌ಗೆ ಭೇಟಿ ನೀಡಿದರು.



ಹೈದರಾಬಾದಿನಲ್ಲಿ ಕಾರ್ಯಕ್ರಮ ನೀಡಿದ ಸಂದರ್ಭದಲ್ಲಿ ಅಭಿಮಾನಿಗಳು
ವಡವಾಟಿಯವರೊಂದಿಗೆ ಸಂಭ್ರಮಿಸಿದ ಕ್ಷಣ.




ಪದ್ಮವಿಭೂಷಣ್ ಡಾ॥ ಗಂಗೂಬಾಯಿ ಹಾನಗಲ್
ಅವರೊಂದಿಗೆ ರಾಯಚೂರಿನ ಸಂಗೀತ ಶಾಲೆಯಲ್ಲಿ




ಕಿರಾಣಾ ಘರಾಣೆಯ ಮಹಾನ್ ಗಾಯಕಿ
ಡಾ॥ ಪ್ರಭಾ ಅತ್ರೆ, ಬಾಂಬೆ ಇವರೊಂದಿಗೆ



ತುಮಕೂರಿನ ಸಿದ್ದಗಂಗಾಮಠದ ಶಿವಕುಮಾರ ಶ್ರೀಗಳ ಶತಮಾನೋತ್ಸವದ ಸಂದರ್ಭದಲ್ಲಿ ರಾಷ್ಟ್ರಪತಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಬರೆದ ಕವನವನ್ನು ಸಂಗೀರಾಗ ಸಂಯೋಜನೆ ಸಂಗೀತ ನೀಡಿದ ವಡವಾಟಿಯವರಿಗೆ ಮೆಚ್ಚಿ ವೇದಿಕೆಯಿಂದ ಬಂದು ಅಭಿನಂದನೆ ಸಲ್ಲಿಸುತ್ತಿರುವ ರಾಷ್ಟ್ರಪತಿಗಳು





ವಡವಾಟಿಯವರೊಂದಿಗೆ ಕುಟುಂಬದ ಸದಸ್ಯರು : ವಡವಾಟಿಯವರೊಂದಿಗೆ
ಶ್ರೀಮತಿ ಶಿವಮ್ಮ ವಡವಾಟಿ, ಮೊಮ್ಮಗಳು ವಡವಾಟಿ ತೇಜಶ್ರೀ ಭರತ್
ಎಡದಿಂದ ಬಲಕ್ಕೆ : ಸೊಸೆ ಶ್ರೀದೇವಿ, ನಾಲ್ಕನೆ ಮಗಳು ಭಾರತಿ, ಮೂರನೆ ಮಗಳು ವಡವಾಟಿ ಶಾರದ ಭರತ್, ಎರಡನೇ ಮಗಳು ವಿಜಯಲಕ್ಷ್ಮಿ, ಮೊದಲ ಮಗಳು ಈರಮ್ಮ. ಮೊದಲ ಅಳಿಯ ಭೀಮರಾಯಪ್ಪ, 2ನೇ ಅಳಿಯ ನರಸಿಂಹಲು 3ನೇ ಅಳಿಯ ಕೆ. ಯೋಗ ರವೀಶ್ ಭಾರತ್ 4ನೇ ಅಳಿಯ ರಾಘವೇಂದ್ರ, ಮಗ ವೆಂಕಟೇಶರಾಯ ವಡವಾಟಿ.




ಮಾಜಿ ಕ್ರಿಕೆಟ್ ತಾರೆ ಕರ್ನಾಟಕದ ಶ್ರೀ ಗುಂಡಪ್ಪ ವಿಶ್ವನಾಥ್ ಹಾಗೂ ವಡವಾಟಿ ಯವರಿಗೆ ಬಿಜಾಪುರದಲ್ಲಿ ಆಗಿನ ಜಿಲ್ಲಾಧಿಕಾರಿ ಶ್ರೀ ಐ.ಎಂ. ವಿಠ್ಠಲಮೂರ್ತಿಯವರು ಸನ್ಮಾನ ಮಾಡಿದ ಸಂದರ್ಭದಲ್ಲಿ ಇಬ್ಬರೂ ಜೊತೆಯಲ್ಲಿ ನಿಂತ ಭಂಗಿ.




ಖ್ಯಾತ ಹಿಂದುಸ್ತಾನಿ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ಲರಿಂದ ಪ್ರಶಸ್ತಿ ಮತ್ತು ಸನ್ಮಾನ ಸ್ವೀಕರಿಸಿದ ಸಂದರ್ಭ




ಅಮೆರಿಕಾದ ಕ್ಯಾಲಿಫೋರ್ನಿಯಾ ಕ್ಯಾಲ್ ಆರ್ಟ್ಸ್ ಪ್ರಾಚಾರ್ಯರ ಜೊತೆಯಲ್ಲಿ




ಕರ್ನಾಟಕ ಸಂಗೀತ ಕ್ಲಾರಿಯೋನೆಟ್ ವಿದ್ವಾನ್ ಶ್ರೀ ಎ.ಕೆ.ಸಿ. ನಟರಾಜನ್
ಪಾಶ್ಚಾತ್ಯ ಸಂಗೀತ ಕ್ಲಾರಿಯೋನೆಟ್ ವಿದ್ವಾನ್ ಶ್ರೀ ವಿಲಿಯಂ ಪಾವೆಲ್
ಹಿಂದೂಸ್ತಾನಿ ಸಂಗೀತ ಕ್ಲಾರಿಯೋನೆಟ್ ವಿದ್ವಾನ್ ಡಾ॥ ಪಂ॥ ನರಸಿಂಹಲು ವಡವಾಟಿ




ರೀಕೊ ರಾಯಲ್ ಇಂಟರ್‌ನ್ಯಾಷನಲ್ ಕಂಪನಿ ಅಮೆರಿಕಾದಲ್ಲಿ ವಿಶೇಷವಾಗಿ ಕ್ಲಾರಿಯೋನೆಟ್ ವಾದಕರನ್ನು ಆಹ್ವಾನಿಸಿ ಸನ್ಮಾನಿಸುವ ಪರಿಪಾಟವಿದೆ. ವಡವಾಟಿ ಯವರು ಅಮೇರಿಕಾ ಭೇಟಿ ನೀಡಿದಾಗ ಅವರಿಗೆ ಸನ್ಮಾನ ನಡೆದಾಗಿನ ಸಂದರ್ಭ.



ತಬಲಾ ವಿದ್ವಾನ್ ಪಂ॥ ಅಲ್ಲಾರಖಾ ಅವರ ಜೊತೆಯಲ್ಲಿ



ಸಿತಾರ್ ವಾದಕರಾದ ಪಂ॥ ರವಿಶಂಕರ್‌ರವರ ಜೊತೆಯಲ್ಲಿ




ಪಾಶ್ಚಿಮಾತ್ಯ ವಾದ್ಯಗಳಲ್ಲಿ ಭಾರತದ ನಾದಗಂಗೆ ಕರ್ನಾಟಕ ಸಂಗೀತ ವಿದ್ವಾನ್ ಶ್ರೀ ಕದ್ರಿ ಗೋಪಾಲನಾಥ್‌ರವರ ಸ್ಯಾಕ್ಸೋಫೋನ್ ಹಾಗೂ ಹಿಂದುಸ್ತಾನಿ ಸಂಗೀತ ವಿದ್ವಾನ್ ಪಂಡಿತ್ ನರಸಿಂಹಲು ವಡವಾಟಿಯವರ ಕ್ಲಾರಿಯೋನೆಟ್ ಜುಗಲಬಂದಿ.

ರಣಧಗೆಯ ರಾಯಚೂರು ಜಿಲ್ಲೆಯ ವಡವಾಟಿ ಗ್ರಾಮ ಈ ಹೊತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದರೆ, ಅದಕ್ಕೆ ಕಾರಣ ನರಸಿಂಹಲು ವಡವಾಟಿಯವರು. ವಿದೇಶ ಮೂಲದ ಕ್ಲಾರಿಯೋನೆಟ್ ವಾದ್ಯವನ್ನು ಹಿಂದುಸ್ತಾನೀ ಶಾಸ್ತ್ರೀಯ ಸಂಗೀತಕ್ಕೆ ವಾಹಕವಾಗಿಸಿಕೊಂಡು ಜನಮನ್ನಣೆಗೆ ಪಾತ್ರರಾದ ಸಂಗೀತಗಾರರಾಗಿ ಬೆಳೆದ ವಡವಾಟಿಯವರದು ಒಂದು ಮಿತಿಯಲ್ಲಿ ಏಕಲವ್ಯ ಪ್ರತಿಭೆ. ಮತ್ತೊಂದು ವ್ಯಾಪ್ತಿಯಲ್ಲಿ ಅವರ ಗುರುಗಳು ಪಂಡಿತ ಸಿದ್ಧರಾಮ ಜಂಬಲದಿನ್ನಿಯವರು. ದೇಸೀ ಪ್ರತಿಭೆಯಿಂದ ಅಭಿಜಾತ ಮಾರ್ಗದಲ್ಲಿ ಕ್ರಮಿಸಲು ಇದು ಒಚಿದು ತೆರೆದ ಬಾಗಿಲು. ವಿನಯಶೀಲರಾಗಿ ಸದಾ ವಿದ್ಯಾರ್ಥಿಭಾವದಲ್ಲಿ ತಮ್ಮ ಪ್ರತಿಭೆಯನ್ನು ಒರೆಹಚ್ಚಿಕೊಳ್ಳುತ್ತಾ ನಿತ್ಯಸಾಧಕಭಾವದಲ್ಲಿ ಬೆಳಗುತ್ತಿರುವವರು ವಡವಾಟಿಯವರು. ಇಂಥ ಯಾವುದೇ ಸಾಧಕರ ಜೀವನ ಒಲವಿನ ಹಾಸಿಗೆಯಲ್ಲ; ಅವಮಾನ - ಅವಹೇಳನ - ಅಸೂಯೆ - ಕಡೆಗಣಿಕೆಗಳ ಹಳವಂಡದಲ್ಲಿ ಬಿದ್ದೆದ್ದು ಬೆಳೆದ ಆತ್ಮವಿಶ್ವಾಸದ ಮಹಾಯಾನ.

ಎಸ್.ಜಿ. ಸಿದ್ಧರಾಮಯ್ಯ

ಬೆಲೆ ರೂ. ೮೦/-

ISBN : 81-7713-209-1

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು